
ರಂಜನೆ ಬೋಧನೆ ಪ್ರಚೋದನೆ

ಲಂಕೇಶ್

24 ಫೆಬ್ರವರಿ 2016 ಪುಟ 20 ರೂ. 15/-

ಕತೆ
ಭಗವಾನರ
ಮರಣ



ಅಲೈಯನ್ಸ್ ವಿವಿ
ರೇಪಿಸ್ಟ್ ಕುಲಪತಿ

ಜಿ.ಪಂ-ತಾ.ಪಂ ಚುನಾವಣೆ

ತ್ರದುರ್ಗ: ಆಂಜನೇಯ ಬಲ ಯಡ್ಡಿ ಭಯ

ವಮೊಗ್ಗ: ನಾವೆಲ್ಲರೂ ಒಂದೇ

ಕ್ಷಿಣ ಕನ್ನಡ: ಧರ್ಮ ಕರ್ಮ ಸಮರ

ತ್ತರಕನ್ನಡ: ಬಂಡುಕೋರರ ಕಾಟ

ಂಡ್ಯ: ಪ್ರಚಾರ ಜೋರು ಬಂಡಾಯ ಮೇರು

ಕಾಂಗ್ರೆಸ್ಸಿಗರೇ ವೈರಿಗಳು

ಕೊಡಗು: ಕಾಂಗ್ರೆಸ್‌ಗೆ ಕಾಂಗ್ರೆಸಿಗರೇ ವೈರಿಗಳ


ಚುನಾವಣೆಯ ಗೊಂದಲಗಳು ಕೊಡಗಿನಲ್ಲಿ ಎರಡು ಪ್ರಮುಖ ಪಕ್ಷಗಳಾದ ಬಿ.ಜೆ.ಪಿ. ಹಾಗೂ ಕಾಂಗ್ರೆಸ್‌ನಲ್ಲಿ ನಾಮಪತ್ರ ಹಿಂದಕ್ಕೆ ಪಡೆಯುವ ಪ್ರಕ್ರಿಯೆಯ ವೇಳೆಯಲ್ಲಿಯೂ ಮುಗಿದಿಲ್ಲ. ಕಾಂಗ್ರೆಸ್ ಪಕ್ಷದಲ್ಲಿ ಬಹಿರಂಗವಾಗಿ ಭಿನ್ನಮತೀಯ ಚಟುವಟಿಕೆಗಳು ಕಂಡುಬಂದಿದ್ದರೆ, ಬಿಜೆಪಿಯಲ್ಲಿ ಪಕ್ಷ ಹಾಗೂ ಸಂಘ ಪರಿವಾರದ ನಡುವೆ ಸಂಘರ್ಷ ಕಂಡುಬಂದಿದ್ದು, ಸಂಘ ಪರಿವಾರವು ಪಕ್ಷದ ಮೇಲೆ ಹಿಡಿತ ಸಾಧಿಸಲು ಇನ್ನಿಲ್ಲದ ಯತ್ನ ನಡೆಸುತ್ತಿದೆ.


ಕೊಡಗು ಜಿಲ್ಲೆಯಲ್ಲಿ ಇಬ್ಬರು ಶಾಸಕರು, ಸಂಸದರು ಹಾಗೂ ವಿಧಾನ ಪರಿಷತ್ ಸದಸ್ಯರು ಬಿಜೆಪಿಯವರೇ ಆಗಿದ್ದಾರೆ. ಆದರೆ ಇಲ್ಲಿ ಒಂದು ವಿಚಿತ್ರ ಸನ್ನಿವೇಶ ಇದೆ. ಜಿಲ್ಲಾ ಬಿಜೆಪಿಯ ಅಧ್ಯಕ್ಷ ಸುಜಾ ಕುಶಾಲಪ್ಪ, ಸೋಮವಾರಪೇಟೆ ಶಾಸಕ ಅಪ್ಪಚ್ಚು ರಂಜನ್ ಹಾಗೂ ವಿಧಾನ ಪರಿಷತ್ತಿಗೆ ಇತ್ತೀಚೆಗೆ ಆಯ್ಕೆಗೊಂಡ ಸುನಿಲ್ ಸುಬ್ರಹ್ಮಣಿ ಸಹೋದರರು. ಇವರ ಕುಟುಂಬದ ಹಿಡಿತದಲ್ಲಿಯೇ ಪಕ್ಷ ಇದೆ ಎಂಬುದು ಜಿಲ್ಲೆಯ ಜನರ ಆರೋಪವಲ್ಲ; ಸ್ವತಃ ಬಿಜೆಪಿ ಕಾರ್ಯಕರ್ತರದೇ ಆರೋಪವಾಗಿದೆ. ಸಾಲದು ಎಂಬಂತೆ ಸುಜಾ ಕುಶಾಲಪ್ಪನವರ ಪುತ್ರ ಶಶಾಂಕ್ ಭೀಮಯ್ಯರವರಿಗೆ ಕದನೂರು ಜಿಲ್ಲಾ ಪಂಚಾಯತ್ ಕ್ಷೇತ್ರದಿಂದ ಸ್ಪರ್ಧಿಸಲು ಅವಕಾಶ ಕಲ್ಪಿಸಲು ವೇದಿಕೆ ಸಜ್ಜಾಗಿತ್ತು, ಇದು ಅಲ್ಲಿಯ ಸ್ಥಳೀಯ ಬಿಜೆಪಿಯವರನ್ನು ಕೆರಳಿಸಿತ್ತು, ಅಲ್ಲಿಂದ ಸಂಘ ಪರಿವಾರದ ಪ್ರವೇಶ ನೇರವಾಗಿ ಆಗಿತ್ತು.

ಸಂಘ ಪರಿವಾರದ ಜೊತೆಯಲ್ಲಿ ಇರುವಂತಹ ಸಂಸದ ಪ್ರತಾಪ ಸಿಂಹ ಈ ಸಹೋದರರಿಗೆ ಆಪ್ತ ವಿಧಾನ ಪರಿಷತ್ತಿಗೆ ಸುಜಾ ಕುಶಾಲಪ್ಪರವರಿಗೆ ಟಿಕೇಟು ಕೊಡಿಸುವಲ್ಲಿ ಹಾಗೂ ಅವರ ನಾಮಪತ್ರ ನ್ಯಾಯಾಲಯದ ಶಿಕ್ಷೆಯ ಆಧಾರದಲ್ಲಿ ತಿರಸ್ಕೃತಗೊಂಡಾಗ, ಅವರ ಮತ್ತೊಬ್ಬ ಸಹೋದರ ಸುನಿಲ್ ಸುಬ್ರಹ್ಮಣಿಯವರಿಗೆ ಟಿಕೆಟು ಕೊಡಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದು ಪ್ರತಾಪ ಸಿಂಹ. ಹಾಗಾಗಿ ಪಕ್ಷದ ಮೇಲೆ ಮತ್ತು ಸಂಘ ಪರಿವಾರದ ಮೇಲೆ ಅವರ ಕುಟುಂಬಕ್ಕೆ ಹಿಡಿತವಿದೆ ಎಂದು ಅಂದಾಜಿಸಲಾಗಿತ್ತು, ಆದರೆ ಚುನಾವಣೆ ಯಲ್ಲಿ ತಾನು ಸ್ಪರ್ಧಿಸಿಯೇ ಸಿದ್ಧ ಎಂದು ಯಾವುದೇ ಪ್ರಮಾಣದ ಟೀಕೆಗಳು ಬಂದಾಗಲೂ, ನಾಮಪತ್ರವನ್ನು ಶಶಾಂಕ್ ಭೀಮಯ್ಯ ಸಲ್ಲಿಸಿದ್ದು ಒಂದು ರೀತಿಯ ಉಡಾಫೆತನ ಎಂದು ಪಕ್ಷದ ಹಿರಿಯ ಮುಖಂಡರುಗಳು ಹೇಳುತ್ತಿದ್ದರೂ, ಬಹಿರಂಗವಾಗಿ ಹೇಳುವ ತಾಕತ್ತು ಇರಲಿಲ್ಲ. ಈ ಕ್ಷೇತ್ರಕ್ಕೆ ಆಕಾಂಕ್ಷಿಯಾಗಿದ್ದ ಶಶಿಸುಬ್ರಹ್ಮಣಿ ಮತ್ತು ಅವರ ತಂಡ ಸಂಘ ಪರಿವಾರದ ಮೂಲಕವೇ ಇವರನ್ನು ಮಣಿಸಲು ಸಾಧ್ಯ ಎಂದು ಭಾವಿಸಿ, ವನವಾಸಿ ಕಲ್ಯಾಣ ಸಂಘದ ಅಧ್ಯಕ್ಷ ಚಕ್ಕೇರ ಮನುಸೋಮಯ್ಯರವರ ಮೂಲಕ ಮಂಗಳೂರಿನ ಸಂಸದ ಸಂಘ ಪರಿವಾರದ ಮತ್ತೊಬ್ಬ ವ್ಯಕ್ತಿ ನಳಿನ್ ಕಟೀಲ್ ಮೂಲಕ ಪ್ರಭಾವ ಬೀರಿ ಪಕ್ಷದ ಮೇಲೆ ಒತ್ತಡ ತರುವಲ್ಲಿ ಸಫಲರಾಗಿದ್ದರು.

ಇಂತಹ ಸ್ಥಿತಿಯಲ್ಲಿಯೂ ಲಜ್ಜೆಗೆಟ್ಟು ಜಿಲ್ಲಾ ಬಿಜೆಪಿ ಅಧ್ಯಕ್ಷ ಸುಜಾ ಕುಶಾಲಪ್ಪ ತಾನೇ ಸ್ವತಃ ನಾಮಪತ್ರವನ್ನು ಸಲ್ಲಿಸಿ, ನಗೆಪಾಟಲಿಗೆ ಈಡಾದರು. ಪಕ್ಷದ ಅಧ್ಯಕ್ಷರಿಂದಲೇ ಬಂಡಾಯದ ಬಾವುಟ ನಡೆದಿತ್ತು, ಕೊನೆಗೆ ಸಂಘ ಪರಿವಾರ ಖಡಕ್ ಆಗಿ ಎಚ್ಚರಿಕೆ ನೀಡಿದ ನಂತರ 'ಬಿ' ಫಾರಂನ್ನು ಶಶಿಸುಬ್ರಹ್ಮಣಿಯವರಿಗೆ ನೀಡಲಾಯಿತು. ಅಲ್ಲಿಗೆ ಜಿಲ್ಲೆಯಲ್ಲಿ ಬಿಜೆಪಿಯಲ್ಲಿ ಎದ್ದಿದ್ದಂತಹ ಗೊಂದಲಗಳು ಶಮನವಾಯಿತು ಎಂದು ಹೇಳುವಂತೆ ಇಲ್ಲ. ವಿರಾಜಪೇಟೆ ತಾಲೂಕಿನಲ್ಲಿ ಮಾತ್ರ ಗೊಂದಲ ಕಡಿಮೆಯಾಗಿದೆ. ಸೋಮವಾರಪೇಟೆ ತಾಲೂಕಿನಲ್ಲಿ ಹೆಚ್ಚಿನ ಗೊಂದಲಗಳು ಕಂಡುಬಂದಿದೆ.


ಶಶಿಸುಬ್ರಹ್ಮಣಿಯವರನ್ನು ಜಿಲ್ಲಾ ಪಂಚಾಯತ್ ಕ್ಷೇತ್ರಕ್ಕೆ ಸಂಘ ಪರಿವಾರ ಪ್ರತಿಷ್ಠಾಪನೆ ಮಾಡಲು ಯತ್ನಿಸುವ ಮೂಲಕ ಜಿಲ್ಲೆಯ ಶಾಸಕರುಗಳಿಗೆ ಎಚ್ಚರಿಕೆಯನ್ನು ನೀಡಿದ್ದಾರೆ ಎಂದು ರಾಜಕೀಯ ವಲಯದ ತರ್ಕವಾಗಿದೆ. ಇತ್ತೀಚೆಗೆ ಸಂಘ ಪರಿವಾರದ ಸಮನ್ವಯ ಸಭೆಯೊಂದು ಬೆಂಗಳೂರಿನಲ್ಲಿ ನಡೆದಾಗ, ಜಿಲ್ಲೆಯ ಶಾಸಕರುಗಳಾದ ಕೆ.ಜಿ. ಬೋಪಯ್ಯ ಹಾಗೂ ಅಪ್ಪಚ್ಚು ರಂಜನ್ ಅವರ ಮೇಲೆ ನೇರವಾದ ವಾಗ್ದಾಳಿಯನ್ನು ಪ್ರತಾಪ್ ಸಿಂಹ, ಜಗದೀಶ್ ಕಾರಂತ್ ಮಾಡಿದ್ದಾರೆ. ಪ್ರತಾಪ್ ಸಿಂಹರಿಗೂ, ಬೋಪಯ್ಯನವರಿಗೂ ಸಂಬಂಧಗಳು ಹಳಸಿ ವರ್ಷಗಳೇ ಕಳೆದಿದೆ. ಇದು ಯಾವ ಹಂತಕ್ಕೆ ತಲುಪಿದೆ ಎಂದರೆ, ಸಂಘ ಪರಿವಾರದ ಮೂಲಕ ಮುಂದಿನ ಚುನಾವಣೆಯ ವೇಳೆಗೆ ಬೋಪಯ್ಯನವರಿಗೆ ಟಿಕೆಟು ಸಿಗದಂತೆ ಮಾಡಲಾಗುತ್ತದೆ ಎಂಬ ಮಾತುಗಳು ಕೇಳಿಬಂದಿದೆ. ಇದರ ಅರಿವು ಇರುವ ಅಪ್ಪಚ್ಚು ರಂಜನ್ ಮುಂದಿನ ಚುನಾವಣೆಯ ವೇಳೆಗೆ ತಾನು ರಾಜಕೀಯ ನಿವೃತ್ತಿಯನ್ನು ಪಡೆದು, ತನ್ನ ಮಕ್ಕಳ ಜೊತೆಯಲ್ಲಿ ಅಮೆರಿಕಾದಲ್ಲಿ ವಾಸಿಸಲು ಸಿದ್ಧತೆಯನ್ನು ಮಾಡುತ್ತಿದ್ದಾರೆ



ಶಶಿಸುಬ್ರಹ್ಮಣಿ



ಆರ್.ಕೆ. ಅಬ್ದುಲ್ ಸಲಾಂ

ಎಂಬ ಮಾತುಗಳು ಕೇಳಿ ಬಂದಿದೆ.

ಜಗದೀಶ್ ಕಾರಂತರು ನೇರವಾಗಿ ಬೋಪಯ್ಯನವರ ಮೇಲೆ ಭ್ರಷ್ಟಾಚಾರದ ಆರೋಪವನ್ನು ಮಾಡಿದ್ದು ಅವರಿಬ್ಬರ ನಡುವೆ ಮಾತಿನ ಚಕಮಕಿ ನಡೆದಿದೆ. ಟಿಪ್ಪು ಗಲಭೆಗೆ ಸಂಬಂಧಪಟ್ಟಂತೆ ನಡೆದಂತಹ ಕೊಲೆ ಪ್ರಕರಣದ ಆರೋಪಿಗಳ ಪರವಾಗಿ ನ್ಯಾಯಾಲಯದಲ್ಲಿ ವಾದಿಸಲು ಸಂಘ ಪರಿವಾರದ ಮುಖಂಡರು ಹಣ ವಸೂಲಾತಿ ಮಾಡುತ್ತಿರುವುದು ಕೂಡ ಚರ್ಚೆಗೆ ಬಂದಿದೆ. ಹೇಗಾದರೂ ಮಾಡಿ ಮುಂದಿನ ಚುನಾವಣೆಯ ವೇಳೆಗೆ ಕೊಡಗಿನಲ್ಲಿ ಸಂಘ ಪರಿವಾರದ ಹಿಡಿತವನ್ನು ಬಿಗಿಗೊಳಿಸಬೇಕು ಎಂಬ ಪ್ರಯತ್ನವನ್ನು ಮಾಡುತ್ತಿದ್ದಾರೆ. ಟಿಪ್ಪು ಜನ್ಮ ದಿನಾಚರಣೆಯ ವೇಳೆಯಲ್ಲಿ ನಡೆಸಿದಂತಹ ಗಲಭೆಗಳು ಅದಕ್ಕೆ ಪೂರ್ವ ಸಿದ್ಧತೆಯಾಗಿತ್ತು. ಬಿಜೆಪಿಯಲ್ಲಿ ತಮ್ಮ ನಿಲುವುಗಳನ್ನು ಒಪ್ಪದವರು ಪ್ರಮುಖ ಹುದ್ದೆಗಳಲ್ಲಿ ಇರಬಾರದು ಎಂಬುದು ಸಂಘ ಪರಿವಾರದ ಇಚ್ಛೆಯಾಗಿದ್ದು, ಮೆಲ್ಲಗೆ ಇದು ಬೋಪಯ್ಯ ಹಾಗೂ ಅಪ್ಪಚ್ಚು ರಂಜನ್‌ರವರಿಗೂ


ಅಪ್ಪಚ್ಚು ರಂಜನ್


ಬೋಪಯ್ಯ


ಪ್ರತಾಪ್ ಸಿಂಹ

ತಿಳಿಯುತ್ತಿದ್ದು ಬಿಸಿ ತಾಗುತ್ತಿದೆ. ಹಿಂದೆ ಕೊಡಗಿನಲ್ಲಿ ಜನಸಂಘವನ್ನು ಕಟ್ಟಿ ರಾಜ್ಯ ಮಟ್ಟಕ್ಕೆ ಬೆಳೆಸಿದ ಎ.ಕೆ. ಸುಬ್ಬಯ್ಯನವರಿಗೂ ಇದೇ ಅನುಭವ ಆಗಿತ್ತು, ತಡವಾಗಿ ಅಂದರೆ ಬಿಜೆಪಿ ಜಿಲ್ಲೆಯಲ್ಲಿ ಗಟ್ಟಿಯಾಗಿ ತಳವೂರಿದ ನಂತರ ಬೋಪಯ್ಯ ಹಾಗೂ ರಂಜನ್‌ರವರಿಗೆ ಇದರ ಅನುಭವ ಆಗುತ್ತಿದೆ.

ಲಾಭ ಪಡೆಯಲಾರದ ಕಾಂಗ್ರೆಸ್

ಬಿಜೆಪಿಯ ಇಂತಹ ಕೆಟ್ಟ ರಾಜಕೀಯ ಜಗಳಗಳು ಬಹಿರಂಗವಾಗಿ ನಡೆಯುತ್ತಿದ್ದರೆ, ಇದರ ಲಾಭವನ್ನು ಕಾಂಗ್ರೆಸ್ ಪಕ್ಷ ಪಡೆಯಬೇಕಾಗಿತ್ತು, ಏಕೆಂದರೆ ಜಿಲ್ಲೆಯಲ್ಲಿ ಜೆ.ಡಿ.ಎಸ್ ಆಗಲಿ, ಕಮ್ಯೂನಿಸ್ಟ್ ಪಕ್ಷವಾಗಲಿ ಪ್ರಬಲವಾಗಿ ಇಲ್ಲ. ಆದರೆ ಕಾಂಗ್ರೆಸಿನ ಸ್ಥಿತಿ ಇದಕ್ಕಿಂತಲೂ ಹೀನಾಯವಾಗಿ ಇದೆ. ಗುಂಪುಗಾರಿಕೆಯಿಂದ ಕಾಂಗ್ರೆಸ್ ಪಕ್ಷ ಜರ್ಜರಿತವಾಗಿದೆ. ಬಿಜೆಪಿಯಲ್ಲಿ ಎಷ್ಟೇ ಗೊಂದಲಗಳು ಇದ್ದರೂ, ಜಿಲ್ಲಾ ಪಂಚಾಯತಿಯಲ್ಲಿ ಅವರದೇ ಮೇಲುಗೈಯಾಗುವಂತಹ ಸನ್ನಿವೇಶಗಳನ್ನು ಕಾಂಗ್ರೆಸ್ ಪಕ್ಷ ಕಲ್ಪಿಸಿಕೊಟ್ಟಿದೆ ಎಂದು ಹೇಳಬೇಕಾಗುತ್ತದೆ.

ಕಾಂಗ್ರೆಸಿನ ದುಃಸ್ಥಿತಿ ಎಷ್ಟಿದೆ ಎಂದರೆ, 29 ಕ್ಷೇತ್ರಗಳಿಗೆ ಅಭ್ಯರ್ಥಿಗಳನ್ನು ಆಯ್ಕೆಮಾಡಲು ಕನಿಷ್ಠ 100 ಬಾರಿಯಾದರೂ ಪ್ರಮುಖ ಸಭೆಗಳು ನಡೆದಿವೆ. ಈ ಸಭೆಗಳು ಜಿಲ್ಲೆಯಲ್ಲಿ ಇರುವಂತಹ ರೆಸಾರ್ಟ್‌ಗಳಲ್ಲಿ, ಹೊಟೇಲುಗಳಲ್ಲಿ, ಕೊನೆಗೆ ಜಿಲ್ಲೆಯಲ್ಲಿ ಸಮಸ್ಯೆ ಬಗೆಹರಿಸಲು ಸಾಧ್ಯವಾಗದೆ, ಮೈಸೂರಿನಲ್ಲಿ, ಆ ನಂತರ ಬೆಂಗಳೂರಿನಲ್ಲಿ ನಡೆದಿವೆ. ಎಷ್ಟೇ ಸಭೆಗಳು ನಡೆದರೂ, ಯಾವುದೇ ಕ್ಷೇತ್ರಕ್ಕೂ ಒಮ್ಮತದ ಅಭ್ಯರ್ಥಿಯನ್ನು ಆಯ್ಕೆಮಾಡುವಲ್ಲಿ ಕಾಂಗ್ರೆಸ್ ಪಕ್ಷದ ನಾಯಕತ್ವ ಸೋತಿದೆ. ಇದಕ್ಕೆ ಪ್ರಮುಖ ಕಾರಣ ಕಾಂಗ್ರೆಸಿನಲ್ಲಿ ಇರುವಂತಹ ಗುಂಪುಗಾರಿಕೆ. ಪ್ರತಿಯೊಂದು ಗುಂಪಿನವರು ತಮ್ಮದೇ ಆದ ಅಭ್ಯರ್ಥಿಗಳ ಮೂಲಕ ಅರ್ಜಿಯನ್ನು ಟಿಕೆಟಿಗಾಗಿ ಕೊಡಿಸುವ ಮತ್ತು ನಾಮಪತ್ರವನ್ನು ಸಲ್ಲಿಸುವ ಕಾರ್ಯವನ್ನು ಮಾಡಿರುವುದರಿಂದ ಈ ಗೊಂದಲ ಉಂಟಾಗಿದೆ.

ಇದಕ್ಕಾಗಿ ಯಾರೊಬ್ಬರೂ ಮತ್ತೊಬ್ಬರನ್ನು ದೂಷಿಸುವ ಸ್ಥಿತಿಯಲ್ಲಿ ಇಲ್ಲ. ಚುನಾವಣೆಗೆ ಯೋಗ್ಯ ಅಭ್ಯರ್ಥಿಯನ್ನು ಕಣಕ್ಕೆ ಇಳಿಸಬೇಕು ಎಂಬುದು ಯಾವ ಗುಂಪಿನಲ್ಲೂ ಕಂಡುಬಂದಿಲ್ಲ, ತನ್ನ ಬೆಂಬಲಿಗನಿಗೆ ಟಿಕೆಟು ಕೊಡಿಸಬೇಕು ಎಂಬುದಷ್ಟೇ ನಾಯಕರುಗಳ ಬಯಕೆಯಾಗಿದ್ದರಿಂದ, ಚುನಾವಣೆಯಲ್ಲಿ ಗೆಲ್ಲುವುದು ಅವರಿಗೆ ಮುಖ್ಯವಾಗಿರಲಿಲ್ಲ, ಸರ್ವಸಮ್ಮತವಾದ ಅಭ್ಯರ್ಥಿಯನ್ನು 29 ಕ್ಷೇತ್ರಗಳಲ್ಲಿ ಒಂದೇ ಒಂದು ಕ್ಷೇತ್ರಕ್ಕೂ ಗುರುತಿಸುವಲ್ಲಿ ಕಾಂಗ್ರೆಸ್ ವಿಫಲವಾಗಿದೆ. ಜಿಲ್ಲೆಯ ಅಲ್ಪಸಂಖ್ಯಾತ ವರ್ಗದವರಂತೂ ಕಾಂಗ್ರೆಸ್ ಪಕ್ಷದ ನಾಯಕತ್ವದ ವಿರುದ್ಧ ಕಿಡಿ ಕಾರುತ್ತಿದ್ದಾರೆ. ತಮ್ಮನ್ನು ರಕ್ಷಣೆ ಮಾಡಬಲ್ಲಂತಹ ವ್ಯಕ್ತಿಗಳಿಗೆ ಅವಕಾಶ ನೀಡುತ್ತಿಲ್ಲ ಮತ್ತು ಅಲ್ಪಸಂಖ್ಯಾತರಿಗೆ ಸಾಕಷ್ಟು ಪ್ರಮಾಣದಲ್ಲಿ ಸ್ಥಾನಗಳು ನೀಡುತ್ತಿಲ್ಲ ಎಂಬುದು ಅವರ ಆರೋಪ. ಜಿಲ್ಲೆಯಲ್ಲಿ ಕಾಂಗ್ರೆಸನ್ನು ನಾಶಪಡಿಸಲು ಹೊರಟ ಬಿ.ಟಿ.ಪ್ರದೀಪರ ಗುಂಪು ಪ್ರಮುಖವಾದದ್ದು. ಕಾಂಗ್ರೆಸಿನ ನಾಯಕತ್ವ ಇವರ ಕೈಯಲ್ಲಿ ಇದೆ. ಅಧ್ಯಕ್ಷ ಸ್ಥಾನಕ್ಕೆ ರಾಜಿನಾಮೆ ನೀಡಿ, ಹಿಂದಿನ ಸೀಟಿನಲ್ಲಿ ಕುಳಿತು ಚಾಲನೆ ಮಾಡುತ್ತಿದ್ದಾರೆ. ಅವರಿಗೆ ಟಿಪ್ಪು ದಿನಾಚರಣೆಯನ್ನು ರಾಜ್ಯ ಸರಕಾರ ಆಚರಣೆ ಮಾಡಿದ ಸಿಟ್ಟು. ಇವರ ಕೈಗೊಂಬೆಯಂತೆ ಜಿಲ್ಲಾ ಉಸ್ತುವಾರಿ ಸಚಿವ ದಿನೇಶ್ ಗುಂಡೂರಾವ್ ಇದ್ದಾರೆ. ಅರುಣ್ ಮಾಚಯ್ಯನವರದು ಮತ್ತೊಂದು ಗುಂಪು. ಸೋಮವಾರಪೇಟೆಯಲ್ಲಿ ಲೋಕೇಶ್‌ರವರ ಗುಂಪು, ನಾಪಂಡ ಮುತ್ತಪ್ಪನವರ ಗುಂಪು ಹೀಗೆ ಹಲವು ಗುಂಪುಗಳಿವೆ. ಈ ಮಧ್ಯೆ ಪ್ರತಿ ಕ್ಷೇತ್ರದಲ್ಲಿಯೂ ಟಿಕೆಟು ಆಕಾಂಕ್ಷಿಗಳ ಹಲವು ಗುಂಪು. ಈ ಗುಂಪುಗಳಿಗೆ ಹಲವು ನಾಯಕರು. ಪ್ರತಿಯೊಬ್ಬರಿಗೂ ತಮ್ಮ ಕೈ ಮೇಲಾಗಬೇಕೆಂಬ ಹಂಬಲ. ಹಾಗಾಗಿ ಅವರೆಲ್ಲರೂ ಮತ್ತೊಬ್ಬರನ್ನು ಸೋಲಿಸುವಲ್ಲಿಯೇ ಮಗ್ನರಾಗಿದ್ದಾರೆ. ಭಿನ್ನಮತೀಯ ಗುಂಪಿನಲ್ಲಿಯೂ ಈಗ ಒಂದೇ ಗುಂಪು ಉಳಿದುಕೊಂಡಿಲ್ಲ, ಭಿನ್ನಮತೀಯರು ಮತ್ತು ಖಿನ್ನಮತೀಯರು ಎನ್ನುವಂತೆ ಎರಡು ಗುಂಪುಗಳಲ್ಲ, ಭಿನ್ನಮತೀಯರಲ್ಲಿಯೇ 'ಎ' ಯಿಂದ ಪ್ರಾರಂಭಗೊಂಡು 'ಜೆಡ್'ವರೆಗೂ ಗುಂಪುಗಳು ಇವೆ. ಹಾಗೆ ಕಾಂಗ್ರೆಸಿನ ಗುಂಪುಗಳು ಎಷ್ಟು ಎನ್ನುವುದು ಯಾರಿಗೂ ಹೇಳಲು ಸಾಧ್ಯವಿಲ್ಲ.

ವಿರಾಜಪೇಟೆ ತಾಲೂಕಿನ ಕಾಕೋಟುಪರಬು ಎಂಬ ಕ್ಷೇತ್ರ ಎರಡು ಬಾರಿ ಅಲ್ಪಸಂಖ್ಯಾತರು ಪ್ರತಿನಿಧಿಸಿದ್ದ ಕ್ಷೇತ್ರ. ಇದು ಶೇ. 40ರಷ್ಟು ಅಲ್ಪಸಂಖ್ಯಾತರು ಇರುವ ಪ್ರದೇಶ. ಹಾಗಾಗಿ ಆ ಕ್ಷೇತ್ರವನ್ನು ಸಾಮಾನ್ಯ ಕ್ಷೇತ್ರವಾದರೂ ತಮಗೆ ನೀಡಬೇಕು ಎಂಬುದು ಅವರ ಬೇಡಿಕೆ. ಕೊನೆಯ ಹಂತದವರೆಗೂ ತೀರ್ಮಾನ ಮಾಡುವಲ್ಲಿ ವಿಫಲವಾಗಿ, ನಾಮಪತ್ರ ಸಲ್ಲಿಸುವ ಹಿಂದಿನ ದಿನದಂದು ಆರ್.ಕೆ. ಅಬ್ದುಲ್ ಸಲಾಂ ಎಂಬವರಿಗೆ 'ಬಿ' ಫಾರಂ ನೀಡಲಾಯಿತು. ಅದರ ಬೆನ್ನಿಗೆ ಭಿನ್ನಮತೀಯ ಸಭೆಯೊಂದು ನಡೆದು, ಪತ್ರಿಕೆಗಳಲ್ಲಿ ನಾಮಪತ್ರ ಸಲ್ಲಿಸುವ ದಿನದಂದೇ ಆ ಭಾಗದ ಪ... ವಿರೋಧಗಳು ಪ್ರಕಟಗೊಂಡವು. ಅದನ್ನು ನಿಯ... ಯಾವುದೇ ಪ್ರಯತ್ನವನ್ನು ಜಿಲ್ಲೆಯ ಕಾಂಗ್ರೆಸ್ ಮು... ಮಾಡಲಿಲ್ಲ, ಕಾರಣ ಅಬ್ದುಲ್ ಸಲಾ... ಕಾಟಾಚಾರಕ್ಕಾಗಿ 'ಬಿ' ಫಾರಂ ನೀಡಲಾಗಿತ್ತು, ಭಿನ್ನ... ಸಭೆಯ ಹಿಂದೆ ಇದ್ದದ್ದೇ ಜಿಲ್ಲೆಯ ಕಾಂಗ್ರೆಸಿನ ನಾಯ... ವಹಿಸಿಕೊಂಡಿರುವ ಪ್ರಮುಖರಾಗಿದ್ದರು. ಅವರಿ... ತಂದು ಸ್ಪರ್ಧಿಸದಂತೆ ಮಾಡುವುದೇ ಜಿಲ್ಲಾ ನಾಯ... ಉದ್ದೇಶವಾಗಿತ್ತು, ಹಾಗಾಗಿ ಸಭೆ ನಡೆದರೂ, ಪತ್ರಿ... ಬಂದರೂ ಯಾವುದೇ ಪ್ರತಿಕ್ರಿಯೆಗಳು ಕಂಡು... 'ಬಿ' ಫಾರಂ ಪಡೆದರೂ ಸ್ಪರ್ಧಿಸದಂತಹ ಪರಿಸ್ಥಿ... ನಿರ್ಮಾಣ ಮಾಡಿದ್ದಕ್ಕಾಗಿ ಆಕ್ರೋಶಗೊಂಡ ... ಸಲಾಂ, ಜಿಲ್ಲಾ ಕಾಂಗ್ರೆಸಿಗೆ 'ಬಿ' ಫಾರಂನ್ನು ಹಿಂ... ತನ್ನ ಪ್ರತಿಭಟನೆಯನ್ನು ಸಲ್ಲಿಸಿದರು. ಈ ಕ್ಷೇತ್ರಕ್ಕೆ... ಪರಿಷತ್ ಮಾಜಿ ಸದಸ್ಯ ಅರುಣ್ ಮಾಚಯ್ಯ ಬ... ಟಾಟೂ ಮೊಣ್ಣಪ್ಪರವರಿಗೆ ಅವಕಾಶ ನೀಡಲಾಯಿ...

ಅವರಿಗೂ 'ಬಿ' ಫಾರಂ ನೀಡಿದ್ದಕ್ಕೆ ಮ... ಆಕ್ಷೇಪಣೆ ಮಾಡಿ, ಪತ್ರಿಕಾ ಹೇಳಿಕೆಯನ್ನು ನೀಡಿ, ... ಮೊಣ್ಣಪ್ಪ ಕ್ಷೇತ್ರದವರಲ್ಲ, ಅವರು ಬೇರೆ ಕ್ಷೇತ್ರ... ಎಂದು ಆರೋಪವನ್ನು ಮಾಡಲಾಯಿತು. ಹಾಗೆ ನೋ... ಜಿಲ್ಲೆಯ ಬಹುತೇಕ ಸ್ಥಾನಗಳಿಗೆ ಕಾಂಗ್ರೆಸಿನ ಅಭ್ಯ... ಹೊರಗಿನವರೇ ಆಗಿದ್ದಾರೆ. ಇಂತಹ ಗಂಭೀ... ವಿಚಾರಗಳು ಹುಟ್ಟಿಕೊಂಡಿರುವುದು ಜಿಲ್ಲೆಯಲ್ಲಿ ಕಾ... ನಾಯಕತ್ವ ವಹಿಸಿಕೊಂಡಿರುವವರಿಂದಲೇ. ಸರಿಪಡಿಸಲಾರದಷ್ಟು ಗಂಭೀರವಾಗಿದೆ ಕಾಂಗ್ರೆಸಿನ ... ಸಿದ್ಧಾಪುರ ಕ್ಷೇತ್ರದಲ್ಲಿ ಕಾರ್ಯಕರ್ತರ- ಒತ್ತಡದ ... ಸರಿತಾ ಪೂಣಚ್ಚ ಎಂಬ ಮಹಿಳೆಗೆ ಟಿಕೆಟು ನೀಡ... ಆಕೆಯನ್ನು ವಿರೋಧಿಸುತ್ತಿರುವ ಇದೇ ಕಾ... ಮುಖಂಡರು, ಆಕೆ ಎಸ್.ಡಿ.ಪಿ.ಐ. ಅಭ್ಯರ್ಥಿ ... ಪಿಸುಗುಟ್ಟುತ್ತಿದ್ದಾರೆ.

ವಿ.ಪಿ.ಶಶಿಧರ್ ಗೆಲ್ಲಬಲ್ಲ ಜಾತ್ಯತೀತ ಮನೋ... ಯೋಗ್ಯ ಅಭ್ಯರ್ಥಿ. ಅವರಿಗೆ ಟಿಕೆಟು ನೀಡಲು ... ಮೇಷ ಎಣಿಸಿ, ಕೊನೆಗಳಿಗೆಯಲ್ಲಿ ಅ... ನೀಡಲಾಗಿದೆ. ಎಷ್ಟೆಲ್ಲಾ ಭಿನ್ನಮ... ಚಟುವಟಿಕೆಗಳನ್ನು ಅವರ ವಿರುದ್ಧ ಮಾಡಲು ಸಾ... ಅಷ್ಟರ ಮಟ್ಟಿಗೆ ಚಟುವಟಿಕೆ ನಡೆಸಲ... ಪ್ರತಿಯೊಬ್ಬರೂ ಎರಡರಿಂದ ಮೂರು ಸುತ್ತು ... ಕಾರ್ಯ ಮಾಡಿ ಮುಗಿಸಿದರೂ, ಕಾಂಗ್ರೆಸಿನ ಅಭ್ಯ... ಪಟ್ಟಿ ಪ್ರಕಟ ಮಾಡದೆ, ತಾವೇ ಗೆಲುವನ್ನು ... ಕುಳಿತುಕೊಂಡಿದ್ದಾರೆ.

ನಾಪೋಕ್ಲು ಕ್ಷೇತ್ರದಲ್ಲಿ ಗೆಲ್ಲಬಲ್ಲ ಹಂಸ ಎಂಬ... ಅವಕಾಶ ನೀಡದೆ ಇಸ್ಮಾಯಿಲ್ ಎಂಬ ವ್ಯಕ್ತಿಗೆ ಅ... ಕಲ್ಪಿಸಿದ್ದಾರೆ. ತನ್ನ ಬಳಿ ಜಿಲ್ಲಾ ಕಾಂಗ್ರೆಸಿನ ಪ್ರಮು... 'ಬಿ' ಫಾರಂಗಾಗಿ ಹಣ ಕೇಳಿದರು ... ಆರೋಪವನ್ನು ಹಂಸ ನೇರವಾಗಿ ಮಾಡಿದ್ದಾ... ಫಾರಂಗಳು ಮಾರಾಟವಾಯಿತು ಎಂಬ ಮಾತು ಕಾ... ವಲಯದಲ್ಲಿ ಕೇಳಿಬಂದಿದೆ. ಇದನ್ನು ಹಂಗಾಮಿ ... ಟಿ.ಪಿ. ರಮೇಶ್ ನಿರಾಕರಿಸಿದ್ದಾರೆ. ಮಾನನಷ್ಟ ಮೊ... ಹೂಡುವ ಬೆದರಿಕೆಯನ್ನೂ ಹಾಕಿದ್ದಾರೆ. ಅಲ್ಲದೆ ಬಂ... ಸ್ಪರ್ಧಿಸುವವರು ಹಿಂತೆಗೆದುಕೊಳ್ಳಬೇಕೆಂದು ಅ... ಮುಂದೆ ಪ್ರಮುಖ ಹುದ್ದೆಗಳನ್ನು ನೀಡಲಾಗುವು... ಹೇಳಿದ್ದಾರೆ. ರಾಜ್ಯದಲ್ಲಿ ಇರುವ ಎಲ್ಲಾ ನಿಗಮ ಮಂಡ... ಅಧ್ಯಕ್ಷ ಸ್ಥಾನ ಮತ್ತು ಸದಸ್ಯತ್ವ ಸ್ಥಾನ ನೀಡಿದರೂ, ... ಎದ್ದಿರುವ ಬಂಡಾಯವನ್ನು ಶಮನಗೊಳಿ... ಸಾಧ್ಯವಾಗುವುದಿಲ್ಲ. ಅಷ್ಟರ ಮಟ್ಟಿಗೆ ಬಂಡ... ಕಂಡುಬಂದಿದೆ.

ಕೆಲವು ಕ್ಷೇತ್ರಗಳಲ್ಲಿ ಜೆ.ಡಿ.ಎಸ್. ಸ್ಪರ್ಧಿಸು... ಒಂದೆರಡು ಕ್ಷೇತ್ರಗಳಲ್ಲಿ ಕಾಂಗ್ರೆಸನ್ನು ಸೋಲಿ... ಉದ್ದೇಶದಿಂದ ಸ್ಪರ್ಧಿಸಿದರೆ, ಒಂದೆರಡು ಕಡೆ ಸ್ಪರ್ಧೆ ನಿ... ಉದ್ದೇಶದಿಂದ ಸ್ಪರ್ಧಿಸುತ್ತಿದೆ.

ಎಲ್ಲಾ ಗೊಂದಲಗಳ ನಡುವೆ ಕೊಡಗು ಜಿಲ್ಲೆ... ಬಿಜೆಪಿಯೇ ಮೇಲುಗೈ ಸಾಧಿಸಲಿದೆ ಎನ್ನುವು... ಸಂಶಯವಿಲ್ಲ. ಕಾಂಗ್ರೆಸ್ ಈಗ ಇರುವ ಸ್ಥಾನಗ... ಉಳಿಸಿಕೊಳ್ಳಲು ಹೆಣಗಾಡಬೇಕಾಗುತ್ತದೆ. ಜಿಲ್ಲೆ... ಕಾಂಗ್ರೆಸ್ ನಾಯಕತ್ವ ರಾಜ್ಯ ನಾಯಕತ್ವಕ್ಕೆ ಮುಜು... ಉಂಟುಮಾಡುವ ಕಾರ್ಯವನ್ನು ಮಾಡುತ್ತಿದೆ. ಟಿಪ್ಪು... ದಿನಾಚರಣೆಯ ವೇಳೆಯಲ್ಲಿ ರಾಜ್ಯ ಸರಕಾ... ಕಾರ್ಯಕ್ರಮವಾದರೂ, ಅದರಲ್ಲಿ ಭಾಗವಹಿಸದೆ ಸ... ಹಾಕಿದ ಜಿಲ್ಲಾ ಕಾಂಗ್ರೆಸ್, ಈಗ ಚುನಾವಣೆಯಲ್ಲಿ ... ಪಕ್ಷವನ್ನು ಸೋಲಿಸುವ ಮೂಲಕ ತಮ್ಮ ಪಕ್ಷದ ಸರ... ವಿರುದ್ಧ ಸೇಡನ್ನು ತೀರಿಸಿಕೊಳ್ಳಲು ಮುಂದಾಗಿದೆ.


● ಬಿ.ಎನ್. ಮನು ...

ಪ್ರೇಮಲತಾರ ಮೌನ ಮತ್ತು ಪಚೌರಿಯ ಬಡ್ತಿ

ಸೊಗಣಿ ಸ್ವಾಮಿ ರಾಘವೇಶ್ವರನ ಲೈಂಗಿಕ ತ್ಪಾಳಿಕೆಗೆ ಬಲಿಯಾದ ಗಾಯಕಿ ಪ್ರೇಮಲತಾ ಅವರ ಹಲವಾರು ಜನ ಕೇಳುವ ಪ್ರಶ್ನೆ ಒಂದೇ: "ಆಕೆ ಕೆ ಮೂರು ವರ್ಷಗಳ ಕಾಲ ಸುಮ್ಮನಿದ್ದರು?"

ಪ್ರೇಮಲತಾ ಮಾತ್ರವಲ್ಲ, ಅವರಂತೆ ತನ್ನ ಟುಂಬದ ಹಿರಿಯ, ಶಾಲೆಯ ಮುಖ್ಯಸ್ಥ, ಕಚೇರಿಯ ಸ್ ಇತ್ಯಾದಿ ವ್ಯಕ್ತಿಗಳಿಂದ ಲೈಂಗಿಕ ಶೋಷಣೆಗೆ ತ್ತಾದ ಹೆಣ್ಣುಮಕ್ಕಳು ಅಥವಾ ಮಹಿಳೆಯರು ಕೆ ಸುಮ್ಮನಿರುತ್ತಾರೆ ಎನ್ನುವುದಕ್ಕೆ ಹಲವಾರು ರಣಗಳಿರುತ್ತವೆ. ಚಿಕ್ಕಮಕ್ಕಳಾಗಿದ್ದರೆ ಅವರನ್ನು ದರಿಸಿ ತೆಪ್ಪಗಿರಿಸಲಾಗುತ್ತದೆ; ದೊಡ್ಡವರಾಗಿದ್ದರೆ ಮಾಜದಲ್ಲಿ ಮಾನಮರ್ಯಾದೆ ಹರಾಜಾಗುತ್ತದೆ ದು ಹೆದರಿ ಸುಮ್ಮನಾಗುತ್ತಾರೆ. ಪ್ರೇಮಲತಾ ರು ಯಾಕೆ ಅಷ್ಟು ದಿನ ಸುಮ್ಮನಿದ್ದರು ಎಂದು ಳುವವರು ಹಲವು ಮುಖ್ಯ ವಿಚಾರಗಳ ಬಗ್ಗೆ ತಿಸಬೇಕು. ಅದಕ್ಕಿಂತ ಮೊದಲು ನೀವು ನಿಮ್ಮನ್ನು ಯ ಸ್ಥಾನದಲ್ಲಿ ಇರಿಸಿಕೊಂಡು ಯೋಚಿಸಬೇಕು.

ಒಂದೆಡೆ ತನ್ನನ್ನು ದೈಹಿಕವಾಗಿ ಹಿಂಸಿಸಿದವನು ಲ ಮಠಾಧೀಶ. ವಿವಿಧ ಪಕ್ಷಗಳ ರಾಜಕಾರಣಿಗಳು ಾತ್ರವಲ್ಲ, ಮಾಧ್ಯಮದವರು, ಆಡಳಿತ ಂತ್ರದವರು, ಪ್ರಭಾವಿ ವ್ಯಕ್ತಿಗಳ ಬೆಂಬಲ ಆತನಿಗಿದೆ.



ನ್ನೊಂದೆಡೆ, ತನ್ನ ಕುಟುಂಬ, ಬೆಳೆದು ನಿಂತ ಇಬ್ಬರು ಣ್ಣುಮಕ್ಕಳು ಇದ್ದಾರೆ. ಮಠಾಧೀಶ ತನ್ನ ಹಣ ಮತ್ತು ನ ಬಲವನ್ನು ಉಪಯೋಗಿಸಿಕೊಂಡು ತನ್ನನ್ನು ಾತ್ರವಲ್ಲ, ತನ್ನ ಇಡೀ ಕುಟುಂಬವನ್ನೇ ನಾಶ ಾಡಬಲ್ಲ ತಾಕತ್ತು ಹೊಂದಿದ್ದಾನೆ. ಮತ್ತೊಂದೆಡೆ ತನ್ನ ಳಲನ್ನು ಯಾರು ಕೇಳುತ್ತಾರೆ, ಯಾರು ಬೆಂಬಲಕ್ಕೆ ಲ್ಲುತ್ತಾರೆ, ಯಾರು ನ್ಯಾಯ ಕೊಡಿಸುತ್ತಾರೆ ಎಂಬ ಂಜಿಕೆ. ಎಲ್ಲಕ್ಕಿಂತ ಮುಖ್ಯವಾಗಿ ಕುಟುಂಬದವರಲ್ಲದೆ, ೊಲೀಸರು, ವಕೀಲರು, ನ್ಯಾಯಾಧೀಶರು, ಾಧ್ಯಮದವರ ಮುಂದೆ ತನಗಾದದ್ದನ್ನು ಮತ್ತೆಮತ್ತೆ ವರಿಸುವ ಅನಿವಾರ್ಯತೆ. ಅದು ತನ್ನ ಮೇಲೆ ಲ್ಕು ಗೋಡೆಗಳ ನಡುವೆ ಆದ ಅತ್ಯಾಚಾರದಷ್ಟೇ ೋರವಾದದ್ದು. ಕೊನೆಗೆ ತನಗೆ ನ್ಯಾಯ ಸಿಗುತ್ತದೆ ಂಬ ವಿಶ್ವಾಸವೂ ಇರುವುದಿಲ್ಲ. ಇಂತಹ ರಿಸ್ಥಿತಿಯಲ್ಲಿರುವ ಮಹಿಳೆ ಅದು ಹೇಗೆ ತಾನೆ ೖರ್ಯ ಮಾಡಿ ಬಾಯಿ ಬಿಡಲು ಸಾಧ್ಯ?

ಪ್ರೇಮಲತಾ ಅವರಿಗೆ ಅಂತಹ ಧೈರ್ಯ ಡೆಯಲು ಮೂರು ವರ್ಷಗಳು ಬೇಕಾದವು. ಅದು ಮಾನ್ಯ ಸಂಗತಿ ಅಲ್ಲವೇ ಅಲ್ಲ. ಅಷ್ಟೇ ಮುಖ್ಯವಾಗಿ ಕೆಯೊಂದಿಗೆ ಆಕೆಯ ಪತಿ ದಿವಾಕರ ಶಾಸ್ತ್ರಿ ಮತ್ತು ವರ ಇಡೀ ಕುಟುಂಬ ಮತ್ತು ಮಕ್ಕಳು ನಿಂತದ್ದೂ ಘನೀಯವೇ. ಆದರೆ ಈಗಲೂ ಪ್ರೇಮಲತಾ ವರಿಗೆ ನೆಮ್ಮದಿ ಎಂಬುದಿಲ್ಲ. ವಿಚಾರಣೆ ಹೆಸರಲ್ಲಿ ಲವು ಪೊಲೀಸರು ಅವರಿಗೆ ಮತ್ತೆಮತ್ತೆ ಅವಮಾನ ಾಡಿದ್ದಾರೆ. ಪಂಚನಾಮಕ್ಕೆ ಹೋದಲ್ಲೆಲ್ಲ ಘವೇಶ್ವರನ ಗೂಂಡಾ ಗ್ಯಾಂಗ್ ಅವಮಾನಿಸಿದೆ. ಲವಾರು ನ್ಯಾಯಾಧೀಶರೇ ಈ ಪ್ರಕರಣದ ಚಾರಣೆಯಿಂದ ಹಿಂದೆ ಸರಿದಿದ್ದಾರೆ. ಈಗಲೂ ಕೇಸು ್ಯಾಯಾಲಯದ ಮುಂದೆ ಮಂದಗತಿಯಲ್ಲೇ ಗುತ್ತಿದೆ. ಇನ್ನು ಪ್ರೇಮಲತಾ ಅವರಿಗೆ ನ್ಯಾಯ ಗುವುದು ಮತ್ತು ರಾಘವೇಶ್ವರನಿಗೆ ಶಿಕ್ಷೆ ಆಗುವುದು ಾವ ಕಾಲಕ್ಕೋ.

ಇದನ್ನು ಬರೆಯುತ್ತಿರುವಾಗಲೇ ಟಿವಿಯಲ್ಲಿ ತನ್ನ ಗಳ ಮೇಲೆ ತನ್ನ ಸಹೋದರನೇ ಹಲವು ರ್ಷಗಳ ಕಾಲ ನಡೆಸಿದ ಅತ್ಯಾಚಾರದ ಬಗ್ಗೆ, ುವತಿಯೊಬ್ಬಳು ಕಣ್ಣೀರಿಡುತ್ತಿದ್ದಾರಲ್ಲದೆ "ಇದನ್ನು ಹೊರಂಗ ಮಾಡಲು ತುಂಬಾ ಧೈರ್ಯ ಡೆಯಬೇಕಾಯಿತು. ಮುಂದೆ ಯಾರ ಣ್ಣುಮಕ್ಕಳಿಗೂ ಇಂತಹದ್ದು ಆಗಬಾರದು ಎಂಬ ಕಾರಣಕ್ಕೆ ನಾನು ಮತ್ತು ನನ್ನ ಮಗಳು ಮುಂದೆ ಬಂದಿದ್ದೇವೆ" ಎಂದು ಹೇಳುತ್ತಿದ್ದಾರೆ.

ಇದೇ ಹೊತ್ತಿಗೆ ತನ್ನ ಸಹೋದ್ಯೋಗಿಗೆ ಲೈಂಗಿಕ ಹಿಂಸೆ ನೀಡಿದ ಆರೋಪವನ್ನು ಎದುರಿಸುತ್ತಿರುವ ಆರ್.ಕೆ.ಪಚೌರಿಗೆ ಬಡ್ತಿ ನೀಡಿರುವ ಸುದ್ದಿ ದೆಹಲಿಯಿಂದ ಬಂದಿದೆ. ಈ ಪಚೌರಿ ಅಂತಿಂತಹ ವ್ಯಕ್ತಿಯಲ್ಲ, ಟೆರಿ ಎಂಬ ಸಂಸ್ಥೆಯ ಡೈರೆಕ್ಟರ್ ಜನರಲ್ ಆಗಿದ್ದ, ಈತ ವಿದ್ಯುತ್ ವಲಯದಲ್ಲಿ ಪ್ರಚಂಡ ತಂತ್ರಜ್ಞ. ಈ ಹಿಂದೆ ಹವಾಮಾನ ವೈಪರೀತ್ಯ ಕುರಿತು ಸಂಶೋಧನೆ ಮಾಡಿದ ಅಂತರರಾಷ್ಟ್ರೀಯ ಗುಂಪಿಗೆ ಈ ಪಚೌರಿ ನಾಯಕನಾಗಿದ್ದಾಗ ಆ ಗುಂಪಿಗೆ ನೊಬೆಲ್ ಪ್ರಶಸ್ತಿ ಲಭಿಸಿತ್ತು. ಈತನ ಕಾಣಿಕೆಗಳನ್ನು ಪರಿಗಣಿಸಿಯೇ ಈತನಿಗೆ ಪದ್ಮ ಭೂಷಣ ಮತ್ತು ಪದ್ಮ ವಿಭೂಷಣ ಪ್ರಶಸ್ತಿಗಳನ್ನು ಕೊಡಲಾಗಿತ್ತು. ಈತನಿಗೆ ಹಲವಾರು ಅಂತರರಾಷ್ಟ್ರೀಯ ಪ್ರಶಸ್ತಿಗಳು ಮತ್ತು ಮಾನ್ಯತೆಗಳೂ ಸಿಕ್ಕಿವೆ.

ಇಂತಹ ಪಚೌರಿಗೆ ಈಗ ವಯಸ್ಸು **76**. ಹೋದ ವರ್ಷ ಟೆರಿ ಸಂಸ್ಥೆಯಲ್ಲಿ ಕಿರಿಯ ಸಂಶೋಧಕಿಯಾಗಿದ್ದ **26** ವರ್ಷ ವಯಸ್ಸಿನ ಮಹಿಳೆಯೊಬ್ಬಳು "ಪಚೌರಿ ನನಗೆ ಲೈಂಗಿಕ ಹಿಂಸೆ ನೀಡುತ್ತಿದ್ದಾನೆ. ಅಶ್ಲೀಲ ಮೆಸೇಜ್‌ಗಳನ್ನು ರವಾನಿಸಿದ್ದಾನೆ" ಎಂದು ಆರೋಪಿಸಿದ್ದಳು. ಅದು ದೊಡ್ಡ ವಿವಾದವಾಗಿದ್ದರಿಂದ ಮೊದಲು ಅದನ್ನು ಟೆರಿ ಸಂಸ್ಥೆಯ ಒಳಗೇ ಇರುವ ವಿಚಾರಣಾ ತಂಡಕ್ಕೆ ಒಪ್ಪಿಸಲಾಯಿತು. ಆ ವಿಚಾರಣಾ ತಂಡ ಪಚೌರಿ ವಿರುದ್ಧ ಆರೋಪ ಮಾಡಿದ್ದ ಮಹಿಳೆಗೆ ನ್ಯಾಯ ಒದಗಿಸುವ ಬದಲು ಆತನ ರಕ್ಷಣೆಗೆ ನಿಂತಿತು. ಸಂಸ್ಥೆಯ ಅಧಿಕಾರಿಗಳು "ನೀನು ಸಾಧಿಸುವಂತಹದ್ದು ಏನಿದೆ. ಇದೆಲ್ಲ ತಾಪತ್ರಯ ಯಾಕೆ. ಸುಮ್ಮನೆ ಆತನೊಂದಿಗೆ ರಾಜಿ ಮಾಡಿಕೋ" ಎಂದೆಲ್ಲ ಯುವತಿಯ ಮೇಲೆ ಒತ್ತಡ ತರಲಾರಂಭಿಸಿದರು. ಮುದಿ ಹೋರಿ ಪಚೌರಿ ಆ ಯುವತಿಗೆ ಕಳುಹಿಸಿದ್ದ ಮೆಸೇಜ್‌ಗಳನ್ನು ಪರೀಕ್ಷಿಸುವ ಬದಲು ಆ ಯುವತಿಯ ಹಿನ್ನೆಲೆ, ಆಕೆಯ ಕುಟುಂಬದ ಹಿನ್ನೆಲೆಗಳನ್ನು ತಡಕಾಡಲಾರಂಭಿಸಿದರು. ಕಾನೂನಿನಂತೆ ಆ ತಂಡದಲ್ಲಿ ಹೊರಗಿನ ಒಬ್ಬ ಸದಸ್ಯೆಯೂ ಇದ್ದರು. ಆದರೆ ಆಕೆ ನ್ಯಾಯದ ಪರವಾಗಿದ್ದಿದ್ದರಿಂದ ಆಕೆಯನ್ನು ಹೊರಗೆ ಹಾಕಿ ಪಚೌರಿಗೆ ಹತ್ತಿರವಾಗಿದ್ದ ಯುವತಿಯನ್ನು ತಂದು ಕೂರಿಸಿದರು. ಇದೆಲ್ಲದರಿಂದ ಬೇಸತ್ತ ಆ ತಂಡದ ಮುಖ್ಯಸ್ಥೆಯೇ ರಾಜೀನಾಮೆ ಸಲ್ಲಿಸಿ ಹೊರ ನಡೆದರು. ಜೊತೆಗೆ ಅದೆಷ್ಟೋ ಮಹಿಳೆಯರು ಟೆರಿ ಸಂಸ್ಥೆಯನ್ನು ಬಿಟ್ಟುಹೋದರು. ಯುವತಿ ಮಾಡಿದ್ದ ಆರೋಪ ಸುಳ್ಳು ಎಂದು ವಿಚಾರಣಾ ತಂಡಕ್ಕೆ ಹೇಳಿದವರಿಗೆ ಬಡ್ತಿಗಳನ್ನು ಕೊಡಲಾಯಿತು, ವಿದೇಶಗಳಿಗೆ ಕಳುಹಿಸಲಾಯಿತು. ಆರೋಪ ಮಾಡಿದ್ದ ಯುವತಿಯ ಆತ್ಮಸ್ಥೈರ್ಯವನ್ನು ಕುಗ್ಗಿಸಲು ಆಕೆಯ ಹೆಸರನ್ನು ಕಾನೂನು ಬಾಹಿರವಾಗಿ ಬಹಿರಂಗಪಡಿಸಲಾಯಿತು. ಆಕೆಗೆ ಕೆಲಸ ಕೊಡದೆ ಮೂಲೆಗುಂಪು ಮಾಡಲಾಯಿತು.


ಇದೆಲ್ಲದರಿಂದ ಬೇಸತ್ತ ಆ ಯುವತಿ ತನ್ನ ಕೆಲಸಕ್ಕೆ ರಾಜೀನಾಮೆ ನೀಡಿದಳು. ಆದರೆ ಆಕೆ ತನ್ನ ಸಂಸ್ಥೆಯ ಮುಖ್ಯಸ್ಥನ ವಿರುದ್ಧವೇ ದೂರು ನೀಡಿದ್ದರಿಂದ ಬೇರೆ ಎಲ್ಲೂ ಆಕೆಗೆ ಕೆಲಸ ಸಿಗದಂತಾಯಿತು. ಯಾವ ತಪ್ಪೂ ಮಾಡದಿದ್ದ ಯುವತಿ ಅತ್ತ ಕಲಸವೂ ಇಲ್ಲದೆ, ಇತ್ತ ಜೀವನ ಸಾಗಿಸಲು ಆದಾಯವೂ ಇಲ್ಲದಂತಾಗಿ ಹೋದಳು.

ಆದರೆ ಪಚೌರಿ ಮಾತ್ರ ಈಗಲೂ ತಾನೇನೂ ಮಾಡಿಲ್ಲ ಎಂಬಂತೆ ಮೆರೆದಾಡುತ್ತಿದ್ದಾನೆ. ಟೆರಿ ಸಂಸ್ಥೆಯ ಡೈರೆಕ್ಟರ್-ಜನರಲ್ ಆಗಿದ್ದ ಪಚೌರಿಗೆ ಇವತ್ತು ಟೆರಿಯ ಆಡಳಿತ ಮಂಡಳಿಯ ಉಪಾಧ್ಯಕ್ಷ ಸ್ಥಾನಕ್ಕೆ ಬಡ್ತಿ ಕೊಟ್ಟಿದೆ. ಆಡಳಿತ ಮಂಡಳಿಯಲ್ಲಿ ಇರುವವರು ಯಾರು? ನೈನಾ ಲಾಲ್ ಕಿದ್ವಾಯಿ ಮತ್ತು ದೀಪಕ್ ಪಾರೇಖ್ ತರಹದ ಕಾರ್ಪೊರೇಟ್ ಜಗತ್ತಿನ ದಿಗ್ಗಜರು. ಬೇರೆ ಯಾರೋ ಆಗಿದ್ದರೆ ಇಷ್ಟು ಹೊತ್ತಿಗೆ ನಮ್ಮ ಟಿವಿ ಚಾನೆಲ್‌ಗಳು ಯುವತಿಗೆ ಆದ ಅನ್ಯಾಯದ ವಿರುದ್ಧ ಬೊಬ್ಬೆ ಹಾಕುತ್ತಿದ್ದವು. ಆದರೆ ಎಲ್ಲಾ ಟಿವಿ ಚಾನೆಲ್‌ಗಳು ಮೌನ ವಹಿಸಿವೆ. ಯಾಕೆಂದರೆ ಅವುಗಳಿಗೆ ಕಾರ್ಪೊರೇಟ್ ವಲಯದ ಜಾಹೀರಾತು ಮತ್ತು ಸುಗ್ಗುಗಳು ಮುಖ್ಯ. ಜೊತೆಗೆ ಅವುಗಳ ಮಾಲೀಕರೇ ದೊಡ್ಡ ಕಾರ್ಪೊರೇಟ್ ಕಂಪನಿಗಳಾಗಿರುವುದರಿಂದ ಯಾರೂ ಆ ಯುವತಿಯ ಪರ ದನಿ ಎತ್ತುತ್ತಿಲ್ಲ.

ಕಾರ್ಪೊರೇಟ್ ವಲಯದಲ್ಲಿ ಕೆಲಸ ಮಾಡುವವರೂ, ಲೇಖಕಿಯೂ ಆಗಿರುವ ಅಪರ್ಣಾ ಜೈನ್ ಎಂಬುವವರು ಯುವತಿಗೆ ಆದ ಅನ್ಯಾಯ ಮತ್ತು ಪಚೌರಿಗೆ ಸಿಕ್ಕಿರುವ ಮಾನ್ಯತೆ ಕಂಡು ಕೆಂಡಕಾರಿದ್ದಾರೆ. "ಪಚೌರಿಗೆ ಭಡ್ತಿ ಕೊಟ್ಟಿರುವ ಪ್ರಕರಣ ಏನನ್ನು ಸೂಚಿಸುತ್ತದೆ ಎಂದರೆ ಮಹಿಳೆಯರು ಕಚೇರಿಗಳಲ್ಲಿ ಆಗುವ ಲೈಂಗಿಕ ಕಿರುಕುಳ, ಅವಮಾನ, ಅತ್ಯಾಚಾರದಂತಹ ಕೃತ್ಯಗಳನ್ನು ತೆಪ್ಪಗೆ ಸಹಿಸಿಕೊಂಡಿರಬೇಕು ಎಂಬುದೇ ಆಗಿದೆ. ಮೊದಲೇ ನಮ್ಮ ಸಮಾಜದಲ್ಲಿ ಚಿಕ್ಕವರಾಗಿದ್ದಾಗಿನಿಂದಲೂ ಮಹಿಳೆಯರಿಗೆ ಕಿರುಕುಳ ಇದ್ದದ್ದೇ. ನಾನು ನನ್ನ ಪುಸ್ತಕ 'ಓನ್ ಇಟ್'ಗಾಗಿ ನೂರಾರು ಮಹಿಳೆಯರನ್ನು ಮಾತನಾಡಿಸಿದೆ. ಅವರಲ್ಲಿ ಹೆಚ್ಚಿನವರು ತಾವು ಅನುಭವಿಸಿದ ಲೈಂಗಿಕ ಕಿರುಕುಳದ ಬಗ್ಗೆ ಹೇಳಿದರು. ತಂದೆ, ಸಂಬಂಧಿ, ಮೇಷ್ಟ್ರು, ಅಕ್ಕಪಕ್ಕದ ಮನೆಯವರು-ಹೀಗೆ ಯಾರಾದರೊಬ್ಬರು ಅವರನ್ನು ಕೆಟ್ಟದಾಗಿ ಮುಟ್ಟಿದ್ದರು, ಅಶ್ಲೀಲ ಪದಗಳನ್ನು ಉಪಯೋಗಿಸಿದ್ದರು, ಇನ್ನೂ ಹೆಚ್ಚಿನದ್ದೇನೋ ಮಾಡಿದ್ದರು. ಆದರೆ ಅವರು ಯಾರೂ ಇದರ ವಿರುದ್ಧ ತುಟಿಪಿಟಿಕ್ ಎಂದಿರಲಿಲ್ಲ. ಯಾಕೆಂದರೆ ಅವರ ಮೇಲೆ ಹಲ್ಲೆ ಮಾಡಿದವನು ಒಂದಲ್ಲ ಒಂದು ರೀತಿಯಲ್ಲಿ ಪ್ರಭಾವಿ ವ್ಯಕ್ತಿಯಾಗಿದ್ದ. ಜೊತೆಗೆ ಈ ವಿಚಾರ ಹೊರಬಿದ್ದರೆ ತಮ್ಮ ಹೆಣ್ಣುಮಗಳ ಭವಿಷ್ಯಕ್ಕೆ ಗಂಡಾಂತರ ಎಂಬ ಭಯ ಹೆತ್ತವರಿಗಿರುತ್ತದೆ. ಪರಿಣಾಮವಾಗಿ ಏನಾಗುತ್ತದೆಂದರೆ ಹೆಣ್ಣು ಮಕ್ಕಳೇ ಮಾನ ಮರ್ಯಾದೆಗೆ ಹೆದರಿ ಅವಮಾನಿತಳಂತೆ ಜೀವಿಸುತ್ತಾರೆ. ಆದರೆ ಆಕೆಯ ಮೇಲೆ ಅತ್ಯಾಚಾರ ಮಾಡಿದವನು ಯಾವ ನಾಚಿಕೆಯಾಗಲಿ, ಅವಮಾನವಾಗಲಿ ಎದುರಿಸದೆ ತನ್ನ ಚಾಳಿಯನ್ನು ಮುಂದುವರೆಸುತ್ತಾನೆ. ಇದೇ ಸಂಸ್ಕೃತಿ ನಮ್ಮ ಕಾರ್ಪೊರೇಟ್ ವಲಯದಲ್ಲೂ ಇದೆ. ಆದ್ದರಿಂದ ಇಂತಹ ಅನ್ಯಾಯಗಳು ನಡೆಯುತ್ತವೆ" ಎಂದಿದ್ದಾರೆ.

"ಅತ್ಯಾಚಾರಕ್ಕೊಳಗಾದ ಮಹಿಳೆ ಯಾಕೆ ಸುಮ್ಮನಿದ್ದಳು ಎಂದು ಪ್ರಶ್ನಿಸುವ ಎಲ್ಲರಿಗೂ ಪಚೌರಿ ಕೇಸ್ ನೋಡಿ ಎನ್ನುತ್ತೇನೆ.

ಅತ್ಯಾಚಾರಕ್ಕೊಳಗಾದ ಮಹಿಳೆ ಯಾಕೆ ಕಾರ್ಪೊರೇಟ್ ಕಂಪನಿ ಕೊಟ್ಟ ಹಣವನ್ನು ತೆಗೆದುಕೊಂಡು ಸುಮ್ಮನಾದಳು ಎಂದು ಪ್ರಶ್ನಿಸುವ ಎಲ್ಲರಿಗೂ ಪಚೌರಿ ಕೇಸ್ ನೋಡಿ ಎನ್ನುತ್ತೇನೆ.



ಅತ್ಯಾಚಾರಕ್ಕೊಳಗಾದ ಮಹಿಳೆ ಯಾಕೆ ದೂರು ಕೊಡಲು ತುಂಬಾ ವಿಳಂಬ ಮಾಡಿದಳು ಎಂದು ಪ್ರಶ್ನಿಸುವ ಎಲ್ಲರಿಗೂ ಪಚೌರಿ ಕೇಸ್ ನೋಡಿ ಎನ್ನುತ್ತೇನೆ.


ಅತ್ಯಾಚಾರಕ್ಕೊಳಗಾದ ಮಹಿಳೆಯ ಹತ್ತಿರ ಸಾಕ್ಷಿ ಇದ್ದರೂ ಆಕೆ ಯಾಕೆ ಸುಮ್ಮನೆ ತನ್ನ ಕೆಲಸ ತೊರೆದು ಹೋದಳು ಎಂದು ಪ್ರಶ್ನಿಸುವ ಎಲ್ಲರಿಗೂ ಪಚೌರಿ ಕೇಸ್ ನೋಡಿ ಎನ್ನುತ್ತೇನೆ.

ಯಾಕೆಂದರೆ ಪಚೌರಿ ಕೇಸ್ ನಮ್ಮೆಲ್ಲರ ಮೌನ ಯಾತಕ್ಕೆಂದು ತೋರುತ್ತದೆ" ಎಂದು ಜೈನ್ ತಮ್ಮ ಲೇಖನದ ಅಂತ್ಯದಲ್ಲಿ ಹೇಳುತ್ತಾರೆ.

ಜೊತೆಗೆ ಪಚೌರಿಯ ನೀಚತನಕ್ಕೆ ತುತ್ತಾದ ಯುವತಿ "ನಿರ್ಲಜ್ಜತೆ ತುಂಬಿ ತುಳುಕುತ್ತಿದೆ. ನನಗೆ ನ್ಯಾಯ ಸಿಗಬೇಕಿತ್ತು, ಆದರೆ ನಾನು ಘೋಷಿಸುತ್ತೇನೆ, ನನ್ನ ಕೇಸನ್ನು ನಾನು ಅದರ ತಾರ್ಕಿಕ ಅಂತ್ಯಕ್ಕೆ ತೆಗೆದುಕೊಂಡು ಹೋಗುತ್ತೇನೆ" ಎಂದು ಒಂದು ಬಹಿರಂಗಪತ್ರದಲ್ಲಿ ಪಣತೊಟ್ಟಿದ್ದಾಳೆ.

ಪಚೌರಿ ಮಾತ್ರವಲ್ಲ, ಈ ಹಿಂದೆ ಅದೆಷ್ಟೋ

ಕಂಡಹಾಗೆ



• ಗೌರಿ ಲಂಕೇಶ್
editorlankesh@gmail.com

ಪ್ರಭಾವಿ ಪುರುಷರು ಇಂತಹ ನೀಚಕೃತ್ಯಗಳನ್ನು ಎಸಗಿಯೂ ಶಿಕ್ಷೆಗೆ ಗುರಿಯಾಗದೆ ಮೆರೆದಿದ್ದಾರೆ. ಉದಾಹರಣೆಗೆ ಕೆ.ಪಿ.ಎಸ್.ಗಿಲ್ ಎಂಬ ಹಿರಿಯ ಪೊಲೀಸ್ ಅಧಿಕಾರಿ ಪಾರ್ಟಿಯೊಂದರಲ್ಲಿ ತನ್ನ ನಿತಂಬವನ್ನು ಮುಟ್ಟಿ ಅವಮಾನಿಸಿದ್ದರು ಎಂದು ಮಹಿಳೆಯೊಬ್ಬರು ದೂರು ನೀಡಿದ್ದರು. ಆಕೆ ಯಾವುದೋ ಸಾಮಾನ್ಯ ಮಹಿಳೆ ಆಗಿರಲಿಲ್ಲ. ಬದಲಾಗಿ ಆಕೆಯೂ ಐಎಎಸ್ ಅಧಿಕಾರಿ ಆಗಿದ್ದವರು. ಕೆಳಗಿನ ನ್ಯಾಯಾಲಯ ಗಿಲ್ ಅಪರಾಧಿ ಎಂದು ತೀರ್ಪು ನೀಡಿತು. ಆ ತೀರ್ಪನ್ನು ಸುಪ್ರೀಂಕೋರ್ಟ್ ಕೂಡ ಎತ್ತಿಹಿಡಿದಿತ್ತು. ಆದರೂ ಇವತ್ತಿನತನಕ ಗಿಲ್ ಒಂದೇ ಒಂದು ದಿನವನ್ನು ಕಂಬಿಯ ಹಿಂದೆ ಕಳೆದಿಲ್ಲ.

ಇನ್ಫೋಸಿಸ್ ಕಂಪನಿಯ ಸಂಸ್ಥಾಪಕರಲ್ಲಿ ಒಬ್ಬನಾಗಿದ್ದ ಫಣೀಶ್ ಮೂರ್ತಿ ಎಂಬಾತ ಅಮೆರಿಕದಲ್ಲಿ ತನ್ನ ಸೆಕ್ರೆಟರಿಗೆ ಲೈಂಗಿಕ ಕಿರುಕುಳ ನೀಡಿದ್ದ. ಆತನನ್ನು ಬಚಾವು ಮಾಡಲು ಇನ್ಫೋಸಿಸ್ ಕಂಪನಿ ಬರೋಬ್ಬರಿ ಮೂರು ಮಿಲಿಯನ್ ಡಾಲರ್‌ಗಳನ್ನು ಆ ಮಹಿಳೆಗೆ ಕೊಟ್ಟಿತು. ಆದರೂ ತನ್ನ ಕಚ್ಚೆಹರುಕತನವನ್ನು ಫಣೀಶ್ ಮೂರ್ತಿ ಬಿಡಲಿಲ್ಲ. ಆತ ಇನ್ಫೋಸಿಸ್ ತೊರೆದು ಅಮೆರಿಕದ ಒಂದು ಟೆಕ್ಕಿ ಕಂಪನಿಯನ್ನು ಸೇರಿದ. ಅಲ್ಲೂ ಇನ್ನೊಬ್ಬ ಮಹಿಳೆಗೆ ಲೈಂಗಿಕ ಕಿರುಕುಳ ಕೊಟ್ಟಿದ್ದರಿಂದ ಆ ಕಂಪನಿಯೂ ಮಿಲಿಯನ್‌ಗಟ್ಟಲೆ ದಂಡ ಕಟ್ಟಿತ್ತಲ್ಲದೆ ಫಣೀಶ್ ಮೂರ್ತಿಗೆ ಗೇಟ್ ಪಾಸ್ ಕೊಟ್ಟಿತ್ತು.

ಇಂತಹ ಹಲವಾರು ಪ್ರಕರಣಗಳಿವೆ. ಅಲ್ಲಿ ಸಂತ್ರಸ್ತ ಮಹಿಳೆಗೆ ಅನ್ಯಾಯವಾಗಿ ಕಚ್ಚೆಹರುಕರಿಗೇ ಸ್ಥಾನಮಾನ ಸಿಕ್ಕಿದೆ. ಹೀಗಿರುವಾಗ ಪ್ರೇಮಲತಾ ಅವರು ಹೋರಿ ರಾಘವನ ವಿರುದ್ಧ ದನಿ ಎತ್ತಿದ್ದು ಸಾಮಾನ್ಯ ಸಂಗತಿಯಲ್ಲ. ಅವರು ಅಂತಹ ಧೈರ್ಯ ತೋರಿದ್ದರಿಂದಲೇ ರಾಘವೇಶ್ವರನ ತೀಟೆಗಳಿಗೆ ತುತ್ತಾಗಿದ್ದ ಇನ್ನೋರ್ವ ಮಹಿಳೆಗೂ ಧೈರ್ಯ ಬಂದು ಈಗ ಆಕೆಯೂ ಆತನ ವಿರುದ್ಧ ದೂರು ಸಲ್ಲಿಸುವಂತಾಗಿದೆ.

ಒಮ್ಮೆ ಪ್ರೇಮಲತಾ ಅವರು "ನನ್ನ ಮೇಲೆ ಅಷ್ಟೊಂದು ಭಾರಿ ಅಷ್ಟೊಂದು ಕಡೆ ಅತ್ಯಾಚಾರ ನಡೆಯಿತು ಎಂದು ಮತ್ತೆ ಮತ್ತೆ ಹೇಳುವುದೇ ನನ್ನ ಮೇಲೆ ಮತ್ತೆ ಅತ್ಯಾಚಾರ ನಡೆಸಿದ್ದಕ್ಕೆ ಸಮ. ಆದರೆ ನನಗೆ ನ್ಯಾಯ ಬೇಕಿರುವುದರಿಂದ ಅದೆಷ್ಟು ಬಾರಿಯಾದರೂ ನಾನು ಅದನ್ನು ಹೇಳುತ್ತೇನೆ" ಎಂದು ಕಣ್ಣೀರಿಟ್ಟಿದ್ದು ನೆನಪಾಯಿತು.

ಪ್ರೇಮಲತಾ ಅವರನ್ನು ಪ್ರಶ್ನಿಸುವ ಜನರು ಮೊದಲು ಅವರ ಭಯ ಮತ್ತು ಆತಂಕವನ್ನು ಅರ್ಥಮಾಡಿಕೊಂಡರೆ, ನಮ್ಮ ಸಮಾಜ ಮತ್ತು ವ್ಯವಸ್ಥೆ ಹೇಗೆ ಮಹಿಳಾವಿರೋಧಿ ಆಗಿದೆ ಎಂಬುದನ್ನು ಮನವರಿಕೆ ಮಾಡಿಕೊಂಡರೆ ಆಕೆ ಯಾಕೆ ಅಷ್ಟು ದಿನ ಸುಮ್ಮನಿದ್ದರು ಎಂಬುದೂ ಮನದಟ್ಟಾಗುತ್ತದೆ. ಆಗ ಆಕೆಯನ್ನು ಪ್ರಶ್ನಿಸುವ ಬದಲು ಆಕೆಯ ಬೆಂಬಲಕ್ಕೆ ನಿಲ್ಲುವಂತಾಗುತ್ತದೆ.

ನಮ್ಮ ತಂಡವಂತೂ ಪ್ರೇಮಲತಾ ಅವರಿಗೆ ನ್ಯಾಯ ಸಿಗುವವರೆಗೂ ನಮ್ಮ ಕೈಲಾದಷ್ಟು ನೆರವನ್ನು ಅವರಿಗೆ ಮತ್ತು ಅವರ ಕುಟುಂಬದವರಿಗೆ ಕೊಟ್ಟೇಕೊಡುತ್ತೇವೆ. •

ಉತ್ತರ ಕನ್ನಡ

ದೇಶಪಾಂಡೆ ಭಂಡಾಟದಿಂದ ಕಾಂಗ್ರೆಸ್‌ಗೆ ಬಂಡುಕೋರರ ಕಾಟ

ಉತ್ತರ ಕನ್ನಡದ ಪಂಚಾಯ್ತಿ ಅಖಾಡದಲ್ಲಿ ಡಾನ್ ದೇಶಪಾಂಡೆಗೆ ಮುಖಭಂಗ ಆಗಲಿದೆಯಾ? ಪಾರ್ಲಿಮೆಂಟ್ ಚುನಾವಣೆಯಲ್ಲಿ ದೇಶಪಾಂಡೆಯ ಪುತ್ರರತ್ನನನ್ನು ದೊಡ್ಡ ಅಂತರದಲ್ಲಿ ಸೋಲಿಸಿದ್ದ ಜನರು ಮತ್ತೊಮ್ಮೆ ಆತನ ಸೊಕ್ಕು ಮುರಿಯಲು ಸಿದ್ಧರಾಗಿದ್ದಾರಾ? ಇಂಥದೊಂದು ಜಿಜ್ಞಾಸೆ ಪಂಚಾಯ್ತಿ ರಣರಂಗದಲ್ಲಿ ರೋಚಕವಾಗಿ ನಡೆದಿದೆ. ನಿಷ್ಠಾವಂತ ಕಾರ್ಯಕರ್ತರು, ಶಾಸಕರನ್ನೆಲ್ಲ ಕೇರ್ ಮಾಡದೆ ತನ್ನ ಗುಲಾಮರು, ಗೂಂಡಾಗಳಿಗೆ ಏಕಪಕ್ಷೀಯವಾಗಿ ಟಿಕೆಟ್ ಹಂಚಿರುವ ದೇಶಪಾಂಡೆಯ ಹಿಟ್ಲರ್‌ಶಾಹಿ ಧೋರಣೆಯಿಂದಾಗಿ ಕಾಂಗ್ರೆಸ್‌ನಲ್ಲಿ ಬಂಡಾಯದ ಬೆಂಕಿ ಭುಗಿಲೆದ್ದಿದೆ. ಜಿಪಂ-ತಾಪಂನ ಹಲವು ಕ್ಷೇತ್ರದಲ್ಲಿ ಕಾಂಗ್ರೆಸ್‌ನ ಬಂಡಾಯಗಾರರು ಸೆಡ್ಡು ಹೊಡೆದು ಹೂಂಕರಿಸುತ್ತಿದ್ದಾರೆ.

ದೇಶಪಾಂಡೆಯ ದಾದಾಗಿರಿಯಿಂದ ರೋಸತ್ತು ಹೋಗಿರುವ ಮತದಾರರಂತೂ ಬಂಡುಕೋರರತ್ತಲೇ ಒಲವು ವ್ಯಕ್ತಪಡಿಸುತ್ತಿದ್ದಾರೆ. ಪಕ್ಷ ದ್ರೋಹಿಗಳಿಗಷ್ಟೇ ಅಲ್ಲ, ಪಕ್ಕ ಜನಪೀಡಕ ಬಕಾಸುರರೇ ಬಹುತೇಕ ಜಿಪಂ ಕ್ಷೇತ್ರದಲ್ಲಿ ಕಾಂಗ್ರೆಸ್‌ನ ಕ್ಯಾಂಡಿಡೇಟಾಗಿದ್ದಾರೆ, ಜತೆಗೆ ಬಂಡಾಯದ ಬೇಗುದಿ. ಇದು ಚಿಂತಾಜನಕ ಸ್ಥಿತಿಯಲ್ಲಿರುವ ಬಿಜೆಪಿ ಮತ್ತು ಅಸ್ತಿತ್ವ ಕಳಕೊಂಡಿರುವ ಜೆಡಿಎಸ್‌ನ ಪೊಕ್ಕು ಪುಢಾರಿಗಳಲ್ಲಿ ಅಡ್ಡ ಉಮೇದಿ ಕೆರಳಿಸಿಬಿಟ್ಟಿದೆ. ಕಳೆದ ಬಾರಿ 9 ಸ್ಥಾನ ಗೆದ್ದಿದ್ದ ಬಿಜೆಪಿ ಈ ಬಾರಿ ಅಷ್ಟು ಉಳಿಸಿಕೊಳ್ಳುವುದೂ ದುಸ್ಸಾಧ್ಯವಾಗಿದೆ.

ಬಿಜೆಪಿಯ ಮುಖೇಡಿ ಮುಖಂಡ ಮಣಿಗಳಾದ ಸಂಸದ ಅನಂತ್ಮಾಣಿ ಮತ್ತು ಮಾಜಿ ಮಂತ್ರಿ ಕಾಗೇರಿ ಮಾಣಿಗಳ "ಕಾಗೆ ಕಚ್ಚಾಟ"ದಿಂದ ಆ ಪಕ್ಷ ಗೆದ್ದಲು ಹತ್ತಿದ ಮರದಂತಾಗಿದೆ. ಇವರಿಬ್ಬರಿಗೂ ಜಿಲ್ಲಾ ಮಟ್ಟದ ನೆಲೆ ಬೆಲೆಯಿಲ್ಲ. ಈ ಜಾತಿವಾದಿ ಸ್ವಾರ್ಥಿಗಳನ್ನು ಜನ ನಂಬುವುದೂ ಇಲ್ಲ. ತನ್ನ ಹಿಂಬಾಲಕರಿಗೆ ಟಿಕೆಟ್ ಕೊಡಿಸಲು ಕೋರ್ ಕಮಿಟಿ ಮೀಟಿಂಗ್‌ನಲ್ಲಿ ಕಾಗೇರಿ ಮತ್ತು ಪಕ್ಷದ ವೀಕ್ಷಕ ಶಿವಮೊಗ್ಗ ಎಮ್ಮೆಲ್ಸಿ ಭಾನುಪ್ರಕಾಶ್ ಮೇಲೇರಿ ಹೋಗಿ ಕುರ್ಚಿ ನೆಲಕ್ಕೆತ್ತಿ ಬಡಿದರೂ ಅನಂತ್ಮಾಣಿಗೇನೂ ಗಿಟ್ಟಲಿಲ್ಲ. ಪಾಪ ಜಿಲ್ಲಾ ಬಿಜೆಪಿಯಲ್ಲಿರುವ ಮುಖಂಡರೆಲ್ಲರೂ ದಂಡಪಿಂಡಗಳೇ.

ಜೆಡಿಎಸ್ ಜೀವಂತವಿದ್ದರೆ, ಅದು ರಾಮಕೃಷ್ಣ ಹೆಗಡೆ ಮೊಮ್ಮಗ ಶಶಿಭೂಷಣ ಹೆಗಡೆಯ ಶಿರಸಿ ಮತ್ತು ಸಿದ್ದಾಪುರದಲ್ಲಿ ಹಾಗೂ ರಸಿಕ ಶಿಖಾಮಣಿ-ಮಾಜಿ ಶಾಸಕ ದಿನಕರ ಶೆಟ್ಟಿಯ ಕುಮಟಾದಲ್ಲಷ್ಟೇ. ಹಳಿಯಾಳದಲ್ಲಿ ಜೆಡಿಎಸ್ ಧ್ವಜ ಎತ್ತಿಹಿಡಿದಿರುವ ಬೆಂಗಳೂರು ಮೂಲದ ಕೆ.ಆರ್. ರಮೇಶ್‌ನ "ಬಂಡವಾಳ"ದ ಮೊದಲ ಪರೀಕ್ಷೆಯಿದು. ಎದುರಾಳಿಗಳು ಇಷ್ಟೆಲ್ಲ ದುರ್ಬಲರಾಗಿದ್ದರೂ ದೇಶಪಾಂಡೆಯ ಕಾಂಗ್ರೆಸ್‌ಗೆ ಸ್ವತಂತ್ರವಾಗಿ ಜಿಪಂ ಅಧಿಕಾರ ಹಿಡಿಯುವುದು ಈ ಬಾರಿ ಮೊದಲಿನಷ್ಟು ಸುಲಭವೇನಲ್ಲ.

ಜಿಪಂನ ಒಟ್ಟು 39 ಕ್ಷೇತ್ರದಲ್ಲಿ ಕಮ್ಮಿ ಎಂದರೂ 15 ಕಡೆ ದೇಶಪಾಂಡೆಯ ಖೋಟಾ ಕಾಂಗ್ರೆಸ್ ಅಭ್ಯರ್ಥಿಗಳಿಗೆ ಬಂಡು ಕಾಂಗ್ರೆಸ್ಸಿಗರೇ ಪ್ರಬಲ ಪೈಪೋಟಿದಾರರು. ದೇಶಪಾಂಡೆಯ ದುರಹಂಕಾರಕ್ಕೆ ಮದ್ದರೆಯುವ ಹಠಕ್ಕೆ ಬಿದ್ದಿರುವ ಈ ಬಂಡುಕೋರರ ಬೆನ್ನಿಗೆ ಕಾಂಗ್ರೆಸ್‌ನ ನಿಷ್ಠಾವಂತರ ಪಡೆಯೇ ನಿಂತಿದೆ. ಈ ಬಂಡಾಯದಿಂದ ಬಿಜೆಪಿ-ಜೆಡಿಎಸ್‌ಗೆ ಒಂದಿಷ್ಟು ಲಾಭವಾಗಲಿದೆ. ಹಲವು ಬಂಡು ಹುರಿಯಾಳುಗಳು ಗೆಲ್ಲುವ ಸೂಚನೆ ಗೋಚರಿಸುತ್ತಿದೆ. ಉತ್ತರ ಕನ್ನಡದಲ್ಲಿ ತನ್ನದೇ "ಪಂಚಾಯ್ತಿ" ಎಂದು ಬೀಗುತ್ತಿದ್ದ ದೇಶಪಾಂಡೆ ಪಟಾಲಂನ ಜಿಪಂ ಪಾರುಪತ್ಯಕ್ಕೆ ತಿಪ್ಪರಲಾಗಹಾಕಬೇಕಾಗಿ ಬಂದಿದೆ.

ಕಾರವಾರ: ಅಸ್ನೋಟಿಕರ್ ಪ್ರತ್ಯಕ್ಷ!


ಕಾರವಾರವನ್ನೀಗ ಆಳುತ್ತಿರುವಾತ ಕಾಂಗ್ರೆಸ್‌ಗೆ ಸೇರಿರುವ ಕಳ್ಳ ಅದಿರೋದ್ಯಮಿ ಸತೀಶ್ ಸೈಲ್ ಎಂಬ ಪಕ್ಷೇತರ ಶಾಸಕ. ಕಳೆದ ಅಸೆಂಬ್ಲಿ ಚುನಾವಣೆಯಲ್ಲಿ ಸೋತ ಬಳಿಕ ನಾಪತ್ತೆಯಾಗಿದ್ದ ಸೈಲನ ಕಡುಶತ್ರು ಆನಂದ್ ಅಸ್ನೋಟಿಕರ್ ಪಂಚಾಯ್ತಿ ಅಖಾಡದಲ್ಲಿ ಇದ್ದಕ್ಕಿದ್ದಂತೆ ಪ್ರತ್ಯಕ್ಷನಾಗಿದ್ದಾನೆ. ಹೀಗಾಗಿ ಚೆಂಡಿಯಾ ಮತ್ತು ಮಲ್ಲಾಪುರ ಜಿಪಂ ರಣರಂಗಕ್ಕೆ ರಂಗೇರಿಬಿಟ್ಟಿದೆ.

ಚೆಂಡಿಯಾ ಗ್ಲಾಮರಸ್ ಕುತೂಹಲದ ಕಣವಾಗಿದೆ. ಆನಂದನ ಪರಮಾಪ್ತೆ- ಮಾಜಿ ತಾಪಂ ಅಧ್ಯಕ್ಷೆ- ಬಹುಸಂಖ್ಯಾತ ಕೋಮಾರಪಂಥ ಸಮುದಾಯದ ರೂಪಾಲಿ ನಾಯ್ಕ್, ಪಕ್ಷೇತರಳಾಗಿ ಇಲ್ಲಿ ಸ್ಪರ್ಧಿಸಿದ್ದಾಳೆ. ಆಕೆಗೆ ಆನಂದನ ಜನ-ಧನ ಬಲವಿದೆ. ಮಾಜಿ ತಾಪಂ ಅಧ್ಯಕ್ಷ ಚಂದ್ರಹಾಸ ಕೋಠಾರಕರ್‌ನ ಧರ್ಮಪತ್ನಿ ಚೈತ್ರಾ ಕಾಂಗ್ರೆಸ್‌ನ ಕಪ್ಪು ಕುದುರೆ. ಹಿಂದೆ ಆನಂದನ ಆಡಂಬೋಲದಲ್ಲಿದ್ದ ಕೋಠಾರ್‌ಕರ್ ದಂಪತಿ ಈಗ ಸೈಲನ ಅಡ್ಡೆಯಲ್ಲಿದ್ದಾರೆ. ಹೀಗಾಗಿ ಕೋಠಾರಕರ್‌ಗೆ ಪೈಸಾಕ್ಕೇನೂ ಬರಗಾಲವಿಲ್ಲ. ಈ ಮದ್ದಾನೆಗಳ ಗದ್ದಲದಲ್ಲಿ ಬಿಜೆಪಿ ಲೆಕ್ಕಕ್ಕೇ ಇಲ್ಲ.

ಮಲ್ಲಾಪುರದಲ್ಲಿ ಆನಂದನ ಗೆಳೆಯ ಶಾಂತಾ ಬಾಂದೇಕರ್ ಪಕ್ಷೇತರ ಉಮೇದುವಾರ. ಎರಡು ಬಾರಿ ಜಿಪಂ ಸದಸ್ಯನಾಗಿರುವ ಬಾಂದೇಕರ್ ಕಳೆದ ಸಲ ಹೆಂಡತಿಯನ್ನು ಪಕ್ಷೇತರಳಾಗಿ ನಿಲ್ಲಿಸಿ ಗೆಲ್ಲಿಸಿಕೊಂಡಿದ್ದ. ಶಾಂತಾನನ್ನು ಸೋಲಿಸುವ ಹಠಕ್ಕೆ ಶಾಸಕ ಸೈಲ್ ಬಿದ್ದಿದ್ದಾನೆ. ಬಾಂದೇಕರ್ ಖಾನ್‌ದಾನ್‌ನ ಉದಯ ಬಾಂದೇಕರ್‌ನನ್ನು ಕಾಂಗ್ರೆಸ್‌ನಿಂದ ಸೈಲ್ ಯುದ್ಧಕ್ಕೆ ಇಳಿಸಿದ್ದಾನೆ. ಶಾಂತಾಗೇ ಗೆಲ್ಲುವ ಛಾನ್ಸ್ ಜಾಸ್ತಿ. ಇದು ಅಸ್ನೋಟಿಕರ್‌ನ ಅಪ್ಪನ ಅಭಿಮಾನಿ ಸಂಘದ ಪ್ರಭಾವದ ಕ್ಷೇತ್ರ. ಮತ್ತೊಂದು ಕ್ಷೇತ್ರ ಚಿತ್ತಾಕುಲದಲ್ಲಿ ಸೈಲ್ ಹಿಡಿತ ಹೆಚ್ಚು.

ಅಂಕೋಲಾ: ಕಾಂಗ್ರೆಸ್ ಮುಂದೆ


ಅಂಕೋಲಾದ ಮೂರು ಕ್ಷೇತ್ರಗಳಲ್ಲಿ ಅವರ್ಸಾ ಮತ್ತು ಶೇಟಗೇರಿಯಲ್ಲಿ ಕಾಂಗ್ರೆಸ್‌ಗೆ ಹಿತಾನುಭವ ಆಗುತ್ತಿದೆ.



ದೇಶಪಾಂಡೆ


ಜಿದ್ದಾಜಿದ್ದಿ ಕಾಳಗ ಇರುವುದು ಅಗಸೂರಲ್ಲಿ. ಕಾಂಗ್ರೆಸ್‌ನಿಂ… ಹಾಲಕ್ಕಿ ಒಕ್ಕಲಿಗ ಸಮುದಾಯದ ಪಾಂಡುರಂಗ ಗೌ… ಬಿಜೆಪಿಯಿಂದ ಜಗದೀಶ್ ನಾಯಕ ಮುಖಾಮುಖಿ ನಿಂ… ಕಾದಾಡುತ್ತಿದ್ದಾರೆ. ಪಾಂಡುರಂಗ ಗೌ… ಸರಳ-ಸಜ್ಜನ-ಮುಗ್ಧ. ಈತನಿಗೆ ಸೈ… ಬೆಂಗಾವಲು. ಗಣಿ ಧಣಿ ಸಂತೋಷ್ ಲಾಡ್… ಪರಿಚಾರಕನಾಗಿದ್ದ ಗೋಪು ಯಾನೆ ಗೋಪಾ… ಕೃಷ್ಣ ನಾಯಕ್ ನೇರಾನೇರ ಕೆಪಿಸಿ… ಅಧ್ಯಕ್ಷರಿಂದಲೇ ಬಿ-ಫಾರಂ ತಂದಿದ್ದ. ಆದ… ದೇಶಪಾಂಡೆ-ಸೈಲ್ ಸೇರಿ ಆತನ ಛಾ… ತಪ್ಪಿಸಿದರು. ಹೀಗಾಗಿ ಈಗ ಪಾಂಡುರಂಗ ಗೌ… ಗೆಲ್ಲಿಸಿ ಮುಖಭಂಗದಿಂದ ಪಾರಾಗಬೇಕಾ… ದರ್ದು ದೇಶಪಾಂಡೆ-ಸೈಲ್‌ಗೆ.


ಬಿಜೆಪಿಯ ಜಗದೀಶ ನಾಯಕ್ ಬ… ಕ್ಷೇತ್ರದಲ್ಲಿ ಒಳ್ಳೆಯ ಅಭಿಪ್ರಾಯವಿಲ್ಲ. ಆದರ… ಬಹುಸಂಖ್ಯಾತ ಸ್ವಜಾತಿ ನಾಡವರ ಮತ ಅ… ಪಡೆಯಲಿದ್ದಾನೆ. ಆದರೆ ಬಿಜೆಪಿ ಮತದಾರರಾ… ಬ್ರಾಹ್ಮಣರು ಆತನಿಗೆ ಕೈ ಕೊಡಲಿದ್ದಾರೆ. ಇದ… ಕಾರಣ ಹಿಂದಾತ ಜಿಪಂ ಚುನಾವಣೆಯ… ಸೋತಾಗ ಬ್ರಾಹ್ಮಣರೇ ಸೋಲಿಸಿದರೆಂದು … ವರ್ಗವನ್ನು ತುಚ್ಛವಾಗಿ ನಿಂದಿಸಿದ್ದನಂತೆ. ಹಣ… ಹಣಾಹಣಿಯೇ ನಡೆದಿರುವ ಅಗಸೂರ… ಕಾಂಗ್ರೆಸ್‌ನ ಪಾಂಡುರಂಗಗೌಡರಿಗೇ ಗೆಲ್ಲು… ಛಾನ್ಸು ಜಾಸ್ತಿ.

⏭ 06



ಕಾಗೇರಿ



ಅನಂತಕುಮಾರ್


ಭೀಮಣ್ಣ ಟಿ.ನಾಯಕ್





ಶಾರದಾ ಶೆಟ್ಟಿ


ಮಾಂಕಾಳ್ ವೈದ್ಯ


ಸತೀಶ್ ಸೈಲ್

ಸೋಲಿನ ಸುಳಿಯಲ್ಲಿ ಸುಂದರ ರಾವಣ!!

ಹೊನ್ನಾವರದ "ಹಳದೀಪುರ" ಹೈವೋಲ್ಟೇಜ್ ಕ್ಷೇತ್ರ. ಹೊಂಯ್ಗೆ (ಸಿಲಿಕಾ ಸ್ಯಾಂಡ್) ಮಾಫಿಯಾದ ಡಾನ್ ಶಿವಾನಂದ ಹೆಗಡೆ ಯಾನೆ ಬಾಬೆಗ್ಡೆ ಹಠ ಹಿಡಿದು ದೇಶಪಾಂಡೆ ಟಿಕೆಟ್ ಕೊಡಿಸಿದ್ದಾರೆ. ಶಾಸಕಿ ಶಾರದಾ ಶೆಟ್ಟಿ ಈ ಸುಂದರ ರಾವಣ ಬಿರುದಾಂಕಿತ ಬಾಬೆಗ್ಡೆಗೆ ಟಿಕೆಟ್ ಸಿಗದಂತೆ ಮಾಡಲು ನೆಲ-ಮುಗಿಲು ಒಂದು ಮಾಡಿ ಹಾರಾಡಿದ್ದರು. ಶಾಸಕಿ ವಿರೋಧ ಅದೆಷ್ಟು ಜೋರಾಗಿತ್ತೆಂದರೆ ತಾಲ್ಲೂಕ್ ಕಾಂಗ್ರೆಸ್ ಅಧ್ಯಕ್ಷನಾಗಿದ್ದೂ ಪಕ್ಷದ್ರೋಹ ಮಾಡುತ್ತ ಬಂದಿರುವ ಬಾಬೆಗ್ಡೆ ವಿರುದ್ಧ ಕೆಪಿಸಿಸಿ ತನಕವೂ ದೂರು ಹೋಗಿತ್ತು. ಇದು ಗೊತ್ತಾಗಿ ಕಂಗಾಲು ಬಿದ್ದ ಬಾಬೆಗ್ಡೆ ಬಿಜೆಪಿ ಟಿಕೆಟ್‌ಗೂ ಪ್ರಯತ್ನ ನಡೆಸಿದ್ದ. ತನ್ನ ಬಾಸ್ ದೇಶಪಾಂಡೆ ಸಾಮರ್ಥ್ಯದ ಬಗ್ಗೆ ಅನುಮಾನವಿದ್ದ ಬಾಬೆಗ್ಡೆ ಉತ್ತರ ಕನ್ನಡದ ಸಂಘ ಪರಿವಾರದ ಕಲ್ಲಡ್ಕ ಎಂದೇ ಹೆಸರುವಾಸಿಯಾಗಿರುವ ಕೊಂಕಣಿ ಚಡ್ಡಿಯ ಪಾದಕ್ಕೆ ಬಿದ್ದು ಉದ್ಧರಿಸುವಂತೆ ಕೇಳಿದ್ದ. ಒಂದು ದಿನ ಕತ್ತಲಾಗುತ್ತಲೇ "ವಾಲಿಬಾಲ್ ಚಡ್ಡಿ" ಜತೆ ಕುಮಟಾದ ವಿವೇಕ ನಗರದಲ್ಲಿರುವ "ಕೊಂಕಣಿ ಕಲ್ಲಡ್ಕ"ನ ಮನೆಗೆ ಹೋಗಿದ್ದ ಬಾಬೆಗ್ಡೆ "………ನಾನು ಮತ್ತೆಷ್ಟು ವರ್ಷ ಕಾಂಗ್ರೆಸ್‌ನಲ್ಲಿ ಮಣ್ಣು ಹೊರಲಿ… ನಂಗೆ ನೀವಾದರೂ ಬಿಜೆಪಿ ಟಿಕೆಟ್ ಕೊಡ್ಸಿ… ದುಡ್ಡು ಎಷ್ಟು ಬೇಕಿದ್ರೂ ಕೊಡ್ತೇನೆ… ಹಳದೀಪುರದಲ್ಲಿ ಗೆದ್ದು ತೋರಿಸ್ತೇನೆ…" ಎಂದು ಗೋಳೋ ಎಂದು ಅತ್ತಿದ್ದ.


ಶಿವಾನಂದ ಹೆಗಡೆ

ಈ ಬಾಬೆಗ್ಡೆ ಎಂದೂ ಯಾರಿಗೂ ನಿಷ್ಠನಲ್ಲ, ಪಕ್ಕಾ ಸಮಯಸಾಧಕ. ಪಕ್ಷದ ವಿರುದ್ಧವೇ ಕಿತಾಪತಿ ಮಾಡುವಾತ; ಶಾರದಾ ಶೆಟ್ಟಿ, ಆಕೆಯ ಪತಿ ಮೋಹನ್ ಶೆಟ್ಟಿಗೆಲ್ಲಾ ನಿರಂತರ ದೋಖಾ ನೀಡುತ್ತ ಬಂದಾತ. ಹವ್ಯಕರ ಗುರು ಮಠ ರಾಮಚಂದ್ರಾಪುರ ಮಠದಿಂದ ಸಾಕಷ್ಟು ಲಾಭ ಪಡೆದು, ಕೆಕ್ಕಾರು ಮಠದ ಸಾಗುವಾನಿ ಮರ ನುಂಗಿಯೂ ರಾಘು ಸ್ವಾಮಿ ವಿರುದ್ಧ ಮಸಲತ್ತು ನಡೆಸಿದ್ದ. ಈ ಕಾರಣಕ್ಕೆ ಬಾಬೆಗ್ಡೆಯ ಎಲ್ಲ ಕ್ಯಾಂಡಿಡೇಟ್‌ಗಳನ್ನು ಹವ್ಯಕರು ಕಡತೋಕಾ ಗ್ರಾಪಂ ಇಲೆಕ್ಷನ್‌ನಲ್ಲಿ ಸೋಲಿಸಿದ್ದರು. ರಾಘುನ ಕಚ್ಚೆ ಹರುಕ ಪುರಾಣ ಆಸ್ಫೋಟಿಸಿದಾಗ ಈತ ಗುರುವಿನ ವಿರುದ್ಧ ಮಾತಾಡಿದ್ದನಾದರೂ, ಅದು ಪೀಠಪಾವಿತ್ರ್ಯಕ್ಕಾಗಿ ಅಲ್ಲ; ಸ್ವಂತ ಲಾಭಕ್ಕಾಗಿಯಷ್ಟೇ. ಇವತ್ತಿಗೂ ಹೈಗರು ಈತನನ್ನು ರಾಘು ವಿರೋಧಿ ಎಂದೇ ಬ್ರ್ಯಾಂಡ್ ಮಾಡಿದ್ದಾರೆ.

ಮ್ಯಾಗಿ ಹಿಂದೊಮ್ಮೆ ಬರೀ 28 ಸಾವಿರ ಮತದಿಂದ ಕೆನರಾ ಕ್ಷೇತ್ರದಲ್ಲಿ ಸೋತಿದ್ದರು. ಆಗ ಈ ಕಾಂಗ್ರೆಸ್ಸಿಗ ಮಠದಿಂದ ಬಂದ ಹಣ ಹಂಚಿ ಬಿಜೆಪಿ ಪರ ಗುಪ್ತ ಪ್ರಚಾರ ಮಾಡಿದ್ದ. ಹಣ ಹಂಚಿಯೇ ಡಿಸಿಸಿ ಬ್ಯಾಂಕ್ ಡೈರೆಕ್ಟರ್ ಆಗಿರುವ ಬಾಬೆಗ್ಡೆ ಶಾರದಾ ಶೆಟ್ಟಿ ಬದಲಿಗೆ ತನಗೇ ಎಮ್ಮೆಲ್ಲೆ ಟಿಕೆಟ್ ಕೊಡಿಯೆಂದು ಬೇಡಿಕೆ ಇಟ್ಟಾತ. ತಮಾಷೆಯೆಂದರೆ ಎಮ್ಮೆಲ್ಲೆ ಲೇವಲ್‌ನ ಬಾಬೆಗ್ಡೆ ಸರ್ರನೆ ಜಿಪಂ ಮಟ್ಟಕ್ಕೆ ಜಾರಿದ್ದಾನೆ. ಕಳ್ಳ ದುಡ್ಡು ಆತನನ್ನು ಹುಚ್ಚನಂತೆ ಕುಣಿಸುತ್ತಿರುವುದು ನೋಡಿ ಜನ ಬಿದ್ದುಬಿದ್ದು ನಗುತ್ತಿದ್ದಾರೆ. ಸ್ವಂತ ಊರು ಕಡತೋಕಾ ಪಂಚಾಯತ್ ಪ್ರದೇಶದಲ್ಲಿ ಈತ ಬೇನಾಮಿ ಗುತ್ತೇದಾರಿಕೆ ಮಾಡಿ ಹೊಡೆದಿರುವುದು ಪ್ರತ್ಯೇಕ ಪುರಾಣ. ಒಮ್ಮೆ ಬಾಬೆಗ್ಡೆಯ ಪಲ್ಲಂಗ ಪರಾಕ್ರಮವೂ ಪ್ರಕಟವಾಗಿತ್ತು.


ಇಂತಿಪ್ಪ ಬಾಬೆಗ್ಡೆ ಬಾಸ್ ದೇಶಪಾಂಡೆಯನ್ನು ಕಡತೋಕೆಗೆ ಕರೆಸಿ ಮಜಬೂತ್ ಬಂಗಾರದ ಉಂಗುರ ತೊಡಿಸಿ ಕಳಿಸಿದ್ದು ಈಗ ಕಾಂಗ್ರೆಸ್ ಟಿಕೆಟ್ ರೂಪದಲ್ಲಿ ಪ್ರತಿಫಲ ನೀಡಿದೆ. ಹೊನ್ನಾವರ ಸುತ್ತಲಿನ ಹಳ್ಳಿ-ಸಮುದ್ರ ತೀರದ ಚೊಂಡ ಹೊಂಯ್ಗೆ ಹತ್ತು ಚಕ್ರದ ಲಾರಿಗಳಲ್ಲಿ ತುಂಬಿ ಈತ ಪುನಾದತ್ತ ಕಳಿಸುವ ದಂಧೆಯಿದೆಯಲ್ಲ, ಅದು ಪಕ್ಕಾ ಅಕ್ರಮ ದಂ… ಸರಿಯಾಗಿ ತನಿಖೆಯಾದರೆ ಬಾಬೆಗ್ಡೆಯನ್ನು ಜೈಲಿಗೆ ಕಳಿಸಲು ಇದೊಂದ… ಪ್ರಕರಣ ಸಾಕು. ಲೈಸೆನ್ಸ್, ಪರವಾನಗಿ ಯಾವುದೂ ಇಲ್ಲದೆ ಕಂಡ-ಕಂಡ… ಹೊಂಯ್ಗೆ ದರೋಡೆ ಮಾಡಿರುವ ಈತ ದೊಡ್ಡ-ದೊಡ್ಡ ಅನಾಹುತಕಾ… ಹೊಂಡ ಊರು ತುಂಬ ಮಾಡಿಟ್ಟಿದ್ದಾನೆ. ಒಂದು ಕಾಲದಲ್ಲಿ ಅಚ್ಚೇಪಾರಿಯಂತಿ… ಬಾಬೆಗ್ಡೆ ಇವತ್ತು ಕೋಟಿ ಕೋಟಿಗೆ ತೂಗುತ್ತಾನೆ. ದೇಶಪಾಂ… ಕೃಪಾಶೀರ್ವಾದದಿಂದ ಬಾಬೆಗ್ಡೆಯ ಅಕ್ರಮ ಹೊಂಯ… ದಂಧೆ-ನಿರಂತರ-ನಿರಾತಂಕವಾಗಿ ನಡೆದಿದೆ.

ಈ ಕಳ್ಳ ಹಣದ ಬಲದಿಂದಲೇ ಬಾಬೆಗ್ಡೆ ಜಿಪಂ ಇಲೆಕ್ಷನ್‌ಗೆ ನಿಂತಿದ್ದಾ… ಒಂದು ಕೋಟಿಯ ಬಜೆಟ್ ಹಾಕಿದ್ದಾನೆ. ಮೊನ್ನೆ ದೇಶಪಾಂಡೆ ಬಂದಾ… ಒಂದೇ ಫಂಕ್ಷನ್‌ಗೆ ಹತ್ತಾರು ಲಕ್ಷ ಖರ್ಚು ಮಾಡಿದ್ದಾನೆ. ಇಷ್ಟಾದರ… ಆತನಿಗೆ ಗೆದ್ದೇಗೆಲ್ಲುತ್ತೇನೆಂಬ ಧೈರ್ಯವೇನಿಲ್ಲ. ಬಂಡಾಯವೆದ್ದು ಸ್ಪರ್ಧಿಸಿರು… ವಿಠ್ಠಲ ಪೂಜಾರಿ ಬೆನ್ನಿಗೆ ಅಬ್ರಾಹ್ಮಣರ ದೊಡ್ಡ ತಂಡವೇ ಇದೆ. ರಾಘ… ಸ್ವಾಮಿ ಶಿಷ್ಯ ವರ್ಗವೂ ಬಾಬೆಗ್ಡೆ ವಿರುದ್ಧ ಬಿದ್ದಿದೆ. ಯಲ್ಲಾಪುರದ ಶಾಸ… ಶಿವರಾಮ ಹೆಬ್ಬಾರ್ ಕೆಡಿಸಿಸಿ ರಾಜಕೀಯದ ಸೇಡು ತೀರಿಸಲು ಬಾಬೆ… ಬೀಳಿಸುವ ಪ್ರಯತ್ನ ನಡೆಸಿದ್ದಾರೆ. ಬಂಡಾಯ ಅಭ್ಯರ್ಥಿಗೆ ಶಾಸಕಿ ಶಾರದ… ಶೆಟ್ಟಿ ಬಳಗದ ಸಂಪೂರ್ಣ ಸಹಕಾರ ಸಿಕ್ಕಿದೆ. ಕ್ಷೇತ್ರದ ಬಹುಸಂಖ್ಯಾ… ನಾಮಧಾರಿಗಳು ವಿಠ್ಠಲ ಪೂಜಾರಿ ನಮ್ಮವನೆಂದು ಪ್ರಚಾರ ಮಾಡುತ್ತಿದ್ದಾ… ಸೇರುಗಾರರು-ಮೀನುಗಾರರಿಗೆ ಬಾಬೆಗ್ಡೆಯ ಶೋಕಿಲಾಲ್ ಗೆಟಪ್ ಹೇಸಿ… ಮೂಡಿಸಿದೆ.

ಜೆಡಿಎಸ್‌ನ ಮಾಜಿ ಶಾಸಕ "ಕುಟುಂಬ ರಾಜಕಾರಣ"ದ ಕಾರಣ… ಶಾಸಕಿ ಶಾರದಾರ ವಿರೋಧಿ ಬಾಬೆಗ್ಡೆಗೆ ಬೆಂಬಲಿಸುತ್ತಿದ್ದಾರೆ. ಆದರಿದು… ಲೆಕ್ಕಕ್ಕೇ ಸಿಗದಷ್ಟು ಸಣ್ಣ ಪ್ರಮಾಣದ್ದು. ಐದು ವರ್ಷ ಜಿಪಂ ಅಧ್ಯಕ್ಷನಾ… ಗೂಟದ ಕಾರಲ್ಲಿ ಓಡಾಡುವ ಹಗಲುಗನಸು ಕಾಣುತ್ತಿರುವ ಬಾಬೆಗ್ಡೆ ಗೆಲ್ಲಲು… ಏಳು ಕೆರೆ ನೀರು ಕುಡಿಯಬೇಕಾಗಿ ಬಂದಿದೆ. ಬಾಬೆಗ್ಡೆಯ ನಿದ್ದೆಗೆಡಿಸಿರು… ಬಂಡುಗಾರ ವಿಠ್ಠಲ ಪೂಜಾರಿ ಸದ್ಯಕ್ಕೆ ಮುಂದಿದ್ದಾರೆ. ಮತದಾನದ ಮುಂಚಿ… ಕತ್ತಲ ರಾತ್ರಿಯ ಕರಾಮತ್ತಿಗೆ ಬಾಬಾಗ್ಡೆ ಕಾಯುತ್ತಿದ್ದಾನೆ.

ದಕ್ಷಿಣ ಕನ್ನಡ

ಪಂಚಾಯ್ತಿ ಅಖಾಡದಲ್ಲಿ ಧರ್ಮ-ಕರ್ಮ ಸಮರ!


ರಮಾನಾಥ ರೈ

ದಕ್ಷಿಣ ಕನ್ನಡದ ಗ್ರಾಮಾಂತರ ಪ್ರದೇಶದಲ್ಲಿ
ಘಪರಿವಾರ ಪ್ರಣೀತ ಧರ್ಮೋನ್ಮಾದ ಗುಪ್ತಗಾಮಿನಿಯಾಗಿ
ದಾಡುತ್ತಲೇ ಇದೆ. ಅಭಿವೃದ್ಧಿ-ಸ್ಥಳೀಯ ಸಮಸ್ಯೆ
ಂದಿಟ್ಟುಕೊಂಡು ಚುನಾವಣೆಗಳನ್ನು ಎದುರಿಸುವ ತಾಕತ್ತು
ಲ್ಲದ ಬಿಜೆಪಿ-ಭಜರಂಗಿ ಬಳಗ ಬೋಗಸ್
ಹ್ಮಲೋಕೋತ್ಸವ, ಸತ್ಯನಾರಾಯಣ ಪೂಜೆ, ಅರಿಷಿಣ
ಕುಮ ಸಮಾವೇಶದಂತಹ ಢೋಂಗಿ ತಂತ್ರಗಾರಿಕೆಯಿಂದ
ರ್ಮಕಾರಣದ ಅಸ್ತ್ರ ಮೊಂಡಾಗದಂತೆ ನಿಗಾವಹಿಸಿದೆ.
ರೆ ಮೊದಲಿನ ಧಮ್ ಮಾತ್ರ ಹಿಂದೂತ್ವಕ್ಕೆ ಈಗ
ಲ್ಲ. ಬಂಟ್ವಾಳದ ಹರೀಶ್ ಪೂಜಾರಿ ಎಂಬ ಪಾಪದ
ಡುಗನನ್ನು ಭಜರಂಗಿ ಸೈತಾನರೇ ಕೊಂದುಹಾಕಿದ
ತರವಂತೂ ಹಿಂದುಳಿದ ವರ್ಗದ ಪುರೋಹಿತಶಾಹಿ


ಕಲ್ಲಡ್ಕನ ಕರಾಮತ್ತುಗಳು ಕೈಕೊಡತೊಡಗಿದವು. ಆಚಾರ್ಯರ ನಿಧನದ ನಂತರ ಕರಾವಳಿಯ ಅವಿಭಜಿತ ದಕ್ಷಿಣ ಕನ್ನಡದ ಕೇಸರಿ ಗ್ಯಾಂಗಿಗೆ ಸಮರ್ಥ ನಾಯಕರೇ ಇಲ್ಲದಂತಾಗಿದೆ. ಟಿಕೆಟ್ ಹಂಚಿಕೆಯಲ್ಲಿ ಕಲ್ಲಡ್ಕ ಸಂಕಷ್ಟಕ್ಕೆ ಸಿಲುಕುತ್ತಿದ್ದಾನೆ. ಆತನ ಮಾತು ಎಂಪಿ ನಳಿನ್‌ಕುಮಾರ್ ಕಟೀಲ್‌ನಂಥ ಬ್ರಹ್ಮಕಲಶೋತ್ಸವ ಭೂಪರೇ ಕೇರ್ ಮಾಡುತ್ತಿಲ್ಲ. ಕಳೆದ ಲೋಕಸಭೆ ಚುನಾವಣೆ ಹೊತ್ತಲ್ಲೂ ನಳಿನ್‌ಗೆ ಟಿಕೆಟ್ ತಪ್ಪಿಸಿ ತನಗೆ ಕೊಪ್ಪರಿಗೆಗಟ್ಟಲೆ ಕಪ್ಪ ಒಪ್ಪಿಸುವ ರಾಜೇಶ್ ನಾಯಕ್‌ಗೆ ಅಭ್ಯರ್ಥಿ ಮಾಡುವ ಯೋಚನೆ ಭಟ್ಟನದಾಗಿತ್ತು. ಹೀಗಾಗಿಯೇ ನಳಿನ್ ಪರಸ್ತ್ರಿ ಸಂಗದ ಧಾರಾವಾಹಿಗಳು ಹೊರಬೀಳುವಂತಾಗಿತ್ತು. ಈ ಸಿಟ್ಟಿನಿಂದ ನಳಿನ್ ಈಗ ಗುರುವಿಗೆ ತಿರುಮಂತ್ರ ಹಾಕುತ್ತಿದ್ದಾರೆ.

ಪಂಚಾಯ್ತಿ ಟಿಕೆಟ್ ಹಂಚಿಕೆಯಲ್ಲಿ ನಳಿನ್ ಕೈಯ್ಯಾಡಿಸಿ ಕಲ್ಲಡ್ಕನಿಗೆ ತಿರುಗಿ ಬಿದ್ದಿದ್ದಾನೆ. ಬೆಂಗಳೂರಿನ ಕೇಶವಕೃಪಾದ ಕೃಪಾಕಟಾಕ್ಷದಿಂದ ನಳಿನ್ ಜಿಲ್ಲೆಯಲ್ಲಿ ಪ್ರಬಲ ಚೆಡ್ಡಿ ನಾಯಕನಾಗಿ ಬೆಳೆಯುತ್ತಿದ್ದಾನೆ. ಇದಕ್ಕೆ ಕೇಂದ್ರಮಂತ್ರಿ ಸದಾನಂದ ಗೌಡರ ಕುಮ್ಮಕ್ಕೂ ಇದೆ. ಹೀಗಾಗಿ ಜಿಪಂ-ತಾಪಂ ಟಿಕೆಟ್ ಹಂಚಿಕೆಯಲ್ಲಿ ಹಿಂದಿನಂತೆ ಕಲ್ಲಡ್ಕನ ಮಾತೇ ಅಂತಿಮ ವಾಣಿಯಾಗಿಲ್ಲ. ಗ್ರಾಮ ಪಂಚಾಯ್ತಿ ಎಲೆಕ್ಷನ್‌ನಲ್ಲಿ ಲೋಕಸಭೆ ಎಲೆಕ್ಷನ್‌ನಲ್ಲಿ ಬಿಜೆಪಿ ಗೆದ್ದರೂ


ಪುತ್ತೂರಲ್ಲಿ ಸಂಸದೀಯ ಕಾರ್ಯದರ್ಶಿಣಿ ಶಕುಂತಲಾ ಶೆಟ್ಟಿ ಶಾಸಕಿ. ಈಕೆ ಜನಪರ ಕೆಲಸಗಾರ್ತಿ ಎಂಬುದೇನೋ ನಿಜ. ಆದರೆ ಪುತ್ತೂರು ಕಾಂಗ್ರೆಸ್‌ನಲ್ಲಿ ವಿಪರೀತ ಗುಂಪುಗಾರಿಕೆ. ಕೇಂದ್ರ ಮಂತ್ರಿ ಡೀವಿ ಪ್ರಭಾವವೂ ಇಲ್ಲಿದೆ. ಇಲ್ಲೂ ಬಿಜೆಪಿ, ಕಾಂಗ್ರೆಸ್‌ಗೆ ಐವತ್ತು-ಐವತ್ತು ಚಾನ್ಸ್.


ಸುರತ್ಕಲ್‌ನ ಶಾಸಕ ಮೊಯಿದ್ದೀನ್ ಬಾವಾನಿಗೆ ಏಟು ಕೊಡಲು ಎಸ್‌ಡಿಪಿಐ ಕಾದು ಕೂತಿದೆ. ಕಮ್ಯುನಲಿ ಸೆನ್ಸಿಟಿವ್ ಸುರತ್ಕಲ್‌ನಲ್ಲಿ ಭಜರಂಗಿ ಬೊಬ್ಬೆ ಜೋರಿದೆ. 'ಸಶಕ್ತ' ಮಂತ್ರಿ ರೈಗಳ ಬಂಟ್ವಾಳ, ಮತ್ತೊಬ್ಬ ಸಚಿವ ಖಾದರ್‌ರ ಉಳ್ಳಾಲದಲ್ಲೂ ಎಸ್‌ಡಿಪಿಐ ಅಭ್ಯರ್ಥಿಗಳನ್ನು ಹೂಡಿದೆ. ಸುಳ್ಯದಲ್ಲಿ ಬಿಜೆಪಿಗಿಂತ ಕಾಂಗ್ರೆಸ್ ಮುಂದಿದೆ. ಬಿಜೆಪಿಯಿಂದ ಮಾಜಿ ಶಾಸಕ ಪದ್ಮನಾಭ ಕೊಟ್ಟಾರಿಯಂತಹ ಗಟ್ಟಿಗರು ಅಖಾಡಕ್ಕೆ ಇಳಿದಿದ್ದಾರೆ. ಜಿಪಂನ ಒಟ್ಟು 35 ಸ್ಥಾನದಲ್ಲಿ (2010ರಲ್ಲಿ) ಬಿಜೆಪಿ ಬರೋಬ್ಬರಿ 24 ಸ್ಥಾನ ಗೆದ್ದು ಸತತ ಐದು ವರ್ಷ ಆಡಳಿತ ನಡೆಸಿದೆಯಾದರೂ ಹೇಳಿಕೊಳ್ಳುವಂತಹ ಒಂದೇಒಂದು ಜನಪರ ಕೆಲಸ ಮಾಡಿಲ್ಲ. ಇದು ಈ ಬಾರಿ ಚೆಡ್ಡಿ ಬಳಗಕ್ಕೆ ಮೈನಸ್ ಆಗಿ ಪರಿಣಮಿಸಲಿದೆ.


ಈ ಬಾರಿ ಜಿಪಂನ ಒಟ್ಟು ಸ್ಥಾನ 36ಕ್ಕೆ ಏರಿದೆ. ಬೆಳ್ತಂಗಡಿಯಲ್ಲಿ ಒಂದು ಕ್ಷೇತ್ರ ಜಾಸ್ತಿಯಾಗಿದೆ. ಒಂದು



ಕಲ್ಲಡ್ಕ ಭಟ್


ಇಲ್ಲ. ಇದು ಕಾಂಗ್ರೆಸ್ಸನ್ನು ಬಿಜೆಪಿಗೆ ಮುಖಾಮುಖಿಯಾಗಿ ನಿಲ್ಲುವ ಸ್ಥೈರ್ಯ ನೀಡಿದೆ; ಡಲ್ಲಾಗಿರುವ ಹಿಂದೂತ್ವದ ಹಾವಳಿ ಮತ್ತು ಕಂಗಾಲಾಗಿರುವ ಕಲ್ಲಡ್ಕ ಬಿಜೆಪಿಯಲ್ಲಿ ನಡುಕ ಮೂಡಿಸಿದ್ದಾರೆ. ಧರ್ಮಕಾರಣದ ಅಖಾಡದಲ್ಲಿ ಕುಮ್ಕಿ ಹಕ್ಕು ಕಳೆದುಕೊಂಡಿರುವ ರೈತರ ಆತಂಕ, ಎತ್ತಿನಹೊಳೆ ನೀರು ಯೋಜನೆ ಎಲೆಕ್ಷನ್ ವಿಷಯಗಳಾಗಿದೆ. ಕುಮ್ಕಿ-ಕುಮ್ಕಿ ಎಂದಬ್ಬರಿಸುತ್ತಿದ್ದ ಬಿಜೆಪಿಗಳಿಗೆ ಕುಮ್ಕಿ ಹಕ್ಕು ರೈತರು ಕಳೆದುಕೊಳ್ಳಲು ಸಂಘಪರಿವಾರದ ಪರಾಕ್ರಮಿ


ಯು.ಟಿ. ಖಾದರ್


ಆಸ್ಕರ್ ಫರ್ನಾಂಡಿಸ್


ಅಭಯ್‌ಚಂದ್ರ ಜೈನ್


ಶಕುಂತಲಾ ಶೆಟ್ಟಿ


ನಳಿನ್‌ಕುಮಾರ್ ಕಟೀಲ್

ನ್ನಾರಗಳು ನಿಧಾನಕ್ಕೆ ಅರ್ಥವಾಗತೊಡಗಿವೆ.
ಕರಾವಳಿಯಲ್ಲಿ ಚೆಡ್ಡಿಗಳ ಧರ್ಮಯುದ್ಧಕ್ಕೆ ಹಿಂದುಳಿದ
ಮುದಾಯದ ಬಿಲ್ಲವ ಹುಡುಗರೇ ಕಾಲಾಳುಗಳು.
ಟ್ವಾಳದಲ್ಲಿ ಭಜರಂಗಿಗಳು ಆಪೋಷನ ಪಡೆದ ಹರೀಶ್
ಜಾರಿ ಬಿಲ್ಲವ ವರ್ಗದವನು. ಕೊಲೆಗಡುಕರ ಗ್ಯಾಂಗಲ್ಲೂ
ಲ್ಲವ ಯುವಕರಿದ್ದಾರೆ. ಇದೆಲ್ಲಾ ಕರಾವಳಿಯ ಬಿಲ್ಲವ
ಂದಾಳುಗಳು ಮೈಕೊಡವಿ ನಿಲ್ಲುವಂತೆ ಮಾಡಿದೆ.
ಟ್ವಾಳದಲ್ಲಿ ಹಿಂದೂತ್ವದ ಅಮಲಲ್ಲಿ ಹಿಂದೂಗಳೇ
ದೂವನ್ನು ಹತ್ಯೆ ಮಾಡಿದ ತರುವಾಯ ಸಭೆ ಸೇರಿದ್ದ
ಲ್ಲವ ಹಿರೇಮಣಿಗಳು ಸಂಘಪರಿವಾರದ
ರೋಹಿತಶಾಹಿಗಳ ಹಿಂದೂತ್ವ ಮುಖವಾಡದ ಸಂಚಿಗೆ
ಮ್ಮ ಸಮುದಾಯ ಯುವಕರು ಬಲಿ ಬೀಳದಂತೆ ಎಚ್ಚರ
ಸುವ ತೀರ್ಮಾನಕ್ಕೆ ಬಂದಿದ್ದಾರೆ. ಇಂಥ
ರ್ಮಸೂಕ್ಷ್ಮಗಳು ಈ ಬಾರಿಯ ಪಂಚಾಯ್ತಿ ಚುನಾವಣೆ
ಲೆ ಅಡ್ಡ ಪರಿಣಾಮ ಬೀರುವ ಸೂಚನೆ ಗೋಚರಿಸುತ್ತಿದೆ.
ದಕ್ಷಿಣ ಕನ್ನಡ ಬಿಜೆಪಿ ಮೇಲಿದ್ದ ಕಲ್ಲಡ್ಕ ಕಮಾಂಡ್
ತವೂ ಈಗೀಗ ಸಡಿಲಾಗುತ್ತಿದೆ. ಊರಿಗೆ ಬೆಂಕಿ ಹಾಕಿ
ಕಾಯಿಸಿಕೊಳ್ಳುವ ಕ್ಷುಲ್ಲಕ ಕಲ್ಲಡ್ಕನನ್ನು ಆರೆಸ್ಸೆಸ್
ನಕ್ಕೆ ದೂರ ತಳ್ಳುತ್ತಿದೆ. ಈತ ಬಿಜೆಪಿಯ
ಪಿ-ಎಮ್ಮೆಲ್ಲೆಗಳಿಂದ ಬಲವಂತದ ವಂತಿಗೆ
ಕೆಯುವುದು; ತನಗೆ ಜನಪ್ರತಿನಿಧಿಗಳು
ಲಾಮರಾಗಿರಬೇಕೆಂದು ಬಯಸೋದು ಬಿಜೆಪಿಗೆ
ಬಾರಿಯಾಗಿ ಪರಿಣಮಿಸಿದೆ. ಬಾಯಿಗೆಬಂದಂತೆ
ಸ್ಲಿಮ್-ಕ್ರಿಶ್ಚಿಯನ್ನರ ಹೀಯಾಳಿಸುವುದು ಸಂಘ
ವಾರಕ್ಕೆ ತಿರುಗುಬಾಣ ಆಗುತ್ತಿದೆ. ಕಲ್ಲಡ್ಕನ ನಂಬಿ
, ಹೋಮ್‌ಸ್ಟೇ ಮೇಲೆ ದಾಳಿ ಮಾಡಿದ ಶೂದ್ರರು,
ಕ ಪೊಲೀಸ್‌ಗಿರಿ ಅಮಲೇರಿಸಿಕೊಂಡು ಪಾತಕ
ಡಿದ ಹುಡುಗರು ಅನುಭವಿಸಿದ ಹಿಂಸೆ,
ರ್ಟ್-ಕಚೇರಿ ಅಲೆದಾಟ ಹೇಳತೀರದು. ಇವೆಲ್ಲಾ
ಡ್ಕ ಭಟ್ಟನ ಬಣ್ಣ ಬಯಲಾಗಿಸಿದೆ.
ನಾಜೂಕಯ್ಯನಂತಿದ್ದ ವಿ.ಎಸ್.ಆಚಾರ್ಯರನ್ನು
ಂದಿಟ್ಟುಕೊಂಡು ತಾನು ಹಿತಾನುಭವ ಪಡೆಯುತ್ತಿದ್ದ
ಡ್ಕ ಯಾವಾಗ ಆಚಾರ್ಯರ ನಿರ್ಗಮನವಾಯ್ತೋ ಆಗ

ಹಿಂದಿನ ಹಿಂದೂತ್ವದ ಅಟ್ಟಹಾಸದ ಸದ್ದಡಗಿದೆ. ಬಿಜೆಪಿಯ ಕಮಿಟೆಡ್ ಗ್ರಾಪಂ ಸದಸ್ಯರೇ ಕಳೆದ ಪರಿಷತ್ ಎಲೆಕ್ಷನ್‌ನಲ್ಲಿ ಕಾಂಗ್ರೆಸ್ ಲೀಡರ್‌ಗಳಿಗೆ ಬಿಕರಿಯಾಗಿದ್ದಾರೆ. ಇಂಥ ಪ್ರವೃತ್ತಿ ಹಾಲಿ ಜಿಪಂ-ತಾಪಂ ಚುನಾವಣೆಯಲ್ಲಿ ತಣ್ಣಗೆ ಬಿಜೆಪಿಗೆ ಪೆಟ್ಟುಕೊಡಲಿದೆ. ಆರೆಸ್ಸೆಸ್, ಕಟೀಲು, ಮಾಜಿ ಶಾಸಕರು ತಂತಮ್ಮ ಹಿಂಬಾಲಕರಿಗೆ ಜಿಪಂ-ತಾಪಂ ಟಿಕೆಟ್ ಕೊಟ್ಟಿದ್ದಾರೆ. ಕಲ್ಲಡ್ಕನ ಏಕಪಕ್ಷೀಯ ಸರ್ವಾಧಿಕಾರಕ್ಕೆ ಸಣ್ಣದೊಂದು ತಡೆಯಂತೂ ಬಿದ್ದಿದೆ. 'ಆಚಾರ್ಯ'ನಿಲ್ಲದ ಬಿಜೆಪಿ ಬೆವರುತ್ತಿದೆ!

ಕಾಂಗ್ರೆಸ್‌ನಲ್ಲಿ ಅರಣ್ಯ ಮಂತ್ರಿ ರಮಾನಾಥ ರೈಗಳದೇ ಹೋಲ್‌ಸೇಲ್ ನಿರ್ಧಾರ. ಹಿರಿಯ ತಲೆಗಳಾದ ಜನಾರ್ದನ ಪೂಜಾರಿ, ವೀರಪ್ಪ ಮೊಯ್ಲಿಗಳನ್ನೆಲ್ಲಾ ರೈ ಮೂಲೆಗುಂಪು ಮಾಡಿಟ್ಟಿದ್ದಾರೆ. ಎಐಸಿಸಿ ಮಾಂಡಲೀಕ ಆಸ್ಕರ್ ಫರ್ನಾಂಡಿಸ್ ಎಂಬ ಪವರ್ ದಲ್ಲಾಳಿಯನ್ನು ಒಲಿಸಿಕೊಂಡಿರುವ ರೈ ಜಿಲ್ಲೆಯ ಐದೂ ತಾಲೂಕಿನ ಶಾಸಕರನ್ನು ಪಳಗಿಸಲು ಯಶಸ್ವಿಯಾಗಿದ್ದಾರೆ. ಬಿಲ್ಲವರ ಕುಲತಿಲಕ ಜನಾರ್ದನ ಪೂಜಾರಿಯನ್ನು ಕಡೆಗಣಿಸಿದರೂ ಬಿಲ್ಲವ ಸಮುದಾಯದವರಿಗೇ ಹೆಚ್ಚು ಝೆಡ್‌ಪಿ ಟಿಕೆಟು ಸಿಗುವಂತೆ ರೈ ಆಟ ಆಡಿದ್ದಾರೆ. ಬಿಜೆಪಿ ಕಡೆ ವಾಲಿರುವ ಬಿಲ್ಲವರ ಸೆಳೆಯಲು ರೈ ಮಾಡಿರುವ ಸ್ಟ್ರಾಟಜಿ ಆದೆಷ್ಟರಮಟ್ಟಿಗೆ ಲಾಭದಾಯಕವಾಗಿದೆ ಎಂಬುದು ಪಂಚಾಯ್ತಿ ಫಲಿತಾಂಶದ ನಂತರವೇ ತಿಳಿಯಲಿದೆ.

ಜಿಲ್ಲೆಯ ಒಟ್ಟು ಎಂಟು ಶಾಸಕರಲ್ಲಿ ಸುಳ್ಯದ ಬಲಿತ ದಲಿತ ಎಸ್. ಅಂಗಾರ ಒಬ್ಬನ ಬಿಟ್ಟು ಉಳಿದೆಲ್ಲರೂ ಕಾಂಗ್ರೆಸ್‌ನವರು. ಇವರಲ್ಲಿ ಬಂಟ್ವಾಳದ ರೈ, ಉಳ್ಳಾಲದ ಖಾದರ್ ಮತ್ತು ಮೂಡಬಿದಿರೆಯ ಅಭಯಚಂದ್ರ ಜೈನ್ ಮಂತ್ರಿಗಳು. ಈ ಮಂತ್ರಿಗಳು ತಂತಮ್ಮ ಕ್ಷೇತ್ರಕ್ಕೆ ಸೀಮಿತವಾಗಿದ್ದಾರೆ. ಜಿಲ್ಲಾ ಮಂತ್ರಿ ರೈಗೂ ಜಿಲ್ಲಾ ನಾಯಕತ್ವದ ಯೋಗ್ಯತೆ ಬಂದಿಲ್ಲ. ಈ ಮಂತ್ರಿಗಳು ತಮ್ಮ ವಿಧಾನಸಭಾ ಕ್ಷೇತ್ರದಲ್ಲಿ ಹೆಚ್ಚು ಜಿಪಂ-ತಾಪಂ ಸೀಟು ಗೆಲ್ಲುವ ತಾಕತ್ತು ಹೊಂದಿದ್ದಾರೆ. ಬೆಳ್ತಂಗಡಿಯಲ್ಲಿ ಶಾಸಕ ವಸಂತ ಬಂಗೇರ ಮೊದಲಿನಷ್ಟು ಕ್ರಿಯಾಶೀಲರಾಗಿಲ್ಲ. ಹೀಗಾಗಿ ಅಲ್ಲಿ ಬಿಜೆಪಿ-ಕಾಂಗ್ರೆಸ್ ಸಮ ಬಲದಲ್ಲಿದೆ.

ದಶಕದಿಂದ ಕೈತಪ್ಪಿರುವ ಜಿಪಂ ಆಡಳಿತ ಈ ಬಾರಿ ಹಿಡಿಯಲೇಬೇಕೆಂಬ ಅಪರೂಪದ ಹಠ ಕಾಂಗ್ರೆಸ್ಸಿಗರಲ್ಲಿ ಮೂಡಿದೆ! ಅಧಿಕಾರದ ರುಚಿ ಹತ್ತಿರುವ ಬಿಜೆಪಿ ಭೂಪರು ಅಷ್ಟು ಸುಲಭಕ್ಕೆ ಬಿಟ್ಟುಕೊಡಲಾರರು. 'ಧರ್ಮ'ಯುದ್ಧದ ರಣರಂಗದಲ್ಲಿ ಕತ್ತುಕತ್ತಿನ ಪೈಪೋಟಿ ನಡೆಯುವ ಅಷ್ಟೂ ಲಕ್ಷಣಗಳು ಗೋಚರಿಸುತ್ತಿವೆ. ಬಿಜೆಪಿಗರಿಗೆ ಧರ್ಮವೇ ಅಸ್ತ್ರವಾದರೆ ಕಾಂಗ್ರೆಸ್ಸಿಗರಿಗೆ ಅಧಿಕಾರದ ಬಲವಿದೆ. ಸ್ಥಳೀಯ ಶಾಸಕರಿಗಂತೂ ಪ್ರತಿಷ್ಠೆಯ ಪ್ರಶ್ನೆ. ಬಿಜೆಪಿಗರಿಗೆ ಸಂಸದ ನಳಿನ್ ನಾಯಕನಾದರೆ, ಕಾಂಗ್ರೆಸ್‌ಗೆ ಮಂತ್ರಿ ರೈ ಮುಂದಾಳು. ಗ್ರಾಪಂ ಚುನಾವಣೆಯಲ್ಲಿ ಬಿಜೆಪಿ ಕಾಂಗ್ರೆಸ್‌ಗಿಂತ ಸುಮಾರು 500 ಸದಸ್ಯರನ್ನು ಹೆಚ್ಚು ಗೆದ್ದುಕೊಂಡಿದೆ.

ಬಣ ರಾಜಕೀಯ, ಬಂಡಾಯದ ಬೇಗುದಿ ಈ ಬಾರಿ ಕಾಂಗ್ರೆಸ್‌ನಲ್ಲಿ ಬಾಧೆ ಕೊಡುವಷ್ಟು ಪ್ರಮಾಣದಲ್ಲಿ

ವಿಪ್ರನೊಬ್ಬ ಕಾರಣ ಎಂಬುದು ಇಕ್ಕಟ್ಟಿಗೆ ಸಿಲುಕಿಸಿದೆ. ಎತ್ತಿನಹೊಳೆ ಎರಡೂ ಪಾರ್ಟಿಯವರಿಗೆ ಗಂಡಾಂತರಕಾರಿಯಾಗಿದೆ. ಬಿಜೆಪಿಯ ಕೇಂದ್ರ ಮಂತ್ರಿ ಸದಾನಂದ ಗೌಡ ಎತ್ತಿನಹೊಳೆ ಯೋಜನೆ ಪರವಾಗಿದ್ದರೆ, ಸಂಸದ ನಳಿನ್ ವಿರುದ್ಧವಾಗಿದ್ದಾರೆ. ಕೇಂದ್ರದ ಮಾಜಿಮಂತ್ರಿ ವೀರಪ್ಪಮೊಯ್ಲಿ ಎತ್ತಿನಹೊಳೆ ಬೇಕೇಬೇಕೆನ್ನುತ್ತಿದ್ದರೆ, ಮಾಜಿ ಕೇಂದ್ರಮಂತ್ರಿ ಜನಾರ್ಧನ ಪೂಜಾರಿ ಬೇಡ ಅಂತಿದ್ದಾರೆ.

ಧರ್ಮಾಧಾರಿತ ಮತಬಲ ನಂಬಿರುವ ಬಿಜೆಪಿ ಮತ್ತು ಮಂತ್ರಿ-ಶಾಸಕರ ತಾಕತ್ತು ನೆಚ್ಚಿಕೊಂಡಿರುವ ಕಾಂಗ್ರೆಸ್ ಎರಡೂ ದಕ್ಷಿಣ ಕನ್ನಡದ 'ಧರ್ಮ'ಯುದ್ಧದ ರಣರಂಗದಲ್ಲಿ ಸಮಬಲದಿಂದ ಕಾದಾಡುತ್ತಿವೆ. ಬಿಜೆಪಿಯ ಅಂತರ್ಯದಲ್ಲಿ ಕಳೆದುಕೊಳ್ಳುವ ಆತಂಕವಾದರೆ, ಕಾಂಗ್ರೆಸ್‌ನಲ್ಲಿ ರಣೋತ್ಸಾಹ!

■ ನಹುಷ

ಉತ್ತರ ಕನ್ನಡ

04 ⏮

ಕುಮಟಾ: ಜೆಡಿಎಸ್ ಸೆಣಸಾಟ

ಕುಮಟೆಯ ಐದು ಕ್ಷೇತ್ರದಲ್ಲಿ ನಾಲ್ಕು ಕಡೆ ಚುನಾವಣಾ ಸಮೀಕರಣ-ಸಂದರ್ಭಗಳಿಂದಾಗಿ ಜೆಡಿಎಸ್ ಪ್ರಬಲವಾಗಿ ಹೊರಹೊಮ್ಮಿದೆ. ವಿಂಚರ್ಣನಲ್ಲಿ ಚಿಪ್ಪಿ ಕಳ್ಳ ಪ್ರದೀಪ್‌ನಾಯಕ್ ಒಂದು ಕೋಟಿ ಬಜೆಟ್ ಹಾಕಿಕೊಂಡು ಹೋರಾಡುತ್ತಿರುವುದು ಜೆಡಿಎಸ್‌ಗೆ ಪ್ಲಸ್. ಆತನ ಎದುರು ಕಾಂಗ್ರೆಸ್ ಹೊನ್ನಪ್ಪ ನಾಯಕ್ ಪಲ್ಟಾಗಿದ್ದಾರೆ. ಇಬ್ಬರೂ ಬಹುಸಂಖ್ಯಾತ ನಾಡವ ಕೋಮಿನವರು. ನಾಡವರ ಓಟು ಒಡೆದುಹೋಗುವುದರಿಂದ ಗ್ರಾಮ ಒಕ್ಕಲಿಗ ಜಾತಿಯ ಗಣಪತಿ ಗೆಲ್ಲುವ ಅವಕಾಶ ಹದಗೊಳ್ಳುತ್ತಿದೆ. ಹೊನ್ನಪ್ಪನೂ ಬಲವಾದಂತೆ ಗಣಪತಿ ಬಲಗೊಳ್ಳಲಿದ್ದಾನೆ. ಸರ್ಕಾರಿ ಗುತ್ತಿಗೆದಾರನಾದ ಈ ಗಣಪತಿಯೂ ಹಣದ ಹುಲಿಯೇ. ಜನಾನುರಾಗಿಯೂ ಹೌದು. ಆದರೆ ಇಲೆಕ್ಷನ್ ಮುಂಚಿನ ರಾತ್ರಿ ಪ್ರದೀಪ್ ನಾಯಕನ ಕತ್ತಲೆ ಆಟ ಜೋರಾಗುವುದು ಖಂಡಿತ. ಗಣಪತಿ ಜಿಪಂ ಸದಸ್ಯನಾದರೆ ಅದು ಕ್ಷೇತ್ರದ ಜನತೆಯ ವಿಜಯವಾಗಲಿದೆ; ಹಣ-ಜಾತಿ ಬಲದ ಭಯದ ಇತಿಶ್ರೀ ಆಗಲಿದೆ.

ಮೂರೂರು ಕ್ಷೇತ್ರದಲ್ಲಿ ಕಾಂಗ್ರೆಸ್‌ನ ಮಂಜುನಾಥ ಗೌಡ ಮತ್ತು ಜೆಡಿಎಸ್ (ಕಾಂಗ್ರೆಸ್ ಬಂಡುಕೋರ) ಗಜಾನನ ಪೈ ನಡುವೆ ನೇರ ಹೋರಾಟ. ಪೈ ಮಾಮು ಕೊನೆಕ್ಷಣದವರೆಗೂ ಕಾಂಗ್ರೆಸ್ ಟಿಕೆಟ್‌ಗೆ ತಿಪ್ಪರಲಾಗ ಹಾಕಿದ್ದ. ಆದರೆ ಶಾಸಕಿ ಶಾರದಾ ಶೆಟ್ಟಿಗೆ ಈತನ ಮೇಲೆ ನಂಬಿಕೆ ಇಲ್ಲ. ದೇಶಪಾಂಡೆ ಶಿಷ್ಯನಾದ ಪೈ ಗೆದ್ದರೆ ತನಗೆ ಲಾಭಕ್ಕಿಂತ ಲಾಸೇ ಜಾಸ್ತಿ ಎಂದು ಶಾಸಕಿ ಮಗ ರವಿಕುಮಾರ್ ಶೆಟ್ಟಿ ಲೆಕ್ಕಾಚಾರ. ಕೊನೆಕ್ಷಣದಲ್ಲಿ ಜೆಡಿಎಸ್ ಕ್ಯಾಂಡಿಡೇಟಾದ ಗಜು ಪೈಗೆ ಬಂಡೇಳಲು ಸಾಕ್ಷಾತ್ ದೇಶಪಾಂಡೆ ಸಾಹೇಬರದೇ ಕುಮ್ಮಕ್ಕಿದೆ. ಹೊಂದಾಣಿಕೆ ಗುಣಧರ್ಮದ ಕೊಂಕಣಿ ಕುಲ ಕಂಠೀರವನಾದ ಪೈ ಸರ್ಕಾರಿ ಗುತ್ತಿಗೆದಾರಿಕೆಯಿಂದ ಕೊಪ್ಪರಿಗೆ ಕಾಸು ಮಾಡಿದ್ದಾನೆ. ಹಿಂದೆ ಹೊನ್ನಪ್ಪ ನಾಯಕ ಝಡ್‌ಪಿ ಸದಸ್ಯನಾಗಿದ್ದಾಗ ಆತನ ಕೃಪೆಯಿಂದ ಗಜು ಪೈ ಖೋಟಾ-ಕಳಪೆ ಕಾಮಗಾರಿ ಮಾಡಿ ದುಡ್ಡು ಮಾಡಿದ್ದಾನೆಂದು ಜನರಾಡಿಕೊಳ್ಳುತ್ತಾರೆ. ಈ ಬೋಗಸ್ ಬಿಲ್‌ಗಾರಿಕೆಯಿಂದ ಹೊನ್ನಪ್ಪನೂ ಬಲಗೊಂಡಿದ್ದಾನೆ. ಕಣ್ಣುಮುಚ್ಚಿ ಹಣ ಹರಿಸುತ್ತಿರುವ ಪೈಗೆ ಒಂದಿಷ್ಟು ಜಾತಿ ಕಳ್ಳ ಬಿಲ್ ಕಂಟ್ರಾಕ್ಟರರೂ ಫಂಡ್ ಕೊಡುತ್ತಿದ್ದಾರೆ. ಹೀಗಾಗಿ ಪೈ ಗೆಲ್ಲುವುದು ಖಂಡಿತವೆಂದೇ ವಿಶ್ಲೇಷಣಗಳು ನಡೆದಿವೆ. ಇದು ಜೆಡಿಎಸ್‌ಗೆ ಕಾಂಗ್ರೆಸ್ ಬಂಡುಗಾರರ ಕೊಡುಗೆ!

ಭಟ್ಕಳ: ಎಮ್ಮೆಲ್ಲೆ ವೈದ್ಯನೇ ಪ್ರಬಲ

ಭಟ್ಕಳ-ಹೊನ್ನಾವರ ಕ್ಷೇತ್ರದ ಶಾಸಕ ಮಂಕಾಳ ವೈದ್ಯನ ಪ್ರಭಾವವನ್ನೇ ಕಾಂಗ್ರೆಸ್ ಕ್ಯಾಂಡಿಡೇಟ್‌ಗಳು ನಂಬಿಕೊಂಡಿದ್ದಾರೆ. ಜಾತಿ ಸಮೀಕರಣ-ಹಣದ ಹಂಚಿಕೆ ಕರಾರುವಾಕ್ಕಾಗಿ ಮಾಡುವ ರಾಜಕೀಯ ವ್ಯಾಪಾರಸ್ಥ ಮಂಕಾಳ ವೈದ್ಯ ಆಳೆದು ಸುರಿದು ಕ್ಯಾಂಡಿಡೇಟ್‌ಗಳ ಕಣಕ್ಕೆ ಕಳಿಸಿದ್ದಾನೆ. ಭಟ್ಕಳದ ಬೆಳಕೆ, ಹೆಬ್ಳೆ, ಹೊನ್ನಾವರದ ಮಾವಿನಕುರ್ವಾ, ನಗರಬಸ್ತಿಕೇರಿ, ಮಂಕಿಯಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳೇ ಗೆಲ್ಲುವ ವಾತಾವರಣವಿದೆ. ಶಿರಾಲಿಯಲ್ಲಿ ಬಿಜೆಪಿ-ಕಾಂಗ್ರೆಸ್‌ಗೆ ಫಿಫ್ಟಿ-ಫಿಫ್ಟಿ ಛಾನ್ಸ್! ಕದನ ಕುತೂಹಲ ಇರುವುದು ಮಾವಳ್ಳಿ (ಮುರ್ಡೇಶ್ವರ) ಕ್ಷೇತ್ರದಲ್ಲಿ.

ಶಾಸಕ ವೈದ್ಯನ ಆಪ್ತ ವಲಯದಲ್ಲಿದ್ದ ವಿಜಯಕುಮಾರ್ ನಾಯ್ಕ ತನ್ನ ಹೆಂಡತಿಗೆ ಟಿಕೆಟ್ ಸಿಗಲಿಲ್ಲವೆಂಬ ಸಿಟ್ಟಿಂದ ಜೆಡಿಎಸ್ ಸೇರಿದ್ದಾನೆ. ಅಷ್ಟೇ ಅಲ್ಲ, ಹೆಂಡತಿ ಗಾಯತ್ರಿಯನ್ನು ಜೆಡಿಎಸ್ ಅಭ್ಯರ್ಥಿ ಮಾಡಿ ಮಂಕಿ ಏರಿಯಾದ ನವಾಯತರ "ತಂಜೀಮ್" ಬೆಂಬಲ ಪಡೆಯುವ ಕಸರತ್ತು ಮಾಡಿದ್ದಾನೆ. ನವಾಯತರ ಓಟು ಕಾಂಗ್ರೆಸ್‌ನ ಕ್ಯಾಂಡಿಡೇಟ್‌ಗೆ ಹೋದರೆ ಬಿಜೆಪಿ ನಿರಾಯಾಸವಾಗಿ ಗೆಲ್ಲುತ್ತದೆ. ತಂಜೀಮ್ ಕೃಪೆ ಜೆಡಿಎಸ್‌ಗಾದರೆ ವಿಜಯಕುಮಾರ್ ಹೆಂಡತಿಗೆ ವಿಜಯ ಗ್ಯಾರಂಟಿ. ಶಾಸಕ ಮಂಕಾಳನ ನಿದ್ದೆಗೆಡಿಸಿರುವ ಕ್ಷೇತ್ರ ಇದೊಂದೇ.

ಹಳಿಯಾಳ-ಜೋಯಿಡಾ: ದೇಶಪಾಂಡೆ ದಮ್ ಪರೀಕ್ಷೆ!

ಮಂತ್ರಿಜೀ ಆರ್.ವಿ. ದೇಶಪಾಂಡೆಯ ಹಳಿಯಾಳ-ಜೋಯಿಡಾ ಕ್ಷೇತ್ರದ ಒಟ್ಟು ಆರು ಜಿಪಂ ಕ್ಷೇತ್ರದಲ್ಲಿ ಜೆಡಿಎಸ್ ಉತ್ಸಾಹದಿಂದ ಮುನ್ನುಗ್ಗುತ್ತಿದೆ. ಈ ಕ್ಷೇತ್ರದ ಶಾಸಕನಾಗುವ ಕನಸು ಕಾಣುತ್ತಿರುವ ಕೆ.ಆರ್. ರಮೇಶ್ ಎಂಬ ನಿಗೂಢ ಆಸಾಮಿ ಹಣ ಹರಿಸುತ್ತಿದ್ದಾನೆ. ಇದಾತನಿಗೆ ಮೊದಲ ಸತ್ವಪರೀಕ್ಷೆ. ಬಿಜೆಪಿ ಸೇರಿರುವ ಸುನಿಲ್ ಹೆಗ್ಡೆ ಸಂಕಟದಲ್ಲಿದ್ದಾರೆ. ಹಣ ಬಲವೂ ಇಲ್ಲ; ಜನ ಬಲವೂ ಕಳೆದುಕೊಂಡಿದ್ದಾರೆ. ಬಿಜೆಪಿಯಲ್ಲಿ ಸೆಲೆ-ಚಿಲೆಯೂ ಇಲ್ಲ. ಹೀಗಾಗಿ ಹೋರಾಟ ಕಾಂಗ್ರೆಸ್ V/s ಜೆಡಿಎಸ್.

ಹಳಿಯಾಳದ ಅಂಬಿಕಾನಗರ, ತೇರಗಾಂವ್ ಮತ್ತು ಜೋಯಿಡಾ ತಾಲ್ಲೂಕ್ ಜೋಯಿಡಾ ಕ್ಷೇತ್ರದಲ್ಲಿ ದೇಶಪಾಂಡೆ ಮಾನ ಉಳಿಯುವ ಲಕ್ಷಣ ಕಾಣಿಸುತ್ತಿದೆ. ಆದರೆ ಹಳಿಯಾಳದ ಮುರ್ಕವಾಡ ಯಾವಾಗಲೂ ದೇಶಪಾಂಡೆಗೆ ವಿರುದ್ಧವಾಗಿರುವ ಕ್ಷೇತ್ರ. ಇಲ್ಲಿ ಜೆಡಿಎಸ್ ಹವಾ ಎದ್ದಿದೆ; ಕಾವಲವಾಡದಲ್ಲಿ ಕಾಂಗ್ರೆಸ್ ತಾಲ್ಲೂಕ್ ಅಧ್ಯಕ್ಷ ಸುಭಾಷ್ ಕೋರ್ವೆಕರ್ ತನ್ನ ಹೆಂಡತಿಯನ್ನೇ ಅಖಾಡಕ್ಕೆ ಇಳಿಸಿದ್ದಾನೆ. ಜೆಡಿಎಸ್ ಅಭ್ಯರ್ಥಿ ದೇಶಪಾಂಡೆ ಡೇರೆಯಲ್ಲಿ ಮೊನ್ನೆ-ಮೊನ್ನೆವರೆಗಿದ್ದ ನಾಗೇಂದ್ರ ಜೀವೋಜಿ ಮಡದಿ ಚಂದನ. ಇಲ್ಲಿ ಜಿದ್ದಾಜಿದ್ದಿ ಕಾಳಗವೇ ನಡೆದಿವೆ. ಹಣದ ಹಣಾಹಣಿಯೂ ಸಾಗಿದೆ. ಗೆಲ್ಲುವ ಅವಕಾಶ ಎರಡೂ ಕಡೆಯವರಿಗೆ ಸಮಾನವಾಗಿದೆ.

ಜೋಯಿಡಾದ ರಾಮನಗರದ ಕ್ಷೇತ್ರದಲ್ಲಿ ದೇಶಪಾಂಡೆ ಪಡೆಯ ವಿಲಾಸ ನಾಯ್ಕ ಬಂಡಾಯ ಎದ್ದಿದ್ದಾನೆ. ಇಲ್ಲಿ ಕಾಂಗ್ರೆಸ್ ಕ್ಯಾಂಡಿಡೇಟ್ ದೇಶಪಾಂಡೆಯ ಶಿಷ್ಯ ಕೃಷ್ಣ ದೇಸಾಯಿ. ಹಿಂದೆ ವಿಲಾಸ್ ಆನಂದ್ ಅಸ್ನೋಟಿಕರ್ ಜೊತೆ ಸೇರಿ ಉದ್ಧಟತನ ತೋರಿಸಿದ್ದು ದೇಶಪಾಂಡೆ



ಮರೆತಿಲ್ಲ. ಈ ನಿಟ್ಟಿನಲ್ಲಿ ಆತನಿಗೆ ಅವಕಾಶ ಕೊಡಲಿಲ್ಲ ದೇಶಪಾಂಡೆ. ಒಮ್ಮೆ ಜಿಪಂ ಉಪಾಧ್ಯಕ್ಷನೂ ಆಗಿದ್ದ ವಿಲಾಸ ಇಲೆಕ್ಷನ್ ಗೆಲ್ಲುವ ತಂತ್ರಗಾರಿಕೆ ಬಲ್ಲವನು. ಹೀಗಾಗಿ ಕಾಂಗ್ರೆಸ್ ಮತ್ತು ಬಂಡುಕೋರರ ನಡುವೆ ಕತ್ತುಕತ್ತಿನ ಕಾಳಗ ನಡೆಯುತ್ತಿದೆ. ದೇಶಪಾಂಡೆಯ ದಮ್ ಪರೀಕ್ಷೆಗೆ ಒಳಪಡಲಿರುವ ಕ್ಷೇತ್ರ ಈ ರಾಮನಗರ.

ಮುಂಡಗೋಡ-ಯಲ್ಲಾಪುರ: ಶಾಸಕ ಹೆಬ್ಬಾರ್ ಫಜೀತಿ

ಆದಿರು ಕಳ್ಳ ಶಿವರಾಮ ಹೆಬ್ಬಾರ್ ಈ ಕ್ಷೇತ್ರದ ಶಾಸಕ ಸಾಹೇಬ. ಜಿಲ್ಲೆಯ ದೇಶಪಾಂಡೆ ವಿರೋಧಿ ಕಾಂಗ್ರೆಸ್ ಶಾಸಕಾಂಗದ ನಾಯಕ. ಮುಂಡಗೋಡ ತಾಲ್ಲೂಕಲ್ಲಿ ಮೂರು ಮತ್ತು ಯಲ್ಲಾಪುರ ತಾಲ್ಲೂಕಲ್ಲಿ ಎರಡು ಜಿಪಂ ಕ್ಷೇತ್ರವಿದೆ. ಎಲ್ಲ ಕಡೆ ಹೆಬ್ಬಾರ್ ಹಣಿಯಲು ದೇಶಪಾಂಡೆ ಒಳಸಂಚು ನಡೆಸಿದ್ದಾರೆ. ಮುಂಡಗೋಡದ ಪಾಳಾ ಕ್ಷೇತ್ರದಲ್ಲಿ ಕಾಂಗ್ರೆಸ್ ಮತ್ತು ಬಿಜೆಪಿ ಎರಡೂ ಪಾರ್ಟಿಯ ಬಂಡಾಯ ಅಭ್ಯರ್ಥಿಗಳಿದ್ದಾರೆ. ಬಿಜೆಪಿಯಲ್ಲಿ ಸಂಸದ ಅನಂತ್ಕಾಣಿ ಮತ್ತು ಮಾಜಿ ಶಾಸಕ ವಿ.ಎಸ್. ಪಾಟೀಲ ಹಾವು-ಮುಂಗುಸಿ. ಹೀಗಾಗಿ ಬಂಡಾಯ ಭುಗಿಲೆದ್ದಿದೆ.

ಈ ಕ್ಷೇತ್ರದಲ್ಲಿ ಕಾಂಗ್ರೆಸ್‌ನ ಪ್ರಬಲ ದಲಿತ ನಾಯಕ ಮಾಜಿ ಜಿಪಂ ಅಧ್ಯಕ್ಷ ರಾಮಕೃಷ್ಣ ಮೂಲಿಮನಿ ತನ್ನ ಹೆಂಡತಿಯನ್ನು ಕ್ಯಾಂಡಿಡೇಟ್ ಮಾಡಲು ಕಟಿಪಿಟಿ ನಡೆಸಿದ್ದರು. ಆದರೆ ಆತ ಮ್ಯಾಗಿ ಬಣದವನೆಂದು ದೇಶಪಾಂಡೆ ಆದಕ್ಕೆ ಅವಕಾಶ ಕೊಡಲಿಲ್ಲ, ಶಾಸಕ ಶಿವರಾಮ ಹೆಬ್ಬಾರನೂ ಅಡ್ಡಗಾಲು ಹಾಕಿದ್ದಾರೆ. ಹೀಗೆ ಧರ್ಮಪತ್ನಿ ಜಯಶ್ರೀಯನ್ನು ಬಂಡಾಯ ಅಭ್ಯರ್ಥಿಯಾಗಿ ಕಣಕ್ಕೆ ಇಳಿಸಿದ್ದಾರೆ ಮೂಲಿಮನಿ. ದೇಶಪಾಂಡೆ-ಹೆಬ್ಬಾರ್-ವಿ.ಎಸ್. ಪಾಟೀಲ್-ಅನಂತ್ಕಾಣಿಗಳೆಲ್ಲ ಒಳಸುಳಿಗೆ ಸಿಲುಕಿರುವುದರಿಂದ ಬಿಜೆಪಿ-ಕಾಂಗ್ರೆಸ್-ಬಂಡಾಯ ಕಾಂಗ್ರೆಸ್ ಅಭ್ಯರ್ಥಿಗಳು ಸಮ ತೂಕ ಪಡೆದುಕೊಂಡಿದ್ದಾರೆ. ಫೋಟೋ ಫಿನಿಷ್ ಫಲಿತಾಂಶ ಬರಲಿದೆ. ಇಂಧೂರ ಕ್ಷೇತ್ರದಲ್ಲಿ ಕಾಂಗ್ರೆಸ್‌ನ ರವಿಗೌಡ ಪಾಟೀಲ ಗೆಲುವಿನ ಹತ್ತಿರವಿದ್ದಾರೆ.

ಹೈನ್ಸೋಲ್ಬೇಜ್ ಕ್ಷೇತ್ರವೆಂದರೆ ಚಿಗಳ್ಳಿ. ದೇಶಪಾಂಡೆಯ ಅನಾದಿಕಾಲದ ಹಿಂಬಾಲಕ, ಎಲ್.ಟಿ. ಪಾಟೀಲ ಇಲ್ಲಿ ಕಾಂಗ್ರೆಸ್ ಕ್ಯಾಂಡಿಡೇಟ್. ಈ ಶೋಕಿಲಾಲನಿಗೆ ಟಿಕೆಟ್ ಕೊಡುವ ಮನಸ್ಸು ಶಾಸಕ ಹೆಬ್ಬಾರ್‌ಗೆ ಒಂಚೂರು ಇರಲಿಲ್ಲ. ದೇಶಪಾಂಡೆ ಬಲಾತ್ಕಾರವಾಗಿ ತನ್ನ ಗುಲಾಮ ಪಾಟೀಲಗೆ ಛಾನ್ಸ್ ಕೊಡಿಸಿದ್ದಾನೆ. ಇದರಿಂದ ಕೆರಳಿದ ಹೆಬ್ಬಾರ್ ಪಾಟೀಲರ ಮರಾಠ ಸಮುದಾಯದ ಫಕೀರ ಸ್ವಾಮಿ ಗುಲ್ಯಾನವರ ಬಂಡೇಳುವಂತೆ ನೋಡಿಕೊಂಡಿದ್ದಾರೆ. ಇದರಿಂದ ಎಲ್.ಟಿ. ಪಾಟೀಲ್ ಮತ್ತವನ ಬಾಸ್ ದೇಶಪಾಂಡೆ ಕಂಗಾಲು ಬಿದ್ದುಹೋಗಿದ್ದಾರೆ. ತನ್ನ ಶಿಷ್ಯ ಫಕೀರಸ್ವಾಮಿ ಗೆಲ್ಲಿಸಲು ಶಾಸಕ ಹೆಬ್ಬಾರ್ ತಿಣುಕಾಡುತ್ತಿದ್ದಾರೆ. ಈ ಬಂಡಾಯದ ಲಾಭ ಬಿಜೆಪಿಯ ಗುಡ್ಡಪ್ಪ ಕಾತೂರ ಎಂಬ ವಕೀಲನಿಗಾದರೂ ಆಗಬಹುದೆಂಬುದು ಚಿಗಳ್ಳಿಯ ಇಲೆಕ್ಷನ್ ಸಮೀಕರಣ ಸಾರಾಂಶ.

ಹೆಬ್ಬಾರ್ ಸಂಸ್ಥಾನದ ಯಲ್ಲಾಪುರದ ತಾಲ್ಲೂಕಿನ ಎರಡೂ ಜಿಪಂ ಕ್ಷೇತ್ರ ಮಹಿಳೆಗೆ ಮೀಸಲಾಗಿದೆ. ಎರಡೂ ಕಡೆ ಕಾಂಗ್ರೆಸ್ ಗೆಲ್ಲುವ ಛಾನ್ಸ್ ಇದೆ. ತವರು ಯಲ್ಲಾಪುರದಲ್ಲಿ ಸೋತು ಮುಖಭಂಗಿತನಾಗಬಾರದೆಂದು ಹೆಬ್ಬಾರ್ ಹಗಲೂ-ಇರುಳು ತಂತ್ರ ಹೆಣೆಯುತ್ತಿದ್ದಾರೆ. ಕಾಗೇರಿಗೆ ಮೊದಲಿದ್ದ ಇಮೇಜು ಈಗಿಲ್ಲ. ಇದು ಹೆಬ್ಬಾರ್‌ಗೆ ಅನುಕೂಲಕರವಾಗಿದೆ.

ಶಿರಸಿ-ಸಿದ್ದಾಪುರ: ಕಾಗೇರಿ ಕಂಗಾಲು!

ಕಳೆದ ಅಸೆಂಬ್ಲಿ ಇಲೆಕ್ಷನ್‌ನಲ್ಲಿ ಕೂದಲೆಳೆ ಅಂತರದಿಂದ ಬಚಾವಾಗಿದ್ದ ಬಿಜೆಪಿಯ ಕಾಗೇರಿ ಹೆಗಡೆ ಜಿಪಂ ಸಮರದಲ್ಲಿ ಸಂಪೂರ್ಣ ಹೈರಾಣಾಗಿ ಎದುಸಿರು ಬಿಡುತ್ತಿದ್ದಾರೆ. ಹಿಂತಸತ್ತು ಕಾಗೇರಿ ಹಣಿಯಲು ಸಂಸದ ಅನಂತ್ಕಾಣಿ ಏನೇನು ಸಾಧ್ಯವೋ ಅದೆಲ್ಲ ಮಾಡುತ್ತಿದ್ದಾನೆ. ಜೊತೆಗೆ ಜೆಡಿಎಸ್‌ನ ಶಶಿಭೂಷಣ ಹೆಗಡೆ, ಮಧು ಬಂಗಾರಪ್ಪ ಬಣ ಕಾಡುತ್ತಿದೆ. ಮತ್ತೊಂದೆಡೆ ಕಾಂಗ್ರೆಸ್ ಸತಾಯಿಸುತ್ತಿದೆ. ಕಾಗೇರಿ ಕಂಗಾಲು ಬಿದ್ದಿದ್ದಾರೆ. ಹೇಗಾದರೂ ಮುಖ ಉಳಿಸಿಕೊಳ್ಳಬೇಕೆಂದು ಕಾಗೇರಿ ಹಣವಂತರಿಗೆ, ವಲಸಿಗರಿಗೆ ಟಿಕೆಟ್ ಕೊಟ್ಟಿದ್ದಾರೆ. ಉದ್ದುದ್ದ ತತ್ವ-ಸಿದ್ಧಾಂತ ಭಾಷಣ ಬಿಗಿಯುವ ಕಾಗೇರಿ ಹಳಿತಪ್ಪಿದ್ದು ಬಿಜೆಪಿ ಕಾರ್ಯಕರ್ತರನ್ನು ಕೆರಳಿಸಿದೆ. ಕಾರ್ಯಕರ್ತರ ಸಿಟ್ಟಿಗೆ ಬೆದರಿದ ಬಿಜೆಪಿಯ ರಾಜ್ಯಮಟ್ಟದ ಧುರೀಣ ಕಾಗೇರಿಜೀ ಸಿದ್ದಾಪುರದಲ್ಲಿ ಸ್ವಪಕ್ಷದ ಕ್ಯಾಂಡಿಡೇಟ್‌ಗಳು ನಾಮಪತ್ರ ಸಲ್ಲಿಸುವಾಗ ಅಲ್ಲಿಗೆ ಹೋಗದೆ ಅಡಗಿ ಕುಳಿತಿದ್ದ.

ಶಿರಸಿ ಕಾಂಗ್ರೆಸ್ ಮಟ್ಟಿಗೆ ಡಿಸಿಸಿ ಅಧ್ಯಕ್ಷ ಭೀಮಣ್ಣ ನಾಯ್ಕನೇ ಮುಂದಾಳು. ವಿಪರ್ಯಾಸವೆಂದರೆ ಆತನಿಗೆ ತನ್ನ ತವರು ನೆಲ ಬದನಗೋಡು-ಬನವಾಸಿ ಜಿಪಂ ಕ್ಷೇತ್ರದ ಬಂಡಾಯ ಬಗೆಹರಿಸಲಿಕ್ಕೇ ಆಗಿಲ್ಲ. ಶಾಸಕ ಹೆಬ್ಬಾರಿನ ಯಲ್ಲಾಪುರ ಕ್ಷೇತ್ರದ ವ್ಯಾಪ್ತಿಯ ಈ ಪ್ರದೇಶದಲ್ಲಿ ಆತನ ಆಟ ನಡೆದಿದೆ. ಬದನಗೋಡು, ಬನವಾಸಿಯಲ್ಲಿ ಕಾಂಗ್ರೆಸ್-ಬಿಜೆಪಿ-ಜೆಡಿಎಸ್ ತ್ರಿಕೋನ ಕಾಳಗ ನಡೆದಿದೆ. ಬನವಾಸಿಯಲ್ಲಿ ಬಿಜೆಪಿ ಮತ್ತು ಬದನಗೋಡಲ್ಲಿ ಕಾಂಗ್ರೆಸ್ ಮುಂದಿದೆ.

ಹುಲೇಕಲ್ ಮಹತ್ವ-ಆಕರ್ಷಕ ಕ್ಷೇತ್ರ. ದೇಶಪಾಂಡೆ ಮೇಲೆ ಸಿಟ್ಟಾಗಿ ಕಾಂಗ್ರೆಸ್ ಬಿಟ್ಟುಹೋಗಿದ್ದ ಮಾಜಿ ಜಿಪಂ ಸದಸ್ಯ ಜಿ. ಎನ್. ಹೆಗಡೆ ಮುರೇಗಾರ್ ಇಲ್ಲಿ ಕಾಂಗ್ರೆಸ್ ಕಲಿ. ಬಿಜೆಪಿಯಿಂದ ಕಾಗೇರಿ ಬಲಗೈ ಬಂಟ ಸದಾನಂದ ಭಟ್ಟ ಸ್ಪರ್ಧಿಸಿದ್ದಾರೆ. ಮಾಜಿ ತಾಪಂ ಅಧ್ಯಕ್ಷನಾದ ಸುಧು ಭಟ್ಟ ಮತ್ತು ಮುರೇಗಾರ್ ಹೆಗಡೆ ಇಬ್ಬರೂ ವಕೀಲರು. ಇಬ್ಬರೂ ಬಲಾಢ್ಯ ಹವ್ಯಕ ಕುಲಕಂಠೀರವರೇ. ಇಬ್ಬರೂ ಸಮಬಲದಲ್ಲಿದ್ದಂತೆ ಕಂಡುಬಂದರೂ ಅಂತಿಮ ಗೆಲುವು ಮುರೇಗಾರ್‌ದೇ ಎಂಬ ಅಭಿಪ್ರಾಯ ಬರುತ್ತಿದೆ. ಇದಕ್ಕೆ ಕಾಗೇರಿ ವೀಕ್ ಆಗಿರುವುದೇ ಕಾರಣ.

ದೊಡ್ನಳ್ಳಿ ಎಂಬ ಹೊಸ ಕ್ಷೇತ್ರದಲ್ಲಿ ಕಾಂಗ್ರೆಸ್ ದೀವರ ಕೋಮಿನ ಚಂದ್ರಕಲಾ ನಾಯ್ಕಗೆ ಟಿಕೆಟ್ ಕೊಟ್ಟಿದೆ. ಬಿಜೆಪಿಯ ಉಷಾ ಹೆಗಡೆ ಮತ್ತು ಜೆಡಿಎಸ್‌ನ ನೇತ್ರಾವತಿ ಹೆಗಡೆ ಹವ್ಯಕ ಜಾತಿಯವರು. ಹೀಗಾಗಿ ಬ್ರಾಹ್ಮಣರ ಮತ ಒಡೆದು ಕಾಂಗ್ರೆಸ್ ಗೆಲ್ಲುವ ಛಾನ್ಸ್ ಇದೆ. ಸದ್ಯಕ್ಕೆ ಹಣಾಹಣಿ ಹೋರಾಟ ಇರುವುದು ಬಿಜೆಪಿ V/s ಜೆಡಿಎಸ್ ನಡುವೆ. ಇಬ್ಬರ ನ್ಯಾಯ ಮೂರನೆಯವಳಿಗೆ ಆಯ ಆಗಲಿದೆ. ಜಾನ್ಮನೆ ಕ್ಷೇತ್ರದಲ್ಲಿ ಬಿಜೆಪಿಗೆ ಬಂಡಾಯದ ಬಿಸಿ ಸುಡುತ್ತಿದೆ. ಕಾಂಗ್ರೆಸ್‌ನ ಸುಶಿಕ್ಷಿತ ಅಭ್ಯರ್ಥಿ ಉಷಾ ಗೌಡ ಗೆಲ್ಲುವ ಸಾಧ್ಯತೆ ಕಾಣಿಸುತ್ತಿದೆ.

ಸಿದ್ದಾಪುರದ ಪಂಚಾಯ್ತಿ ಫೈಟ್ ಅಂದರೆ, ಅದು ಉಂಡಾಡಿ ಗುಂಡ ಷಣ್ಮುಖ ಗೌಡ V/s ವಿ.ಎನ್. ನಾಯ್ಕ ಸೆಣಸಾಟ. ಅಣಲೆಬೈಲ್ ಕ್ಷೇತ್ರದಲ್ಲಿ ಜೆಡಿಎಸ್‌ನ ಗಜ್ಜೆ ಹೆಗಡೆಗೆ ಅವಕಾಶ ಅಪಾರ. ದೊಡ್ಮನೆ ಮತ್ತು ಹಲಗೇರಿಯಲ್ಲಿ ಕಾಂಗ್ರೆಸ್‌ಗೆ ಷಣ್ಮುಖಗೌಡನ ಗಂಡಾಗುಂಡಿಯಿಂದ ಗಂಡಾಂತರ ಬಂದಿದೆ. ಪಕ್ಷಕ್ಕೊಂದೂ ನಿಷ್ಠನಲ್ಲದ ಈ ಲೇವಾದೇವಿದಾರ ದೇಶಪಾಂಡೆ ಕೃಪಾಶೀರ್ವಾದ ಬಲದಿಂದ ನಿಷ್ಠಾವಂತ ಕಾರ್ಯಕರ್ತರನ್ನು ಚೆಚ್ಚಿ ಹಾಕುತ್ತಿದ್ದಾನೆ. ಊರಲ್ಲಿ ಮೂರುಬಿಲ್ಲಿ ಮಾನ-ಮರ್ಯಾದೆ ಇಲ್ಲದಿದ್ದರೂ ಈತ ಕಾಂಗ್ರೆಸ್ ಆಳುತ್ತಿರುವುದು ದುರಂತ. ಶಿಷ್ಯನ ಹಿತಕಾಪಾಡಲು ದೇಶಪಾಂಡೆ ಅರ್ಹರಿಗೆ ಅನ್ಯಾಯ ಮಾಡಿ ದಂಡಪಿಂಡಗಳಿಗೆ ಟಿಕೆಟ್ ಕೊಟ್ಟಿದ್ದಾರೆ.


ನಿಷ್ಠಾವಂತರು ಬಂಡೆದ್ದು ಸ್ಪರ್ಧೆಗೆ ಇಳಿದಿದ್ದಾರೆ. ದೊಡ್ಮನೆ ಕ್ಷೇತ್ರದಲ್ಲಿ ಜನಪರ ವಿ.ಎನ್. ನಾಯ್ಕ ಮತ್ತು ಹಲಗೇರಿಯಲ್ಲಿ ಮಾಜಿ ತಾಪಂ ಸದಸ್ಯ ವಸಂತ ನಾಯ್ಕ ಮಡದಿ ಪಕ್ಷೇತರರಾಗಿ ಕಣಕ್ಕಿಳಿದಿದ್ದಾರೆ.

ವಿ.ಎನ್. ನಾಯ್ಕ ಜಿಪಂ ಸದಸ್ಯರಾಗಿದ್ದರು; ಕಳೆದ ಸಲ ಆತ ಹೆಂಡತಿಯನ್ನು ಬಂಡಾಯವಾಗಿ ನಿಲ್ಲಿಸಿ ಗೆಲ್ಲಿಸಿಕೊಂಡಿದ್ದ. ಈ ಬಾರಿ ವಿಎನ್‌ಗೆ ಟಿಕೆಟ್ ಕೊಡುವಂತೆ ಮ್ಯಾಗಿ ಮಗ-ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ-ಕರಾವಳಿ ಅಭಿವೃದ್ಧಿ ಮಂಡಳಿ ಅಧ್ಯಕ್ಷ ನಿವೇದಿತ್ ಆಳ್ವ ಪರಿಪರಿಯಾಗಿ ದೇಶಪಾಂಡೆಯಲ್ಲಿ ಬೇಡಿಕೊಂಡಿದ್ದರೂ ದೇಶಪಾಂಡೆ ಬಿಲ್‌ಕುಲ್ ಒಪ್ಪಲಿಲ್ಲ. ದೀವರ ಓಟು ಕಾಂಗ್ರೆಸ್, ಬಿಜೆಪಿ ಮತ್ತು ವಿಎನ್ ನಡುವೆ ಹಂಚಿ ಹರಿದುಹೋಗಲಿದೆ. ಸ್ವಜಾತಿ ಒಕ್ಕಲಿಗರ ಮತ್ತು ಬ್ರಾಹ್ಮಣರ ಮತ ಪಡೆಯುವ ಜೆಡಿಎಸ್‌ನ ಎನ್.ಎಲ್. ಗೌಡ ಗೆಲ್ಲುವ ಅವಕಾಶ ಹೆಚ್ಚಾಗುತ್ತಿದೆ. ಹಲಗೇರಿಯಲ್ಲಿ ಬಂಡಾಯ ಕಾಂಗ್ರೆಸ್ ಕ್ಯಾಂಡಿಡೇಟ್ ಸುಮಂಗಲಾ ನಾಯ್ಕ ಗೆಲ್ಲಲಿದ್ದಾರೆ. ಸಿದ್ದಾಪುರದಲ್ಲಿ ಷಣ್ಮುಖ ಗೌಡ ಸೊನ್ನೆಯೆಂಬುದು ಸಾಬೀತಾಗಲಿದೆ!


ಡಾನ್ ದೇಶಪಾಂಡೆ ಪ್ರತಿ ತಾಲ್ಲೂಕಲ್ಲಿ ಷಣ್ಮುಖ ಗೌಡನಂಥ ಜನಕೊಪ್ಪದ ಪುಂಡರ ಕಟ್ಟಿಕೊಂಡು ಇಡೀ ಜಿಲ್ಲೆಯಲ್ಲಿ ಕಾಂಗ್ರೆಸ್ ನಿರ್ನಾಮ ಮಾಡುತ್ತಿದ್ದಾರೆ.

■ ನಹುಷ


ಮಂಡ್ಯ: ಪ್ರಚಾರ ಜೋರು, ಬಂಡಾಯ ಮೇರು



ರವೀಂದ್ರ ಶ್ರೀಕಂಠಯ್ಯ



ಕೆಬ್ಬಳ್ಳಿ ಆನಂದ್



ಜಿಲ್ಲಾ ಪಂಚಾಯತ್ ಮತ್ತು ತಾಲ್ಲೂಕು ಪಂಚಾಯತ್ ...ನಾವಣೆಗೆ ನಾಮಪತ್ರ ಸಲ್ಲಿಕೆಯ ಮಹತ್ವದ ಘಟ್ಟ ...ುಗಿದ ಬೆನ್ನಲ್ಲೇ ಕಾಂಗ್ರೆಸ್, ಜೆಡಿಎಸ್ ಪಕ್ಷಗಳಲ್ಲಿ ...ಡಾಯದ ಬಾವುಟಗಳು ಹಾರಾಡುತ್ತಿವೆ. ಟಿಕೆಟ್ ಸಿಗದೆ ...ಸತ್ತು ಪಕ್ಷೇತರರಾಗಿ ನಾಮಪತ್ರ ಸಲ್ಲಿಸಿರುವ ಅಭ್ಯರ್ಥಿಗಳು ...ಮ್ಮ ಪಕ್ಷದ ಮುಖಂಡರ ವಿರುದ್ಧ ಬಾಯಿಗೆಬಂದಂತೆ ...ಯುತ್ತಾ ತಿರುಗುತ್ತಿದ್ದಾರೆ. ಅದರಲ್ಲೂ ಜಿಲ್ಲಾ ಉಸ್ತುವಾರಿ ...ಚಿವ ಅಂಬರೀಶ್ ಆಪ್ತ ಬೆಂಬಲಿಗರಾದ ಕೆಬ್ಬಳ್ಳಿ ಆನಂದ್ ...ಗೂ ಸಿದ್ದರೂಢ ಸತೀಶ್‌ಗೌಡ ಅಂಬಿ ಜನ್ಮವನ್ನು ...ದಿ-ಬೀದಿಯಲ್ಲಿ ಹರಾಜು ಹಾಕುತ್ತಿರೋದು ಸೋಜಿಗದ ...ಗತಿ.

ಜಿಲ್ಲಾ ಉಸ್ತುವಾರಿ ಸಚಿವ ಅಂಬರೀಶ್‌ಗೆ ಜಿಲ್ಲೆಯಲ್ಲಿ ...ಡೆ ಕಾಸಿನ ಕಿಮ್ಮತ್ತಿಲ್ಲದಂತಾಗಿದೆ. ಕಳೆದ ವಿಧಾನಸಭಾ ...ನಾವಣೆಯಲ್ಲಿ ಅಂಬಿಗಾಗಿ ತನ್ನ ಕೈಯಿಂದಲೇ ಲಕ್ಷಲಕ್ಷ ... ಖರ್ಚು ಮಾಡಿದ್ದ ಕೆಬ್ಬಳ್ಳಿ ಆನಂದ್‌ಗೆ ಜಿ.ಪಂ. ...ನಾವಣೆಯಲ್ಲಿ ಟಿಕೆಟ್ ನೀಡುವ ಭರವಸೆ ಅಂಬಿ ...ಡಿದ್ದರು. ಅದನ್ನೇ ನಂಬಿದ್ದ ಕೆಬ್ಬಳ್ಳಿ ಆನಂದ್ ತನ್ನ ಪತ್ನಿ ...ಣಿಯನ್ನು ಹೋಳಲು ಜಿ.ಪಂ. ಕ್ಷೇತ್ರದಿಂದ ನಿಲ್ಲಿಸಲು ...ಯಾರಿ ನಡೆಸಿ ಆಗಲೇ ಪ್ರಚಾರ ಶುರು ಹಚ್ಚಿಕೊಂಡಿದ್ದ. ...ದರೆ ಕೊನೆಗಳಿಗೆಯಲ್ಲಿ ಟಿಕೆಟ್ ಕೆಬ್ಬಳ್ಳಿ ಆನಂದನ ಪತ್ನಿ ...ಣಿಗೆ ಬದಲು ಮಂಡ್ಯ ಎಪಿಎಂಸಿ ಮಾಜಿ ಅಧ್ಯಕ್ಷ ...ಾದೇಗೌಡರ ಪತ್ನಿ ಸಾಕಮ್ಮರವರಿಗೆ ಅಂಬಿ ಕೊಟ್ಟಿದ್ದರಿಂದ ...ಬ್ಬಳ್ಳಿ ಆನಂದ ಸಿಟ್ಟಾಗಿದ್ದು ತನ್ನ ಪತ್ನಿಯನ್ನು ಕಾಂಗ್ರೆಸ್ ...ಡಾಯ ಅಭ್ಯರ್ಥಿಯನ್ನಾಗಿ ನಿಲ್ಲಿಸಿ ಅಂಬಿ ವಿರುದ್ಧ ...ಡೆತಟ್ಟಿದ್ದಾನೆ.

'ಕಳೆದ ವಿಧಾನಸಭಾ ಚುನಾವಣೆಯಲ್ಲಿ ಅಂಬರೀಶ್ ...ವಾಗಿ 12 ಸಾವಿರಕ್ಕೂ ಹೆಚ್ಚು ಮತಗಳನ್ನು ಕೊಡಿಸಿದ್ದೇನೆ. ...ಬರೀಶ್ ಆರೋಗ್ಯ ಕೆಟ್ಟಿದ್ದರಿಂದ ಮಂಡ್ಯದ ಜನತೆ ...ಣೆ ತೋರಿ ಗೆಲ್ಲಿಸಿದರೆ ಹೊರತು ಅಂಬರೀಶ್ ...ಾಮರ್ಥ್ಯದಿಂದ ಗೆಲ್ಲಲಿಲ್ಲ. ಸದಾ ಶೋಕಿಯಲ್ಲೇ ...ಳುಗಿರುವ ಅಂಬರೀಶ್‌ಗೆ ಜನಸೇವೆ ಮಾಡುವ ...ಕ್ತಿಯಿಲ್ಲ. ಮೂರು ವರ್ಷಗಳಲ್ಲಿ ಜಿಲ್ಲೆಗೆ ಅಂಬರೀಶ್ ...ತಿರುವ ಕೊಡುಗೆ ಶೂನ್ಯ. ಪೊಲೀಸ್ ಸೆಕ್ಯುರಿಟಿ ಪಡೆಯದೆ ...ಾವುದಾದರೂ ಒಂದು ಹಳ್ಳಿಗೆ ಅಂಬರೀಶ್ ಭೇಟಿ ...ಡಲಿ ಆಗ ಜನರು ಅವರಿಗೆ ಯಾವ ರೀತಿ ಮರ್ಯಾದೆ ...ಡುತ್ತಾರೆ ಎಂಬುದು ತಿಳಿಯುತ್ತದೆ. ಅಂಬರೀಶ್ ತನ್ನ ...ತ್ತ ಅಮರಾವತಿ ಚಂದ್ರಶೇಖರ್ ಮೂಲಕ ಬಿ ಫಾರಂ ...ರಾಟ ಮಾಡಿದ್ದಾರೆ. ಅಂಬರೀಶ್ ಪತ್ನಿ ಸುಮಲತಾ ...ದು ನಿಂತರೂ ಈ ಚುನಾವಣೆಯಲ್ಲಿ ನನ್ನ ಪತ್ನಿ ರಾಣಿ ...ರ್ಜಿಸುವುದು ಶತಸಿದ್ಧ' ಎಂದೆಲ್ಲಾ ಮಾಧ್ಯಮಗಳಲ್ಲಿ ...ಬರೀಶ್‌ರನ್ನು ಏಕವಚನದಲ್ಲಿ ವಾಚಾಮಗೋಚರವಾಗಿ ...ದಿಸುತ್ತಿರುವ ಕೆಬ್ಬಳ್ಳಿ ಆನಂದ್, ಅಂಬಿ ಮಾನವನ್ನು ...ಾಜು ಹಾಕುತ್ತಿದ್ದಾನೆ.

ಜೊತೆಗೆ, ಅಂಬಿಯ ಮತ್ತೊರ್ವ ಬೆಂಬಲಿಗ ಸಿದ್ದರೂಢ ...ೀಶ್‌ಗೌಡ ಬಸರಾಳು ಜಿ.ಪಂ. ಕ್ಷೇತ್ರದಿಂದ ಟಿಕೆಟ್ ...ಯಲು ಸಾಕಷ್ಟು ಕಸರತ್ತು ನಡೆಸಿದ್ದ, ಆತನಿಗೇ ಟಿಕೆಟ್ ...ಡಿಸುವುದಾಗಿ ಅಂಬಿ ಕೂಡ ಭರವಸೆ ನೀಡಿದ್ದರು. ...ನೆಗಳಿಗೆಯವರೆಗೂ ಸಿದ್ದರೂಢ ಸತೀಶ್‌ಗೌಡನಿಗೆ ಟಿಕೆಟ್ ...ರಂಟಿ ಎಂಬ ವಾತಾವರಣವಿತ್ತು, ಆದರೆ ಕಾಂಗ್ರೆಸ್ ...ರ್ಯಕರ್ತ ಚಿಕ್ಕಬಳ್ಳಿ ಕೃಷ್ಣರಿಗೆ ಟಿಕೆಟ್ ನೀಡಿದ್ದರಿಂದ ...ೀಶ್‌ಗೌಡ ಕೂಡ ಬಂಡಾಯ ಅಭ್ಯರ್ಥಿಯಾಗಿ ...ದಲ್ಲಿದ್ದು ಕಾಂಗ್ರೆಸ್ ಮುಖಂಡರಿಗೆ ಬಿಸಿತುಪ್ಪವಾಗಿದ್ದಾನೆ.

ಡಬ್ಬಲ್ ಬಿ ಫಾರಂ

ಶ್ರೀರಂಗಪಟ್ಟಣ ವಿಧಾನಸಭಾ ಕ್ಷೇತ್ರದಲ್ಲಿ 6 ಜಿ.ಪಂ. ...ತ್ರಗಳಿವೆ. ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷನಾಗಿರುವ ...ಎಲ್.ಲಿಂಗರಾಜು ಅಂಬರೀಶ್ ಶಿಷ್ಯ ಎಸ್.ಎಂ. ...ಬಣಕ್ಕೆ ಸೇರಿದ ರವೀಂದ್ರ ಶ್ರೀಕಂಠಯ್ಯ, ಅಂಬರೀಶ್‌ರ ಕಡು ವಿರೋಧಿ. ಕ್ಷೇತ್ರದಲ್ಲಿ ಅಂಬಿ ಶಿಷ್ಯ ಎಸ್.ಎಲ್. ಲಿಂಗರಾಜು ಹಾಗೂ ಆತನ ಅಳಿಯ ಸಚ್ಚಿದಾನಂದರಿಗಿಂತ ರವೀಂದ್ರ ಶ್ರೀಕಂಠಯ್ಯನ ಪ್ರಭಾವವೇ ಹೆಚ್ಚು.

ಮಾವ-ಅಳಿಯ ಜೋಡಿಗೆ ಕ್ಷೇತ್ರದಲ್ಲಿ ಕವಡೆಕಾಸಿನ ಕಿಮ್ಮತ್ತಿಲ್ಲ. ಕೆ.ಶೆಟ್ಟಹಳ್ಳಿ ಗ್ರಾಮ ಪಂಚಾಯತಿಯಲ್ಲಿ ಮಾವ-ಅಳಿಯ ಜೋಡಿ ತನ್ನ ಬೆಂಬಲಿತ ಒಬ್ಬನೇ ಒಬ್ಬ ಅಭ್ಯರ್ಥಿಯನ್ನು ಗೆಲ್ಲಿಸಲು ಸಾಧ್ಯವಾಗಿಲ್ಲ ಅಂದರೆ ಇವರ ಸಾಮರ್ಥ್ಯ ಎಷ್ಟು ಎಂಬುದು ಗೊತ್ತಾಗಿಯೇ ಸ್ವತಃ ಅಂಬರೀಶ್ ಬಿ ಫಾರಂಗಳನ್ನು ಖುದ್ದಾಗಿ ರವೀಂದ್ರ ಶ್ರೀಕಂಠಯ್ಯನ ಕೈಗೆ ತಲುಪಿಸಿದ್ದಾರೆ. ಆದರೂ ಬೆಳಗೊಳ ಹಾಗೂ ಕೆ. ಶೆಟ್ಟಹಳ್ಳಿ ಜಿ.ಪಂ.ನಲ್ಲಿ ಡಬಲ್ ಬಿ ಫಾರಂ ಕರಾಮತ್ತು ನಡೆದಿದೆ.

ಹಾಗೆಯೇ ಚಿಕ್ಕಅಂಕನಹಳ್ಳಿ, ಹುಲಿಕೆರೆ, ಕೆಆರ್‌ಎಸ್ ತಾಲ್ಲೂಕು ಪಂಚಾಯತ್‌ನಲ್ಲಿ ಡಬ್ಬಲ್ ಬಿ ಫಾರಂ ಸಲ್ಲಿಕೆಯಾಗಿದೆ. ಈ ಹಿಂದೆಯೂ ಡಬ್ಬಲ್ ಬಿ ಫಾರಂ ಕರಾಮತ್ತು ನಡೆದಿದ್ದ ಹಿನ್ನೆಲೆಯಲ್ಲಿ ಎಚ್ಚೆತ್ತ ರವೀಂದ್ರ ಶ್ರೀಕಂಠಯ್ಯ ತಮ್ಮ ಅಭ್ಯರ್ಥಿಗಳು ಎಲ್ಲರಿಗಿಂತ ಮೊದಲು ನಾಮಪತ್ರ ಸಲ್ಲಿಸುವಂತೆ ನೋಡಿಕೊಂಡಿದ್ದರು. ಹೀಗಾಗಿ ಬೆಳಗೊಳ ಕ್ಷೇತ್ರದಿಂದ ರವೀಂದ್ರ ಶ್ರೀಕಂಠಯ್ಯ ಬಣದ ಸವಿತಾ ಲೋಕೇಶ ಅಧಿಕೃತ ಕಾಂಗ್ರೆಸ್ ಅಭ್ಯರ್ಥಿಯಾಗಲಿದ್ದಾರೆ. ಇನ್ನು ಕೆ.ಶೆಟ್ಟಹಳ್ಳಿ ಜಿ.ಪಂ. ಕ್ಷೇತ್ರದಿಂದ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಲಿಂಗರಾಜು ಮಗ ದರ್ಶನ್ ಲಿಂಗರಾಜು ಹಾಗೂ ಬಂಡಾಯ ಕಾಂಗ್ರೆಸ್ ಅಭ್ಯರ್ಥಿಯಾಗಿ ಭಾಸ್ಕರ್‌ಗೌಡ ನಾಮಪತ್ರ ಸಲ್ಲಿಸಿದ್ದರೂ ರವೀಂದ್ರ ಶ್ರೀಕಂಠಯ್ಯ ಬೆಂಬಲಿಗ ತಾ.ಪಂ. ಹಾಲಿ ಸದಸ್ಯ ಕೆ.ಪಿ. ಸೋಮಶೇಖರ್ ಮೊದಲೇ ಸಲ್ಲಿಸಿದ್ದರಿಂದ ಕಾಂಗ್ರೆಸ್ ಅಧಿಕೃತ ಅಭ್ಯರ್ಥಿಯಾಗುವುದು ಖಚಿತ. ಡಬಲ್ ಬಿ ಫಾರಂ ಹಂಚಿಕೆಯಾಗಿದ್ದರೂ ಯಾರು ಮೊದಲು ನಾಮಪತ್ರ ಸಲ್ಲಿಸಿರುತ್ತಾರೋ ಅವರೇ ಪಕ್ಷದ ಅಭ್ಯರ್ಥಿ ಎಂದು ಚುನಾವಣಾಧಿಕಾರಿ ಹೇಳಿರುವುದರಿಂದ ರವೀಂದ್ರ ಶ್ರೀಕಂಠಯ್ಯ ಬಣವೇ ಜಿ.ಪಂ. ಹಾಗೂ ತಾ.ಪಂ.ನಲ್ಲಿ ಮೇಲುಗೈ ಸಾಧಿಸಲಿದೆ.

ಐದು ಕ್ಷೇತ್ರಗಳಲ್ಲಿ ಡಬಲ್ ಬಿ ಫಾರಂ ಸಲ್ಲಿಕೆಯಾಗಿರುವುದನ್ನು ತನಿಖೆ ನಡೆಸಬೇಕೆಂದು ರವೀಂದ್ರ ಶ್ರೀಕಂಠಯ್ಯ ಎಐಸಿಸಿಗೆ ದೂರು ಸಲ್ಲಿಸಿದ್ದಾರೆ. ಡಬ್ಬಲ್ ಬಿ ಫಾರಂ ಹಿಂದೆ ಜಲಸಂಪನ್ಮೂಲ ಸಚಿವ ಎಂ.ಬಿ.ಪಾಟೀಲರ ಕೈವಾಡವಿದೆ. ಏಕೆಂದರೆ ಸಚ್ಚಿದಾನಂದ ಎಂ.ಬಿ.ಪಾಟೀಲರ ಆಪ್ತನಾಗಿದ್ದು ಅವರ ಮೂಲಕವೇ ಬಿ ಫಾರಂ ಬಂದಿದೆ ಎಂಬುದು ರವೀಂದ್ರ ಶ್ರೀಕಂಠಯ್ಯ ಬೆಂಬಲಿಗರ ಆರೋಪ. ಮಾವ-ಅಳಿಯ ಏನೇ ತಿಪ್ಪರಲಾಗ ಹಾಕಿದರೂ ರವೀಂದ್ರ ಶ್ರೀಕಂಠಯ್ಯ ತನ್ನ ಬೆಂಬಲಿಗರಿಗೆ ಟಿಕೆಟ್ ಕೊಡಿಸುವಲ್ಲಿ ಯಶಸ್ವಿಯಾಗಿದ್ದಾರೆ.

ಬಂಡಾಯದ ಬಿಸಿ

ಕೆಲವು ಕ್ಷೇತ್ರಗಳಲ್ಲಿ ಕಾಂಗ್ರೆಸ್ ಹಾಗೂ ಜೆಡಿಎಸ್ ಪಕ್ಷಗಳಿಗೆ ಬಂಡಾಯದ ಬಿಸಿ ತಟ್ಟಿದೆ. ಜಿಲ್ಲೆಯಲ್ಲಿ ಬಿಜೆಪಿ ಪಕ್ಷಕ್ಕೆ ನಯಾಪೈಸೆಯ ಬೆಲೆಯೂ ಇಲ್ಲದ್ದರಿಂದ ಬಿಜೆಪಿ ಅಭ್ಯರ್ಥಿಗಳು ಆಟಕ್ಕುಂಟು ಲೆಕ್ಕಕ್ಕಿಲ್ಲದಂತಿದ್ದಾರೆ. ಜಿಲ್ಲೆಯಲ್ಲಿ ಮೇಲ್ನೋಟಕ್ಕೆ ಕಾಂಗ್ರೆಸ್‌ಗಿಂತ ಜೆಡಿಎಸ್ ಪಕ್ಷವೇ ಪ್ರಬಲ. ಹಾಗಾಗಿ ಜೆಡಿಎಸ್ ಟಿಕೆಟ್ ಪಡೆಯಲು ಅಭ್ಯರ್ಥಿಗಳ ದಂಡೇ ನೆರೆದಿತ್ತು. ಬಸರಾಳು ಜಿ.ಪಂ. ಕೇತ್ರದಿಂದ ಚಲುವರಾಯಸ್ವಾಮಿ ಕಟ್ಟಾ ಬೆಂಬಲಿಗ ಮಂಡ್ಯ ತಾಲ್ಲೂಕು ಅಧ್ಯಕ್ಷ ಕಂಬದಹಳ್ಳಿ ಪುಟ್ಟಸ್ವಾಮಿ ಟಿಕೆಟ್ ಪಡೆಯುವಲ್ಲಿ ಯಶಸ್ವಿಯಾಗಿದ್ದಾನೆ. ಇದೇ ಕ್ಷೇತ್ರದಿಂದ ಮಾಜಿ ಶಾಸಕ ತಮ್ಮಣ್ಣ ಸಹೋದರ ಚಂದಗಾಲು ಶಿವಣ್ಣ ಪ್ರಬಲ ಆಕಾಂಕ್ಷಿಯಾಗಿದ್ದರು. ಅಲ್ಲದೆ ತಾ.ಪಂ. ಮಾಜಿ ಸದಸ್ಯ ತಿಮ್ಮೇಗೌಡ ಹಾಗೂ ಗ್ರಾಮ ಪಂಚಾಯತಿ ಸದಸ್ಯ ಮಹಾಲಿಂಗೇಗೌಡ ಕೂಡ ಟಿಕೆಟ್ ಕೇಳಿದ್ದರು. ಆದರೆ ಕಂಬದಹಳ್ಳಿ ಪುಟ್ಟಸ್ವಾಮಿ ಟಿಕೆಟ್ ಪಡೆದಿರುವುದರಿಂದ ಇನ್ನುಳಿದ ಮೂವರು ಜಾ.ದಳ ಬಂಡಾಯ ಅಭ್ಯರ್ಥಿಗಳಾಗಿ ಕಣಕ್ಕಿಳಿದಿದ್ದಾರೆ. ಚಂದಗಾಲು ಶಿವಣ್ಣನವರಿಗೆ ಟಿಕೆಟ್ ಸಿಗದಿದ್ದಕ್ಕೆ ಬೇಸತ್ತ ಅವರ ನಾಲ್ವರು ಬೆಂಬಲಿಗರು ಬಸರಾಳು ಜಿ.ಪಂ. ವ್ಯಾಪ್ತಿಯ 4 ತಾ.ಪಂ. ಕ್ಷೇತ್ರಗಳ ಜೆಡಿಎಸ್ ಅಭ್ಯರ್ಥಿಗಳು ತಮಗೆ ನೀಡಿದ ಬಿ ಫಾರಂ ನಿರಾಕರಿಸಿ ಪಕ್ಷೇತರವಾಗಿ ಸ್ಪರ್ಧಿಸುವ ಮೂಲಕ ಜೆಡಿಎಸ್ ವರಿಷ್ಠರಿಗೆ ಎಚ್ಚರಿಕೆ ನೀಡಿದ್ದಾರೆ.

ಮಳವಳ್ಳಿಯ ಹಲಗೂರು ಜಿ.ಪಂ. ಕ್ಷೇತ್ರದಲ್ಲಿ ಡಿ.ಜಯರಾಮು ಜೆಡಿಎಸ್ ಟಿಕೆಟ್ ಗಿಟ್ಟಿಸಿದ್ದು, ಲಿಯಾಕತ್ ಅಲಿ (ಪಿಳ್ಳು) ಬಂಡಾಯ ಸ್ಪರ್ಧಿಯಾಗಿದ್ದಾನೆ. ಇನ್ನು ದೊಡ್ಡಭೂವಳ್ಳಿ ಜಿ.ಪಂ. ಕ್ಷೇತ್ರದಲ್ಲಿ ಜಿ.ಪಂ. ಮಾಜಿ ಅಧ್ಯಕ್ಷೆ ಸುಧಾ ಚಂದ್ರಶೇಖರ್‌ಗೆ ಜೆಡಿಎಸ್ ಟಿಕೆಟ್ ನೀಡಿದೆ. ಲಿಂಗಾಯತ ಮತದಾರರು ಹೆಚ್ಚಿನ ಸಂಖ್ಯೆಯಲ್ಲಿರುವ ಈ ಕ್ಷೇತ್ರದಿಂದ ಮನ್‌ಮುಲ್ ನಿರ್ದೇಶಕ ವಿಶ್ವನಾಥ್ ತನ್ನ ಪತ್ನಿ ಅಶ್ವಿನಿಗೆ ಟಿಕೆಟ್ ನೀಡುವಂತೆ ಪಟ್ಟು ಹಿಡಿದಿದ್ದರು. ಆದರೆ ಸುಧಾ ಚಂದ್ರಶೇಖರ್‌ಗೆ ಟಿಕೆಟ್ ನೀಡಿರುವುದರಿಂದ ಅಶ್ವಿನಿ ವಿಶ್ವನಾಥ್ ಬಂಡಾಯ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದಾರೆ.

ನಾಗಮಂಗಲ ತಾಲ್ಲೂಕಿನ ಬಿಂಡಿಗನವಿಲೆ ಜಿ.ಪಂ. ಕ್ಷೇತ್ರದಲ್ಲಿ ಗಿರೀಗೌಡ (ದೊರೆಸ್ವಾಮಿ) ಕಾಂಗ್ರೆಸ್ ಟಿಕೆಟ್ ಖಚಿತ ಪಡಿಸಿಕೊಂಡೇ ಪ್ರಚಾರದಲ್ಲಿ ಧುಮುಕಿದ್ದರು. ಆದರೆ ರಾಜ್ಯ ಒಕ್ಕಲಿಗರ ಸಂಘದ ನಿರ್ದೇಶಕನಾದ ನಾರಾಯಣಮೂರ್ತಿ ಸಿಎಂ ಸಿದ್ದರಾಮಯ್ಯನವರ ಜೊತೆ ಚೆನ್ನಾಗಿದ್ದ ಕಾರಣವನ್ನೇ ಬಳಸಿಕೊಂಡು ಕಾಂಗ್ರೆಸ್ ಟಿಕೆಟ್ ಗಿಟ್ಟಿಸಿದ್ದಾನೆ. ಮಾಜಿ ಶಾಸಕ ಸುರೇಶ್‌ಗೌಡ ಗಿರಿಗೌಡನಿಗೆ ಟಿಕೆಟ್ ಎಂದು ಖಾತ್ರಿ ಮಾಡಿದ್ದರು. ಏಕೆಂದರೆ ಕಳೆದ ವಿಧಾನಸಭಾ ಚುನಾವಣೆಯಲ್ಲಿ ನಾರಾಯಣಮೂರ್ತಿ ಸುರೇಶ್‌ಗೌಡ ವಿರುದ್ಧ ನಿಂತು ಪ್ರಚಾರ ಮಾಡಿದ್ದ. ಈ ಹಿನ್ನೆಲೆಯಲ್ಲಿ ಗಿರೀಗೌಡನೇ ಕಾಂಗ್ರೆಸ್ ಅಭ್ಯರ್ಥಿ ಎಂದು ನಿರ್ಧಾರವಾಗಿತ್ತು. ಆದರೆ ಕೊನೆಗಳಿಗೆಯಲ್ಲಿ ನಾರಾಯಣ ಮೂರ್ತಿಯೇ ಕಾಂಗ್ರೆಸ್ ಟಿಕೆಟ್ ಗಿಟ್ಟಿಸಿದ್ದರಿಂದ ಗಿರೀಗೌಡ ಬಂಡಾಯ ಅಭ್ಯರ್ಥಿಯಾಗಿ ಕಣದಲ್ಲಿದ್ದಾರೆ.

ಟಿಕೆಟ್‌ಗಾಗಿ ಹರಸಾಹಸ

ಇನ್ನು ಕೆಲವು ಕ್ಷೇತ್ರಗಳಲ್ಲಿ ಟಿಕೆಟ್ ಪಡೆಯಲು ಜಿಲ್ಲೆಯ ಪ್ರಮುಖ ನಾಯಕರೇ ಸುಸ್ತು ಹೊಡೆದಿದ್ದಾರೆ. ಪಾಂಡವಪುರ ತಾಲ್ಲೂಕಿನ ಜಕ್ಕನಹಳ್ಳಿ ಜಿ.ಪಂ. ಕ್ಷೇತ್ರದ ಕಾಂಗ್ರೆಸ್ ಟಿಕೆಟ್ ಪಡೆಯಲು 2 ಬಾರಿ ಶಾಸಕನಾಗಿದ್ದ ಹಲಗೇಗೌಡರ ಪುತ್ರ ತ್ಯಾಗರಾಜು ಹರಸಾಹಸ ಪಟ್ಟಿದ್ದಾರೆ. ತ್ಯಾಗರಾಜು ಅಣ್ಣ ಮಂಜುನಾಥ್ ಜಿ.ಪಂ. ಸದಸ್ಯರಾಗಿದ್ದು, ಈ ಭಾಗದ ಪ್ರಮುಖ ಕಾಂಗ್ರೆಸ್ ಮುಖಂಡರಾಗಿದ್ದಾರೆ. ಆದರೂ ಜಕ್ಕನಹಳ್ಳಿ ಕ್ಷೇತ್ರದ ಟಿಕೆಟ್ ಪಡೆಯಲು ಸಾಕಷ್ಟು ಬೆವರು ಹರಿಸಬೇಕಾಯಿತು. ಕೊನೆಗೆ ಮಾಜಿ ಮುಖ್ಯಮಂತ್ರಿ ಎಸ್.ಎಂ.ಕ?ಷ್ಣ ಜಕ್ಕನಹಳ್ಳಿ ಕ್ಷೇತ್ರಕ್ಕೆ ತ್ಯಾಗರಾಜುಗೆ ಟಿಕೆಟ್ ನೀಡದಿದ್ದರೆ ಬಂಡಾಯ ಅಭ್ಯರ್ಥಿಯಾಗಿ ನಿಲ್ಲಿಸಬೇಕಾಗುತ್ತದೆಂದು ಜಿಲ್ಲಾ ಚುನಾವಣಾ ವೀಕ್ಷಕ ನೆ.ಲ.ನರೇಂದ್ರಬಾಬುಗೆ ಧಮಕಿ ಹಾಕಿದ ನಂತರ ತ್ಯಾಗರಾಜುಗೆ ಟಿಕೆಟ್ ನೀಡಲಾಗಿದೆ.

ಒಟ್ಟಾರೆ ಮಂಡ್ಯ ಜಿ.ಪಂ. ಮತ್ತು ತಾ.ಪಂ. ಚುನಾವಣೆ ಆರಂಭದಲ್ಲೇ ಬಂಡಾಯ, ಡಬ್ಬಲ್ ಬಿ ಫಾರಂ, ವಾಚಾಮಗೋಚರ ಬೈಗುಳದಿಂದ ಸಖತ್ ಸೌಂಡ್ ಮಾಡುತ್ತಿದೆ. ನಾಮಪತ್ರ ವಾಪಸ್ ಪಡೆಯಲು ಫೆ.11ರ ಸಂಜೆ 4 ಗಂಟೆಯವರೆಗೆ ಕಾಲಾವಕಾಶವಿದ್ದು ಯಾರು ರೆಬಲ್ ಆಗಿ ಬಂಡಾಯ ಅಭ್ಯರ್ಥಿಗಳಾಗಿ ಉಳಿಯುವರೋ ಎಂಬುದು ಕುತೂಹಲ ಮೂಡಿಸಿದೆ.

● ವರದಿಗಾರ



ಜಿ.ಪಂ. ಕಣದಲ್ಲಿ ಕೋಟ್ಯಾಧಿಪತಿಗಳು


ಜಿ.ಪಂ. ಚುನಾವಣೆಯಲ್ಲಿ ಕನಿಷ್ಠ 50 ಲಕ್ಷ ರೂ ಮತ್ತು ತಾ.ಪಂ. ಚುನಾವಣೆಗೆ ಕನಿಷ್ಠ 25 ಲಕ್ಷ ರೂ. ಖರ್ಚು ಮಾಡುವ ಅಭ್ಯರ್ಥಿಗಳ ಮುಖ ನೋಡಿಯೇ ಕಾಂಗ್ರೆಸ್ ಮತ್ತು ಜೆಡಿಎಸ್ ಪಕ್ಷಗಳು ಮಣೆ ಹಾಕಿವೆ. ಪಕ್ಷದಲ್ಲಿರುವ ದಕ್ಷ ಮತ್ತು ಪ್ರಾಮಾಣಿಕ ಕಾರ್ಯಕರ್ತ ಎಂಬುದನ್ನು ಬದಿಗಿಟ್ಟು ಹಣವಿರುವ ಕುಳಗಳಿಗೆ ಟಿಕೆಟ್ ನೀಡಲಾಗಿದೆ. ಕ್ಷೇತ್ರದ ಮುಖವನ್ನೇ ನೋಡದೆ ವರ್ಷಗಟ್ಟಲೇ ಬೆಂಗಳೂರಿನಲ್ಲಿದ್ದು ಸಖತ್ ಹಣ ಮಾಡಿದ ಗಿರಾಕಿಗಳನ್ನು ಕರೆತಂದು ಅಭ್ಯರ್ಥಿಗಳನ್ನಾಗಿ ಮಾಡಲಾಗಿದೆ. ಜಿ.ಪಂ. ಕಣದಲ್ಲಿರುವ ಅಭ್ಯರ್ಥಿಗಳ ಆಸ್ತಿ-ಪಾಸ್ತಿ ನೋಡುತ್ತಿದ್ದರೆ ಎದೆ ಧಸಕ್ ಎನ್ನುತ್ತದೆ. ಮದ್ದೂರು ತಾಲ್ಲೂಕಿನ ಚಾಮನಹಳ್ಳಿ ಜಿ.ಪಂ. ಕ್ಷೇತ್ರದ ಜೆಡಿಎಸ್ ಅಭ್ಯರ್ಥಿ ನಾಗರತ್ನ ಸ್ವಾಮಿ 71.7 ಕೋಟಿ ಆಸ್ತಿ ಹೊಂದಿದ್ದಾರೆ. ಭಾರತೀನಗರ ಜಿ.ಪಂ. ಕ್ಷೇತ್ರದಿಂದ ಸ್ಪರ್ಧಿಸಿರುವ ಶಾಸಕ ಡಿ.ಸಿ.ತಮ್ಮಣ್ಣರ ಪುತ್ರ ಸಂತೋಷ್ 40.87 ಕೋಟಿ ಆಸ್ತಿಯ ಒಡೆಯನಾಗಿದ್ದಾನೆ. ಕೆಸ್ತೂರು ಜಿ.ಪಂ. ಕ್ಷೇತ್ರದಿಂದ ಕಾಂಗ್ರೆಸ್ ಅಭ್ಯರ್ಥಿಯಾಗಿರುವ ಪಪ್ಪುಲ್ಲಾ ಮಹೇಶ್ ಎಸ್.ಎಂ. ಕೃಷ್ಣರ ಪರಮಾಪ್ತ ಮನ್‌ಮುಲ್ ನಿರ್ದೇಶಕ ಕದಲೂರು ರಾಮಕೃಷ್ಣನ ಸೊಸೆಯಾಗಿದ್ದು 3 ಕೋಟಿಗೂ ಹೆಚ್ಚು ಆಸ್ತಿ ಹೊಂದಿದ್ದಾರೆ. ಮಂಡ್ಯ ತಾಲ್ಲೂಕಿನ ಬೂದನೂರು ಜಿ.ಪಂ. ಕ್ಷೇತ್ರದಿಂದ ಮಾಜಿ ಶಾಸಕ ಎಂ.ಶ್ರೀನಿವಾಸ್ ಅಳಿಯ ಜೆಡಿಎಸ್ ಅಭ್ಯರ್ಥಿಯಾಗಿದ್ದಾನೆ. ಇವರು 10 ಕೋಟಿಗೂ ಹೆಚ್ಚು ಆಸ್ತಿ ಹೊಂದಿದ್ದಾರೆ.

ಕೊತ್ತತ್ತಿ ಕ್ಷೇತ್ರದ ಅಭ್ಯರ್ಥಿ ಕಂಟ್ರಾಕ್ಟರ್ ರಾಮಲಿಂಗಯ್ಯ 15 ಕೋಟಿಗೂ ಹೆಚ್ಚು ತೂಗುತ್ತಾನೆ. ಇದೇ ಕ್ಷೇತ್ರದ ಜೆಡಿಎಸ್ ಅಭ್ಯರ್ಥಿ ವೈ.ಕೆ.ಕುಮಾರ್ 5 ಕೋಟಿಗೂ ಹೆಚ್ಚು ಆಸ್ತಿ ಹೊಂದಿದ್ದಾನೆ. ಪಾಂಡವಪುರ ತಾಲ್ಲೂಕಿನ ಚಿನಕುರುಳಿ ಕ್ಷೇತ್ರದ ಜೆಡಿಎಸ್ ಅಭ್ಯರ್ಥಿ ಸಂಸದ ಸಿ.ಎಸ್.ಪುಟ್ಟರಾಜು ಅಣ್ಣನ ಮಗ ಅಶೋಕ್ 5.15 ಕೋಟಿ ಆಸ್ತಿಯ ಒಡೆಯನಾಗಿದ್ದಾನೆ. ಪ್ರತಿಸ್ಪರ್ಧಿ ಕಾಂಗ್ರೆಸ್‌ನ ಎಚ್. ಕೃಷ್ಣೇಗೌಡ 3.34 ಕೋಟಿ ಆಸ್ತಿ ಹೊಂದಿದ್ದಾನೆ.


ಜಕ್ಕನಹಳ್ಳಿ ಸಾಮಾನ್ಯ ಕ್ಷೇತ್ರದ ಅಭ್ಯರ್ಥಿ ಎಚ್.ತ್ಯಾಗರಾಜ 4.66 ಕೋಟಿ ಆಸ್ತಿ ಹೊಂದಿದ್ದಾನೆ. ಜೆಡಿಎಸ್‌ನ ಕಾಡೇನಹಳ್ಳಿ ರಾಮಚಂದ್ರ 1.18 ಕೋಟಿ ಆಸ್ತಿ ಒಡೆಯನಾಗಿದ್ದಾನೆ. ಚಿಕ್ಕಾಡೆ ಕ್ಷೇತ್ರದ ಜೆಡಿಎಸ್ ಅಭ್ಯರ್ಥಿ ಚಿಕ್ಕಾಡೆ ತಿಮ್ಮೇಗೌಡ 2.24 ಕೋಟಿ ಆಸ್ತಿ ಹೊಂದಿದ್ದಾನೆ. ಲಕ್ಷ್ಮೀಸಾಗರ ಕ್ಷೇತ್ರದ ಜೆಡಿಎಸ್ ಅಭ್ಯರ್ಥಿ ಶಕುಂತಲಾ 1.45 ಕೋಟಿ ಆಸ್ತಿ ಹೊಂದಿದ್ದಾರೆ.

ಇವರೆಲ್ಲಾ ತೋರಿಸಿರುವ ಅಧಿಕೃತ ಆಸ್ತಿಯೇ ಹತ್ತಾರು ಕೋಟಿಯಾದರೆ, ಇನ್ನು ಅನಧಿಕೃತವಾಗಿ ಎಷ್ಟು ಆಸ್ತಿ ಹೊಂದಿರಬಹುದೋ ಊಹಿಸಿ. ಮೇಲ್ಕಂಡ ಎಲ್ಲಾ ಅಭ್ಯರ್ಥಿಗಳು ಬೆಂಗಳೂರು, ಮೈಸೂರು, ಮಂಡ್ಯ ಮೊದಲಾದ ಕಡೆ ಮನೆ, ನಿವೇಶನ, ಕಟ್ಟಡಗಳ ಮಾಲೀಕರಾಗಿದ್ದಾರೆ. ಐಷರಾಮಿ ಕಾರು, ಪೆಟ್ರೋಲ್ ಬಂಕ್, ಕೃಷಿ ಭೂಮಿ, ವಿಮೆ ಸೇರಿದಂತೆ ವಿವಿಧ ಕಂಪನಿಗಳಲ್ಲಿ ಹಣ ಹೂಡಿಕೆ ಠೇವಣಿ ಸೇರಿಸಿದರೆ ಇನ್ನು ಹಲವು ಕೋಟಿಗಳಿಗೆ ತೂಗುತ್ತಾರೆ. ಪ್ರಜೆಗಳೇ ಪ್ರಭುಗಳು ಎಂಬ ಪ್ರಜಾಪ್ರಭುತ್ವ ವ್ಯವಸ್ಥೆ ಇರುವ ನಮ್ಮ ದೇಶದಲ್ಲಿ ದುಡ್ಡಿದ್ದವರಿಗೆ ಪಕ್ಷಗಳು ಮಣೆ ಹಾಕುತ್ತಿರುವುದು ಪ್ರಜಾಪ್ರಭುತ್ವದ ವ್ಯಂಗ್ಯವೇ ಸರಿ.

ಚಿತ್ರದುರ್ಗ:ಕೈಗೆ 'ಆಂಜನೇಯ' ಬಲ; ಕಮಲಕ್ಕೆ 'ಯಡ್ಡಿ' ಭಯ


ಆಂಜನೇಯ

ತನಗೆ ರಾಜ್ಯಾಧ್ಯಕ್ಷ ಸ್ಥಾನ ನೀಡುವ ತರಾತುರಿ ಪಕ್ಷದೊಳಗೆ ಕಾಣದಿರುವುದನ್ನು ಕಂಡು ವ್ಯಗ್ರಗೊಂಡಿರುವ ಯಡ್ಡಿ ಚುನಾವಣಾ ಪ್ರಚಾರದಿಂದ ಅಂತರವನ್ನು ಕಾಯ್ದುಕೊಂಡಿದ್ದಾನೆ. ಯಡ್ಡಿಯ ಚುನಾವಣಾ ಪ್ರಚಾರಗಳು 'ಹೋದಾ ಪುಟ್ಟಾ, ಬಂದಾ ಪುಟ್ಟಾ' ಎನ್ನುವಂತಿರುತ್ತವೆಯೇ ಹೊರತು ಅವುಗಳಲ್ಲಿ ಯಡ್ಡಿಯ ಆಕ್ರಮಣಕಾರಿ ಪ್ರವೃತ್ತಿ ಕಾಣಿಸುತ್ತಲೇ ಇಲ್ಲ. ಇದು ದುರ್ಗದ ಮೇಲೂ ಪರಿಣಾಮ ಬೀರುತ್ತಿದೆ. ಮೊನ್ನೆ ಜಿಲ್ಲೆಯ ಪ್ರಚಾರಕ್ಕೆಂದು ಬಂದಿದ್ದ ಯಡ್ಡಿ ಗುಡ್ಡದರಂಗವನಹಳ್ಳಿ ಎಂಬ ಮೂಲೆಯೊಂದರಲ್ಲಿ ಬೆರಳೆಣಿಕೆ ಕಾರ್ಯಕರ್ತರ ಮುಂದೆ ಭಾಷಣ ಬಿಗಿದು ಮಾಯವಾಗಿದ್ದ.


ತಿಪ್ಪಾ ರೆಡ್ಡಿ

ಅತ್ತ ಏಳಿಗೆಯನ್ನೂ ಕಾಣದ, ಇತ್ತ ಹೈದ್ರಾಬಾದ್-ಕರ್ನಾಟಕ ಜಿಲ್ಲೆಗಳಷ್ಟು ದುಸ್ಥಿತಿಗೂ ತಲುಪದ, ಒಂದರ್ಥದಲ್ಲಿ ಶಾಪಗ್ರಸ್ತ ನಾಡಿನಂತಿರುವ ಚಿತ್ರದುರ್ಗದಲ್ಲಿ ರಾಜಕೀಯ ರಂಗಿಗೇನೂ ಕಮ್ಮಿ ಇಲ್ಲ. ಮೊನ್ನೆಯಷ್ಟೇ ವಿಧಾನಪರಿಷತ್ ಚುನಾವಣೆಯಿಂದ ಕಳೆಗಟ್ಟಿದ್ದ ದುರ್ಗದ ರಾಜಕಾರಣದಲ್ಲಿ ಇದೀಗ ಜಿಲ್ಲಾ ಪಂಚಾಯತಿ ಮತ್ತು ತಾಲ್ಲೂಕು ಪಂಚಾಯತಿ ಚುನಾವಣೆಗಳ ಕದಲಿಕೆಗಳು ಶುರುವಾಗಿವೆ. ಕಾಂಗ್ರೆಸ್, ಬಿಜೆಪಿ, ಜೆಡಿಎಸ್ ಮೂರೂ ಪಕ್ಷಗಳ ರಂಗತಾಲೀಮು ಜೋರಾಗಿದೆ. ಆದರೆ ಬಿಜೆಪಿಗೆ ಒಳಗಿರುವ ಸೈತಾನಿಗಳದ್ದೇ ಸಂಕಟವಾದರೆ, ಜೆಡಿಎಸ್ ಪಾಲಿಗೆ ನಾಯಕತ್ವದ ಸಮಸ್ಯೆಯೇ ದೊಡ್ಡದಾಗಿ ಕಾಡುತ್ತಿದೆ. ನಿಜಹೇಳಬೇಕೆಂದರೆ ಬಿಜೆಪಿಗೂ ಜಿಲ್ಲೆಯಲ್ಲಿ ನಾಯಕತ್ವದ ಸಮಸ್ಯೆ ಇದೆ. ಕಮಲ ಪಾರ್ಟಿಯ ಮಾಜಿ ಸಂಸದ ಜನಾರ್ದನಸ್ವಾಮಿ ಅಧಿಕಾರದಲ್ಲಿದ್ದಾಗಲೇ ದುರ್ಗಕ್ಕಿಂತ ಹೆಚ್ಚಾಗಿ ಫಾರಿನ್ ಟೂರಿನಲ್ಲಿರುತ್ತಿದ್ದ. ಅಧಿಕಾರ ಕಳೆದುಕೊಂಡ ಮೇಲೆ ಅವನ ಮುಸುಡಿ ಕಂಡವರಿಲ್ಲ. ಇನ್ನು ತಿಪ್ಪಾರೆಡ್ಡಿಯಂತಹ ಸವಕಲು ರಾಜಕಾರಣಿಯನ್ನು ಬಿಟ್ಟರೆ ಯಾರ ಮುಖ ನೋಡಿಕೊಂಡು ಬಿಜೆಪಿಗೆ ಮತ ಹಾಕಬೇಕೆನ್ನುವ ಚಿಂತೆ ಖುದ್ದು ಕಮಲದ ಕಾರ್ಯಕರ್ತರನ್ನೇ ಕಾಡುತ್ತಿದೆ. ಈ ತಿಪ್ಪಾರೆಡ್ಡಿಯೋ ಪರಮ ಒಳಸಂಚುಗಾರ. ಮೊನ್ನೆ ನಡೆದ ಎಂಎಲ್‌ಸಿ ಎಲೆಕ್ಷನ್‌ನಲ್ಲಿ ಬಿಜೆಪಿ ಕ್ಯಾಂಡಿಡೇಟ್ ನವೀನ ಸೋಲಲು ಇದೇ ತಿಪ್ಪಾರೆಡ್ಡಿಯ ಮಸಲತ್ತು ಕಾರಣ ಅನ್ನೋ ಮಾತುಗಳು ಕೇಳಿಬರುತ್ತಿವೆ. ಹಾಗಾಗಿ ಜನರ ನಂಬಿಕೆ ಇರಲಿ, ಪಾರ್ಟಿ ಕಾರ್ಯಕರ್ತರ ನಂಬಿಕೆಯನ್ನೇ ಕಳೆದುಕೊಂಡಿರುವ ತಿಪ್ಪಾರೆಡ್ಡಿ ಸ್ವಂತ ಕ್ಷೇತ್ರ ಚಿತ್ರದುರ್ಗದಲ್ಲಿ ಹೊರಗೆ ಮುಖವಿಟ್ಟು ತಿರುಗಾಡಲಾರದೆ ತಿಂಗಳು ಸರಿಯುತ್ತಿದೆ. ಅಂತದ್ದರಲ್ಲಿ ಇಡೀ ಜಿಲ್ಲೆಯ ನಾಯಕತ್ವವನ್ನು ವಹಿಸಿಕೊಂಡು ಆತ ಬಿಜೆಪಿಗೆ ಮತ ಹಾಕಿಸುತ್ತಾನೆ ಎನ್ನುವ ನಂಬಿಕೆಯೇ ಸುಳ್ಳು!


ಹಾಗೆ ನೋಡಿದರೆ, ಕಳೆದ ಬಾರಿ ನಡೆದ ಜಿಲ್ಲಾ ಪಂಚಾಯತಿ ಚುನಾವಣೆಯಲ್ಲಿ ಒಟ್ಟು 34 ಸ್ಥಾನಗಳಲ್ಲಿ 17 ರಲ್ಲಿ ಬಿಜೆಪಿ 12 ರಲ್ಲಿ ಕೈ ಪಾರ್ಟಿ, 6 ರಲ್ಲಿ ಜೆ.ಡಿ.ಎಸ್ ಅಭ್ಯರ್ಥಿಗಳು ಗೆದ್ದಿದ್ದರು. ಒಂದುಕಡೆ ಯಡ್ಡಿಯ ಸಿಎಂ ಪ್ರಭಾವಳಿ, ಮತ್ತೊಂದೆಡೆ 'ಮಠ'ಗಳ ಫರ್ಮಾನು ಹಾವಳಿಯಿಂದಾಗಿ ಬಿಜೆಪಿ ಹೆಚ್ಚು ಸ್ಥಾನದಲ್ಲಿ ಜಯಗಳಿಸಿತ್ತು, ಆದರೂ ಕಾಂಗ್ರೆಸ್ ಮತ್ತು ಜೆಡಿಎಸ್ ಮೈತ್ರಿಯಿಂದಾಗಿ ಬಿಜೆಪಿ ಜಿಲ್ಲಾ ಪಂಚಾಯತಿಯ ಗದ್ದುಗೆ ಏರಲು ಸಾಧ್ಯವಾಗಿರಲಿಲ್ಲ. ದೇವೇಗೌಡ-ಕುಮಾರಸ್ವಾಮಿಯ 'ಮ್ಯಾಜಿಕ್'ಗಳು ತಟ್ಟದ ಪರಿಣಾಮ ಕೈ-ತೊರೆಯ ದೋಸ್ತಿ ನಾಲ್ಕು ವರ್ಷಗಳ ಕಾಲ ಯಾವ ತಕರಾರೂ ಇಲ್ಲದೆ ಸಾಂಗವಾಗಿ ಸಾಗಿ ಬಂದದ್ದು ವಿಶೇಷವೇ ಸರಿ. ಆದರೆ ಕೊನೆಯ 20 ತಿಂಗಳ ಅವಧಿಯಲ್ಲಿ ಕೈ ಪಾರ್ಟಿಯವರೇ ಮಾಡಿಕೊಂಡ ಯಡವಟ್ಟಿನಿಂದಾಗಿ ಬಿಜೆಪಿ ಅಧಿಕಾರದ ರುಚಿ ನೋಡುವಂತಾಗಿತ್ತು.

ಕೊನೆಯ ಅವಧಿಗೆ ತಾನೇ ಅಧ್ಯಕ್ಷನಾಗಬೇಕೆಂದು ಕಾಂಗ್ರೆಸ್ಸಿನ ಗಿರಿ ಜಾನಕಲ್ ಆಸೆಪಟ್ಟಿದ್ದ. ಇವನ ಅಪ್ಪ ಭೀಮಸಮುದ್ರದ ಮಂಜುನಾಥ ಒಂಥರಾ ಸಾಡೇಸಾತ್ ರಾಜಕಾರಣಿ. ಕಳೆದ ವಿಧಾನಸಭಾ ಚುನಾವಣೆಯಲ್ಲಿ ಕಾಡಿಬೇಡಿ ಕೈಪಾರ್ಟಿಯಿಂದ ಚಿತ್ರದುರ್ಗ ಕ್ಷೇತ್ರಕ್ಕೆ ಟಿಕೆಟು ತಂದನಾದರೂ ತಿಪ್ಪಾರೆಡ್ಡಿ ಎದುರು ಹೀನಾಯವಾಗಿ ಸೋತು ಮನೆ ಸೇರಿಕೊಂಡಿದ್ದ. ಅಂತಹ ಹೇಗಾದರು ಮಾಡಿ ತನ್ನ ಮಗನನ್ನು ಜೆಡ್‌ಪಿ ಅಧ್ಯಕ್ಷ ಗಾದಿಗೆ ಕೂರಿಸಲೇಬೇಕೆಂಬ ಪಣ ತೊಟ್ಟಿದ್ದ. ಮನೆಯ ಖಜಾನೆ ತುಂಬಿಕೊಂಡಿದ್ದ ಅಡಿಕೆ ಪಟಿಂಪಾಟನ ಕೊಪ್ಪರಿಕೆ ಹಣ ಅಪ್ಪ-ಮಗನಲ್ಲಿ ಅಂತಹದ್ದೊಂದು ಉತ್ಸಾಹ ತುಂಬಿತ್ತು. ಆದರೆ ಅವರ ಬೇಡಿಕೆಗೆ ಮಣೆ ಹಾಕದ ಕಾಂಗ್ರೆಸ್ ಪಾರ್ಟಿ ಮತ್ತೊಬ್ಬರನ್ನು ಜೆಡ್‌ಪಿ ಅಧ್ಯಕ್ಷರನ್ನಾಗಿಸಲು ಸಿದ್ಧತೆ ನಡೆಸಿತ್ತು. ಅದೂ ಮೊದಲ ಹತ್ತು ತಿಂಗಳ ಅವಧಿಯ ನಂತರ ನಿಮಗೇ ಅಧ್ಯಕ್ಷಗಿರಿ ಬಿಟ್ಟುಕೊಡುತ್ತೇವೆ ಎನ್ನುವ ಆಶ್ವಾಸನೆ ಮೇರೆಗೆ. ಆದರೆ ಅದಕ್ಕೊಪ್ಪದ ಅಪ್ಪ-ಮಗ ಒಳಸಂಚು ರೂಪಿಸಿ ಕೈ ಪಾರ್ಟಿಯ ಐವರು ಸದಸ್ಯರನ್ನು ಹೈಜಾಕ್ ಮಾಡಿಕೊಂಡು ಬಿಜೆಪಿ ಬಾಗಿಲಿಗೆ ಬಂದುನಿಂತಿದ್ದರು. ಎಲ್ಲರಿಗಿಂತ ಹೆಚ್ಚು ಸ್ಥಾನಗಳನ್ನು ಗೆದ್ದರೂ ಅಧಿಕಾರವಿಲ್ಲದೆ ಬರಗೆಟ್ಟು ಹೋಗಿದ್ದ ಬಿಜೆಪಿ ತಾನು ಹೇಳಿಕೊಂಡು ಬಂದಿದ್ದ ಸಿದ್ಧಾಂತವನ್ನೆಲ್ಲ 'ಪಕ್ಕಕ್ಕಿಟ್ಟು' ತನ್ನ 17 ಸದಸ್ಯ ಬಲವನ್ನು ಕೇವಲ ಆರು ಸಂಖ್ಯಾ ಬಲದ ಗಿರಿ ಜಾನಕಲ್ ಬಳಿ ಅಡವಿಟ್ಟು ಅವನನ್ನೇ ಅಧ್ಯಕ್ಷನನ್ನಾಗಿಸಿತ್ತು (ಹಿಂದೆ 79 ಸ್ಥಾನಗಳಿಸಿದ್ದ ಬಿಜೆಪಿ, 58 ಸ್ಥಾನ ಬಲದ ಜೆಡಿಎಸ್‌ನ ಕುಮ್ಮಿಯನ್ನು ಸಿಎಂ ಮಾಡಿದ್ದು ಸಹ ಇಂತದ್ದೇ ಅಧಿಕಾರ ದಾಹದ ಸ್ಯಾಂಪಲ್ ತಾನೆ!).


ಆದರೆ ಈ ಬಾರಿ ಜಿಲ್ಲೆಯಲ್ಲಿ ಕಾಂಗ್ರೆಸ್ ಮತ್ತಷ್ಟೂ ಪ್ರಬಲವಾಗಿದೆ. ಒಟ್ಟು ಏಳು ವಿಧಾನಸಭಾ ಕ್ಷೇತ್ರಗಳ ಪೈಕಿ ಐದರಲ್ಲಿ ಕಾಂಗ್ರೆಸ್ ಶಾಸಕರೇ ಅಧಿಕಾರದಲ್ಲಿದ್ದರೆ, ಜಿಲ್ಲೆಯ ಸಂಸದ ಸ್ಥಾನವೂ ಕಾಂಗ್ರೆಸ್ ಕಬ್ಜಾದಲ್ಲಿದೆ. ಎಚ್.ಆಂಜನೇಯರಿಗೆ ಜಿಲ್ಲಾ ಉಸ್ತುವಾರಿ ಮತ್ತು ಸಮಾಜ ಕಲ್ಯಾಣ ಸಚಿವಗಿರಿಗಳು ಸಿಕ್ಕಿರೋದು ಕಾಂಗ್ರೆಸ್‌ಗೆ ಮತ್ತಷ್ಟು ಲಾಭ ತಂದಿದೆ. ಜೊತೆಗೆ ಪಕ್ಷೇತರನಾಗಿ ಜಿಲ್ಲಾ ಸ್ಥಳೀಯ ಸಂಸ್ಥೆಗಳ ಜನಪ್ರತಿನಿಧಿ ಕೋಟಾದ ಎಂಎಲ್‌ಸಿಯಾಗಿದ್ದ ರಘು ಆಚಾರ್ ಈ ಸಲಿ ಕಾಂಗ್ರೆಸ್ ಪಾರ್ಟಿಯನ್ನು ಸೇರಿರೋದು ಪಕ್ಷಕ್ಕೆ ವರ್ಕ್‌ಔಟ್ ಆಗುವುದರಲ್ಲಿ ಸಂಶಯವೇ ಇಲ್ಲ. ಇನ್ನು ಕಳೆದ ವರ್ಷವಷ್ಟೇ ನಡೆದಿದ್ದ ಗ್ರಾಮ ಪಂಚಾಯತಿ ಎಲೆಕ್ಷನ್‌ನಲ್ಲಿ ಜಿಲ್ಲೆಯ ಬಹುಪಾಲು ಸ್ಥಾನಗಳು ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿಗಳ ಪಾಲಾಗಿವೆ. ಹಾಗಾಗಿಯೇ ಮೊನ್ನೆ ನಡೆದ ಎಂಎಲ್‌ಸಿ ಎಲೆಕ್ಷನ್‌ನಲ್ಲಿ ಕಾಂಗ್ರೆಸ್‌ನ ರಘು ಆಚಾರ್ ಅಷ್ಟು ನಿರಾಯಾಸವಾಗಿ ಗೆಲ್ಲಲು ಸಾಧ್ಯವಾದದ್ದು.

ಮೊದಲು ಜಿಲ್ಲಾ ಪಂಚಾಯತ್‌ಗೆ 34 ಸ್ಥಾನಗಳಿದ್ದವು. ಈ ಬಾರಿ ಮರುವಿಂಗಡಣೆಯಲ್ಲಿ ಮೂರು ಹೆಚ್ಚುವರಿ ಕ್ಷೇತ್ರಗಳು ಸೇರ್ಪಡೆಯಾಗಿರುವುದರಿಂದ ಒಟ್ಟು 37 ಸ್ಥಾನಗಳಿಗೆ ಚುನಾವಣೆ ನಡೆಯುತ್ತಿದೆ. ಗೊಂದಲ ಅಥವಾ ಬಂಡಾಯಕ್ಕೆ ಆಸ್ಪದವಿಲ್ಲದಂತೆ ಎಲ್ಲಾ 37 ಕ್ಷೇತ್ರಕ್ಕೂ ಅಭ್ಯರ್ಥಿಗಳನ್ನು ಅಖೈರು ಮಾಡಿರುವ ಕಾಂಗ್ರೆಸ್ ಈಗಾಗಲೇ ಪ್ರಚಾರ ಆರಂಭಿಸಿದೆ. ಆದರೆ ಬಿಜೆಪಿಯಲ್ಲಿ 'ಪ್ರಕ್ರಿಯೆ'ಗಳು ನಡೆಯುತ್ತಿವೆಯಾದರು, ಗೆಲ್ಲಲುಬೇಕಾದ 'ಉತ್ಸಾಹ'ವೇ ಯಾರೊಬ್ಬರ ಮುಖದಲ್ಲೂ ಕಾಣಿಸುತ್ತಿಲ್ಲ. ಕಳೆದ ಬಾರಿ 17 ಸ್ಥಾನಗಳಲ್ಲಿ ಜಯಗಳಿಸಿದ್ದ ಬಿಜೆಪಿ ಈ ಸಲ ಕನಿಷ್ಠ 7ರಲ್ಲಿ ಗೆಲ್ಲುವುದಕ್ಕೂ ಹೆಣಗಾಡಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ. ಹೊಳಲ್ಕೆರೆಯಲ್ಲಿ ಯಡ್ಡಿ ಹಿಂಬಾಲಕ ಕಮ್ ಮಾಜಿ. ಶಾಸಕ ಚಂದ್ರಪ್ಪ ಅಭ್ಯರ್ಥಿಗಳ ಪರವಾಗಿ ಪೂರ್ಣವಾಗಿ ತೊಡಗಿಸಿಕೊಳ್ಳುತ್ತಿಲ್ಲ. ಇದಕ್ಕೆ ಕಾರಣ 'ಯಡ್ಡಿ ಫ್ಯಾಕ್ಟರ್' ಅನ್ನೋದನ್ನು ಬಿಡಿಸಿಹೇಳಬೇಕಿಲ್ಲ. ತನಗೆ ರಾಜ್ಯಾಧ್ಯಕ್ಷ ಸ್ಥಾನ ನೀಡುವ ತರಾತುರಿ ಪಕ್ಷದೊಳಗೆ ಕಾಣದಿರುವುದನ್ನು ಕಂಡು ವ್ಯಗ್ರಗೊಂಡಿರುವ ಯಡ್ಡಿ ಚುನಾವಣಾ ಪ್ರಚಾರದಿಂದ ಅಂತರವನ್ನು ಕಾಯ್ದುಕೊಂಡಿದ್ದಾನೆ. ಯಡ್ಡಿಯ ಚುನಾವಣಾ ಪ್ರಚಾರಗಳು 'ಹೋದಾ ಪುಟ್ಟಾ, ಬಂದಾ ಪುಟ್ಟಾ' ಎನ್ನುವಂತಿರುತ್ತವೆಯೇ ಹೊರತು ಅವುಗಳಲ್ಲಿ ಯಡ್ಡಿಯ ಆಕ್ರಮಣಕಾರಿ ಪ್ರವೃತ್ತಿ ಕಾಣಿಸುತ್ತಲೇ ಇಲ್ಲ. ಇದು ದುರ್ಗದ ಮೇಲೂ ಪರಿಣಾಮ ಬೀರುತ್ತಿದೆ. ಮೊನ್ನೆ ಜಿಲ್ಲೆಯ ಪ್ರಚಾರಕ್ಕೆಂದು ಬಂದಿದ್ದ ಯಡ್ಡಿ ಗುಡ್ಡದರಂಗವನಹಳ್ಳಿ ಎಂಬ ಸಣ್ಣ ಮೂಲೆಯೊಂದರಲ್ಲಿ ಬೆರಳೆಣಿಕೆ ಕಾರ್ಯಕರ್ತರ ಮುಂದೆ ಭಾಷಣ ಬಿಗಿದು ಮಾಯವಾಗಿದ್ದ.

ಇದ್ದುದರಲ್ಲಿ ಮೊಳಕಾಲ್ಮೂರು ಭಾಗದಲ್ಲಿ ಬಿಜೆಪಿ ಕೊಂಚ ಸದ್ದು ಮಾಡುತ್ತಿದೆ. ಅದಕ್ಕೆ ಮುಖ್ಯ ಕಾರಣವಾಗಿರೋದು ಬಳ್ಳಾರಿ ಗಣಿಧೂಳುಕಳ್ಳರಿಗೆ ಸಾಥ್ ನೀಡಿ ಪರಪ್ಪನ ಅಗ್ರಹಾರದಲ್ಲಿ ಮುದ್ದೆ ಮುರಿದು ಬಂದಿರುವ ಅರಣ್ಯಾಧಿಕಾರಿ ಮುತ್ತಯ್ಯ! ಅಸಲಿಗೆ ಈ ಮುತ್ತಯ್ಯ ತನ್ನ ಸುತ್ತ ರಾಜಕೀಯ ಹುತ್ತ ಕಟ್ಟಿಕೊಳ್ಳುತ್ತಿರೋದೇ ತನ್ನ ಅಕ್ರಮಗಳ ಸಂರಕ್ಷಣೆಗಾಗಿ. ಯಾವುದೇ ಪಕ್ಷ ಅಧಿಕಾರಕ್ಕೆ ಬಂದರೂ ತನಗೆ ಎಫೆಕ್ಟ್ ಆಗಬಾರದೆನ್ನುವ ಕಾರಣಕ್ಕೆ ಅಳಿಯ ರಾಜೇಶನನ್ನು ಕಾಂಗ್ರೆಸ್‌ನಿಂದ ಜಗಳೂರಿನ ಶಾಸಕನನ್ನಾಗಿಸಿದ್ದರೆ, ಅಣ್ಣ ತಿಪ್ಪೇಸ್ವಾಮಿಯನ್ನು ಬಿಎಸ್‌ಆರ್ ಕಾಂಗ್ರೆಸ್ (ಈಗ ಬಿಜೆಪಿ) ನಿಂದ ಮೊಳಕಾಲ್ಮೂರಿನ ಶಾಸಕನನ್ನಾಗಿಸಿದ್ದಾನೆ. ತನ್ನ ಅಷ್ಟೂ ಅಕ್ರಮಗಳ ಮೂಲದಂತಿರುವ ಶ್ರೀರಾಮುಲುವಿನ ಪರಮ ಹಿಂಬಾಲಕನಾಗಿರುವ ಮುತ್ತಯ್ಯ ರಾಮುಲು ಜೊತೆಗೇ ಬಿಜೆಪಿಗೆ ವಲಸೆ ಬಂದಿದ್ದಾನೆ. ಇದೀಗ ಜಿಲ್ಲಾ ಪಂಚಾಯತ್ ಚುನಾವಣೆಯಲ್ಲೂ ಖದರು ತೋರಿಸಲು ರೆಡಿಯಾಗಿರುವ ಮುತ್ತಯ್ಯ ತನ್ನ ಹುಟ್ಟೂರಿನ ನೇರಲಗುಂಟೆ ಕ್ಷೇತ್ರದಿಂದ ಹೆಂಡತಿಯನ್ನೇ ಬಿ.ಜೆ.ಪಿ ಕ್ಯಾಂಡಿಡೇಟಾಗಿ ಕಣಕ್ಕಿಳಿಸಿದ್ದಾನೆ.


ಪ್ರಕಾಶ್‌ಮೂರ್ತಿ


ಸವಿತಾ ರಘು


ಕೃಷ್ಣಮೂರ್ತಿ


ಗುಡ್ಡದರಂಗವನಹಳ್ಳಿಯಲ್ಲಿ ಯಡ್ಡಿಯ ನೀರಸ ಪ್ರಚಾರ

ಜೊತೆಗೆ ತನ್ನ ತಮ್ಮ ಚಂದ್ರ ಎಂಬಾತನನ್ನು ಪ
'ತುಳುಕು' ಜೆಡ್‌ಪಿ ಕ್ಷೇತ್ರದಿಂದ ಕಣಕ್ಕಿಳಿಸಿದ
ನೇರಳಗುಂಟೆಯಲ್ಲಿ ಮುತ್ತಯ್ಯನ ರಾಜಕೀ
ತಂತ್ರಗಾರಿಕೆಗಳು ಕೊಂಚಮಟ್ಟಿಗೆ ಉಸಿರಾಡ ಬಹುದಾ
ತುಳುಕಿನಲ್ಲಿ ಅವನ ತಮ್ಮನ ಸೋಲು ಕಟ್ಟಿಟ್ಟ ಬ
ಯಾಕೆಂದರೆ ಬಿಜೆಪಿಯ ಚಂದ್ರನಿಗೆ ಸ್ಪರ್ಧೆ ಒಡ್ಡುತ್ತಿರೋ
ಕೈ ಪಾರ್ಟಿಯ ಓಬಳೇಶ್ ಎಂಬಾತ. ಜನಪರ ಧ್ವನಿಯ
ಕೆಲಸ ಮಾಡಿರುವ ಈ ಓಬಳೇಶ್ ತಳಮಟ
ರಾಜಕಾರಣವನ್ನು ಚೆನ್ನಾಗಿ ಕಂಡವನು. ಹಾಗಾಗಿ ಜನ
ಓಬಳೇಶ್ ಬಗ್ಗೆ ಒಲವಿದೆ.

ಇನ್ನು ಜೆಡಿಎಸ್ ಬಗ್ಗೆ ಹೇಳಬೇಕೆಂದರೆ, ಜಿಲ್ಲೆಯ
ನೆಲೆಯೇ ಇಲ್ಲದಷ್ಟು ನಿಕೃಷ್ಟ ಸ್ಥಿತಿಯಲ್ಲೇನೂ ಜೆಡಿ
ಇಲ್ಲ. ಆದರೆ, ಕಳೆದ ಬಾರಿ ಗೆದ್ದಷ್ಟು ಸ್ಥಾನಗಳಲ್ಲಿ ಜೆಡಿ
ಗೆಲ್ಲುವುದು ಕನಸಿನ ಮಾತೇ ಸರಿ. ಕಾಂಗ್ರೆಸ್ ಎ
ಪ್ರಬಲವಾಗುತ್ತಿದೆಯೋ ಅಷ್ಟೇ ಜೆಡಿಎಸ್ ಶಿಥಿಲತೆ ಕ
ಸಾಗುತ್ತಿದೆ. ಇಷ್ಟು ದಿನ ಕಡೇಪಕ್ಷ ಮುಸ್ಲಿಂ ಮತಗಳನ್ನಾದ
ಸೆಳೆಯುವ ತಾಕತ್ತು ಜೆಡಿಎಸ್‌ಗೆ ಇತ್ತು. ಆದರೆ ಈಗ
ಸಾಮರ್ಥ್ಯವೂ ಜೆಡಿಎಸ್‌ನಲ್ಲಿ ಉಳಿದಂತೆ ಕಾಣಿಸ

ಕಾಂಗ್ರೆಸ್ ಈ ಬಾರಿ ಚಿತ್ರದುರ್ಗ ಜೆಡ
ಅಧಿಕಾರ ಹಿಡಿದೇ ತೀರುವ ಉತ್ಸಾಹದಲ್ಲಿ
2009ರಲ್ಲಿ ಇದೇ ಜೆಡ್‌ಪಿ ಚುನಾವಣೆಯ
ಕ್ಯಾಂಡಿಡೇಟ್ ಕಣಕ್ಕಿಳಿಸುವಲ್ಲಿ ಎಸಗಿದ ತಪ್ಪನ್ನು ಅ
ಈ ಬಾರಿ ಪುನರಾವರ್ತಿಸಿಲ್ಲ. 37 ಕ್ಷೇತ್ರಗಳಿ
ಸಮರ್ಥರಿಗೇ ಟಿಕೆಟು ನೀಡಲಾಗಿದೆ. ಹಾಗೆ ನೋಡಿ
ಜಿಲ್ಲೆಯಲ್ಲಿ ಕೈಪಾರ್ಟಿಯ ಪ್ರಭಾವ ಇಂದು ನಿನ್ನೆಯ
ಚಿತ್ರದುರ್ಗವೆಂದರೆ ಕಾಂಗ್ರೆಸ್‌ನ ಭದ್ರಕೋಟೆಯಂ
ಕಾಲ ಈಗ ಮತ್ತೆ ಪುನರಾವರ್ತನೆಯಾಗುತ್ತಿದೆ. ಮ
ಆಂಜನೇಯ ಜಿಲ್ಲೆಯಲ್ಲಿ ಜನಪರವಾದ ಕೆ
ಮಾಡಿದ್ದಾರೆ. ಗ್ರಾಮೀಣ ಭಾಗದ ಪ್ರಗತಿಯ ಕೆ
ಅವರ ಕೈ ಹಿಡಿಯಲಿದೆ. ಸದ್ಯದ ಪರಿಸ್ಥಿತಿಯ
ಬಿ.ಜೆ.ಪಿ ಶಾಸಕ ತಿಪ್ಪಾರೆಡ್ಡಿಗೆ ಫೇವರ್ ಆ
ಭಾವಿಸಲಾಗಿರುವ ಮದೇಹಳ್ಳಿ - ಗುಡ್ಡದ ರಂಗೇನಹ
ಜಿ.ಆರ್. ಹಳ್ಳಿ ಜೆಡ್‌ಪಿ ಕ್ಷೇತ್ರಗಳು ಕೈಪಾರ್ಟಿಗೆ ಒಂದು
ಕಠಿಣವಾದರೂ ಇಲ್ಲಿ ಕೈ ಅಭ್ಯರ್ಥಿ ಬಾಬೂ ರ
ಸೌಭಾಗ್ಯ ಬಸವರಾಜನ್ ಅವರ ಗೆಲುವು ಬಿ.ಜೆ.ಪಿಗಳ
ಅದರಲ್ಲೂ ಶಾಸಕ ತಿಪ್ಪಾರೆಡ್ಡಿಗೆ ಆಘಾತ ನೀಡು
ಸೂಚನೆಗಳು ದಟ್ಟವಾಗಿ ಕಾಣಿಸುತ್ತಿವೆ. ಇನ್ನು ತಾಳ್ಯ ಜೆಡ
ಕ್ಷೇತ್ರದಲ್ಲಿ ಕೈಪಾರ್ಟಿಯ ಸವಿತಾ ರಘು ಕಣಕ್ಕಿಳಿದಿದ
ಎನ್ನುವ ಬದಲು ಮತದಾರನೇ ದುಂಬಾಲುಬಿದ್ದು ಅವ
ಅಖಾಡಕ್ಕಿಳಿಸಿದ್ದಾರೆಂಬುದೇ ಅಚ್ಚರಿಯ ಸಂಗತಿ. ಸವಿ
ಕಣಕ್ಕಿಳಿದ ಬೆನ್ನಲ್ಲೇ ಕ್ಷೇತ್ರದ ಬಿ.ಜೆ.ಪಿ ಲೀಡರುಗ
ಕೈಪಾರ್ಟಿಗೆ ವಲಸೆ ಬರತೊಡಗಿದ್ದಾರೆ. ಸವಿತಾರ ಗ
ರಘು ಅಂಥದೊಂದು ಸಭ್ಯತೆಯ ಗುಣದವ
ಜಾತಿಮತಗಳನ್ನು ಪುರಸ್ಕರಿಸದ ರಘು ಕ್ಷೇತ್ರದಲ್ಲಿ ಎ
ಜಾತಿ ಮತದಾರರಿಗೂ ಪ್ರೀತಿಪಾತ್ರನಾದವನು. ಹಾಗೆಯ
ಲಕ್ಷ್ಮೀಸಾಗರದ ಹೆಮ್ಮೆಹಟ್ಟಿ ಕೃಣ, ತಲುಕಿನ ಓಬಳೇ
ಮದೇಹಳ್ಳಿಯ ನರಸಿಂಹರಾಜು, ದೊಡ್ಡ ಸಿದ್ದವ್ವನ ಹಳ್ಳಿ
ಪ್ರಕಾಶಮೂರ್ತಿ ಹೀಗೆ 25 ಕ್ಷೇತ್ರಗಳಲ್ಲಿ ಕೈಪಾರ್ಟಿ ಗೆಲ
ಪೂರಕ ವಾತಾವರಣವಿದೆ.

ಹಾಗಂತ ಕಾಂಗ್ರೆಸ್ಸಿಗರು ಗೆದ್ದೇ ಬಿಟ್ಟೆವೆಂದು ಬೀಗ
ಹಾಗಿಲ್ಲ. ಯಾಕೆಂದರೆ ಚುನಾವಣಾ ಲೆಕ್ಕಾಚಾರ ಯಾ
ಗಳಿಗೆಯಲ್ಲಾದರೂ ತಲೆಕೆಳಗಾಗುವ ಖಯಾಲಿಯದ್ದು.
ಜಿಲ್ಲಾ ಮತ್ತು ತಾಲ್ಲೂಕ್ ಪಂಚಾಯತಿ ಚುನಾವಣೆಗ
ಪಾರ್ಟಿಗೆಷ್ಟು ಮುಖ್ಯವೋ, ಮಂತ್ರಿ ಆಂಜನೇಯನಿಗ
ಅಷ್ಟೇ ಸವಾಲಿನ ವಿಷಯವಾಗಿದೆ. ಸದ್ಯಕ್ಕಂತು ಕಾಂಗ್ರೆಸ್‌ನ
ಒಳರಾಜಕಾರಣದ ಘಾಟು, ಮಠ ರಾಜಕಾರಣದ ಗೀಟುಗ
ಕಾಣಿಸುತ್ತಿಲ್ಲ. ಇದೇ ಪರಿಸ್ಥಿತಿಯನ್ನು ಕಾಯ್ದುಕೊಳ
ಜರೂರು ಕಾಂಗ್ರೆಸ್ ನಾಯಕರ ಮುಂದಿದೆ.

■ ಟಿ.ಎನ್.ಷಣ್ಮು

ಶಿವಮೊಗ್ಗ: ನಾವೆಲ್ಲರೂ ಒಂದೇ!



ಹಾನುಘಟಗಳ ಜಿಲ್ಲೆಯಾದ ಶಿವಮೊಗ್ಗದಲ್ಲಿ ಬಿಜೆಪಿ ಕಾಂಗ್ರೆಸ್ ಸಮತೂಕದಲ್ಲಿ ಕಂಡರೆ ಜೆಡಿಎಸ್ ೨ ಸ್ಥಾನ ಸಿಕ್ಕರೂ ಸಾಕು ಹೇಗೊ ಕಾಲ ಹಾಕ ಬ ಲೆಕ್ಕಾಚಾರದಲ್ಲಿದೆ. ಆದರೆ ಎಲ್ಲ ಪಾರ್ಟಿಯ ಂದೇ ತರ ಮಾತನಾಡುತ್ತಿದ್ದಾರೆ. ರಾಮಚಂದ್ರಾಪುರ ್ರಂಗಿಕ ಸಮಸ್ಯೆಯ ಗುರುವಿನ ಪ್ರಭಾವ ಬಿಜೆಪಿಯ ಮೇಲೆ ಬೀಳಲಾಗಿ ಆತ ಟಿಕೆಟ್ ವಂಚಿತನಾಗಿ ೀರಿ ಬಿಜೆಪಿಯನ್ನು ಹಿಗ್ಗಾಮುಗ್ಗಾ ತೆಗಳುತ್ತಿದ್ದರೆ, ನ್ ಎಂಬ ನಿಷ್ಕ್ರಿಯ ಕಾಂಗ್ರೆಸ್ ಮನುಷ್ಯ ಬಿಜೆಪಿ ಂಗ್ರೆಸ್ಸನ್ನು ಟೀಕಿಸುತ್ತಿದ್ದಾರೆ.

ಪಿಯಲ್ಲಿನ ಒಳಬೇಗುದಿ ಪ್ರಬಲವಾಗಿಯೇ ಪ್ರಕಟ ವುದರಿಂದ ಪಾರ್ಟಿಯೇ ಡಲ್ಲಾಗಿದೆ. ಯಡಿ ಪ್ಪನವರ ಮುಖದಲ್ಲಿ ಯಾರು ಗೆದ್ದರೇನು ಯಾರು ನು ಎಂಬ ಬೇಸರದ ಕಳೆ ಎದ್ದು ಕಾಣುತ್ತಿದೆ. ಅವರ ಹಿಂಬಾಲಕರಿಗೆ ಮತ್ತು ಅವರು ಆಶ್ವಾಸನೆ ಗೆ ಟಿಕೆಟ್ ಸಿಕ್ಕಿಲ್ಲ. ಮುಖ್ಯಮಂತ್ರಿಯ ರುಂಡವನ್ನು ತ್ತೇನೆ ಎಂದಿದ್ದ ಚನ್ನಬಸಪ್ಪನನ್ನು ಬಿಜೆಪಿಯಲ್ಲಿ ರಿಲ್ಲ. ಈಶ್ವರಪ್ಪ ಮಾತ್ರ ತನ್ನ ಮಗನಿಗೆ ಹೊಳೆ ು ಕ್ಷೇತ್ರದ ಟಿಕೆಟ್ ಕೊಡಿಸಿದ್ದೂ ಅಲ್ಲದೆ, ಪ್ರಚಾರಕ್ಕೆ ೂರಪ್ಪನನ್ನೆ ಕರೆದುಕೊಂಡು ಹೋಗಿದ್ದರು. ದಲ್ಲಿ ಇವರಿಬ್ಬರೂ ಪರಸ್ಪರ ವೈರಿಗಳಾದರೂ ಗೆ ಒಂದಾಗಿರುವಂತೆ ಕಾಣಿಸಿಕೊಂಡು, ಆತ್ಮೀಯ ನಡೆಸುವುದು ಸಾರ್ವಜನಿಕರಿಗೆ ಮೋಜಿನ ವಾಗಿದೆ.

ಕೀಯ ಮುಖಂಡರಿಗೆ ಸ್ಥಳೀಯ ಸಂಸ್ಥೆಯ ೆ ಸಂದರ್ಭದಲ್ಲಿ ಟಿಕೆಟ್ ಕೊಡುವಾಗ ತಮ್ಮ ಮತ್ತು ಕಳ್ಳುಬಳ್ಳಿಯ ಅನ್ನದಂಡದ ಜನ ಕಾಣು ಹೊರತು ನಿಷ್ಠಾವಂತ ಕಾರ್ಯಕರ್ತರು ಕಾಣುತ್ತಿಲ್ಲ. ಣಕ್ಕೆ ಬಂದಮೇಲೆ ಅರ್ಬುದ ರೋಗದಂತೆ ಆಸ್ತಿ ಂಡಿರುವ ಈಶ್ವರಪ್ಪನಂಥರರು ರಾಜಕಾರಣಕ್ಕೂ ಂಗನನ್ನು ತಂದು ನಿಲ್ಲಿಸಿರುವುದರ ವಿರುದ್ಧ ಬಿಜೆಪಿ ಣಿಸಿಕೊಂಡಿರುವ ಬಂಡಾಯ ಸಕಾರಣವಾಗಿದೆ. ಷ್ಟಾದರೂ ಖರ್ಚಾಗಲಿ ಒಟ್ಟಿನಲ್ಲಿ ಗೆಲ್ಲಲೇಬೇಕೆಂಬ ಠಕ್ಕೆ ಮತದಾರ ಮಾತ್ರ ಉತ್ತರ ಕೊಡಬೇಕಷ್ಟೇ. ್ತಿಯೆಂದರೆ ವಂಶಾಡಳಿತದ ವಿರುದ್ಧ ದನಿ ಎತ್ತಿರಿಸಿ ದ್ದ ಬಿಜೆಪಿಗಳ ಬಾಯಿಗಳನ್ನು ಬಂದ್ ಮಾಡಿದ ಕೀರ್ತಿ ಮೊದಲು ಯಡ್ಡಿಯೂರಪ್ಪನಿಗೆ ಸಲ್ಲಬೇಕು. ಅನಂತರ ಉಳಿದ ಬಿಜೆಪಿಗಳು ಯಡಿಯೂರಪ್ಪನ ಹಾದಿ ತುಳಿದಿವೆ. ಸಂಗ್ರಹಿಸಿದ ಅಕ್ರಮ ಆಸ್ತಿ ಕಾಯಲು ರಾಜಕಾರಣದಲ್ಲಿ ಇರಲೇಬೇಕು, ಇಲ್ಲವಾದರೆ ನಿರ್ನಾಮವಾಗುತ್ತೇವೆಂಬ ಭಯ ಈ ವಂಶವ್ಯಾಮೋಹಿ ಧುರೀಣರಲ್ಲಿರಬಹುದು. ಅಂತೂ ಈಶ್ವರಪ್ಪ ಲಜ್ಜೆಬಿಟ್ಟು ತನ್ನ ಮಗನನ್ನೇ ನಿಲ್ಲಿಸಿಕೊಂಡು ಹೋರಾಡುತ್ತಿರುವುದೇ ಬಿಜೆಪಿಗೆ ಮುಳುವಾಗಿ ಅದರ ಕೈಗೆ ಜಿಲ್ಲಾ ಪಂಚಾಯ್ತಿ ದಕ್ಕದಂತಾಗುತ್ತದೆ.

ಕಳೆದ ಬಾರಿ ನಡೆದ ಸ್ಥಳೀಯ ಸಂಸ್ಥೆ ಚುನಾವಣೆಯಲ್ಲಿ ಎಮ್ಮೆಲ್ಲೆಗಳಾಗಿ ಗೆದ್ದವರು ಕನಿಷ್ಠ ಇಪ್ಪತ್ತು ಕೋಟಿಯಿಂದ ನಲವತ್ತು ಕೋಟಿವರೆಗೂ ಖರ್ಚು ಮಾಡಿದ್ದು ಈಗ ಇತಿಹಾಸ. ಅಚ್ಚರಿಯೆಂದರೆ ಸೋತವರೂ ಅಷ್ಟೇ ಸುರಿದಿರುವುದೊಂದು ವಿಪರ್ಯಾಸ. ಈಗಿನ ಜಿಲ್ಲಾ ಪಂಚಾಯ್ತಿ ಮೆಂಬರಾಗಲು ಅಷ್ಟೇ ಹಣ ಕೂಡ ಸುರಿಯಬಹುದು. ಈಶ್ವರಪ್ಪನಂತೂ ಈಗ ಹಣದ ಮುಖ ನೋಡುವುದಿಲ್ಲ, ಆತನ ಮನೆಯಲ್ಲಿರುವ ನೋಟು ಎಣಿಸುವ ಯಂತ್ರ ಬಿಡುವಿಲ್ಲದೆ ಕಾರ್ಯ ನಿರ್ವಹಿಸುತ್ತಿರಬಹುದು.

ಇದೆಲ್ಲವನ್ನು ನೋಡಿದರೆ ನಜೀರ್ ಸಾಹೇಬರು ಕಂಡ ಅಧಿಕಾರ ವಿಕೇಂದ್ರಿಕರಣದ ಕನಸು ಸಂಪೂರ್ಣ ಭಗ್ನಗೊಂಡಿದೆ. ಈ ವ್ಯವಸ್ಥೆ ತುಂಬ ದುಬಾರಿಯಾಗಿ ಹೋಗಿದೆ. ಪರಿಣಾಮ ಜಿಲ್ಲಾ ಪಂಚಾಯ್ತಿ, ತಾಲ್ಲೂಕು, ಗ್ರಾಮ ಪಂಚಾಯ್ತಿಯಿಂದ ನಡೆದ ಯಾವುದೇ ಅಭಿವೃದ್ಧಿ ಕಾಮಗಾರಿಗಳು ಕಳಪೆ ಗುಣಮಟ್ಟದಿಂದ ಕೂಡಿ ಹಾಳಾಗುತ್ತಿವೆ. ಅಭಿವೃದ್ಧಿ ಕಾರ್ಯದ ಹಂಚಿಕೆಯ ಪಾಲಿನ ಶೇಕಡಾಂಶ ಅರ್ಧಕ್ಕಿಂತ ಹೆಚ್ಚು ಭಾಗ ಚುನಾಯಿತ ಪ್ರತಿನಿಧಿ ಮತ್ತು ಅಧಿಕಾರಿಗಳಿಗೇ ಹೋಗುತ್ತಿರುವುದರಿಂದ ಅದನ್ನು ಕೇಳದ ಸ್ಥಿತಿಗೆ ಮತದಾರರು ಬಂದು ಹೋಗಿದ್ದಾರೆ.

ಮತದಾರರಿಗೆ ಕೈ ಮುಗಿಯುತ್ತಿದ್ದ ಅಭ್ಯರ್ಥಿ ಈಗೆ ಹಲ್ಕ ಮನುಷ್ಯನಂತೆ ಕಣ್ಣುಮಿಟುಕಿಸುತ್ತಿದ್ದಾನೆ. ಕೈ ಸನ್ನೆಯಿಂದ 'ತಲುಪ್ತೆ' ಎಂಬಂತೆ ಕತ್ತು ಕುಣಿಸುತ್ತಿದ್ದಾನೆ. ಇಷ್ಟು ಹದಗೆಟ್ಟ ವ್ಯವಸ್ಥೆಯಲ್ಲಿ ಯಾರು ಗೆದ್ದರೇನು ಯಾರು ಸೋತರೇನು, ಎಲ್ಲಾ ಅವರೆ ಎನ್ನುವಂತಾಗಿ ಹೋಗಿದೆ. ತನ್ನ ಯೋಗ್ಯತೆಯನ್ನು ಪ್ರಿಂಟ್ ಮಾಡಿಸಿ, ಹ್ಯಾಂಡ್‌ಬಿಲ್ಲು ಹಂಚಿ, ಕೈ ಮುಗಿದು ಮತ ಕೇಳಿ ಮನೆಗೆ ಹೋಗಿ ರಿಸಲ್ಟಿಗಾಗಿ ಕಾಯುವ ಅಭ್ಯರ್ಥಿ ಒಬ್ಬನೂ ಕಾಣುತ್ತಿಲ್ಲ. ಈ ಪೈಕಿ ಆಮ್ ಆದ್ಮಿ ಜನಗಳು ಅಸಹಾಯಕರನ್ನ ರಸ್ತೆ ದಾಟಿಸುವಂತೆ ಕಾಣುತ್ತಿದ್ದಾರೆಯೇ ಹೊರತು ಒಂದು ಸೀಟನ್ನಾದರೂ ಗೆಲ್ಲುವಂತೆ ಕಾಣುತ್ತಿಲ್ಲ.

ಕಳೆದ ಬಾರಿಯ ಜಿಲ್ಲಾ ಪಂಚಾಯ್ತಿ ಚುನಾವಣೆಯಲ್ಲಿ 31 ಸ್ಥಾನಗಳ ಪೈಕಿ ಬಿಜೆಪಿ 16 ಸ್ಥಾನಗಳನ್ನು ಪಡೆದು ಅಧಿಕಾರ ಹಿಡಿದಿತ್ತು. ಆಗ ಇದ್ದಕ್ಕಿದ್ದಂತೆ ಕ್ಷಿಪ್ರಕಾರ್ಯಾಚರಣೆಯೊಂದು ನಡೆದು ಕಾಂಗ್ರೆಸ್‌ನ ಕಲಗೋಡು ರತ್ನಾಕರ್ ಅಧ್ಯಕ್ಷರಾಗಿ ಜಿಲ್ಲಾ ಪಂಚಾಯ್ತಿ ಅವಧಿಯನ್ನು ಪೂರ್ಣಗೊಳಿಸಿದ್ದರು. ಈಗಿನ ಬಿಜೆಪಿ ಬೇಗುದಿಯ ಪರಿಣಾಮದ ಫಲವಾಗಿ ಕಾಂಗ್ರೆ ಜಿಲ್ಲಾ ಪಂಚಾಯ್ತಿ ಹಿಡಿಯುವುದು ಗ್ಯಾರಂಟಿಯಾಗಿದೆ. ಅದು ಸಾಧ್ಯವಾಗದಿದ್ದರೆ ಜೆಡಿಎಸ್‌ನ ಆಪತ್ಬಾಂಧವರು ಇದ್ದೇ ಇದ್ದಾರೆ.

ಈಚೆಗೆ ನಡೆದ ಮಹಾನಗರ ಪಾಲಿಕೆ ಚುನಾವಣೆಯಲ್ಲೂ ಜೆಡಿಎಸ್ ಕಾಂಗ್ರೆಸ್‌ನ ಮರಿಯಪ್ಪ ಎಂಬುವವರಿಗೆ ಸಪೋರ್ಟು ಮಾಡಿ ಮೇಯರ್ ಆಗುವಂತೆ ಮಾಡಿದೆ. ಈ ಮರಿಯಪ್ಪ ನಗರಸಭೆ ವ್ಯಾಪ್ತಿಯಲ್ಲಿ ಯಾವುದೇ ಖಾಲಿ ಜಾಗ ಕಂಡರೂ ಅದನ್ನು ಕಬಳಿಸುವಂತಹ ವ್ಯಕ್ತಿ. ಒಂದು ರೀತಿ ಬೆಂಗಳೂರಿನಲ್ಲಿ ಡಿ.ಕೆ.ಸಿ. ಇದ್ದಂತೆ. ಈಗಾಗಲೇ ಶಿವಮೊಗ್ಗದ ಗೋಪಿ ವೃತ್ತದಲ್ಲಿನ ನಗರ ಸಭೆ ಆಸ್ತಿಯನ್ನು ಲಪಟಾಯಿಸಿಕೊಂಡು ಕಟ್ಟಡ ಕಟ್ಟಿ, ಅದರ ಉದ್ಘಾಟನೆಗೆ ಈಶ್ವರಪ್ಪ ಮತ್ತು ಶಾಸಕ ಪ್ರಸನ್ನ ಅವರನ್ನು ಕರೆದಿದ್ದ. ಇಂತಹ ವ್ಯಕ್ತಿ ಈ ಊರಿನ ಮೇಯರ್ ಆಗುವುದು ಬೇಡವೆಂದು ಶಿವಮೊಗ್ಗ ನಾಗರಿಕ ಹಿತರಕ್ಷಣಾ ವೇದಿಕೆಯ ಒಕ್ಕೂಟ ಪ್ರಬಲವಾಗಿ ವಿರೋಧಿಸಿತ್ತು. ಆದರೂ ನಾಗರಿಕರ ವಿರೋಧವನ್ನು ಪರಿಗಣಿಸದೆ ಆತನನ್ನೇ ಮೇಯರ್ ಮಾಡಲಾಗಿದೆ. ಅಂದರೆ ಕಬಳಿಕೆ ವಿಷಯದಲ್ಲಿ ಕಾಂಗ್ರೆಸ್, ಬಿಜೆಪಿ, ಜೆಡಿಎಸ್ ಎಂಬ ಭೇದ ಭಾವನೆವೇ ಇಲ್ಲ. ನಾವೆಲ್ಲರೂ ಒಂದೇ. ಜಾತಿಯಲ್ಲಿ, ನೀತಿಯಲ್ಲಿ, ನಡೆನುಡಿಯಲ್ಲಿ ಎಂಬಂತಾಗಿರುವ ಇವರಲ್ಲಿ ಯಾರು ಗೆದ್ದರೇನು?

■ ವರದಿಗಾರ

ಮೈಗಳ್ಳ ಸಚಿವರನ್ನ ಮುಟ್ಟಕ್ಕಾಯ್ತದ ಸಾರ್

ಥೂತ್ತೇರಿ

ಯಾಹೂ ▸

ಾರತದ ಮಾಜಿ ಪ್ರಧಾನಿಗಳಾದ ದೇವೇಗೌಡರು 5 ನೇ ವಯಸ್ಸಿನಲ್ಲಿ ತಾವು ಮತ್ತು ತಮ್ಮ ಮಗ ಂದು ನಂಬಿದ್ದ ಜಮೀರ್ ಅಹ್ಮದ್‌ನನ್ನು 'ಮೀರ್ ಎಂದುಬಿಟ್ಟಿದ್ದಾರಲ್ಲಾ, ನಮ್ಮ ನಡುವೆಯಿರುವ ರು ಒಬ್ಬ ವ್ಯಕ್ತಿಯನ್ನು ತುಂಬ ದ್ವೇಷ ಮಾಡುತ್ತಾರೆ. ್ರೋಹಕ್ಕೆ ಸೂಕ್ತವಾಗಿ ಬಳಸುವ ಪದವೇ ಮೀರ್ ಅಂತಹವನಿಗೆ ಬೆಂಗಳೂರಿನ ಮುಸ್ಲಿಂ ನಾಯಕನನ್ನು ೆ ಮಾಡಿರುವುದು ಸಾಮಾನ್ಯ ಮುಸ್ಲಿಮನಿಂದ ರಿಗೂ ಸಿಟ್ಟು ತರಿಸಿರುವುದು ಸಹಜ. ಕುಮಾರಣ್ಣ ಂತ್ರಿಯಾಗಲು ಶಾಸಕರನ್ನು ಹೊತ್ತ ಬಸ್ಸನ್ನು ಸೇಫಾಗಿ ಮಾಡಿದವನೇ ಜಮೀರು ಎಂಬುದು ಎಲ್ಲರಿಗೂ ವ ಸಂಗತಿ. ಅಂತವನನ್ನು ಮೀರ್ ಸಾಧಕ್ ಂತೂ ಮೀರ್ ಸಾಧಕನಿಗೇ ಮಾಡುವ ಅವಮಾನ. ಮೊಗ್ಗದ ಕಡೆಯಿಂದ ಸ್ವಾರಸ್ಯಕರ ಸುದ್ದಿ ಬಂದಿದೆ. ವರ್ಷದಲ್ಲಿ ಕಾಂಗ್ರೆಸ್ ತೊರೆದು ಬಿಜೆಪಿ ಸೇರುತ್ತಿರುವ ವ್ ಎಂಬ ರಾಜಕಾರಣಿ ಕೊಟ್ಟ ಕಾರಣವೇನೆಂದರೆ ಕ್ಕಳು ತುಂಬಾ ವಿದ್ಯಾವಂತರಾಗಿದ್ದು ಅವರು ಬಿಜೆಪಿ ುವುದರಿಂದ ಅಂತವರಿಗೆ ಜನ್ಮ ಕೊಟ್ಟ ನಾನೂ ಕೂಡ ಸೇರುತ್ತಿದ್ದೇನೆ" ಎಂದಿದ್ದಾರಂತಲ್ಲಾ, ಥೂತ್ತೇರಿ!

****

' ಕೆಂಗಣ್ಣಿಗೆ ಗುರಿಯಾಗಿ ಭೂಗತರಾಗಿ ಬದುಕಿದ್ದ ವ್ ತೀರ್ಮಾನದಿಂದ ಅವರಿನ್ನೂ ಬದುಕಿದ್ದಾರೆ ಜನರಿಗೆ ಮನವರಿಕೆಯಾಗುತ್ತಿರುವಾಗಲೇ, ಅವರಿಗಿಂತ ರ್ಷ ಚಿಕ್ಕವರಾದ ಸಮಾಜವಾದಿ ಜಯಂತ ಬಿಜೆಪಿ ಕಾಂಗ್ರೆಸ್ ಸೇರಿದ್ದಾರಂತಲ್ಲಾ, ಜಯಂತ ಎಲ್ಲೂ ಅತೃಪ್ತ ಮನಸ್ಸಿನ ಅಪ್ಪಟ ಸಮಾಜವಾದಿ. ಒಂದು ್ಲ ಆತನಿಗೆ ದೇವೇಗೌಡರೇ ಗಾಡ್‌ಫಾದರ್. ಅದಕ್ಕಾಗಿ ಪಟ್ಟಣ ಪಂಚಾಯ್ತಿಗೆ ಜೆಡಿಎಸ್‌ನ್ನು ಆರಿಸಿ ತಂದಿದ್ದರು. ಕಾಂಗ್ರೆಸ್ ಹಾದಿಯಲ್ಲಿ ಸಾಗುತ್ತಿರುಬೇಕಾದರೆ ಷ್ಟನ ಹೈವೇ ಸಿಕ್ಕಿತು. "ನಿಜಕ್ಕೂ ನನಗೆ ತಕ್ಕ ನಾಯಕ ಹಿಂದೆ ಹೋದರೆ, ಎಡೂರಪ್ಪನಿಂದ ಒಂದು ಜಡ್ಡಪಿ ಕೊಡಿಸಲಾಗಲಿಲ್ಲ, ಆದ್ದರಿಂದ ಮರಳಿ ಕಾಂಗ್ರೆಗೆ ವ ಜಯಂತ ಹೊರಟ ಸ್ಥಳಕ್ಕೆ ಬಂದುತಲುಪಿದ್ದಾರೆ. ಯಾನಕ ಸುದ್ದಿ ಯಾವುದೆಂದರೆ ಜಯಂತನಿಗೆ ಯಾವ ್ಯ ಟಿಕೆಟ್ ಕೊಡಬೇಡಿ ಎಂದು ಆಜ್ಞೆ ಹೊರಡಿಸಿ, ಕಾರ್ಯಗತವಾಗುವಂತೆ ನೋಡಿಕೊಂಡವನು ಹೊಸನಗರ ಸೆರೆ ಬಿಂತಿರುವ ರಾಮಚಂದ್ರನ ಅಪರಾವತಾರವಂತಲ್ಲಾ, !!

****

ಕ್ಷೆ ಅಸ್ಪೃಶ್ಯಕ ಚಟುವಟಿಕೆಗಳ ಪರ ದನಿ ಎತ್ತಲಿಲ್ಲ, ರಿಸಿ, ಸಣ್ಣ ಪರ ಹೋರಾಡಲಿಲ್ಲ, ಕೋಗಿಲ ಪತ್ರಿಕೆಗೆ ಒಂದು ಹೇಳಿಕೆಯನ್ನು ಕೊಡದ ಇಂತಹ ಪಕ್ಕದಿಂದ ಗಳೇನು ಪ್ರಯೋಜನ? ಆದ್ದರಿಂದ ಆತನಿಗೆ ಟಿಕೆಟ್ಟನ್ನು ನಾನು ಕೊಡುವುದಿಲ್ಲ" ಎಂದು ರಾಘವೇಶ್ವರನೇ ಹೇಳಿ ಅದರಂತೆಯೇ ನಡೆದುಕೊಂಡನೆಂದೂ ಜಯಂತನ ಅಳಿದುಳಿದ ಹವ್ಯಕ ಮಾಣಿಗಳು ಅಳುತ್ತಲೇ ಹೇಳುತ್ತಿವೆಯಂತಲ್ಲಾ, ಅಂತೂ ಶಿವಮೊಗ್ಗದ ಬಿಜೆಪಿಗಳು ಇನ್ನು ಮುಂದೆ ತಮ್ಮ ಕಚೇರಿಯನ್ನು ರಾಮಚಂದ್ರಾಪುರದ ಮಠಕ್ಕೆ ವರ್ಗಾಯಿಸಿಕೊಳ್ಳುತ್ತವೆ. ಅಲ್ಲಿ ಜಿಲ್ಲೆಯ ಎಮ್ಮೆಲ್ಲೇ ಜಿಲ್ಲಾ ತಾಲ್ಲೂಕು ಪಂಚಾಯ್ತಿ ಮತ್ತು ಗ್ರಾಮ ಪಂಚಾಯ್ತಿ ಟಿಕೆಟುಗಳು ರಾಘವನ ಪದತಳದಲ್ಲೇ ಬಿಕರಿಯಾಗುತ್ತವೆ. ಭಾರತದ ಸಂವಿಧಾನಕ್ಕೆ ಒದಗಿ ಬರಲಿರುವ ದುರ್ಗತಿ ನೆನೆದರೆ, ರಾಘವನ ರಾಜ್ಯ ಬರಲಿದೆ ಅನಿಸುತ್ತಿದೆಯಲ್ಲ ಥೂತ್ತೇರಿ!!

****

"ಜಗದ್ಗುರುವಾದವರಿಗೆ ಮಾನ ಅವಮಾನಗಳು ಇರುತ್ತವೆ. ಸ್ವಾಭಿಮಾನವಂತೂ ರಕ್ತಗತವಾಗಿರುತ್ತದೆ. ಅಂತಹ ಮೌಲ್ಯಗಳ ಮೇಲೆ ಇತ್ತೀಚೆಗೆ ದಾಳಿಯಾಗುತ್ತಿದೆ...." ಸದರಿ ಭಾಷಣ ಯಾರ ಬಾಯಿಂದ ಹೊರಬಿತ್ತು ಗೊತ್ತೆ? ಇದೇ ನಮ್ಮ ರಾಮಚಂದ್ರಾಪುರದ ಹೋರಿ ಬಾಯಿಂದ. ಇಂತಹ ಅಣಿಮುತ್ತುಗಳನ್ನು ಸಹಸ್ರ ಸಂಖ್ಯೆಯಲ್ಲಿ ಸೇರಿದ್ದ ತಮ್ಮದೇ ಆದ ಕಿರುಜಗತ್ತಿನ ಗುರುಗಳು ಆಲಿಸಿದ್ದೂ ಅಲ್ಲದೆ ಕಿವಿಗಡಚಿಕ್ಕುವ ಚಪ್ಪಾಳೆಯನ್ನು ತಟ್ಟಿದವಂತಲ್ಲಾ, ಇಂತಹ ಭಯಾನಕ ದೃಶ್ಯವನ್ನು ನೋಡಿದ ಜೋಯಿಸನೊಬ್ಬ ಪರಮಾನಂದದಿಂದ ಕಣ್‌ಕಣ್ ಬಿಡುತ್ತ ತನ್ನ ಜನ್ಮ ಸಾರ್ಥಕವಾಯ್ತೆಂಬಂತೆ ರಾಘವನ ಪಾದಕ್ಕೆ ಬಿದ್ದು, "ನಾನು ನ್ಯಾಯವಾದಿಯಾಗಿ, ರಾಜ್ಯಪಾಲನಾಗಿ, ಮನುಧರ್ಮಶಾಸ್ತ್ರಜ್ಞನಾಗಿ ಜೋಯಿಸನಾಗಿದ್ದಕ್ಕೂ ನನ್ನ ಜನ್ಮ ಸಾರ್ಥಕವಾಯ್ತು" ಎಂದುದ್ದಲ್ಲದೆ, "ನಮ್ಮ ಗುರುಗಳು ಶ್ರೀರಾಮಚಂದ್ರನಷ್ಟೇ ಪವಿತ್ರ ಎಂಬುದಕ್ಕೆ ಅವರ ಕರೆಗೆ ಓಗೊಟ್ಟು ಬಂದಿರುವ ಸಹಸ್ರ ಸಂಖ್ಯೆಯ ಜಗದ್ಗುರುಗಳೇ ಸಾಕ್ಷಿ" ಎಂದೆನ್ನಲಿಲ್ಲವಂತಲ್ಲಾ, ಥೂತ್ತೇರಿ!!

****

ಕೆಟ್ಟ ಕೆಲಸ ಮಾಡಿದವರನ್ನ ಈ ಸಮಾಜ ದೂರವಿಡುತ್ತೆ ಅವರ ಹಿಂದೆ ಯಾರೂ ಇರುವುದಿಲ್ಲ, ಇಂತಹ ಏಕಾಂಗಿತನಕ್ಕೆ ತುತ್ತಾದ ವ್ಯಕ್ತಿ ತನಗೆ ತಾನೇ ಸರಿಹೋಗಿ ಸಮಾಜದೊಳಕ್ಕೆ ಬಂದು ಸೇರಿಕೊಂಡು ಸಭ್ಯ ವ್ಯಕ್ತಿಯಾಗುತ್ತಾನೆಂಬುದು ಹಳೆ ಕಾಲದ ನಂಬಿಕೆ. ಆದರೀಗ ಕೆಟ್ಟು ಕೆರ್ಹಿಡಿದವರೇ ನಾಯಕರಾಗಿ ವಿಜೃಂಭಿಸುತ್ತ ಅವರೇ ನಮ್ಮ ಲೀಡರುಗಳಾಗಿ ಆಪದ್ಬಾಂಧವರಂತೆ ಮೆರೆಯುತ್ತಿದ್ದಾರೆ. ಜೊತೆಗೆ ಆಧ್ಯಾತ್ಮ ಲೋಕದ ಜನಗಳೂ ಕೂಡ ರಾಘವೇಶ್ವರ ತಮ್ಮ ಲೀಡರೆಂಬಂತೆ ಸಹಸ್ರ ಸಂಖ್ಯೆಯಲ್ಲಿ ಸೇರಿದ್ದು ನೋಡಿದರೆ, ಅವರೆಲ್ಲಾ ಸಹಸ್ರ ಸಂಖ್ಯೆಯ ರಾಘವರಂತೆ ಕಾಣತೊಡಗಿದ್ದಾರೆಂದು ಮರ್ಯಾದಸ್ಥ ಹೆಂಗಸರೆಲ್ಲ ಹೆದರತೊಡಗಿದ್ದಾರಂತಲ್ಲಾ, ಥೂತ್ತೇರಿ!!

****

ಮೈಸೂರಿನಲ್ಲಿ ನಡೆದ ಗ್ರಾಮ ಸ್ವರಾಜ್ ಸಮಾವೇಶದಲ್ಲಿ ಮಾತನಾಡಿರುವ ಜನಾರ್ದನ ಪೂಜಾರಿ "ಮೈಗಳ್ಳ ಸಚಿವರನ್ನ ಮನೆಗೆ ಕಳಿಸಿ" ಎಂದು ಸಿದ್ದು ಮುಖಕ್ಕೇ ಹೇಳಿ ಸುದ್ದಿ ಮಾಡಿದ್ದಾರಲ್ಲಾ, ನಿಜವಾಗಲೂ ಅಪ್ಪಟ ಕಾಂಗ್ರೆಸ್ಸಿಗರೆಂದರೆ ಈ ಪೂಜಾರಿ ಮತ್ತು ವಿಶ್ವನಾಥ್. ಆತ್ಮಸಾಕ್ಷಿಯನ್ನಾಧರಿಸಿ ಇದ್ದದ್ದನ್ನು ಇದ್ದಂತೆ ಮಾತನಾಡುವಲ್ಲಿ ಇಬ್ಬರೂ ನಿಸ್ಸೀಮರು. ಆ ಕಾರಣಕ್ಕೆ ಮಾರಿಕೊಂಡ ಮತದಾರರಿಂದ ತಿರಸ್ಕೃತಗೊಂಡವರು. ಆದರೂ ಛಲಬಿಡದ ಅವರು ಮಾತನಾಡುತ್ತಲೇ ಇದ್ದಾರೆ. ಸದ್ಯಕ್ಕೆ ಜನಾರ್ದನ ಪೂಜಾರಿಯವರನ್ನು ಮೆಚ್ಚಿ ಒಂದೆರಡು ಮಾತನಾಡಲು ಫೋನ್ ಮಾಡಿದರೆ, ರಿಂಗಾಯ್ತು.

ರಿಂಗ್ ಟೋನ್: "ಯಾರೇ ಕೂಗಾಡಲಿ, ಊರೇ ಹೋರಾಡಲಿ ನನ್ನ ಮಾತಿಗಂತೂ ತಡೆಯೋರಿಲ್ಲಾ"

"ಹಲೋ...... ಹಲೋ ಯಾರು?"

"ನಮಸ್ಕಾರ ಸಾರ್, ನಾನು ಯಾಹು."

"ನಮಸ್ಕಾರ ಯಂತ ಹೇಳಿ."

"ನಿಮ್ಮ ಮೈಸೂರು ಭಾಷಣ ನನಗೆ ತುಂಬ ಹಿಡುಸ್ತು ಸಾರ್."

"ನೀವು ಅಲ್ಲಿಗೆ ಬಂದಿದ್ದಾ?"

"ಹೌದು ಸಾರ್. ಸಿದ್ದರಾಮಯ್ಯನಿಗೆ ಸರಿಯಾಗೇಳಿದ್ರಿ."

"ಸಿದ್ದಾಮಯ್ಯನಿಗೆ ಅಲ್ಲ ಸೋಮಾರಿ ಸಚಿವರಿಗೆ ಹೇಳಿದ್ದು"

"ನೀವು ಹೆಸರ್ನು ಹೇಳಬೇಕಾಗಿತ್ತು ಸಾರ್."

"ಹೆಸರು ಹೇಳಿದ್ದರೆ ನನ್ನ ವಿರುದ್ಧ ಪ್ರತಿಭಟನೆ ಮಾಡಿಸುವುದುಂಟು. ಅದಕ್ಕೆ ಹಾಗೆ ಹೇಳಿದ್ದು."

"ಪ್ರತಿಭಟನೆ ಮಾಡಿ ಏನು ಮಾಡಿಕೊಳ್ತರೆ ಸಾರ್?"

"ನಾನು ಯಾವ ಪ್ರತಿಭಟನೆಗೂ ಹೆದರಿದವನಲ್ಲ, ಬಿಜೆಪಿ, ಆರೆಸ್ಸೆಸ್, ಗಂಡು ಅರ್ಚಕರು-ಹೀಗೆ ನನಗೆ ಸಮಾ ವೈರಿಗಳು. ಅವರೆಲ್ಲಾ ಚಳವಳಿಯಲ್ಲಿ ಸೇರಿಕೊಂಡು ಮತೀಯ ಗಲಭೆ ಮಾಡಿಬಿಡುವುದು ನನಗೆ ಗೊತ್ತುಂಟು."

"ಅದೇನೋ ನಿಜ ಸಾರ್. ನಮ್ಮ ಯಾವುದೇ ಚಳವಳಿಗೆ ಮತೀಯ ಕಿಡಿ ತಾಗಸೋದಕ್ಕೆ ಕಾಯ್ತಾಯಿರತರೆ."

"ಅದಕ್ಕೆ ನಾನು ಮಾರ್ಮಿಕವಾಗಿ ಹೇಳಿದ್ದು."

"ನಿಮಗೆ ಗೊತ್ತಿರಂಗೆ ಮೈಗಳ್ಳ ಸಚಿವರು ಯಾರು ಸಾರ್?"

"ಅವರ ಪಟ್ಟಿ ದೊಡ್ಡದುಂಟು. ಲೆಕ್ಕ ಹಾಕಿದರೆ ಒಂದು ಡಜನ್ ಆಗುವುದುಂಟು."

"ಅಂಗಿದ್ರೆ ಸರಕಾರನೆ ಮಲಗಿರಬಹುದಲ್ಲ ಸಾರ್?"

"ಮಲಗಿದ್ದಲ್ಲ, ಗೊರಕೆ ಕೇಳಿಸುವುದುಂಟು."

"ನಿಜ ಸಾರ್, ಅಂಬರೀಶ, ಶಾಮನೂರು, ಕಮರುಲ್ಲ...... ನಿಮ್ಮ ಏರಿಯದಲ್ಲೆ ಒಬ್ಬ ಇದಾನೆ. ಚಿಕ್ಕಮಗಳೂರು ಉಸ್ತುವಾರಿ ನೋಡುತಿದ್ದ ಪಾಪ. ಅವನಿಗೆ ಆ ಖಾತೆನೆ ಬೇಕಿಲ್ಲ, ಆದು ನಿಭಾಯಿಸ್ತಾಯಿದಾನೆ. ಯಂತದೂ ಮೀನುಗಾರಿಕೆ ಖಾತೆ."

"ಹೌದು, ಸ್ವಾಮಿ ವಿವೇಕಾನಂದರು ಒಂದು ಮಾತನ್ನು ಹೇಳಿದ್ದಾರೆ. ಗೊತ್ತುಂಟ?"

"ಯಾವ ಮಾತು ಸಾರ್?"

"ಯಾರಿಗೆ ಯಾವ ಕೆಲಸ ಲಾಯಕ್ಕಲ್ಲವ್ರೊ ಅದನ್ನೇ ಅವರು ಮಾಡಬೇಕಾಗಿದೆ ಎಂದು ಬಹಳ ಹಿಂದೆ ಹೇಳಿದ್ದರು."

"ನಿಜ ಸಾರ್. ಅದೇತರ ಸಾರ್ ಸಿದ್ದು ಸಂಪುಟ ಇರದು."

"ಅಂತವರನ್ನು ಸಂಪುಟದಿಂದ ತೆಗೆಯಿರಿ, ನಿಮ್ಮ ಬೆಂಬಲಕ್ಕೆ ನಾವಿದ್ದೇವೆ ಅಂತ ನಾನು ಹೇಳಿದ್ದು."

"ನೀವೇಳ್ತಿರಿ ಸಾರ್. ನೀವ್ರೊಂತರ ಬೀದಿಲೋಗೊ ದಾಸಯ್ಯನ ತರ."

"ಅದಕ್ಕೆ ನಾನು ಶಂಖ ಊದಿದ್ದು."

"ಶಂಕ ಊದಿ ಸುಮ್ಮನಾಗಬವುದು. ಆದ್ರೆ ಮಂತ್ರಿಗಳ ತಗಿಯಕ್ಕಾಯ್ತದ?"

"ಬದಲಾಯಿಸಬಹುದು."

"ಬದಲಾವಣೆನ ಅವ್ರಮಾನ ಅಂತ ತಿಳಕಂಡು ಸರ್ಕಾರ ಕೆಡವಿದ್ರೆ?"

"ಸರ್ಕಾರ ಕೆಡವುದು ಅಷ್ಟು ಸುಲಭವಲ್ಲ; ಮೇಲೆ ನಾವಿದ್ದೇವೆ."

"ಅಲ್ಲ ಸಾರ್, ನೀವೇಳೋ ಮೈಗಳ್ಳರ ಪೈಕಿ ಅಂಬರೀಶ್ ತಗದ್ರೆ, ಅವರ ಹಿಂಬಾಲಕರು ಸುಮ್ಮನಿರತರ? ಶಾಮನೂರ ತಗದ್ರೆ ಎಲ್ಲಾ ಪಾರ್ಟಿಲಿರೊ ಲಿಂಗಾಯತ್ರು ಒಟ್ಟಾಗಿ ಸಿದ್ದು ವಿರುದ್ಧ ಒಂದು ಆಂದೋಲನನೆ ಮಾಡ್ತಾರೆ. ಇನ್ನು ಕಮರುಲ್ಲನ ಕೆಣಕಿದ್ರೆ ಜಾಫರ್ ಷರೀಫ್ ಕತೆಯಾಗುತ್ತೆ"

"ಹಾಗೆಂದು ಸುಮ್ಮನಿದ್ದರೆ ಈ ಸರಕಾರ ಮತ್ತೆ ಅಧಿಕಾರಕ್ಕೆ ಬರುವುದುಂಟಾ?"

"ಬರದು, ಬಿಡದು ಜನಗಳಿಗೆ ಸೇರಿದ್ದಲ್ಲವ ಸಾರ್?"

"ಹೌಹೌದು, ಆದರೂ ನಾವು ಎಚ್ಚೆತ್ತುಕೊಂಡು ಆಡಳಿತ ಮಾಡಿ ಕಾಂಗ್ರೆಸ್ಸನ್ನು ಉಳಿಸಿಕೊಳ್ಳಬೇಕಲ್ಲವ. ನಮಗಿಂತ ಪಾರ್ಟಿ ಮುಖ್ಯ."

"ನಾನು ಹೆಚ್ಚು ವರ್ಷ ಇರದಿಲ್ಲ ಅಂದಿದ್ದಿರಲ್ಲಾ, ಏನು ಕಾಯ್ಲ ಸಾ?"

"ಕಾಯಿಲೆಯಂತ ಇಲ್ಲ, ವಯಸ್ಸಾಗ್ತಾವುಂಟು."

"ಕಾಂಗ್ರೆಸ್ಸಿಗೂ ವಯಸ್ಸಾಗ್ತಾಯಿದೆಯಲ್ಲ ಸಾರ್?"

"ನೋಡಿ ಇವರೆ, ಕಾಂಗ್ರೆಸ್ಸನ್ನು ಕಳೆದುಕೊಂಡರೆ ನಾವು ನಮ್ಮ ದೇಶವನ್ನೆ ಕಳೆದುಕೊಳ್ತವೆ."

"ಅಂಗೇನೂ ಆಗಲ್ಲ ಸಾರ್. ದೆಹಲಿ ಜನ ತಮಗೆ ಬೇಕಾದ ಸರಕಾರ ತಂದಿಲ್ವ?"

"ಅದು ಬೇರೆ. ಇದು ಬೇರೆ."

"ಥೂತ್ತೇರಿ!!!" ■

ದಡಿಯಾ ಪುಟ್ರಾಜ ದೊಡ್ಡ ತೋಗೂರಿಗೆ ವಕ್ಕರಿಸಿದ!


ದಡಿಯಾ ಪುಟ್ಟರಾಜು

ರಾಜಧಾನಿ ಬೆಂಗಳೂರಿನ ಒಂದು ಡಜನ್ ರಿಯಲ್ ಎಸ್ಟೇಟ್ ಶಾಸಕರೂ ಎಂಟು ಡಜನ್ನಿಗೂ ಅಧಿಕ ಬಿಬಿಎಂಪಿ ಕೌನ್ಸಿಲರ್‌ಗಳು ಊರಿಗೆ ಮಾಡಿದ ಉಪಕಾರವನ್ನೇ ಜನಕ್ಕೆ ಜೀರ್ಣಿಸಿಕೊಳ್ಳಲಾಗುತ್ತಿಲ್ಲ. ಇನ್ನು ಗ್ರಾಮೀಣ ಜಿಲ್ಲಾ ಪಂಚಾಯ್ತಿ ಮತ್ತು ತಾಲ್ಲೂಕು ಪಂಚಾಯ್ತಿಗಳಿಗೂ ನೆಲಕಂಟಕರು, ವಂಚಕರು, ರೌಡಿಗಳು ಕಾಲಿಟ್ಟರೆಂದರೆ ಗತಿಯೇನು?

ಸದ್ಯ ಜಿ.ಪಂ ಮತ್ತು ತಾ.ಪಂ ಚುನಾವಣಾ ಕಣದಲ್ಲಿರುವ ಬೆಂಗಳೂರು ಸುತ್ತಮುತ್ತಲ ಕ್ಷೇತ್ರಗಳ ವಿವಿಧ ಪಕ್ಷಗಳ ಅಭ್ಯರ್ಥಿಗಳ ಪೈಕಿ ಸ್ಯಾಂಪಲ್ಲಿಗೆ ಅಂತ ಇಲ್ಲೊಂದು ಉದಾಹರಣೆ ಇದೆ ನೋಡಿ..

ಹಾಸ್ಯನಟ ದೊಡ್ಡಣ್ಣನಿಗೊಬ್ಬ ತಮ್ಮನಿದ್ದರೆ ಅಥವಾ ಸರ್ಕಸ್ ನೀರಾನೆಗೊಂದು ಪ್ಯಾಂಟುಶರ್ಟು ತೊಡಿಸಿದರೆ ಎಂಥಾ ಆಕೃತಿಯಾದೀತೊ ಥೇಟು ಹಾಗೇ ಜನ್ಮವೆತ್ತಿದ ಈ ಘಡವನೇ ದಡಿಯಾ ಪುಟ್ರಾಜು. ಸದ್ಯ ಬೆಂಗಳೂರು ದಕ್ಷಿಣ ಕ್ಷೇತ್ರದ ದೊಡ್ಡತೋಗೂರು ಜಿಲ್ಲಾ ಪಂಚಾಯ್ತಿಗೆ ದಂಡುದಾಳಿ ಸಮೇತ ವಕ್ಕರಿಸಿರುವ ಈತನಿಗೆ ಮಟನ್ ಪುಟ್ರಾಜು, ಬಿರಿಯಾನಿ ಪುಟ್ರಾಜು, ಕೇಡಿ ಪುಟ್ಟಾ, ಡುಬಾಕೋರ್ ಪುಟ್ಟಣ್ಣ ಇತ್ಯಾದಿ ಬಿರುದು ಬಾವಲಿಗಳಿವೆಯೆಂದರೆ ಪುಣ್ಯಾತ್ಮನ ಮಹಿಮೆ ಅರ್ಥವಾಗಲೇಬೇಕಲ್ಲವೇ?

ದಡಿಯಾ ಪುಟ್ಟರಾಜನ ಬಗ್ಗೆ ಬೆಂಗಳೂರು ಹೊರವಲಯದ ದೊಡ್ಡತೋಗೂರಿನ ಜನಕ್ಕೆ ಅಷ್ಟಾಗಿ ಗೊತ್ತಿರಲಿಕ್ಕಿಲ್ಲ, ಆತನ ಕಾರ್ಯಕ್ಷೇತ್ರವೇನಿದ್ದರೂ ಬೆಂಗಳೂರು ನಟ್ಟನಡುವಿನ ಸಂಪಂಗಿರಾಮನಗರ, ಮಾರ್ಕೆಟ್ ಕಲಾಸಿಪಾಳ್ಯ, ಡಬಲ್‌ರೋಡ್, ಮಾವಳ್ಳಿ, ಚಾಮರಾಜಪೇಟೆ ಏರಿಯಾಗಳೆ. ಸಂಪಂಗಿರಾಮನಗರ ಪೊಲೀಸ್ ಠಾಣೆಯಲ್ಲಿ ಇವತ್ತಿಗೂ ಈತನ ಮೇಲೊಂದು ರೌಡಿಶೀಟಿದೆ. ಅದೇ ಪೊಲೀಸ್ ಠಾಣೆಗೆ ಈತನ ವಿರುದ್ಧ ಕೋರ್ಟು ಜಾಮೀನುರಹಿತ ವಾರೆಂಟ್ ಹೊರಡಿಸಿದೆ. ಆನೇಕಲ್, ಮಡಿವಾಳ, ಮೈಕೋಲೇಔಟ್, ಬನ್ನೇರುಘಟ್ಟ ಪೊಲೀಸ್ ಠಾಣೆಗಳು ಸೇರಿದಂತೆ ಬೆಂಗಳೂರಿನ ಒಂದು ಡಜನ್ ಪೊಲೀಸ್ ಠಾಣೆಗಳಲ್ಲಿ ಈತನ ವಿರುದ್ಧ ಕೊಲೆ, ಕೊಲೆಯತ್ನ, ವಂಚನೆ, ಚೆಕ್‌ಬೌನ್ಸ್, ಫೋರ್ಜರಿ ಮುಂತಾದ ಕ್ರಿಮಿನಲ್ ಕೇಸುಗಳಿವೆ. ಬೆಂಗಾವಲಿಗೆ ಸದಾ ರೌಡಿಪಡೆ, ಬೆನ್ನಲ್ಲೇ ಬಾಡಿ ವಾರೆಂಟು, ಒಂದಲ್ಲಾ ಮೂರುಬಾರಿ ಜೈಲುಕಂಡ ಕುಖ್ಯಾತಿ ಎಲ್ಲವನ್ನೂ ಬೆನ್ನಿಗಿಟ್ಟುಕೊಂಡ ಈ ದೆವ್ವಾಂಶಸಂಭೂತನನ್ನು ಕರೆತಂದು ದೊಡ್ಡತೋಗೂರಿನ ಕಾಂಗ್ರೆಸ್ ಕಾರ್ಯಕರ್ತರ ಹೆಗಲಿಗೆ ಹಾಕಿದ್ದು ಮಾನ್ಯ ಮಂತ್ರಿಗಳಾದ ಡಿಕೆಶಿ ಸಾಹೇಬರು!

ಡಿಕೆಶಿ ಅಕ್ಕನ ಮಗ ವಿನೋದ್‌ಗೌಡನಿಗೆ ಅದೇನು ಹಿಡಿದನೋ, ಅದೇನು ಮಾಡಿದನೋ ಗೊತ್ತಿಲ್ಲ, ಯಾರೇನೇ ಅಂದರೂ, ಖುದ್ದು ದೊಡ್ಡತೋಗೂರಿನ ಕಾಂಗ್ರೆಸ್ ಕಾರ್ಯಕರ್ತರೇ ಎದೆಬಡಿದುಕೊಂಡರೂ ದಡಿಯಾ ಪುಟ್ಟನ ಮೇಲಿ ಡಿಕೆ ಬ್ರದರ್ಸ್‌ಗಳ ವ್ಯಾಮೋಹ ತಗ್ಗುತ್ತಿಲ್ಲ.


ಇಲ್ಲಿಗೆ ಕೇವಲ ಹತ್ತು ವರ್ಷಗಳ ಹಿಂದಿನ ಕತೆ. ಬೆಂಗಳೂರು ಮಹಾನಗರಪಾಲಿಕೆ ಪಕ್ಕದ ಪಲ್ಲವಿ ಚಿತ್ರಮಂದಿರದ ಹಿಂದೊಂದು ಸ್ಲಂ ಮಾದರಿಯ ವಠಾರವಿತ್ತು, ಅಲ್ಲೇ ಮಟನ್ ಸ್ಟಾಲ್ ತೆರೆದವನು ಪುಟ್ಟರಾಜು. ಈತನಿಗೆ ಮೂವರು ಐನಾತಿ ಬ್ರದರ್‌ಗಳಿದ್ದರು. ಸಣ್ಣಪುಟ್ಟ ವಿಷಯಕ್ಕೂ ತನ್ನ ದಾಂಡಿಗ ಸಹೋದರರನ್ನೇ ಕಟ್ಟಿಕೊಂಡು ಬಡಿದಾಟಕ್ಕಿಳಿಯುತ್ತಿದ್ದ ಪುಟ್ರಾಜುವಿಗೆ ಬೇಗೂರಿನ ಗೊಲ್ಲಬಾಲ ಮತ್ತು ಫ್ರಾನ್ಸಿಸ್ ಎಂಬಿಬ್ಬರು ಕ್ರಿಮಿನಲ್‌ಗಳ ಪರಿಚಯವಾಗಿದ್ದು ಸೆಂಟ್ರಲ್ ಜೈಲಿನ 'ಎಂಟ್ರಿ'ಯಲ್ಲಿ!

ಅವರಿಬ್ಬರೂ ಖತರ್‌ನಾಕ್ ಪಾತಕಿ ಜೆಸಿಬಿ ನಾರಾಯಣನ ಶಿಷ್ಯರು. ಹೀಗೆ ಹೊತ್ತುಗೊತ್ತಿಲ್ಲದೆ ಸಿಕ್ಕಸಿಕ್ಕ ರೌಡಿಗಳನ್ನು ಪರಿಚಯಿಸಿಕೊಂಡು ಗ್ಯಾಂಗ್‌ಕಟ್ಟಿ ಹಾವಳಿಯಿಡಬೇಕಾದ ವಿಚಿತ್ರ ಅನಿವಾರ್ಯತೆಯೊಂದಕ್ಕೆ ಪುಟ್ಟನನ್ನು ಬೀಳಿಸಿದ್ದು ರಿಯಲ್ ಎಸ್ಟೇಟ್ ಕುಳ ರಾಜೇಶ್. ಹೊಸೂರು ರಸ್ತೆಯ ಬೇಗೂರು ಸುತ್ತಮುತ್ತ ಸಿಕ್ಕಸಿಕ್ಕ ಜಮೀನಿಗೆಲ್ಲಾ ಕೈಯಿಡುತ್ತಿದ್ದ ರಾಜೇಶನಿಗೆ ತನ್ನ ದಂಧೆಗೆಂದೇ ರೌಡಿಗಳನ್ನು ಪಳಗಿಸಬೇಕಾದ ಹರಕತ್ತಿತ್ತು, ಅದಕ್ಕೆಂದು ಪುಟ್ಟನನ್ನು ಜೊತೆ ಹಾಕಿಕೊಂಡಿದ್ದ. ಆದರೆ ಬರಬರುತ್ತಾ ಪುಟ್ಟನಿಗಿಂತಲೂ ಆತನ ಪತ್ನಿಯೇ ರಾಜೇಶನಿಗೆ ಆಪ್ತಳಾಗಿಬಿಟ್ಟಳು. ಆ ಹೊತ್ತಿಗೆ ತನ್ನ ಮಟನ್‌ಸ್ಟಾಲ್ ಜೊತೆಗೆ 'ದೊನ್ನೆ ಬಿರಿಯಾನಿ' ಅಡ್ಡೆಗಳನ್ನು ಎಲ್ಲೆಂದರಲ್ಲಿ ಶುರುವಿಟ್ಟಿದ್ದ ಪುಟ್ಟನಿಗೆ 'ಬಿರಿಯಾನಿ ಪುಟ್ಟ' ಎಂಬ ಇನ್ನೊಂದು ಬಿರುದು ಪ್ರಾಪ್ತಿಯಾಗಿತ್ತು.

ಕಂಡಕಂಡ ರೌಡಿಗಳನ್ನು ಮೇಲೆಬಿದ್ದು ಪರಿಚಯಿಸಿಕೊಂಡಂತೆಯೇ ಸಿಕ್ಕಸಿಕ್ಕ ಪೊಲೀಸ್ ಅಧಿಕಾರಿಗಳಿಗೆ ಬಿರಿಯಾನಿ ತಿನ್ನಿಸುವುದೂ ಈತನಿಗೆ ಖಯಾಲಿಯಾಯಿತು. ಯಾವತ್ತು ರಾಜೇಶ ತನ್ನ ಪತ್ನಿಯ ಮೇಲೆ ಕಣ್ಣಿಟ್ಟಿದ್ದಾನೆಂಬುದು ಪುಟ್ಟನ ನೆತ್ತಿಗೇರಿತೋ ಕಲಾಸಿಪಾಳ್ಯದ ರಾಮಣ್ಣ ಗಾರ್ಡನ್ ಮತ್ತು ಬೇಗೂರು, ವಿಲ್ಸನ್‌ಗಾರ್ಡನ್ನಿನ ಒಂದಷ್ಟು ಪಾತಕಿಗಳನ್ನು ಕಟ್ಟಿಕೊಂಡಿದ್ದೇ ರಿಯಲ್ ಎಸ್ಟೇಟ್ ಧಣಿ ರಾಜೇಶನನ್ನೇ ಕೊಂದುಬಿಟ್ಟ. ಮೊದಲೇ ಪೊಲೀಸರನ್ನು ಬುಕ್ ಮಾಡಿಕೊಂಡು ಒಂದಷ್ಟು ಪುಡಿರೌಡಿಗಳನ್ನು ಸರೆಂಡರ್ ಮಾಡಿಸಿದನಾದರೂ ರಾಜೇಶನ ಸಂಬಂಧಿಕರು ಕೊಟ್ಟ ದೂರಿನ ಫಲವಾಗಿ ಪುಟ್ಟ ಈ ಕೊಲೆಕೇಸಿಗೆ ಹನ್ನೊಂದನೇ ಆರೋಪಿಯಾಗಬೇಕಾಯ್ತು.

ರಾಜೇಶನ ಹತ್ಯೆಯ ಮೂಲಕ ಆತ ಹೊಸೂರು ರಸ್ತೆಯಲ್ಲಿ ಯಾವ್ಯಾವ ಲ್ಯಾಂಡಿಗೆ ಕೈಯಿಟ್ಟಿದ್ದನೋ ಅದೆಲ್ಲವನ್ನೂ ಪುಟ್ಟನೇ ಆಕ್ರಮಿಸಿಕೊಂಡ. ಪುಟ್ಟನ ಲ್ಯಾಂಡ್ ಹಾವಳಿಗೆ ಮೊದಲ ಬಲಿಪಶುವೇ ಬೇಗೂರಿನ ರಾಮಯ್ಯ, ರೈತಾಪಿ ಹಿನ್ನೆಲೆಯ ರಾಮಯ್ಯನವರಿಗಿದ್ದ ಒಂದೆಕರೆ ಏಳುಗುಂಟೆ ಭೂಮಿಯಲ್ಲಿ ತಾನು ಇಪ್ಪತ್ತು ಗುಂಟೆ ಖರೀದಿಸುತ್ತೇನೆಂದು ಎಂಟ್ರಿಕೊಟ್ಟ ಪುಟ್ಟ ಅಗ್ರಿಮೆಂಟ್‌ಗೆ ಸಹಿ ಮಾಡಿಸುವಾಗ ಮೇಲಷ್ಟೇ 20 ಗುಂಟೆಯ ಪತ್ರವಿಟ್ಟು ಅದರ ಕೆಳಭಾಗದ ದಾಖಲೆಗಳಲ್ಲೆಲ್ಲ 20 ಗುಂಟೆಗೆ ಬದಲಾಗಿ ಪೂರ್ತಿ ಒಂದೆಕರೆ ಏಳು ಗುಂಟೆಯೆಂದು ಟೈಪು ಮಾಡಿಸಿದ್ದ. ನಂಬಿದ ರಾಮಯ್ಯ ಮೇಲಿನದಷ್ಟೇ ಓದಿಕೊಂಡು ಮಿಕ್ಕೆಲ್ಲವೂ ಅದರದ್ದೇ ನಕಲೆಂದುಕೊಂಡು ಸಹಿಯಿಟ್ಟರೆ ಖದೀಮ ಪುಟ್ರಾಜು ಅವರ ಸಮಸ್ತ ಆಸ್ತಿಯನ್ನೆಲ್ಲ ಆಂಧ್ರಾ ಮೂಲದ ರವಿರೆಡ್ಡಿ ಎಂಬಾತನಿಗೆ ಎರಡೂವರೆ ಕೋಟಿಗೆ ಮಾರಿ ಟಾಟಾ ಹೇಳಿದ್ದ. ಐದೋ, ಹತ್ತೋ ಸಾವಿರದ ಅಡ್ವಾನ್ಸ್‌ಕೊಟ್ಟು ಮಿಕ್ಕಂತೆ ಪುಟ್ರಾಜು, ರಾಮಯ್ಯನ ಹೆಸರಿಗೆ ಕೊಟ್ಟಿದ್ದ ಐವತ್ತು ಸಾವಿರದ ಚೆಕ್ಕು ಬೌನ್ಸ್ ಆಗಿ ಬಿದ್ದಿತ್ತು!

ಬೇಗೂರು ಹೋಬಳಿಯ ಬಿಂಗಿಪುರದಲ್ಲಿ ಮುರಳೀಧರ್ ಎಂಬುವವರು ಲೇಔಟ್ ಒಂದನ್ನು ನಿರ್ಮಿಸಿ ಅದೇ ಲೇಔಟಿನ ಮೂಲೆಯೊಂದರಲ್ಲಿ ಮನೆಕಟ್ಟಿಸಿಕೊಂಡು ವಾಸವಿದ್ದರು. ಅವರ ಪತ್ನಿ ಡಾ|| ಗಿರಿಜಮ್ಮ. ಅದೇಹೊತ್ತಿಗೆ ಆನೇಕಲ್‌ಗೆ ಪೊಲೀಸ್ ಇನ್ಸ್‌ಪೆಕ್ಟರಾಗಿದ್ದ ಮಲ್ಲಿಕಾರ್ಜುನರಿಗೆ ಬಿರಿಯಾನಿ ತಿನ್ನಿಸಿಯೇ ಪುಟ್ಟ ಪಳಗಿಸಿಕೊಂಡಿದ್ದ. ಒಂದೆಡೆ ರೌಡಿಪಡೆ ಮತ್ತೊಂದೆಡೆ ಪೊಲೀಸ್ ಬಲವಿತ್ತಲ್ಲ, ಮುರಳೀಧರ್ ಲೇಔಟ್ ಮಾಡಿದ್ದ ಜಮೀನಿನ ಮೂಲ ಮಾಲೀಕರನ್ನೇ ಪಟಾಯಿಸಿದ ಪುಟ್ಟ ಮೊದಲೇ ಮಾರಿದ್ದ ಜಮೀನಿಗೆ ತಾನೊಂದಷ್ಟು ಪುಡಿಗಾಸು ಕೊಟ್ಟು ತನ್ನ ಹೆಸರಿಗೂ ನಕಲಿ ಅಗ್ರಿಮೆಂಟೊಂದನ್ನು ಮಾಡಿಸಿಕೊಂಡ. ಅದೇಹೊತ್ತಿಗೆ ಮುರಳೀಧರ್‌ರ 'ಲೇಔಟ್‌ನಲ್ಲಿ ವಾಸವಿದ್ದ ಸಿಂಗ್ ಎಂಬಾತ ನಿಗೂಢವಾಗಿ ಕೊಲೆಯಾದ. ಇನ್ಸ್‌ಪೆಕ್ಟರ್ ಮಲ್ಲಿಕಾರ್ಜುನ ಮತ್ತು ಪುಟ್ಟ ಸೇರಿಕೊಂಡೇ ಸಿಂಗ್‌ನನ್ನು ಕೊಲೆ ಮಾಡಿದ ಆರೋಪ ಕೇಳಿಬಂದಿತಾದರೂ ತನ್ನೆಲ್ಲಾ ಬುದ್ಧಿ ಬಳಸಿದ ಪುಟ್ಟ ಲೇಔಟ್ ಮಾಲೀಕರಾದ ಮುರಳೀಧರ್ ವಿರುದ್ಧವೇ ಕೊಲೆ ಆರೋಪ ಬರುವಂತೆ ನೋಡಿಕೊಂಡ. ವಿಚಿತ್ರವೆಂದರೆ ಪುಟ್ಟನ ಸಹಚರರಾದ ಮುನಿಯೆಲ್ಲ ಮತ್ತು ಗೊಲ್ಲಬಾಲರೇ ಕೊಲೆಗೆ ಸಾಕ್ಷಿಗಳಾಗಿದ್ದರು!


ಡಾ. ಗಿರಿಜಮ್ಮ

ಇನ್ನು ಇನ್ಸ್‌ಪೆಕ್ಟರ್ ಮಲ್ಲಿಕಾರ್ಜುನ್ ಕೇಳಬೇಕೆ? ಲೇಔಟ್ ಮಾಲಿಕ ಮುರಳೀಧರ್ ಅವರ ಪತ್ನಿ ಡಾ|| ಗಿರಿಜಮ್ಮ ಮತ್ತು ವಿದ್ಯಾರ್ಥಿಯಾಗಿದ್ದ ಅವರ ಮಗನನ್ನೂ ಬಿಡದೆ ಜೈಲುಪಾಲು ಮಾಡಿಬಿಟ್ಟರು. ಗಂಡ, ಹೆಂಡತಿ, ಮಗ ಸೇರಿ ಒಂಬತ್ತು ತಿಂಗಳು ಜೈಲು ಸವೆಸಿದರೂ ಜಾಮೀನು ಸಿಗದಂತೆ ಪುಟ್ಟ ನೋಡಿಕೊಂಡಿದ್ದ. ಹತ್ತನೇ ತಿಂಗಳಿಗೆ ತಾಯಿ, ಮಗನಿಗೆ ಜಾಮೀನು ಸಿಕ್ಕಿತಾದರೂ ಮುರಳೀಧರ್ ಜೈಲಿಂದ ಬಿಡುಗಡೆಯಾಗುವ ಹೊತ್ತಿಗೆ ಎರಡೂವರೆ ವರ್ಷಗಳೇ ಕಳೆದುಹೋದವು. ಮುರಳೀಧರ್ ಜೈಲಲ್ಲಿದ್ದದ್ದನ್ನೇ ಬಳಸಿಕೊಂಡ ಪುಟ್ಟ ಮೊದಲೇ ಸೃಷ್ಟಿಸಿಕೊಂಡಿದ್ದ ನಕಲಿ ದಾಖಲೆಗಳ ಮೇಲೆ ಇಡೀ ಲೇಔಟನ್ನೇ ಚಿಕ್ಕಪೇಟೆಯ ಮಾರ್ವಾಡಿಯೊಬ್ಬನಿಗೆ ಮಾರಿಹಾಕಿದ್ದ.

ಮುಂದೆ ಕೋರ್ಟು ಗಿರಿಜಮ್ಮನವರ ಪರವಾಗಿ ಆದೇಶ ನೀಡಿತಾದರೂ ಆ ಹೊತ್ತಿಗೆ ಪುಟ್ಟ ಸೈಟು ಕೊಂಡವರನ್ನೆಲ್ಲ ಹೆದರಿಸಿ ಖಾಲಿ ಮಾಡಿಸಿದ್ದ ಮತ್ತು ಮಾರ್ವಾಡಿಯಿಂದ ಹತ್ತಾರು ಕೋಟಿ ಕಿತ್ತು ಮುಂಡಾಮೋಚಿದ್ದ!

ಹಾಗಂತ ಪುಟ್ಟ ಅಷ್ಟಕ್ಕೇ ಬಿಡಲಿಲ್ಲ, ಗಿರಿಜಮ್ಮನವರ ಮೇಲೆ ದಲಿತರ ಜಾತಿ ಹೆಸರು ಹಿಡಿದು ಬೈದರೆಂದು ಅಟ್ರಾಸಿಟಿ ಕೇಸೊಂದನ್ನು ಹಾಕಿಸಿದ್ದೇ ಮತ್ತೆ ಪೊಲೀಸರನ್ನು ಬಳಸಿಕೊಂಡು ಜೈಲು ಪಾಲಾಗಿಸಿದ. ಗಿರಿಜಮ್ಮ ಜೈಲು ಸೇರಿದ್ದೇ ತಡ ಅವರಿದ್ದ ಮನೆಗೇ ಬುಲ್ಡೋಜರ್ ನುಗ್ಗಿಸಿ ನೆಲಸಮಗೊಳಿಸಿ ಅವರ ಇಡೀ ಲೇಔಟಿಗೇ ಕಾಂಪೌಂಡ್ ಹಾಕಿಸಿಬಿಟ್ಟ. ಸದ್ಯ ಮುರಳೀಧರ್ ಕುಟುಂಬ ಪೂರ್ತಿ ಬೀದಿಪಾಲು.


ಗಿರಿಜಮ್ಮನ ಮನೆ ಧ್ವಂಸ

ಚಂದಾಪುರದ ಮಾಸ್ಟರ್ ಕೃಷ್ಣಪ್ಪನವರ ಮೂರೆಕರೆ ಖರೀದಿಸುತ್ತೇನೆಂದು ಪ್ರತ್ಯಕ್ಷನಾದ ಪುಟ್ಟ ಈ ಬಾರಿ ವಿಚಿತ್ರ ತಂತ್ರವೊಂದನ್ನು ಪ್ರಯೋಗಿಸಿದ್ದ. ಮೊದಲು ಅಗ್ರಿಮೆಂಟಿಗೆ ಸಹಿ-ನಂತರವೇ ಕ್ಯಾಶು ಎಂದು ಎರಡು ಮೂಟೆ ತುಂಬಾ ನೋಟಿನ ಕಂತೆಗಳನ್ನು ಹೊತ್ತೊಯ್ದು ಮೂರೆಕರೆಗೂ ಸಹಿ ಹಾಕಿಸಿಕೊಂಡ. ಸಹಿ ಮಾಡಿದ್ದ ಕಾಗದ ಹಿಡಿಕೊಂಡಿದ್ದೇ ಮೂರು ಕೋಟಿಯಿದೆ ಎಣಿಸಿಕೊಳ್ಳಿ, ಬೇಗಬೇಗ ಎಣಿಸಿಕೊಳ್ಳಿ, ಇನ್‌ಕಮ್ ಟ್ಯಾಕ್ಸ್‌ನವರೇನಾದರು ರೇಡ್ ಮಾಡಿಬಿಟ್ರೆ ದುಡ್ಡೂ ಗೋತಾ, ಆಸ್ತಿಗೂ ವಕ್ರ... ಎಂದಿದ್ದೇ ಜಾಗ ಖಾಲಿ ಮಾಡಿಬಿಟ್ಟ. ಇತ್ತ ನೋಟಿನ ಮೂಟೆ ಬಿಚ್ಚಿ ನೋಡಿದರೆ ಅದರಲ್ಲಿ ಸಾವಿರದ ನೋಟುಗಳಿಗೆ ಬದಲಾಗಿ ಇದ್ದದ್ದು ಹತ್ತು, ಇಪ್ಪತ್ತು, ಐವತ್ತರ ನೋಟುಗಳ ಕಂತೆಗಳು. ದಿನವಿಡೀ ಕೂತು ಎಲ್ಲಾ ಎಣಿಸಿದರೆ ಮೂರು ಕೋಟಿಗೆ ಬದಲಾಗಿ ಇದ್ದದ್ದು ಬರೀ ಮೂರೂವರೆ ಲಕ್ಷ ಮಾತ್ರ!

ಇದು ದಡಿಯಾ ಪುಟ್ಟನ ದುಬಾಕೋರ್ ಹಾವಳಿಗೆ ಕೆಲ ಸ್ಯಾಂಪಲ್ಲುಗಳಷ್ಟೆ. ಬೆಂಗಳೂರಿನ ಅನೇಕ ಏರಿಯಾಗಳಲ್ಲಿ ಈತನ ಬಿರಿಯಾನಿ ಅಡ್ಡೆಗಳಿವೆ. ವಾರಕ್ಕೊಮ್ಮೆ ಪರಪ್ಪನ ಅಗ್ರಹಾರ ಜೈಲಿನ ಕ್ರಿಮಿನಲ್‌ಗಳಿಗೆ ಬಿರಿಯಾನಿ ರವಾನಿಸುತ್ತಾನೆ. ಸಿಸಿಬಿಯಿಂದ ಹಿಡಿದು ಬೆಂಗಳೂರಿನ ರಿಯಲ್ ಎಸ್ಟೇಟ್ ಉತ್ಪತ್ತಿಯ ಅನೇಕ ಪೊಲೀಸ್ ಠಾಣೆಗಳಿಗೆ ದಿನಂಪ್ರತಿ ಬಿರಿಯಾನಿ ಸಮಾರಾಧನೆ ಮಾಡಿಸುತ್ತಾನೆ. ಕೊಲೆ ಮಾಡಿಸಿ ದಕ್ಕಿಸಿಕೊಂಡಿದ್ದಾನೆ. ಕಿಡ್ನಾಪ್ ಮಾಡಿಸಿ ಕಂಡೋರ ಆಸ್ತಿ ಹೊಡೆದಿದ್ದಾನೆ. ಕಂಡಕಂಡೋರಿಗೆ ಚೆಕ್ಕು ಕೊಟ್ಟು ಮುಂಡಾಯಿಸಿದ್ದಾನೆ. ಸಂಪಂಗಿರಾಮನಗರ ಪೊಲೀಸ್ ಠಾಣೆಯಲ್ಲಿ ತನ್ನ ಮೇಲಿದ್ದ ರೌಡಿಶೀಟನ್ನು ಎತ್ತಿಸಲೆಂದೇ ಶಾಸಕ ಆರ್.ವಿ. ದೇವರಾಜ್‌ಗೆ ಮೂರುಕೋಟಿ ಕೊಟ್ಟೆ ಎಂದು ಅದರ ಪರಿಣಾಮವನ್ನೂ ಲೆಕ್ಕಿಸದೇ ಲೂಸ್‌ಟಾಕ್ ಮಾಡುತ್ತಾನೆ.

ಈಗ ಆತನಿಗೆ ರಾಜಕೀಯದ ಖಯಾಲಿ. ಕಳೆದ ಪಾಲಿಕೆ ಚುನಾವಣೆ ಹೊತ್ತಿಗೆ ಬಿಜೆಪಿ ಟಿಕೆಟ್ಟಿಗಾಗಿ ಕೇಸರಿ ಬಾವುಟ ಹೊದ್ದುಕೊಂಡು ಲಗಾಟೆ ಹೊಡೆದಿದ್ದ. ಈಗ ಕಾಂಗ್ರೆಸ್ ಬಾವುಟ ಹಿಡಿದಿದ್ದಾನೆ. ಡಿಕೆಶಿ ಅಕ್ಕನ ಮಗ ವಿನೋದ್‌ನ ಹಂಗಿಗೆ ಬಿದ್ದು ಸಂಸದ ಸುರೇಶ್ ಸಾಹೇಬರು ದೊಡ್ಡತೋಗೂರಿನ ಟಿಕೆಟ್ಟನ್ನೇನೊ ಕೊಡಿಸಿದ್ದಾರೆ. ರೌಡಿಶೀಟು ಇರುವುದನ್ನು ಪೊಲೀಸರೂ ಮುಚ್ಚಿಡಬಹುದು. ಈತನ ಚೆಕ್‌ಬೌನ್ಸ್ ಪಾಪದ ಫಲವಾದ ವಾರಂಟುಗಳನ್ನೂ ಪೊಲೀಸರು ಮುಚ್ಚಿಡಬಹುದು. ಆದರೆ ನಾಳೆಯೇನಾದರೂ ಈತ ಗೆದ್ದನೆಂದರೆ ದೊಡ್ಡತೋಗೂರಿನ ಅಳಿದುಳಿದ ಸರ್ಕಾರಿ ಭೂಮಿಯನ್ನೂ ನುಂಗಿ ನೀರು ಕುಡಿಯಲಾರನೆಂದು ಏನು ಗ್ಯಾರಂಟಿ? ಇಡೀ ಜಿಲ್ಲಾ ಪಂಚಾಯ್ತಿಯನ್ನೇ ದೋಚಲು ನಿಂತ ನೆಂದರೆ ಬೆಂಗಳೂರು ನಗರ ಜಿ.ಪಂ. ಕಾಪಾಡುವವರ್‍ಯಾರು?

■ ವರದಿಗಾರ

ಬಾಡಿ ವಾರೆಂಟಿದ್ದರೂ ಪೊಲೀಸರೇಕೆ ಬಂಧಿಸುತ್ತಿಲ್ಲ?

ದೊಡ್ಡ ತೋಗೂರಿನ ಜಿಲ್ಲಾ ಪಂಚಾಯ್ತಿ ಕಣಕ್ಕೆ ಮದ್ದಾನೆಯಂತೆ ನುಗ್ಗಿದ ಪುಟ್ಟನ ಹಿಂದೆ ಏನಿಲ್ಲವೆಂದರೆ ಬೆಂಗಳೂರಿನ ಮೂರು ಡಜನ್ ಖತರ್‌ನಾಕ್ ರೌಡಿಗಳ ಹಿಂದಿದೆ. ಅದು ಪೊಲೀಸರಿಗೆ ಗೊತ್ತಿಲ್ಲವೆಂದೇನಲ್ಲ, ಸದ್ಯ ಈತನ ವಿರುದ್ಧ ಸಂಪಂಗಿರಾಮನಗರ ಪೊಲೀಸ್ ಠಾಣೆಗೇ ಕೋರ್ಟು ಬಾಡಿ ವಾರೆಂಟು ಕಳಿಸಿದ್ದಾಗಿದೆ. ಅದು ಬೆಂಗಳೂರು ಮಹಾನಗರ ಪಾಲಿಕೆ ಹಿಂಭಾಗದ ಜಿಯೋ ಹೊಟೇಲ್ ಎದುರಿಗಿರುವ ರತ್ನಮ್ಮ ಎಂಬಾಕೆಯ ಬರೋಬ್ಬರಿ ಇಪ್ಪತ್ತುಕೋಟಿ ಬೆಲೆಬಾಳುವ ಸೊತ್ತಿನ ಗೋಲ್‌ಮಾಲ್.

ಬೆಂಗಳೂರು ನಟ್ಟನಡುವಿನ ಸಂಪಂಗಿರಾಮನಗರದ ಜಿಯೋ ಹೊಟೇಲ್ ಪಕ್ಕದಲ್ಲೇ ಭರ್ಜರಿ ಖಾಲಿ ಸೈಟೊಂದಿತ್ತು, ರತ್ನಮ್ಮ ಎಂಬ ವಿಧವೆಯೊಬ್ಬಳು ಅದಕ್ಕೆ ಬೇಲಿ ಹಾಕಿಸಿ ಬೆಂಗಳೂರಿನ ಯಾವುದೋ ಮೂಲೆಯ ತನ್ನ ಮಗಳ ಮನೆ ಸೇರಿಕೊಂಡಿದ್ದಳು. ಅದು ಆಕೆಯ ಪಿತ್ರಾರ್ಜಿತ ಸೊತ್ತು, ಪಕ್ಕದಲ್ಲೇ ಮಟನ್ ಅಂಗಡಿ ಮಾಡಿ ಹಾವಳಿಯಿಡುತ್ತಿದ್ದ ಪುಟ್ಟನ ಕಣ್ಣಿಗೆ ಬಿತ್ತಲ್ಲ, ಅದಕ್ಕೆಂದು ಜೆಪಿ ನಗರದ ಎಂಟನೇ ಬ್ಲಾಕಿನ ಕೆಂಬತ್ತಹಳ್ಳಿಯ ಸ್ಲಮ್ಮಿನಲ್ಲಿದ್ದ ಇನ್ನಾರೊ ರತ್ನಮ್ಮ ಎಂಬಾಕೆಯನ್ನು ಪತ್ತೆಹಚ್ಚಿದ ಪುಟ್ಟ ಆಕೆಯೇ ಸೈಟಿನ ಒಡತಿ ರತ್ನಮ್ಮ ಎಂಬ ಕತೆಕಟ್ಟಿದ. ಆಕೆಯ ಓಟಿಂಗ್ ಚೀಟಿ, ಆಧಾರ್ ಕಾರ್ಡ್, ಆಕೆಯ ಹೆಸರಲ್ಲಿದ್ದ ವಿದ್ಯುತ್‌ಬಿಲ್ ಎಲ್ಲವನ್ನೂ ಬಳಸಿದ್ದೇ ಜಿಯೊ ಹೊಟೇಲ್ ಪಕ್ಕದ ಇಪ್ಪತ್ತು ಕೋಟಿಯ ಸೊತ್ತನ್ನು ತನ್ನ ಪತ್ನಿ ರೇಣುಕಾಳ ಹೆಸರಿಗೆ ಬರೆಸಿಕೊಂಡ.

ಹಾಗೇ ಪತ್ನಿಯ ಹೆಸರಿಗೆ ನಕಲಿ ದಾಖಲೆ ಬಳಸಿ ಮಾಡಿಕೊಂಡು ಆನಂತರ ಅದನ್ನು ಮಾರ್ವಾಡಿಯೊಬ್ಬನಿಗೆ ಮಾರಿಬಿಟ್ಟ. 20 ಕೋಟಿಯ ಸೊತ್ತು 2 ಕೋಟಿ ಕಮ್ಮಿಗೆ ಸಿಕ್ಕರೆ ಮಾರ್ವಾಡಿಯೇಕೆ ಯಾರು ಬೇಕಾದರೂ ಖರೀದಿಸುತ್ತಾರೆ. 18 ಕೋಟಿ ಜೇಬಿಗಿಳಿಸಿ ಮಾರ್ವಾಡಿಗೆ ಕಂಡೋರ ಸೈಟೊಪ್ಪಿಸಿ ಹಾಲುಕುಡಿದ ಪುಟ್ಟನಿಗೆ ಅದೇ ತನಗೆ ಉರುಳಾದೀತೆಂಬುದು ಗೊತ್ತಿಲ್ಲವೆಂದೇನಲ್ಲ, ಸೈಟಿನ ಅಸಲೀ ಒಡತಿ ಒರಿಜಿನಲ್ ರತ್ನಮ್ಮ ಬಂದು ನೋಡುತ್ತಾಳೆ, ಮಾರ್ವಾಡಿ ಕೂತಿದ್ದಾನೆ. ವಿಧಿಯಿಲ್ಲದೆ ಕೋರ್ಟ್ ಕಟೆಕಟೆಯೇರಿದ ರತ್ನಮ್ಮನ ಪರವಾಗಿ ಕೋರ್ಟು ದಡಿಯಾ ಪುಟ್ಟನನ್ನು ಮೊದಲನೇ ಆತನ ಹೆಂಡತಿ ರೇಣುಕಾಳನ್ನು ಎರಡನೇ ಮತ್ತು ಕೊಂಡ ಮಾರ್ವಾಡಿಯನ್ನು ಮೂರನೇ ಆರೋಪಿಗಳನ್ನಾಗಿಸಿ ಫೋರ್ಜರಿ, ವಂಚನೆ, ಮನಿ ಲಾಂಡರಿಂಗ್ ಕೇಸು ದಾಖಲಿಸಿ ಬಾಡಿ ವಾರೆಂಟ್ ಹೊರಡಿಸಿದೆ. ಅದನ್ನು ಜಾರಿಗೊಳಿಸಿ ಪುಟ್ಟನ ಕೈಗೆ ಕೋಳ ತೊಡಿಸಬೇಕಾದವರು ಸದ್ಯ ಸಂಪಂಗಿರಾಮನಗರ ಪೊಲೀಸ್ ಠಾಣೆಗೆ ಇನ್ಸ್‌ಪೆಕ್ಟರ್ ಆಗಿರುವ ಮಂಜುನಾಥ್.

ಪುಟ್ಟನಿಗೆ ದೊಡ್ಡ ತೋಗೂರಿನ ಜಿ.ಪಂ ಟಿಕೆಟ್ಟು ಸಿಕ್ಕಿರುವುದು ಮಂಜುನಾಥ್ ಸಾಹೇಬರಿಗೆ ಗೊತ್ತಿಲ್ಲವೆಂದೇನಲ್ಲ, ಯಾವುದೇ ಕ್ಷಣದಲ್ಲಾದರೂ ಬಂಧಿಸಿ ಕೋರ್ಟಿಗೆ ಎಳೆದೊಯ್ಯುವುದು ಪೊಲೀಸರಿಗೆ ಕಷ್ಟವೆಂದಲ್ಲ, ಆದರೆ ಹೊಡೆದ ಕೊಳ್ಳೆಯ ಪಾಲಿದೆಯಲ್ಲ; ಪಾಪ, ಪೊಲೀಸರು ತಾನೇ ಏನು ಸನ್ಯಾಸಿಗಳಲ್ಲವಲ್ಲ!

ಅಲೈಯನ್ಸ್ ವಿವಿ: ರೇಪಿಸ್ಟ್ ಕುಲಪತಿ



...ತ್ಯತ ವಕೀಲರಾದ ಸಿ.ವಿ. ನಾಗೇಶ್ ಮತ್ತು ಸಿ.ಎಚ್. ...ಂತರಾಯರು ತಮ್ಮ ವಕೀಲಿ ವೃತ್ತಿಯ ಏನೆಲ್ಲಾ ...ತಲೆಗಾರಿಕೆ ಬಳಸಿ ವಾದಮಂಡಿಸಿದರೂ ಪ್ರತಿಷ್ಠಿತ ...ವಿದ್ಯಾಲಯದ ಕುಲಪತಿ ಜೈಲುಪಾಲಾಗುವುದನ್ನು ...ಲಾಗುತ್ತಿಲ್ಲ. ಅಂತರರಾಷ್ಟ್ರೀಯ ಖ್ಯಾತಿಯ ...ಲಯ ಅದರ ಅಮೆರಿಕನ್ ಸಂಜಾತ ವೈಸ್ ...ಅಂದರೆ ಉಪಕುಲಪತಿ ತನ್ನ ಅಕ್ಕನ ಮಗಳನ್ನೇ ...ರ್ಷಗಳ ಕಾಲ ನಿರಂತರವಾಗಿ ಪೀಡಿಸಿದ, ಕಾಡಿಸಿದ, ...ತ ಮಾಡಿಸಿದ ಮತ್ತು ಬೇಕುಬೇಕೆಂದಾಗಲೆಲ್ಲ ...ಳೆದು ಮುಕ್ಕುತ್ತಿದ್ದ?

...ಲು ಕೊಂಚ ಅಪರೂಪವೆನಿಸಬಹುದಾದ ಈ ...ಡೆದದ್ದು ಬೆಂಗಳೂರಿನ ಅಂತರರಾಷ್ಟ್ರೀಯ ಪ್ರತಿಷ್ಠಿತ ...ನ್ಸ್ ಯೂನಿವರ್ಸಿಟಿ ಎಂಬ ಶಿಕ್ಷಣ ...ಂದರಲ್ಲಿ. ಅದರ ಹಾಲಿ ವೈಸ್ ಚಾನ್ಸಲರ್ ಅಂದರೆ ...ಲಪತಿ ಮಧುಕರ್ ಬಿ. ಅಂಗುರ್ ಎಂಬ ...ಯನೇ ಸದ್ಯ ರೇಪಿಸ್ಟ್ ಪಟ್ಟ ಹೊತ್ತು ಪರಪ್ಪನ ...ರ ಜೈಲುಪಾಲಾದ ಮಹಾನುಭಾವ. ನಂಬಿ ಬಿಡಿ. ...ಗೆ ವಯಸ್ಸೆಷ್ಟು ಗೊತ್ತೆ?

...ಭೋಬ್ಬರಿ ಅರವತ್ತು ವರ್ಷ. ಈತನ ...ರಾಷ್ಟ್ರೀಯ ಪ್ರತಿಷ್ಠೆ, ಅಮೆರಿಕನ್ ಕೌಟುಂಬಿಕ ...ಯದಲ್ಲಿ ನಡೆದ ಈತನ ಅಸಂಖ್ಯ ಪತ್ನಿಯರ ...ಬ್ಬಳ ವಿವಾಹ ವಿಚ್ಛೇದನ, ಕೋರ್ಟಿನಲ್ಲಿ ಆಕೆ ...ಹೇಳಿಕೆ, ಕೋರ್ಟ್ ದಾಖಲೆಗಳಲ್ಲಿ ಅಷ್ಟೇ ...ವಾಗಿ ಮುಚ್ಚಿಹೋದ ಈತನ ವಿಕೃತಿಗಳು, ಆನಂತರ ...ರಿನಲ್ಲಿ ಶುರುವಾದ ಈತನ ಪ್ರಣಯ ಪ್ರಸಂಗಗಳು, ...ಮೇಲೊಬ್ಬರಂತೆ ಸರತಿ ಸಾಲಿನಲ್ಲಿ ಈತನ ...ಗಿ ಬಂದ ಮಹಿಳೆಯರು, ಅವರ ಕಣ್ಣೀರ ಕತೆಗಳು, ...ಲೈಯನ್ಸ್ ಎಂಬ ನಿಗೂಢ ವಿಶ್ವವಿದ್ಯಾಲಯ ...ಕುಲಪತಿಯಾದ ರೀತಿ, ಹಾಗೆ ಕುಲಪತಿಯಾದ ...ಅಲೈಯನ್ಸ್ ವಿವಿಗೆ ಬಂದ ಲಲನೆಯರು, ...ಯರು ಒಬ್ಬೊಬ್ಬರಾಗಿ ಏನೇನೋ ಗತಿಯಾಗಿ ...ದ ದುರ್ಗತಿ. ಹೀಗೆ ಕೆದಕುತ್ತಾ ಹೋದಂತೆಲ್ಲ ...ಳಕ್ಕೆ ಇಳಿಯುವ ಅಲೈಯನ್ಸ್ ವಿವಿ ಮತ್ತದರ ...ಪತಿ ಮಧುಕರ್ ಬಿ. ಅಂಗುರ್‌ನ ಸೋಕಾಲ್ಡ್ ...ಡವೀಗ ಮಡಿವಾಳ ಪೊಲೀಸ್ ಠಾಣೆಯ ಮೂಲಕ ...ೀರುಗೊಂಡಿದೆ.

ಅಕ್ಕನ ಮಗಳು

...ಟಕದ ವಿವಿಧ ಸರ್ಕಾರಿ ವಿಶ್ವವಿದ್ಯಾಲಯಗಳ ...ಳಿತಿಳಿದಿದ್ದ ನಮಗೆಲ್ಲ ಮಣಿಪಾಲ, ಪಿಇಎಸ್, ... ರಾಮಯ್ಯ, ಕ್ರೈಸ್ಟ್ ಇತ್ಯಾದಿ ಖಾಸಗಿ ಯುನಿವರ್ಸಿಟಿ ...ಾವ, ಉತ್ಪತ್ತಿ, ಪ್ರತಿಷ್ಠೆಗಳ ಲೆಕ್ಕಾಚಾರವಿರಲಿಕ್ಕಿಲ್ಲ. ...ದೇಶಗಳ ಶ್ರೀಮಂತರು, ರಾಜಕಾರಣಿಗಳು, ...ಪತಿಗಳ ಮಕ್ಕಳಿಗೇ ಗಾಳ ಹಾಕುವ ಇಂಥ ಖಾಸಗಿ ...ಆಮದನಿಯೂ ಲೆಕ್ಕಕ್ಕೆ ಸಿಗುವಂಥದ್ದಲ್ಲ. ಅಂಥದ್ದೇ ... ಯೂನಿವರ್ಸಿಟಿಗಳ ಪೈಕಿ ಪ್ರತಿಷ್ಠಿತ ...ರ್ಸಿಟಿಯೆಂದೇ ಚಾಲ್ತಿಯಲ್ಲಿರುವುದು ಆನೇಕಲ್ ...ರ ರಸ್ತೆಯ ಅಲೈಯನ್ಸ್ ಯೂನಿವರ್ಸಿಟಿ!

...ಕನ್, ಅಮೆರಿಕನ್, ಮಧ್ಯಪ್ರಾಚ್ಯದ ದೇಶಗಳ ...ಗಳೂ ಸೇರಿದಂತೆ ಹೆಚ್ಚೂಕಮ್ಮಿ ಐದು ...ಷ್ಟು ವಿದ್ಯಾರ್ಥಿಗಳಿರುವ ಇದಕ್ಕೆ ಉಪಕುಲಪತಿ ...ವುದು ಮಧುಕರ್ ಬಿ. ಅಂಗುರ್. ಈತನ ತಮ್ಮ ... ಅಂಗುರ್ ಕೂಡ ಇದೇ ಅಲೈಯನ್ಸ್ ...ರ್ಸಿಟಿಯ ಡೈರೆಕ್ಟರ್‌ಗಳಲ್ಲೊಬ್ಬ. ಈತನ ಅಕ್ಕನ ... ಇದೇ ಯೂನಿವರ್ಸಿಟಿಯಲ್ಲಿ ಮ್ಯಾನೇಜಿಂಗ್ ...ಗಿದ್ದಳು. ಈಗ ತನ್ನ 33 ವರ್ಷದ ಮಗಳನ್ನು ...ದು ವರ್ಷಗಳಿಂದ ಉಪಕುಲಪತಿ ಮಧುಕರ್ ...ವಾಗಿ ಹಿಂಸಿಸಿದ್ದಾನೆಂದು ಮಡಿವಾಳ ಪೊಲೀಸ್ ...ದೂರು ಕೊಟ್ಟಿರುವುದು ಆತನ ಸ್ವಂತ ಅಕ್ಕ!

... ಅಕ್ಕನ ಮಗಳನ್ನೇ ಅಂದರೆ ವಿವಿಯ ವ್ಯವಸ್ಥಾಪಕ ...ಯನ್ನೇ 2011 ರಿಂದಲೂ ತನ್ನ ಪಶುವಾಂಛೆಗೆ ...ಂಡ ವೈಸ್ ಚಾನ್ಸಲರ್ ಮಧುಕರ್ ಅಂಗುರ್ ...ತನ ಅಕ್ಕ ನೀಡಿರುವ ದೂರೊಂದೇ ಚಿತ್ರವಿಚಿತ್ರ ...ಗಳನ್ನು ಬಿಚ್ಚಿಡುತ್ತದೆ. ಮೊನ್ನೆ ಫೆಬ್ರವರಿ 5 ರ ... ಮಡಿವಾಳ ಪೊಲೀಸ್ ಠಾಣೆಗೆ ಬಂದು ದೂರು

ದಾಖಲಿಸಿದ ಮಧುಕರ್ ಅಕ್ಕನ ಪ್ರಕಾರ ಅದು ಹೆಚ್ಚೂಕಮ್ಮಿ ಐದು ವರ್ಷಗಳ ಪಶುವಾಂಛೆ. ತನ್ನ ಇಬ್ಬರು ಹೆಣ್ಣುಮಕ್ಕಳ ಪೈಕಿ 33 ರ ಎರಡನೇ ಮಗಳು ಎಂಬಿಎ ಮುಗಿಸಿದ್ದು 2009 ರ ಮೇ 1 ರಂದು ಅಲೈಯನ್ಸ್ ವಿವಿಯ ಮ್ಯಾನೇಜಿಂಗ್ ಡೈರೆಕ್ಟರ್ ಆಗಿ ಕೆಲಸಕ್ಕೆ ಸೇರಿಕೊಂಡರೆ, ಕುಲಪತಿ ಮಧುಕರ್ ಆಕೆಯ ಮೇಲೇ ಕಣ್ಣು ಹಾಕಿಬಿಟ್ಟ.

ಶಾಮೀಲಾದ ದೂರು

2011ನೇ ಇಸವಿಯಿಂದಲೂ ಮಧುಕರ್ ಆಕೆಯ ಮೇಲೆ ಅತ್ಯಾಚಾರವೆಸಗುತ್ತಲೇ ಬಂದ. ಹೊತ್ತುಗೊತ್ತಿಲ್ಲದ ಹೊತ್ತಿನಲ್ಲಿ ಆಕೆಯನ್ನು ಹಾಸಿಗೆಗೆಳೆಯುತ್ತಿದ್ದ. ಸಹಕರಿಸದೇ ಹೋದರೆ ಕೆಲಸದಿಂದ ಕಿತ್ತು ಹಾಕುತ್ತೇನೆಂದು ಬೆದರಿಸುತ್ತಿದ್ದ. ಪದೇಪದೇ ಅತ್ಯಾಚಾರವೆಸಗಿದ. ಈತನ ಕಾಮಪಿಪಾಸೆಯನ್ನು



ಸಹಿಸಲಾಗದೇ ಮಗಳು 2014 ರ ಏಪ್ರಿಲ್ 24 ರಂದು ಕೆಲಸಕ್ಕೆ ವಿದಾಯ ಹೇಳಿ ಖಿನ್ನತೆಗೊಳಗಾದಳು. ಹಾಸಿಗೆ ಹಿಡಿದಳು. ಹಾಗೇ ಹಾಸಿಗೆ ಹಿಡಿದವಳನ್ನು ಮೊನ್ನೆ ಜನವರಿ 16 ರಂದು ಸಿಕಂದಾರಾಬಾದ್‌ನ ಪ್ರತಿಷ್ಠಿತ ಮನೋವೈದ್ಯಕೀಯ ಆಸ್ಪತ್ರೆಗೊಯ್ದು ಚಿಕಿತ್ಸೆಗೆ ದಾಖಲಿಸಲಾಗಿ ಅಲ್ಲಿ ಆಕೆ ತನ್ನ ಮಾವನೇ ಎಸಗಿದ ಲೈಂಗಿಕ ದೌರ್ಜನ್ಯಗಳ ಕುರಿತಂತೆ ಬಾಯಿಬಿಟ್ಟಳು. ಈ ಬಗ್ಗೆ ಯಾರಲ್ಲಾದರೂ ಬಾಯಿಬಿಟ್ಟೆಯೆಂದರೆ ಕೊಲ್ಲಿಸುತ್ತೇನೆಂದು ಮಧುಕರ್ ಧಮಕಿ ಹಾಕಿದ್ದ. ತನ್ನನ್ನು ಲೈಂಗಿಕವಾಗಿ ದೋಚುವಲ್ಲಿ ಮಧುಕರ್‌ನ ಸಹಾಯಕ ಯೋಗೇಶ್ ಕೂಡ ಪಾಲುದಾರ. ಈತನೇ ಕೂಡುತಾಣದ ವ್ಯವಸ್ಥೆ ಕಲ್ಪಿಸಿಕೊಡುತ್ತಿದ್ದ. ಮಧುಕರ್‌ನ ಮೂರನೇ ಪತ್ನಿ ಪ್ರಿಯಾಂಕ ತನ್ನ ಮೇಲಾದ ಎಲ್ಲಾ ದೌರ್ಜನ್ಯಕ್ಕೂ ಮೂಲ ಕಾರಣಕರ್ತೆ ಮತ್ತು ಈಕೆಯೂ ತನಗೆ ಬೆದರಿಕೆ ಹಾಕಿದ್ದಾಳೆಂದು ಮಗಳು ಬಾಯಿಬಿಟ್ಟಿದ್ದಾಳೆಂದು ಖುದ್ದು ಮಧುಕರ್ ಅಕ್ಕನೇ ತನ್ನ ದೂರಿನಲ್ಲಿ ಪ್ರಸ್ತಾಪಿಸುತ್ತಾಳೆ.

ಸದ್ಯ ದೌರ್ಜನ್ಯಕ್ಕೀಡಾದ ಅಕ್ಕನ ಮಗಳನ್ನು ಪೊಲೀಸರು ವಿಕ್ಟೋರಿಯಾ ಆಸ್ಪತ್ರೆಗೆ ವೈದ್ಯಕೀಯ ಪರೀಕ್ಷೆ ನಿಮಿತ್ತ ದಾಖಲಿಸಿದ್ದಾರೆ. ಫೆಬ್ರವರಿ 6 ರ ಬೆಳಗಿನ ಜಾವ ಮೂರು ಗಂಟೆಗೇ ಮಧುಕರ್‌ನ ಜೆಪಿನಗರದ ಚೇಲಾ ಯೋಗೇಶ್ ಪರಾರಿಯಾಗಿದ್ದಾನೆ. ಮಧುಕರ್ ಪತ್ನಿ ಪ್ರಿಯಾಂಕಾ ಕೂಡ ಪರಾರಿ. ವಿಚಿತ್ರವೆಂದರೆ ಕುಲಪತಿ ಮಧುಕರ್‌ಗೆ ಸದ್ಯ ಅರವತ್ತರ ಇಳಿವಯಸ್ಸಾದರೆ ಆತನ ಮೂರನೇ ಅಧಿಕೃತ ಪತ್ನಿ ಪ್ರಿಯಾಂಕಾಳಿಗಿನ್ನೂ 23 ರ ಹರೆಯ. ಅರವತ್ತರ ವೃದ್ಧನೊಬ್ಬ 23 ರ ಯುವತಿಯನ್ನು ತನ್ನ ಮೂರನೇ ಪತ್ನಿಯಾಗಿ ಹೊಂದಿರುವುದರ ಹಿಂದಿನ ನಿಗೂಢ, ಉದ್ದೇಶ, ಕಾರಣ ಮತ್ತು ಮರ್ಮಗಳೇ ಇಡೀ ಪ್ರಕರಣ ಹಿಂದಿರುವ





ಆಸ್ತಿ, ಅಂತಸ್ತು, ಪ್ರೇಮ, ಕಾಮ, ಕಾಂಚಾಣಗಳ ವಿಕಟ ವೃತ್ತಾಂತವೊಂದರ ಮೇಲ್ಮೈ ಲಕ್ಷಣದಂತಿಲ್ಲವೆ?

ಅಮೆರಿಕದಲ್ಲಿ.....!

ಹೆಚ್ಚೂಕಮ್ಮಿ ಐನೂರು ಕೋಟಿ ರೂಪಾಯಿ ಬೆಲೆಬಾಳುವ ಅಲೈಯನ್ಸ್ ವಿವಿ ಮತ್ತದರ ಕ್ಯಾಂಪಸ್ಸಿನ ಹಿಡಿತಕ್ಕಾಗಿ ಮಧುಕರ್, ಆತನ ತಮ್ಮ ಸುಧೀರ್, ಅಕ್ಕ ಮತ್ತಾಕೆಯ ಕುಟುಂಬದ ಕಚ್ಚಾಟದಂತೆ ಮೇಲುನೋಟಕ್ಕದು ವ್ಯಕ್ತವಾದರೂ ಆಳದಲ್ಲೆಲ್ಲೋ ಕಾಮದ ಹೆಡೆಸರ್ಪ ಇಣುಕುತ್ತಿರುವಂತಿದೆ. ಇಡೀ ಅಲೈಯನ್ಸ್ ವಿವಿಯ ಅಸ್ತಿತ್ವವೇ ನಿಗೂಢವಾಗುತ್ತಾ ಹೋಗುತ್ತದೆ. ಅಷ್ಟಕ್ಕೂ ಇದು ಯಾರ್ಯಾರ ಹಣದಲ್ಲಿ ನಡೆಯುತ್ತಿರುವ ಸಂಸ್ಥೆ? ಇದರ ಹಿಂದೆ ಯಾರ್ಯಾರ ಕಾಣದ ಕೈಗಳಿವೆ? ಶಿಕ್ಷಣ ಕ್ಷೇತ್ರದಲ್ಲಾಗಲಿ ಅಕಾಡೆಮಿಕ್ ವಲಯದಲ್ಲಾಗಲಿ ಹಿಂದೆಂದೂ ಕೇಳರಿಯದ ಮಧುಕರ್ ಅಂಗುರ್ ಯಾರು? ಈತ ಅದ್ಹೇಗೆ ಇಂಥದೊಂದು ವಿಶ್ವವಿದ್ಯಾಲಯದ ಉಪಕುಲಪತಿಯಾದ? ನೇಮಿಸಿದ್ದು ಯಾರು? ಇತ್ಯಾದಿ ಪ್ರಶ್ನೆಗಳನ್ನೆಲ್ಲ ಬದಿಗಿಟ್ಟು ಕೆದಕುತ್ತಾ ಹೋದಂತೆಲ್ಲ ನಿಗೂಢ ಸಂಗತಿಗಳು ಒಂದೊಂದಾಗಿ ಹೊರಬೀಳುತ್ತವೆ. ಮಧುಕರ್ ಅಲೈಯನ್ಸ್‌ನ ಛಾನ್ಸಲರ್ ಆಗಿದ್ದು 2010 ರಲ್ಲಿ, ಅದಕ್ಕೂ ಮುನ್ನ ಅಮೆರಿಕದ ಮಿಚಿಗನ್ ವೀವಿಯಲ್ಲಿ ಮ್ಯಾನೇಜ್‌ಮೆಂಟ್ ಪ್ರಾಧ್ಯಾಪಕನಾಗಿದ್ದ. ತನ್ನ ತಮ್ಮ ಸ್ಥಾಪಿಸಿದ್ದ ಅಲಯನ್ಸ್ ವಿವಿಗೆ ಅಮೆರಿಕದಿಂದಲೇ ಆಗಾಗ ಬಂದು ಪಾಠ ಮಾಡುತ್ತಿದ್ದ. ಇದರರ್ಥ ತಮ್ಮನ ಮೂಲಕ ಅಂಗುರ್ ಕುಟುಂಬವೆಲ್ಲ ಸೇರಿ ಬಂಡವಾಳ ಹೂಡಿ ಖಾಸಗಿ ವಿವಿಯೆಂಬ ಕ್ಯಾಪಿಟೇಶನ್ ಮಳಿಗೆ ತೆರೆದಿರಬೇಕು. ಆದರೆ ಮಧುಕರ್‌ನ ನಿಗೂಢ ಇತಿಹಾಸವಿರುವುದು 1988 ರಲ್ಲಿ. ಆ ಹೊತ್ತಿಗೆ ಮಧುಕರ್ ಬೆಂಗಳೂರಿನ ಐಐಎಂ ಅಂದರೆ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್‌ನಲ್ಲಿದ್ದ. ಅಲ್ಲಿ ಮಧುಕರ್‌ನ ರಸಿಕ ಚೇಷ್ಟೆಗೆ ಬಲಿಯಾದವಳು ವಿದ್ಯಾಮೂರ್ತಿ. ಈಕೆ ಆ ಹೊತ್ತಿಗೆ ಐಐಎಂನಲ್ಲಿ ವಿದ್ಯಾರ್ಥಿನಿ. ಇಬ್ಬರೂ ಮದುವೆಯಾದರಾದರೂ ಮಧುಕರ್‌ನ ರಸಿಕ ಬುದ್ಧಿಗೆ ರೋಸತ್ತ ವಿದ್ಯಾಮೂರ್ತಿ ಪರಸ್ಪರ ಒಪ್ಪಿಗೆಯ ಡೈವೋರ್ಸ್ ಕೊಟ್ಟು ದೂರವಾದಳು.

ಕೇವಲ ಎರಡೇ ವರ್ಷಕ್ಕೆ ಮುರಿದುಬಿದ್ದ ಮಧುಕರ್‌ನ ಮೊದಲ ಮದುವೆಗೆ ಈತನ ತಂದೆತಾಯಿಗಳು ಕೊಟ್ಟ ಪರಿಹಾರವೆಂದರೆ ಆ ಹೊತ್ತಿಗೆ ಕರ್ನಾಟಕ ಹೈಕೋರ್ಟಿನ ಡೆಪ್ಯೂಟಿ ರಿಜಿಸ್ಟ್ರಾರ್ ಆಗಿದ್ದ ಭೀಮರಾಜ್ (ಹೆಸರು ಬದಲಿಸಿದೆ) ರ ಮಗಳು ವಾಣಿರಾಜ್ (ಹೆಸರು ಬದಲಿಸಿದೆ)ಳನ್ನು ನೋಡಿದ್ದೇ ತಿರುಪತಿಯಲ್ಲಿ ಮದುವೆ ಮುಗಿಸಿದ್ದು. ಇದಾಗಿದ್ದು 1992 ರಲ್ಲಿ, ತನ್ನ ಎರಡನೇ ಪತ್ನಿ ಜೊತೆ ಅಮೆರಿಕಕ್ಕೆ ಹೋದ ಮಧುಕರ್ ಒಂದಷ್ಟು ದಿನಗಳ ಕಾಲ ಸಂಸಾರ ಸಾಗಿಸಿದ ಫಲವಾಗಿ ಅನೂಪ ಎಂಬ ಮಗಳು ಮತ್ತು ಆದಿತ್ಯ ಎಂಬ ಗಂಡು ಮಗುವಿನ ತಂದೆಯಾದ. ಆದರೆ ಎರಡನೆ ಪತ್ನಿ ವಾಣಿರಾಜ್ ಕೂಡ ಮೊದಲ ಪತ್ನಿಯಂತೆಯೇ ಅಮೆರಿಕದ ಕೌಟುಂಬಿಕ ನ್ಯಾಯಾಲಯದ ಮೊರೆಹೊಕ್ಕು 2003 ರಲ್ಲಿ ವಿಚ್ಛೇದನ ಪಡೆದಳು.

ಶೋಭಾ ನಿಕ್ಕಂ

ವಿಚ್ಛೇದನ ಕೋರಿ ವಾಣಿರಾಜ್ ಕೋರ್ಟಿಗೆ ನೀಡಿದ ಕಾರಣ Adultery ಅಂದರೆ ವಿವಾಹಬಾಹಿರ ಕಾಮುಕತೆ ಅರ್ಥಾತ್ ಹಾದರ!

ಇತ್ತ ಮಿಚಿಗನ್ ವಿಶ್ವವಿದ್ಯಾಲಯದಲ್ಲೂ ಮಧುಕರ್ ಕೃಷ್ಣಲೀಲೆ ಪುಕಾರೆದ್ದು ಅಲ್ಲಿನ ಎಚ್‌ಒಡಿ ಇನ್ನೇನು ಕಾನೂನುಕ್ರಮ ಜರುಗಿಸಬೇಕೆನ್ನುವಷ್ಟರಲ್ಲಿ ತನ್ನ ಕೆಲಸಕ್ಕೆ ರಾಜೀನಾಮೆ ಒಗಾಯಿಸಿ ಮಧುಕರ್ ವಕ್ಕರಿಸಿದ್ದು ತಮ್ಮ ಸುಧೀರ್ ಹುಟ್ಟುಹಾಕಿದ್ದ ಅಲೈಯನ್ಸ್ ವಿವಿಗೆ. 2005 ರ 2009 ರವರೆಗೂ ಅಲೈಯನ್ಸ್ ವಿವಿಗೆ ಮಧುಕರ್ ವಿಸಿಟಿಂಗ್ ಪ್ರೊಫೆಸರ್ ಆಗಿದ್ದ, ಅಲ್ಲಿಂದಲೇ ಪ್ರತಿಭಾವಂತ ಪ್ರೊಫೆಸರ್‌ಗಳ ಕರೆತಂದು ಉಪನ್ಯಾಸ ಕೊಡಿಸಿ ತಮ್ಮನಿಂದಲೇ ಕಮಿಷನ್ ಹೊಡೆಯುವ ಉಪವೃತ್ತಿಯನ್ನೂ ಮಾಡಿಕೊಂಡಿದ್ದ.

ಹೀಗೆ ತಮ್ಮನ ಯೂನಿವರ್ಸಿಟಿಯಲ್ಲಿ ಅಂಡೆಲೆದು ಕೊಂಡಿದ್ದಾಗಲೇ ಈತನ ಬಲೆಗೆ ಬಿದ್ದವಳು ಶೋಭಾ ನಿಕ್ಕಂ. ಆ ಹೊತ್ತಿಗೆ ಸಾಯಿನಾಥ್ ಎಜುಕೇಷನ್ ಟ್ರಸ್ಟ್‌ನಲ್ಲಿ ಕೆಲಸಕ್ಕಿದ್ದಳು. ಅದ್ಹೇಗೆ ಪರಿಚಯವಾಯಿತೋ ಅದೇನು ಮೋಡಿ ಮಾಡಿದನೋ ಪರಿಚಯ ಅನೈತಿಕ ಸಂಬಂಧವಾಗಿ ಬದಲಾಗಿಹೋಗಿತ್ತು. ಇದರ ಪರಿಣಾಮವೆಂಬಂತೆ ಕೆಲವೇ ದಿನಗಳಲ್ಲಿ ಆಕೆಯ ಪತಿ ನಿಗೂಢವಾಗಿ ಕಣ್ಮರೆಯಾದರೆ ಇತ್ತ ಮಧುಕರ್ ಆಕೆಗೆಂದು ಬಿಟಿಎಂ ಲೇಔಟ್ 2ನೇ ಹಂತದ ಪಿನಾಕಲ್ ಅಪಾರ್ಟ್‌ಮೆಂಟಿನ 302ನೇ ಫ್ಲಾಟು ಖರೀದಿಸಿದ್ದ. 2007 ರಿಂದ 2014 ರವರೆಗೆ ಇದೇ ಪಿನಾಕಲ್ ಅಪಾರ್ಟ್‌ಮೆಂಟ್‌ನ ಶೋಭಾ ನಿಕ್ಕಂಳ ಮನೆಯಲ್ಲೇ ಮಧುಕರ್ ಠಿಕಾಣಿ ಹಾಕಿದ್ದ.

ಅಷ್ಟಕ್ಕೂ ಶೋಬಾ ನಿಕ್ಕಂ ಹೇಳಿಕೊಳ್ಳುವಂತಹ




ಅನುಕೂಲಸ್ಥೆಯೇನಲ್ಲ. ಹಾಗೆಂದು ಮಧುಕರ್ ಕರುಣಾಮಯಿಯೂ ಅಲ್ಲ. 2013 ರ ಹೊತ್ತಿಗೆ ಮಧುಕರ್ ಬದುಕಿನಲ್ಲಿ ಹೊಸ ಮಿಕವೊಂದರ ಪ್ರವೇಶವಾಗಿತ್ತು. ಆಕೆ ಪ್ರಿಯಾಂಕಾ. ಮೂಲತಃ ಧಾರವಾಡದ ಶಂಕರಗೌಡ ಬಂಗೀಗೌಡರ ಎಂಬಾತನ ಮಗಳು ಪ್ರಿಯಾಂಕಾ ಬೆಂಗಳೂರಿನ ಪಿಜಿಯೊಂದರಲ್ಲಿದ್ದುಕೊಂಡು ಸಣ್ಣಪುಟ್ಟ ಟೀವಿ ಸೀರಿಯಲ್ಲುಗಳಲ್ಲಿ ನಟಿಸಿಕೊಂಡಿದ್ದಳು. ಈಕೆಯನ್ನು ಮಧುಕರ್‌ಗೆ ಪರಿಚಯಿಸಿದ್ದು ಸುಮಿತ್ ಕುಂಬ್ರಾ ಎಂಬ ಹೈಟೆಕ್ ಸರಬರಾಜುದಾರ. ಶುರುವಿನಲ್ಲಿ ಆಗಾಗ ಕರೆಸಿಕೊಂಡ ಮಧುಕರ್‌ನನ್ನು ಆಕೆ ಸರಿಯಾಗೇ ಲಾಕ್ ಮಾಡಿಕೊಂಡಿದ್ದು 2014 ರ ಮಾರ್ಚ್‌ನಲ್ಲಿ. ಇನ್ನೇನು ರೇಪ್ ಕೇಸು ದಾಖಲಿಸುತ್ತೇನೆಂದು ಪ್ರಿಯಾಂಕಾ ಅಸಲಿ ಅವತಾರ ತೋರಿಸಿದಾಗಲೇ ವಿಧಿಯಿಲ್ಲದೆ ಮಧುಕರ್ ತಾಳಿಕಟ್ಟ ಬೇಕಾಯಿತು.

ಈಕೆಯ ಕಣ್ಣೊರೆಸಲೆಂದು ಶೋಭಾ ನಿಕ್ಕಂಳನ್ನು ಬಿಟಿಎಂ ಲೇಔಟಿನ ಪಿನಾಕಲ್ ಅಪಾರ್ಟ್‌ಮೆಂಟ್‌ನಿಂದ ಆರ್‌ಟಿನಗರದ ಮತ್ತೊಂದು ಅಪಾರ್ಟ್‌ಮೆಂಟಿಗೆ ಸ್ಥಳಾಂತರಿಸಿದ ಮಧುಕರ್ ಆಕೆಯ ಓಡಾಟಕ್ಕೆಂದು ಕಾರು ತಿಂಗಳಾಂಪ್ರತಿ ಲಕ್ಷದ ಲೆಕ್ಕದ ಹಣವನ್ನು ವಿವಿಯ ಖಾತೆಯಿಂದಲೇ ಪಾವತಿಸುತ್ತಿದ್ದ. ಸದ್ಯ ಈತನ ಮೂರನೇ ಪತ್ನಿಯೆಂದು ಪೊಲೀಸರು ಬೆನ್ನತ್ತಿರುವುದು ಇದೇ ಪ್ರಿಯಾಂಕಾಳನ್ನು. ತನ್ನ ಖಾಸಾ ಅಕ್ಕನ ಮಗಳನ್ನೇ ಪೀಡಿಸುವಂತೆ ಈಕೆ ಪ್ರಚೋದಿಸಿದ್ದೇಕೆ? ಛಾನ್ಸಲರ್ ಮಧುಕರ್ ಅಂಗುರ್‌ನ ಬದುಕಲ್ಲಿ ಬಂದ ಹೆಣ್ಣುಮಕ್ಕಳೆಷ್ಟು? ತನ್ನ 60 ನೇ ವಯಸ್ಸಲ್ಲೂ ಮಧುಕರ್‌ಗೆ ಇದೆಂಥ ಚಪಲ? ಅಥವಾ ಯೌವ್ವನದಲ್ಲಿ ಎಸಗಿದ ಪಾಪಗಳೆಲ್ಲವೂ ಈ ಇಳಿಯಸ್ಸಿನಲ್ಲೇ ಶಾಪವಾಗಿ ಕಾಡುತ್ತಿವೆಯೇ? ಯಾರದೇ ಹಾಕೆ ನಿಯಂತ್ರಣವಿಲ್ಲದೆ ನಾಯಿಕೊಡೆಗಳಂತೆ ತಲೆ ಎತ್ತಿದ ಖಾಸಗಿ ಯೂನಿವರ್ಸಿಟಿಗಳು ಏನೇನೆಲ್ಲಾ ದುರಾಚಾರ ಅನಾಹುತಗಳಿಗೆ ಕಾರಣವಾಗುತ್ತವೆಯೆಂಬುವುದಕ್ಕೆ ಇದಕ್ಕಿಂತ ಬೇಕೆ?

■ ರಾ.ಸೋಮನಾಥ್

ಯೋಗೇಂದ್ರ ಯಾದವ್‌ರ ಕನಸು ಮತ್ತು ಹೊಸ ಪೀಳಿಗೆಯುವರ ಹಳ್ಳಿಗಳು



ಮೊನ್ನೆ ಸಾಗರದಲ್ಲಿ ಸ್ವರಾಜ್ ಅಭಿಯಾನ ಹಾಗೂ ರೈತ ಸಂಘ ಮತ್ತಿತರ ಸಂಘಟನೆಗಳು ನಡೆಸಿದ ಸಮಾವೇಶ ಹತ್ತು ಹಲವಾರು ಸಾಧ್ಯತೆಗಳನ್ನು ಜನರ ಮುಂದೆ ಇಡುವ ಪ್ರಯತ್ನಗಳನ್ನು ಮಾಡಿತು. ಸಮಾವೇಶದಲ್ಲಿ ಭಾಗವಹಿಸಿದ್ದ ಯೋಗೇಂದ್ರ ಯಾದವ್ ಮತ್ತು ದೇವನೂರು ಮಹಾದೇವರವರು ಹೃದಯದ ಮೂಲಕ ಜನರ ಹತ್ತಿರಕ್ಕೆ ತಂದ ಮಾತುಗಳು ನಿಜಕ್ಕೂ ಅಪೂರ್ವ. ಆದರೆ ಈ ಮಾತುಗಳು ಹೊಸ ರಾಜಕೀಯ ಚಿಂತನೆಯೊಂದನ್ನು ಹುಟ್ಟುಹಾಕಬಲ್ಲದೆ ಎಂಬುದೀಗ ಪ್ರಶ್ನೆ.

ಇಡೀ ಭಾರತವನ್ನು ಸುತ್ತು ಹೊಡೆಯುತ್ತಿರುವ ಯೋಗೇಂದ್ರ ಯಾದವ್ ತಮ್ಮ ಸರಳತೆಯಿಂದ ಜನಪರ ಹೋರಾಟಗಳಿಗೆ ಹೊಸ ಶಕ್ತಿ ತುಂಬುತ್ತಿದ್ದಾರೆ ನಿಜ. ಆದರೆ ಈ ಹೋರಾಟಗಳು ಇಂದು ರೈತರನ್ನು ಪರ್ಯಾಯ ರಾಜಕಾರಣಕ್ಕೆ ಅಣಿಗೊಳಿಸುವಲ್ಲಿ ಸೋಲುತ್ತಿರುವುದೇಕೆ ಎಂಬುದು ಇದೀಗ ಬಹು ಮುಖ್ಯ ಪ್ರಶ್ನೆ.

ಎಂಬತ್ತರ ದಶಕದಲ್ಲಿ ಪ್ರೊ. ನಂಜುಂಡ ಸ್ವಾಮಿ ಮತ್ತು ಅವರ ಸಮಾಜವಾದಿ ಆಲೋಚನೆಯ ಗೆಳೆಯರು ರೈತ ಶಕ್ತಿಗೆ ಸ್ವಾಭಿಮಾನ ತಂದುಕೊಟ್ಟವರು ಮಾತ್ರವಲ್ಲ ರೈತರು ದೇಶದ ದೊಡ್ಡ ಶಕ್ತಿ ಎಂಬುದನ್ನು ತಿಳಿಸಲು ಕರ್ನಾಟಕದ ತುಂಬ ಓಡಾಡಿದರು. ಹತ್ತಾರು ವರ್ಷಗಳ ಕಾಲ ಇವರು ನೀಡಿದ ಭಾಷಣ ಪ್ರತಿ ಹಳ್ಳಿಗಳಲ್ಲಿ ಹೊಸ ಹೊಸ ಶಾಲೆಗಳನ್ನೇ ತೆರೆಯಿತು. ರೈತ ನಾಯಕರು ಕರೆಕೊಟ್ಟರೆ ಲಕ್ಷಾಂತರ ರೈತರು ರಾತ್ರಿ ಬೆಳಗಾಗುವುದರೊಳಗೆ ಸೇರುವಷ್ಟು ಶಕ್ತಿ ಪಡೆದು ಕೊಂಡಿತ್ತು. ಇನ್ನು ರೈತರದೇ ಸರ್ಕಾರ ಎಂಬುದು ತೀರ್ಮಾನವಾಗಿತ್ತು. ಆದರೆ ಮುಂದಿನ ದಿನಗಳಲ್ಲಿ ಹೊಸ ರಾಜಕೀಯ ಪಕ್ಷ ಕಟ್ಟಿ ಚುನಾವಣೆ ಎದುರಿಸಿದಾಗ ಲೋಕಸಭೆಗೆ ಸ್ಪರ್ಧಿಸಿದ್ದ ಏಳಕ್ಕೆ ಏಳು ಸಂಘದ ಅಭ್ಯರ್ಥಿಗಳೂ ತಮ್ಮ ಇಡಗಂಟನ್ನೂ ಕಳೆದುಕೊಂಡಿದ್ದರು.

ಯೋಗೇಂದ್ರ ಯಾದವ್ ದೆಹಲಿಯಲ್ಲಿ ನಡೆಸಿದ ಹೊಸ ರಾಜಕಾರಣದಿಂದ ಪ್ರೇರೇಪಿತರಾಗಿ ಇಡೀ ಭಾರತವನ್ನು ಕಟ್ಟುವ ಬಗೆಯನ್ನು ಕಂಡುಕೊಳ್ಳುವ ತವಕದಲ್ಲಿದ್ದಾರೆ. ಆದರೆ ಯೋಗೇಂದ್ರ ಯಾದವ್ ಎಪ್ಪತ್ತು ಮತ್ತು ಎಂಬತ್ತರ ದಶಕದ ರೈತ ಹಾಗೂ ದಲಿತ ಚಳವಳಿ ಕರ್ನಾಟಕದಲ್ಲಿ ಸೃಷ್ಟಿಸಿದ್ದ ಸಂಚಲನದ ಜೊತೆ ಸ್ವಲ್ಪ ಕಾಲ ಪಯಣಿಸಿದರೆ ಸತ್ಯ ಹೊರಬೀಳುತ್ತದೆ. ಆ ಸತ್ಯವನ್ನು ಅಂದರೆ ಆ ಕಾಲದಲ್ಲಿ ರೈತ ಚಳವಳಿ ಯಶಸ್ಸಿನ ತುಟ್ಟ ತುದಿಗೆ ಹೋಗಲು ಕಾರಣವಾಗಿದ್ದ ತಂತ್ರಗಳನ್ನೆ ಇದೀಗ ಬಳಸಲು ಹೊರಟರೆ ಯಶಸ್ಸು ದೊರೆಯುವುದೇ ಎಂಬುದೀಗ ಮತ್ತೊಂದು ಪ್ರಶ್ನೆ. ಲೋಹಿಯಾ, ಜಯಪ್ರಕಾಶ ನಾರಾಯಣ ಅಥವಾ ಅದಕ್ಕಿಂತಲೂ ಹಿಂದೆ ಮಹಾತ್ಮ ಗಾಂಧಿಯವರು ಹೋರಾಟಗಳಿಗೆ ಬಳಸಿದ್ದ ತಂತ್ರಗಳನ್ನು ರೈತ ಸಂಘ ಸಂಪೂರ್ಣ ತೊರೆದು ಹೊಸ ತಂತ್ರಗಳನ್ನ ಕಾಲಕಾಲಕ್ಕೆ ಬದಲಿಸಿಕೊಳ್ಳುತ್ತಾ ಹೋದದ್ದನ್ನು ನೆನಪಿಸಿಕೊಳ್ಳುವುದು ಸೂಕ್ತ.

ರೈತ ಹೋರಾಟಗಳು ಮಾತ್ರವಲ್ಲ ಎಲ್ಲ ಜನಪರ ಹೋರಾಟಗಳೂ ಇಂದು ಯಾವುದೋ ಒಂದು ಐಬಿನಿಂದ ನರಳುತ್ತಿವೆ ಎಂದೆನಿಸುತ್ತದೆ. ಇಂದು ಚಳವಳಿಗಳು ಸಾಕಷ್ಟು ಪ್ರಚಾರ ಪಡೆಯುತ್ತಿವೆ. ಇವರ ಹೋರಾಟಗಳಿಗೆ ಜನ ಸೇರಲಿ ಸೇರದಿರಲಿ ಮಾಧ್ಯಮಗಳಲ್ಲಿ ವರದಿಯಾಗುತ್ತಲಿರುತ್ತವೆ. ಹತ್ತು ಹಲವು ಮಂದಿ ಸಮಾರಂಭವೊಂದರ ಯಶಸ್ವಿಗೆ ಹಗಲಿರುಳೂ ಶ್ರಮ ಹಾಕುತ್ತಾರೆ. ರೈತರನ್ನು ಗೋಳು ಹೊಯ್ದುಕೊಳ್ಳುವ, ಕುತ್ತಿಗೆಗೇ ನೇಣಿನ ಕುಣಿಕೆಯನ್ನು ತಂದೊಡ್ಡುವಂತಹ ಸಮಸ್ಯೆಗಳನ್ನಿಟ್ಟುಕೊಂಡು ಹೋರಾಟಗಳನ್ನು ರೂಪಿಸಿದರೂ ಜನರು ಕ್ಯಾರೇ ಎನ್ನದಿರಲು ಕಾರಣವೇನು? ಈ ಸಂದರ್ಭದಲ್ಲಿ ಯೋಗೇಂದ್ರ ಯಾದವ್ ಕರೆ ಕೊಡುತ್ತಾರೆ. ತಮ್ಮ ಕರೆಯಲ್ಲಿ ಮುಖ್ಯವಾಗಿ ಯುವಸಮೂಹ ಈ ಬಗ್ಗೆ ಎಚ್ಚರವಾಗಬೇಕು ಎನ್ನುತ್ತಾರೆ. ಹೊಸ ಹೊಸ ಪೀಳಿಗೆಯವರ ಬಗ್ಗೆ ಭರವಸೆ ಇಟ್ಟು ಸ್ವರಾಜ್ ಅಭಿಯಾನ್ ಚಳವಳಿಯನ್ನು ಯೋಗೇಂದ್ರ ಅವರು ಹೃದಯ ಸ್ಪರ್ಶಿಯಾಗಿ ಹೆಣೆಯುತ್ತಾ ಹೋಗುತ್ತಾರೆ. ಈಗಾಗಲೆ ಭಾರತದಾದ್ಯಂತ ನೂರಾರು ಸ್ಥಳಗಳಲ್ಲಿ ತಮ್ಮ ಅಭಿಯಾನವನ್ನು ಆರಂಭಿಸಿರುವ ಯೋಗೇಂದ್ರ ಯಾದವ್ ಪ್ರಯತ್ನ ನಿಜಕ್ಕೂ ಅವಿಸ್ಮರಣೀಯ. 1983 ರಲ್ಲಿ ಮಾಜಿ ಪ್ರಧಾನಿ ಚಂದ್ರಶೇಖರ್ ಕನ್ಯಾಕುಮಾರಿಯಿಂದ ಕಾಶ್ಮೀರದವರೆಗೆ ನಡೆಸಿದ ಭಾರತ ಪಾದ ಯಾತ್ರೆಯನ್ನು ನೆನಪಿಸುವ ರೀತಿಯಲ್ಲಿ ಯೋಗೇಂದ್ರರ ಪರ್ಯಟನೆ ನಡೆಯುತ್ತಿದೆ.


ಚಂದ್ರಶೇಖರ್ ಪಾದಯಾತ್ರೆ ನಡೆಸುತ್ತಿದ್ದಾಗ ವಿಶ್ವದ ಆರ್ಥಿಕ ರಂಗ ಈ ರೀತಿಯಲ್ಲಿ ಉದಾರೀಕರಣಕ್ಕೆ ತೆರೆದುಕೊಂಡಿರಲಿಲ್ಲ. ಖಾಸಗೀಕರಣ, ಉದಾರೀಕರಣ, ಜಾಗತೀಕರಣಗಳು ಬಾಲ ಮುದುರಿಕೊಂಡಿದ್ದವು. ಬಹುರಾಷ್ಟ್ರೀಯ ಸಂಸ್ಥೆಗಳು ಕಾಣಿಸುತ್ತಲೇ ಇರಲಿಲ್ಲ. ಆದರೆ ಸ್ವರಾಜ್ ಅಭಿಯಾನ ಆರಂಭವಾಗುತ್ತಿರುವ ಈ ಸನ್ನಿವೇಶದಲ್ಲಿ ಪ್ರತಿಯೊಂದನ್ನೂ ಕಾರ್ಪೊರೇಟ್ ವಲಯ ಹಳ್ಳಿ ಮತ್ತು ಪಟ್ಟಣಗಳಲ್ಲಿರುವವರೆಲ್ಲರ ಬದುಕನ್ನು ನಿಯಂತ್ರಿಸುತ್ತಿದೆ. ನಿರ್ಧರಿಸುತ್ತಿದೆ. ನಿರ್ದೇಶಿಸುವ ಮಟ್ಟಕ್ಕೆ ಬಂದಿದೆ. ಒಂದು ಕಾಲದಲ್ಲಿ ಸರ್ಕಾರದ ನೀತಿ ಮತ್ತು ಯೋಜನೆಗಳ ವಿರುದ್ಧ ನಮ್ಮ ಪ್ರಹಾರದ ಹೋರಾಟಗಳು ಮೈದಳೆದಿದ್ದವು. ಆದರೆ ಇಂದು ಬಹುರಾಷ್ಟ್ರೀಯ ವಲಯಗಳು ನಮ್ಮ ಕಾನೂನುಗಳಿಗೇ ಅತೀತವಾಗಿವೆ. ಹಳ್ಳಿಗಳು ಬಡತನದ ಬವಣೆಯನ್ನು ಬೇರೆ ಬೇರೆ ನಿಟ್ಟಲ್ಲಿ ಯೋಚಿಸುವ ಹಂತಕ್ಕೆ ಬಂದಿವೆ. ಸೂರು ನೀರು ವಿದ್ಯೆ ಇದೀಗ ತನ್ನ ಸರಳತೆ ಕಳೆದುಕೊಂಡಿರುವ ಕಾಲಘಟ್ಟ.

ರೈತರನ್ನು ಬಚಾವು ಮಾಡಿ ದೇಶವನ್ನು ಬಚಾವು ಮಾಡಲು ಹತ್ತಾರು ಪ್ರಯತ್ನಗಳು ದೇಶದಾದ್ಯಂತ ನಡೆಯುತ್ತಿರುವ ಸಂದರ್ಭದಲ್ಲಿ ಯೋಗೇಂದ್ರ ಯಾದವ್ ಯುವಕರ ಮೇಲೆ ಭರವಸೆ ಇಟ್ಟು ಮುಂದೆ ಮುಂದೆ ಹೋಗುತ್ತಿದ್ದಾರೆ. ಆದರೆ ಯುವಕ ವರ್ಗ ಮಾತ್ರ ಕ್ಯಾರೇ ಎನ್ನುತ್ತಿಲ್ಲ. ಗಾಂಧಿ, ಲೋಹಿಯಾಗಳು ಮೇಳೈಸಿರುವ ಅವರ ಚಿಂತನೆಗಳು ಎಲ್ಲ ದೃಷ್ಟಿಯಿಂದಲೂ ಅನುಪಮವಾದುದು ಮತ್ತು ಇಂದಿನ ಅಗತ್ಯ ಕೂಡಾ.

ಸನಾತನಿಗಳು ಮಾತ್ರ ಆಸ್ತಿಕರೇ?

ಏಸುವನ್ನು ಪ್ರಾರ್ಥಿಸುವವರು, ಅಲ್ಲಾನನ್ನು ಧ್ಯಾನಿಸುವವರು ನಾಸ್ತಿಕರಾಗುತ್ತಾರೆಯೇ?

ಇನ್ನು ಐವತ್ತು ವರ್ಷಗಳಲ್ಲಿ ಅಮೆರಿಕ ಆಸ್ತಿಕರ ದೇಶವಾಗುತ್ತದೆ, ಭಾರತ ನಾಸ್ತಿಕರ ದೇಶವಾಗುತ್ತದೆ, ಏಕೆಂದರೆ ನಾವು ಪಾಶ್ಚಾತ್ಯರನ್ನು ಅನುಕರಿಸುತ್ತಿದ್ದೇವೆ, ಅಮೆರಿಕನ್ನರು ಭಾರತೀಯ ಧರ್ಮ-ಸಂಸ್ಕೃತಿ ಮತ್ತು ತತ್ವಜ್ಞಾನಗಳ ಬಗ್ಗೆ ಅಪಾರ ಆಸಕ್ತಿ ಹೊಂದಿದ್ದಾರೆ, ಭಗವದ್ಗೀತೆ, ವೇದ-ಉಪನಿಷತ್‌ಗಳ ಬಗ್ಗೆ ಗೌರವ ತೋರಿಸುತ್ತಾರೆ, ಭಾರತೀಯರೇ ಭಗವದ್ಗಿತೆ ಬಗ್ಗೆ ಅವಹೇಳನಕಾರಿ ಹೇಳಿಕೆಗಳನ್ನು ನೀಡುತ್ತಿರುವುದು ವಿಷಾದನೀಯ ಎಂದು ಈಗತಾನೇ 80 ವಸಂತಗಳನ್ನು ಪೂರೈಸಿಕೊಂಡ ಹಿರಿಯ ವಿದ್ವಾಂಸರಾದ ಡಾ. ಬನ್ನಂಜೆ ಗೋವಿಂದಾಚಾರ್ಯ ಅವರು ನೊಂದು ನುಡಿದಿದ್ದಾರೆ.



ಅಮೆರಿಕದ ವಿಷಯ ಬಿಡಿ, ಆದರೆ ಭಾರತ ಇನ್ನು ಐವತ್ತು ವರ್ಷಗಳಲ್ಲಿ ಪ್ರಜ್ಞಾವಂತರ ದೇಶವಾಗುತ್ತದೆ ಎನ್ನುವುದು ಸಂತೋಷದ ವಿಷಯ ಎಂದು ಚಿಂತಕ ಚಂಪಾರವರು ಪ್ರತಿಕ್ರಿಯಿಸಿರುವುದು ಸರಿಯಾಗಿಯೇ ಇದೆ.

ಚಂಪಾ ಅವರ ಸಂತೋಷದಲ್ಲಿ ನಾನೂ ಭಾಗಿಯಾಗುತ್ತಲೇ ಡಾ. ಬನ್ನಂಜೆ ಗೋವಿಂದಾಚಾರ್ಯರ ಪ್ರಕಾರ ಆಸ್ತಿಕ ಮತ್ತು ನಾಸ್ತಿಕ ಎನ್ನುವುದರ ಅರ್ಥ ಏನಿರಬಹುದೆಂಬುದನ್ನು ತಿಳಿಯಲೆತ್ನಿಸುತ್ತೇನೆ. ದೇವರ ಅಸ್ತಿತ್ವದಲ್ಲಿ ನಂಬಿಕೆ ಇರುವವನು ಆಸ್ತಿಕ-ದೇವರ ಅಸ್ತಿತ್ವವನ್ನೇ ನಿರಾಕರಿಸುವವನು ನಾಸ್ತಿಕ ಎನ್ನುವುದು ನನ್ನಂಥ ಸಾಮಾನ್ಯರ ತಿಳಿವಳಿಕೆ. ಆ ದೇವರು ಶಿವನೇ ಆಗಿರಬಹುದು, ವಿಷ್ಣುವೂ ಆಗಿರಬಹುದು, ಅಲ್ಲಾ ಯೇಸು ಯಾರಾದರೂ ಆಗಿರಬಹುದು.

ಅಮೆರಿಕದ ಬಹುಸಂಖ್ಯಾತ ಕ್ರಿಶ್ಚಿಯನ್ನರು ಏಸುವಿನಲ್ಲಿ ಅಪಾರ ನಂಬಿಕೆಯುಳ್ಳವರಾಗಿದ್ದು ಅವರೆಲ್ಲರೂ ಈಗಲೂ ಆಸ್ತಿಕರೇ ಆಗಿದ್ದಾರೆ. 11 ಸೆಪ್ಟೆಂಬರ್ 2001 ರ ದುರಂತ ನಡೆದ ದಿನ ನಾನು ಅಮೆರಿಕಾದಲ್ಲೇ ಇದ್ದೆ. ಅಂದು ಅಲ್ಲಿನ ಜನ ಬಹಳ ಆತಂಕಕ್ಕೀಡಾಗಿದ್ದರು. ಹತ್ತು ಫ್ಲೈಟ್ಸ್ ಹೈಜಾಕ್ ಆಗಿವೆಯಂತೆ ಎಂದು ಒಬ್ಬರು, ಹದಿನೈದು ಫ್ಲೈಟ್ಸ್ ಹೈಜಾಕ್ ಆಗಿವೆಯಂತೆ ಎಂದು ಇನ್ನೊಬ್ಬರು, ಹಾಗಂತೇ ಹೀಗಂತೇ ಎನ್ನುವ ಅಂತೆ-ಕಂತೆಗಳದ್ದೇ ಕಾರುಬಾರು. ತಾಂತ್ರಿಕವಾಗಿ ಎಷ್ಟೆಲ್ಲಾ ಮುಂದುವರಿದಿದ್ದರೂ ಆ ಜನರ ವರ್ತನೆ ಕೂಡ ನಮ್ಮ ದೇಶದ ಜನರಿಗಿಂತ ಅಷ್ಟೇನೂ ಭಿನ್ನವಾಗಿಲ್ಲ ಎನ್ನುವುದು ಅಂದು ನನ್ನ ಅರಿವಿಗೆ ಬಂತು, ಅಷ್ಟೇ ಅಲ್ಲ, ಅಂದು ಅಮೆರಿಕದ್ಯಂತ ಪ್ರತಿವಾಹನಗಳು, ಪ್ರತಿ ರಸ್ತೆ ಪ್ರತಿಯೊಂದು ಸರ್ಕಲ್‌ಗಳಲ್ಲೂ "We believe in God (ನಾವು ದೇವರಲ್ಲಿ ನಂಬಿಕೆ ಇಟ್ಟಿದ್ದೇವೆ) ಎನ್ನುವ ಬರಹಗಳು ರಾರಾಜಿಸತೊಡಗಿದವು. ಆ ಮೂಲಕ ನಮ್ಮದು ಆಸ್ತಿಕರ ದೇಶ ಎನ್ನುವ ಸಂದೇಶವನ್ನು ಅಮೆರಿಕನ್ನರು ಜಗತ್ತಿಗೇ ಸಾರಿ ಹೇಳಿದ್ದರು.

ಆದರೆ ಗೋವಿಂದಾಚಾರ್ಯರ ಈ ಹೇಳಿಕೆಯಿಂದ ಭಾರತದ ಸನಾತನ ಧರ್ಮಾಚರಣೆಯನ್ನು ಆಚರಿಸಿದರೆ ಮಾತ್ರ ಆಸ್ತಿಕರಾಗುತ್ತಾರೆ, ಏಸುವನ್ನೊ, ಅಲ್ಲಾನನ್ನೋ ಪೂಜಿಸಿದರೂ ಅವರು ನಾಸ್ತಿಕರೇ ಆಗುತ್ತಾರೆ ಎಂದು ತೀರ್ಮಾನಿಸಿದಂತಾಗಿದೆ. ಅಲ್ಲಾನನ್ನು ಬಿಟ್ಟು ಇನ್ನಾರನ್ನೇ ಪೂಜಿಸಿದರೂ ಅವರು ಕಾಫರರೇ ಆಗುತ್ತಾರೆ ಎಂದು ಖುರಾನ್‌ನಲ್ಲಿ ಹೇಳಿದೆ (ಹಾಗೆ ಹೇಳಿರುವುದು ನಿಜವೋ, ಸುಳ್ಳೋ ನನಗೆ ಗೊತ್ತಿಲ್ಲ, ಹಾಗೆ ಹೇಳಲಾಗಿದೆ ಎಂದು ಪರಮ ಹಿಂದೂ ವಿದ್ವಾಂಸರು ವಾದಿಸುವುದನ್ನು ನಾನು ಕೇಳಿದ್ದೇನೆ) ಎಂದು ಹೇಳುವವರಿಗೂ, ಇವರಿಗೂ ಏನೇನು ವ್ಯತ್ಯಾಸವಿಲ್ಲ. ಡಾ. ಬಿ.ವಿ. ವಿವೇಕ್ ರೈ ಅವರು ಹೇಳುವಂತೆ ವರ್ಣ, ದೇಶ, ಗುಂಪುಗಾರಿಕೆಯ ಗಡಿಯಿಲ್ಲದೆ ವಿಶ್ವಗುರುವಿನ ಸ್ಥಾನ ಅಲಂಕರಿಸಿರುವ ಸಾಕ್ಷಾತ್ ಬನ್ನಂಜೆ ಗೋವಿಂದಾಚಾರ್ಯರೇ ಇಷ್ಟೊಂದು ಸಂಕುಚಿತವಾಗಿ ಚಿಂತಿಸುತ್ತಾರೆ ಎಂದಮೇಲೆ ಪೇಜಾವರ ಶ್ರೀಗಳಂಥವರು ಇನ್ನು ಹೇಗೆ ಮಾತನಾಡಲು ಸಾಧ್ಯ ಅಲ್ಲವೇ?

-ಪ್ರಕಾಶರಾಜ್ ಮೇಹು

ವಯ್ಯಾರಿ ರವಿಶಂಕರನ ಷಡ್ಯಂತ್ರ

ಮಹಾರಾಷ್ಟ್ರದ ಶಿಂಗ್ಣಾಪುರದ ಶನಿ ದೇವಾಲಯದಲ್ಲಿ ಮಹಿಳೆಯರ ಪ್ರವೇಶಕ್ಕೆ ನಿರ್ಬಂಧ ವಿಧಿಸಿರುವ ವಿವಾದದಲ್ಲಿ ಮಧ್ಯಸ್ಥಿಕೆ ವಹಿಸಿರುವ ಬೆಂಗಳೂರಿನ ರವಿಶಂಕರ್ ಗುರೂಜಿ ಪರಿಹಾರ ಸೂತ್ರ ರೂಪಿಸಿದ್ದಾರಂತೆ. ಅದೇನು ಗೊತ್ತೇ? ಮಹಿಳೆಯರು ಮಾತ್ರವಲ್ಲ ಪುರುಷರೂ ಶನಿದೇವರ ದರ್ಶನ ದೂರದಿಂದ ಮಾತ್ರ ಪಡೆಯಬಹುದು, ಗರ್ಭಗುಡಿಯ ಚಬುತರಾದ ಹೊರಗೆ ನಿಂತು ದರ್ಶನ ಪಡೆಯಲು ಮಾತ್ರ ಎಲ್ಲರಿಗೆ ಅನುಮತಿ ನೀಡಲಾಗಿದೆ. ಮೊದಲಿನಂತೆ ಭಕ್ತರು ಗರ್ಭಗುಡಿಯ ಒಳಗೆ ಹೋಗಿ ತಮ್ಮ ತಮ್ಮ ಕೈಯಿಂದಲೇ ಶನಿಯ ಕಲ್ಲಿನ ಮೇಲೆ ಎಣ್ಣೆ ಸುರಿಯುವಂತಿಲ್ಲ, ತಾವು ತಂದ ಎಳ್ಳೆಣ್ಣೆಯನ್ನು ಅರ್ಚಕನಿಗೆ ಕೊಟ್ಟು ಅವರು



ಗರ್ಭಗುಡಿಯಿಂದ ಹೊರಗೆ ನಿಲ್ಲಬೇಕು. ಅರ್ಚಕ ಮಾತ್ರ ಒಳಗೆ ಹೋಗಿ ಮೂರ್ತಿಯ ಮೇಲೆ ಎಣ್ಣೆ ಸುರಿಯಲು ಅನುಮತಿ ಇದೆ. ಚಬುತರಾದ ಒಳಗೆ ನೆಲದಲ್ಲಿ ಯಾವಾಗಲೂ ಎಣ್ಣೆ ಸುರಿಯುವುದರಿಂದ ಅಲ್ಲಿ ಭಕ್ತರು ಜಾರಿ ಬಿದ್ದು ಅನಾಹುತವಾಗದಂತೆ ಈ ವ್ಯವಸ್ಥೆ ಮಾಡಲಾಗಿದೆ ಎನ್ನುವ ಬಾಲಿಶ ಸ್ಪಷ್ಟೀಕರಣ ವಯ್ಯಾರಿ ಗುರೂಜಿ ಕೊಟ್ಟಿದ್ದಾನಂತೆ.

ನೋಡಿ, ಎಷ್ಟು ನಯವಾಗಿ ಬ್ರಾಹ್ಮಣ ಪುರೋಹಿತರ ವಿನಃ ಬೇರೆಯವರು ಒಳಗೆ ಹೋಗದಂತೆ ಯುಕ್ತಿ ಮಾಡಲಾಗಿದೆ. ಮೊದಲು ಮಹಿಳೆಯರನ್ನು ಪ್ರಚೋದಿಸಿ ವಿವಾದ ಎಬ್ಬಿಸಲಾಯಿತು, ನಂತರ ಗಂಡು-ಹೆಣ್ಣು ಇಬ್ಬರಿಗೂ ಗರ್ಭಗುಡಿ ಒಳಗೆ ಪ್ರವೇಶ ಬೇಡವೆಂದು ಶೂದ್ರ ಗಂಡಸರು ಹಾಗೂ ಮಹಿಳಾ ಭಕ್ತರಿಂದಲೇ ಹೇಳಿಸಲಾಯಿತು. ಕೊನೆಗೆ ಭಕ್ತರ ಆಗ್ರಹದಂತೆಯೇ ಈ ಹೊಸ ವ್ಯವಸ್ಥೆ ಮಾಡಲಾಯಿತು ಎಂದು ಹೇಳಿಕೆ ಕೊಡಲಾಯಿತು. ಶೂದ್ರ ಗಂಡಸರನ್ನು ಹಾಗೂ ಮಹಿಳೆಯರನ್ನು ಹೊರಗೇ ಇಡಲು ಹೇಗಿದೆ ವೈದಿಕರ ಈ ಚದುರಂಗದಾಟ!

ಹೀಗೆ ಜಾತಿಭೇದ ಮತ್ತು ಲಿಂಗ ತಾರತಮ್ಯ ಮಾಡಿ ತಮ್ಮ ಕಾರ್ಯ ಸಾಧಿಸುವ ವೈದಿಕ ತಂತ್ರ ತುಂಬಾ ಹಿಂದಿನಿಂದ ಬಂದಿರುವಂತಹದ್ದು, ಇಂತಹ ಜಾತಿವಾದಿ, ಮಹಿಳಾ ವಿರೋಧಿ ಕುತಂತ್ರಿ ರವಿಶಂಕರ ಗುರೂಜಿಯ ಹೆಸರು ನೊಬೆಲ್ ಶಾಂತಿ ಪ್ರಶಸ್ತಿಗೆ ಬೇರೆ ಶಿಫಾರಸು ಮಾಡಲಾಗಿದೆಯಂತೆ. ಇದರಿಂದ ಆ ನೋಬೆಲ್ ಮಹಾಶಯನ ಆತ್ಮ ಗೋರಿಯಲ್ಲಿಯೇ ಹೊರಳಾಡುತ್ತಿರಬಹುದು.

ಇದೇ ಆಟ ಮಂಗಳೂರಿನ ಒಂದು ದುರ್ಗಾ ಪರಮೇಶ್ವರಿ ದೇವಳದಲ್ಲೂ ಕೆಲ ವರ್ಷಗಳ ಹಿಂದೆ ಆಡಲಾಯಿತು. ಸಂಪೂರ್ಣ ಶೂದ್ರರ ಆಡಳಿತದಲ್ಲಿದ್ದ ಆ ದೇವಾಲಯದ ಆಡಳಿತ ಮಂಡಳಿಯ ಎರಡು ಗುಂಪಿನ ನಡುವೆ ಅರ್ಚಕರು ಕುತಂತ್ರ ಮಾಡಿ ವೈಮನಸ್ಸು ಹುಟ್ಟಿಸಿದರು. ನಂತರ ಅರ್ಚಕರು ಶೂದ್ರರ ನಡುವಿನ ವೈಮನಸ್ಸಿಗೆ ಎಣ್ಣೆ ಸುರಿಯುತ್ತಾ ಹೋದರು. ಕೊನೆಗೆ ವಿವಾದ ತಾರಕಕ್ಕೇರಿದಾಗ ರಾಜೀ ಸೂತ್ರವಾಗಿ ಎರಡೂ ಗುಂಪಿನ ಶೂದ್ರರು ಆಡಳಿತದಲ್ಲಿ ಇರುವುದು ಬೇಡ ಬದಲಿಗೆ ಮುಖ್ಯ ಅರ್ಚಕನನ್ನೇ ಮೊಕ್ತೇಸರ (ಧರ್ಮದರ್ಶಿ) ಎಂದು ಆರಿಸುವುದು ಎಂದು ಶೂದ್ರರಲ್ಲಿ ಒಪ್ಪಂದ ಮಾಡಿಸಲಾಯಿತು. ಹೀಗೆ ಆ ಶ್ರೀಮಂತ ದುರ್ಗಾ ಪರಮೇಶ್ವರಿ ದೇವಸ್ಥಾನದ ಆಡಳಿತ ನಯವಾಗಿ ಕೈವಶ ಮಾಡಿಕೊಂಡ ವೈದಿಕ ಗಣ ನಂತರ ದೇವಳದಲ್ಲಿ ತಮ್ಮ ಮನಸ್ಸಿಗೆ ಬಂದಂತೆ ದುರಾಡಳಿತ ನಡೆಸಿ ಕೋಟ್ಯಾಧೀಶರಾದರು.

ಎಲ್ಲೆಡೆಯೂ ಶೂದ್ರರನ್ನು ದೇವಸ್ಥಾನದ ಆಡಳಿತದಿಂದ ನಯವಾದ ಯುಕ್ತಿಯಿಂದ ತೆಗೆದುಹಾಕಲು ವೈದಿಕರು ಇದೇ ಕುಟಿಲ ನೀತಿ ಅನುಸರಿಸುತ್ತಿದ್ದಾರೆ. ಶೂದ್ರರು ತಮ್ಮಲ್ಲಿಯೇ ಒಣಪ್ರತಿಷ್ಠೆ ದುರಭಿಮಾನದ ತಾಕಲಾಟ ಮಾಡುತ್ತಾ ತಮ್ಮತಮ್ಮಲ್ಲೇ ಜಗಳಾಡಿಕೊಂಡು ಶ್ರೀಮಂತ ದೇವಸ್ಥಾನಗಳ ಆಡಳಿತ ತಾವಾಗಿಯೇ ವೈದಿಕರ ಕೈಗೆ ಕೊಡುವಂತಹಾ ಭೂಮಿಕೆ ಬ್ರಾಹ್ಮಣರು ಎಲ್ಲೆಡೆ ನಯವಾಗಿ ಸೃಷ್ಟಿಸಿದ್ದಾರೆ. ದಡ್ಡ ಶೂದ್ರರು ಇದನ್ನು ಅರ್ಥ ಮಾಡಿಕೊಳ್ಳದಿರುವುದು ದುರಂತ.

● ಆರ್.ಬಿ. ಶೇಣವ, ಮಂಗಳೂರು

...ನ್ನೆ ಸಾಗರದಲ್ಲಿ ನಡೆದ 'ರೈತಾಪಿ ಉಳಿಸಿ ದೇಶ ಉಳಿಸಿ' ಸಮಾವೇಶವು ಯುವಕರನ್ನು ಸೆಳೆಯುವಲ್ಲಿ ಸೋತಿದೆ. ...ಗರ ಮಾತ್ರವಲ್ಲ ಎಲ್ಲ ಕಡೆಯೂ ಇದೇ ಪರಿಸ್ಥಿತಿ. ...ಲ್ಲಿ ಹೋರಾಟಗಳಿಂದಲೂ ದೂರ ಉಳಿಯುವ ಈ ...ಯುವಕರ ಮನೋಧರ್ಮವಾವುದು? ಈ ...ನೋಧರ್ಮದಲ್ಲಿ ತಪ್ಪೇನಿದೆ? ಹಾಗಿದ್ದರೆ ಇವರನ್ನು ...ದಾರಿಗೆ ತರಲು ಮಾಡಬೇಕಾದ್ದೇನು? ಈ ಬಗ್ಗೆ ...ದಲು ಚಿಂತಿಸಬೇಕಿದೆ.

ಎಂಭತ್ತರ ದಶಕದಲ್ಲಿ ರೈತ ಮತ್ತು ದಲಿತ ಚಳವಳಿಗಳು ...ರೆದಾಡುತ್ತಿದ್ದಾಗ ರಸ್ತೆಗಳ ತುಂಬೆಲ್ಲ ಯುವ ...ರ್ಯಕರ್ತರುಗಳೇ ಕಾಣುತ್ತಿದ್ದರು. ಆದರೆ ಮೊನ್ನೆ ...ಗರದಲ್ಲಿ ಶಿವಾನಂದ ಕುಗ್ವೆ, ವಸಂತ ಕುಮಾರ್, ಕೆ.ಟಿ ...ಗಾಧರ್ ಮುಂತಾದವರು ನಡೆಸಿದ್ದ ಸಮಾವೇಶದಲ್ಲಿ ...ಡ ಮುಖಗಳೆಲ್ಲ ಎಂಬತ್ತರ ದಶಕದಲ್ಲಿ ಕಂಡ ಮುಖಗಳೇ ...ಗಿದ್ದವು. ಅವರೇ ಹಸಿರು ಶಾಲು ಹೊತ್ತಿದ್ದರು. ಹೊಸದಾಗಿ ...ದಾರು ಮಂದಿಯೂ ಸೇರಿರಲಿಲ್ಲ. ಈ ರೀತಿ ಯೋಗೇಂದ್ರ ...ಾದವ್ ಮತ್ತು ದೇವನೂರು ಮಹದೇವರ ಮಾತುಗಳನ್ನು ...ಳುತ್ತಾ ಕುಳಿತವರೆಲ್ಲ ಎಂಬತ್ತರ ದಶಕದಲ್ಲಿ ಹತ್ತಾರು ...ರಿ ಇಂತಹ ಭಾಷಣಗಳನ್ನು ಕೇಳಿದವರು ಮತ್ತು ...ವರುಗಳೇ ದೇವನೂರು ಮತ್ತು ಯಾದವರಿಗಿಂತ ಚನ್ನಾಗಿ ...ತ್ತು ಪರಿಣಾಮಕಾರಿಯಾಗಿ ದೇಶದ ರೈತರ ಪಾಡನ್ನು ...ರ್ಣಿಸಬಲ್ಲ ಸಶಕ್ತರು. ಆರ್ಥಿಕ ಉದಾರೀಕರಣ ಮತ್ತು ...ಸಮಾನತೆಗಳ ವಿರುದ್ಧ ಕಠಿಣ ಪದಗಳ ಮೂಲಕ ...ರ್ಗಳವಾಗಿ ನಿರ್ಭಿಡೆಯಿಂದ ಉದ್ಘೋಷಿಸುವಷ್ಟು ...ಮರ್ಥರೂ ಕೂಡಾ.

ಯೋಗೇಂದ್ರ ಯಾದವ್ ಅವರು ಪತ್ರಿಕೆಯೊಂದಕ್ಕೆ ...ಡಿದ್ದ ಸಂದರ್ಶನದಲ್ಲಿ ಕೋಮು ಸೌಹಾರ್ದತೆ ಅಥವಾ ...ಂಷ್ಣುತೆಯ ಪರವಾಗಿರುವವರು ತಮ್ಮ ಪರಿಭಾಷೆಗಳನ್ನು ...ದಲಾಯಿಸಿಕೊಳ್ಳಬೇಕು ಎಂದು ಹೇಳಿದ್ದಾರೆ. ಅಂತೆಯೆ ...ೋರಾಟ ಮತ್ತು ಚಳವಳಿಗಳ ಪರಿಭಾಷೆ ಕೂಡಾ ಬಾರೀ ಬದಲಾವಣೆ ಬಯಸುತ್ತಿದೆ ಎಂಬುದನ್ನು ಯೋಗೇಂದ್ರರು ಅರ್ಥ ಮಾಡಿಕೊಳ್ಳಬಲ್ಲರು.

ಇಂದು ಹಳ್ಳಿಯ ಯುವಕ ತನ್ನ ಸಮಸ್ಯೆಯ ಆಳ ಅಗಲ ತಿಳಿದುಕೊಳ್ಳಲು ಯಾರಾದರೊಬ್ಬ ನಾಯಕನನ್ನು ಮಾತ್ರ ಅವಲಂಬಿಸಬೇಕಾದ್ದಿಲ್ಲ. ಇಂದಿನ ಪೀಳಿಗೆ ಹೊಸ ಹೊಸದಾದ ರೀತಿಯಿಂದ ಬರಪೂರ ವಿಚಾರಗಳನ್ನು ಪಡೆಯುವ ರೀತಿ ನೋಡಿದರೆ ನಮ್ಮ ಅಜ್ಞಾನ ನಮಗೇ ಕಾಣಿಸುತ್ತದೆ. ಹಿರಿಯ ಚಿಂತಕರು, ನೇತಾರರುಗಳು ತಮ್ಮ ಅಪೂರ್ವ ವಿಚಾರಧಾರೆಗಳನ್ನು ಕ್ಷಿಪ್ರಗತಿಯ ಬದಲಾದ ಹಳ್ಳಿಯ ಬದುಕಿನೊಂದಿಗೆ ಪ್ರಸ್ತುತಗೊಳಿಸಬೇಕಿದೆ. ಅವನೆದುರು ಸಿದ್ಧಾಂತಗಳೊಂದಿಗೆ ಮಾತಾಡುವ ನಾವು ಅವನ ಕಾಲದೊಂದಿಗೆ ಮಾತಾಡುತ್ತಿಲ್ಲ. ಇದೇ ಇಂದಿನ ಹೋರಾಟಗಳ ಹಾಗೂ ಹೊಸ ರಾಜಕಾರಣದ ಸಮಸ್ಯೆಯಾಗಿದೆ.

ಮೊನ್ನೆಯ ಸಾಗರದ 'ರೈತಾಪಿ ಉಳಿಸಿ ದೇಶ ಉಳಿಸಿ' ಸಮಾವೇಶ ಯಾರಿಗೆ ತಲುಪಬೇಕಿತ್ತೋ. ಅವರೆಲ್ಲ ಸಮಾವೇಶದಲ್ಲಿರದೆ ಎಲ್ಲೋ ಇದ್ದರು. ನಮ್ಮ ಸಾಂಪ್ರದಾಯಿಕ ವಯೋವೃದ್ಧ ಕಿವಿಗಳು ಮಾತ್ರ ತೆರೆದುಕೊಂಡಿದ್ದವು. ಅವರ ಮುಖದ ಮೇಲಿನ ವಕ್ರಗೆರೆಗಳು ಎಂಬತ್ತರ ದಶಕಕ್ಕಿಂತ ಮತ್ತಷ್ಟು ಜಾಸ್ತಿಯಾಗಿದ್ದವು. ಸಂಘಟಕರ ಪ್ರಯತ್ನದ ಪ್ರಾಮಾಣಿಕತೆ ನಿಜಕ್ಕೂ ಶ್ಲಾಘನೀಯ. ಈ ಸಮಾವೇಶಕ್ಕೆ ತಿಂಗಳಾನುಗಟ್ಟಲೆ ಜನ ಸೇರಿಸಲು ಕಷ್ಟ ಪಟ್ಟಿದ್ದು ಕಣ್ಣಿಗೆ ಕಟ್ಟುವಂತಿದೆ. ಸಂಘಟಕರ ಸಾಂಪ್ರದಾಯಿಕ ಪ್ರಚಾರ ತಂತ್ರಗಳು ಕೂಡಾ ಸವಕಲು ಎಂದು ನಮ್ಮ ರೈತಾಪಿ ತಿಳಿದಂತಿತ್ತು. ಮೈಕುಗಳು, ಕರಪತ್ರಗಳು, ಪೋಸ್ಟರುಗಳು, ಗೋಡೆ ಬರಹಗಳು, ಪತ್ರಿಕಾ ಹೇಳಿಕೆಗಳು ಸಹ ಇಂದಿನ ಹಳ್ಳಿ ಬದುಕಿನ ದಾರುಣತೆಯನ್ನು ವ್ಯಕ್ತಪಡಿಸುವ ವೇದಿಕೆಗಳಾಗದಿರುವುದು ವಿಷಾದನೀಯ ಸಂಗತಿ.


● ನೆಂಪೆ ದೇವರಾಜ್, ತೀರ್ಥಹಳ್ಳಿ

ಬಿಲ ಹೊಕ್ಕ ಹಾವು ತಲೆಯೆತ್ತುತ್ತಿದೆ

ಮೊನ್ನಿನ ಗಣರಾಜ್ಯ ದಿನದಂದು (26.1.2016) ಪದ್ಮಶ್ರೀ ಪ್ರಶಸ್ತಿ ಪಡೆದ ಸಾಹಿತಿ ಎಸ್.ಎಲ್.ಭೈರಪ್ಪನವರು 'ಅಹಿಂಸಾ ಮಾರ್ಗದಿಂದ ನಾವು ದೇಶದ ಸ್ವಾತಂತ್ರ್ಯ ಪಡೆದೆವು ಎಂಬುದು ಸುಳ್ಳು ಪ್ರಚಾರ' ಎಂದೂ, 'ನೇತಾಜಿ ಸೇರಿದಂತೆ ಇತರ ಅನೇಕ ಕ್ರಾಂತಿಕಾರಿಗಳು ಸಹ ಬೇಕಾದಷ್ಟು ಕೆಲಸ ಮಾಡಿದ್ದಾರೆ' ಎಂದೂ ಮಾತು ತೆಗೆದಿದ್ದಾರೆ. ರಾಷ್ಟ್ರಪಿತ ಗಾಂಧೀಜಿಯ ಅಹಿಂಸಾ ಹೋರಾಟವನ್ನು ಪಕ್ಕಕ್ಕೆ ಸರಿಸಿ, ಕೇವಲ ಕ್ರಾಂತಿಕಾರಿಗಳ ಹೋರಾಟವನ್ನು ವೈಭವೀಕರಿಸುವ ಹುನ್ನಾರದಂತಿದೆ ಇವರ ಮಾತು.



ಗೋಡ್ಸೆ



ಎಸ್ ಎಲ್ ಭೈರಪ್ಪ

ಸ್ವರಾಜ್ಯಕ್ಕಾಗಿ ಕ್ರಾಂತಿಕಾರಿಗಳು ಪ್ರಾಮಾಣಿಕವಾಗಿ ಹೋರಾಡಿದ್ದು ನಿಜ. ಅವರ ಬಲಿದಾನ ಹಾಗು ತ್ಯಾಗವನ್ನು ಅಲ್ಲಗಳೆಯುವಂತಿಲ್ಲವಾದರೂ ಅದಕ್ಕಿಂತ ಗಾಂಧೀಜಿಯ ಬ್ರಹ್ಮತೇಜೋಬಲದ ಮುಂದೆ ಬ್ರಿಟಿಷರು ನಿಲ್ಲಲಾರದೆ ಹೋದರೆಂಬುದೂ ಇತಿಹಾಸ. ಗಾಂಧೀಜಿಯ ಸ್ವರಾಜ್ಯ ಹೋರಾಟ ಜಗತ್ತಿಗೇ ಒಂದು ಮಾದರಿಯಾಗಿತ್ತು. ದಕ್ಷಿಣ ಆಫ್ರಿಕಾದ ಜೋಹಾನ್ಸ್‌ಬರ್ಗ್‌ನಲ್ಲಿಯೇ ಅವರ ಅಹಿಂಸಾ ಹೋರಾಟ ಮೊಳಕೆ ಒಡೆಯಿತು. ಬಿಳಿಯರು ನೂಕಿದ ಕಡೆ ಬಿದ್ದು ದುಡಿಯುತ್ತಿದ್ದ ಕರಿಯರಿಗೆ ಹಾಗೂ ವಲಸೆಹೋದ ಇಂಡಿಯನ್ನರಿಗೆ ಆತ್ಮಸ್ಥೈರ್ಯ, ಸ್ವಾಭಿಮಾನ, ಶಿಕ್ಷಣವನ್ನು ತುಂಬಿ ನಾವೂ ಮನುಷ್ಯರು ಎಂಬಂತೆ ಬಾಳುವುದಕ್ಕೆ ಅನುವು ಮಾಡಿಕೊಟ್ಟರು ಗಾಂಧಿ. ಕಳೆದ ತಿಂಗಳು ತಾನೇ ದಕ್ಷಿಣ ಆಫ್ರಿಕಾಕ್ಕೆ ಪ್ರವಾಸ ಹೋಗಿದ್ದ ನಮ್ಮ ಗೆಳೆಯರೊಬ್ಬರು ಹೇಳುವಂತೆ 'ಗಾಂಧಿ ಎಂದರೆ ಆ ಜನ ಕೃತಜ್ಞತೆಯಿಂದ ತಲೆ ಬಾಗಿಸುತ್ತಾರೆ'.

ಈಗಲೂ ಬುದ್ಧನ ನಂತರ ಅಹಿಂಸಾಮಾರ್ಗವನ್ನು ತೆರೆದುಕೊಟ್ಟವರು ಗಾಂಧಿ. ಅವರ 'ತಾಯ್ತನ' ದೊಡ್ಡದು. ಇಲ್ಲವಾಗಿದ್ದರೆ ಸೂರ್ಯ ಮುಳುಗದ ಸಾಮ್ರಾಜ್ಯ ಕಟ್ಟಿದ ಬ್ರಿಟಿಷರು ಇಲ್ಲಿನ ಕ್ರಾಂತಿಕಾರಿಗಳಿಗೆ ಜಗ್ಗುತ್ತಿದ್ದರೆ? ಆದರೆ ಅರೆಬೆತ್ತಲೆ ಬಡ ಫಕೀರನೊಬ್ಬನನ್ನು ಎದುರಿಸಲಾರದೆ 1947 ಆಗಸ್ಟ್ 15 ರಂದು ಯೂನಿಯನ್ ಫ್ಲಾಗನ್ನು ಕೆಳಗಿಳಿಸಿದರು. ಆದರೂ 'ಹೋಗುವವನು ಹೊಗೆ ಹಾಕಿಹೋದ' ಎಂಬಂತೆ ಇಂಡಿಯಾವನ್ನು ಒಡೆದು ಭಾರತ ಮತ್ತು ಪಾಕಿಸ್ತಾನ ಎಂದು ವಿಂಗಡಿಸಿ ಹೋದರು. ಅವರ ಒಡೆದು ಆಳುವ ನೀತಿಗೆ ಇದು ನಿದರ್ಶನ. ಈ ವಿಭಜನೆಯ ಸಂದರ್ಭದಲ್ಲಿ ಹರಿದ ನೆತ್ತರು ಕಡಿಮೆ ಏನಲ್ಲ! ಆದರೂ ಗಾಂಧೀಜಿ ಕೊನೆ ಉಸಿರು ಇರುವವರೆಗೂ ಕೋಮು ಸೌಹಾರ್ದಕ್ಕಾಗಿ ಹೆಣಗಾಡಿದರು. ಪಾಕಿಸ್ತಾನಕ್ಕೆ ಕೊಡಬೇಕಾದ ಹಣ(55 ಕೋಟಿ)ವನ್ನು ಕೊಟ್ಟುಬಿಡಿ ಎಂದು ಹಿರಿಯಜ್ಜನಂತೆ ಒತ್ತಾಯಿಸಿದರು.

ಇದು ಆರ್‌ಎಸ್‌ಎಸ್‌ನವರಿಗೆ ಸಹನೆಯಾಗಲಿಲ್ಲ. ನಾಥೂರಾಮ್ ಗೋಡ್ಸೆ ಎಂಬಾತ 1948 ಜನವರಿ 30 ರಂದು ಗುಂಡಿಕ್ಕಿ ಗಾಂಧಿ ಅವರನ್ನು ಕೊಂದೇಬಿಟ್ಟ. ನೆಹರೂ ಸರ್ಕಾರ ಆ ಸಂಘಟನೆಯನ್ನು ಬಹಿಷ್ಕರಿಸಿತು. ಆಗ ಕೋಮುವಾದಿ ಹಾವು ಭೂಗತವಾಗಿ ಬಿಲ ಸೇರಿತು. ನೆಹರೂ, ಇಂದಿರಾ ಗಾಂಧಿ ಆಳ್ವಿಕೆ ಇರುವವರೆಗೆ ಹಾಗೆ ಬಿಲ ಹೊಕ್ಕ ಹಾವು ತಲೆ ಎತ್ತಲಿಲ್ಲ. ಆದರೆ ಎಡವಟ್ಟಿನ ರಾಜೀವ್ ಗಾಂಧಿ ಯಾವಾಗ ಅಯೋಧ್ಯೆ ರಾಮಮಂದಿರದ ಬಾಗಿಲು ಬಡಿದರೋ ಅಲ್ಲಿಂದ ಅದು ಬಾಲ ಅಲ್ಲಾಡಿಸಲು ಆರಂಭಿಸಿತು. ಬಾಬರಿ ಮಸೀದಿ ಧ್ವಂಸದೊಂದಿಗೆ ಅದರ ಉಪಟಳ ಮಿತಿಮೀರಿತು; ಭುಗಿಲೆದ್ದು ಪೂತ್ಕರಿಸಿತು. ಬರಬರುತ್ತಾ ಹಿಂದೂ ಮುಸ್ಲಿಂ ಕ್ರೈಸ್ತರ ಸೌಹಾರ್ದ ಬಾಳಿಗೆ ಬೆಂಕಿ ಹಚ್ಚಲಾರಂಭಿಸಿತು. ಎಂದೆಂದೂ ಸ್ವರಾಜ್ಯಕ್ಕಾಗಿ ಹೋರಾಟ ಮಾಡದೆ ಇದ್ದವರೆಲ್ಲಾ ತಾವೂ ದೇಶಭಕ್ತರೆಂದು ಪೋಜು ಕೊಡಲು, ಅಧಿಕಾರ ಹಿಡಿಯಲು ತುದಿಗಾಲಿನಲ್ಲಿ ನಿಂತರು.


ಅಟಲ್ ಬಿಹಾರಿ ವಾಜಪೇಯಿ ಅವರು ಪ್ರಧಾನಿಯಾಗಿದ್ದಾಗಲೇ ಗುಜರಾತಿನಲ್ಲಿ ಅಲ್ಪಸಂಖ್ಯಾತರ ಮೇಲೆ ನರಮೇಧ (2002) ನಡೆದುಹೋಯಿತು. ಆಗ ಅಲ್ಲಿ ಮುಖ್ಯಮಂತ್ರಿಯಾಗಿದ್ದ ನರೇಂದ್ರ ಮೋದಿಯೇ 2014 ರಲ್ಲಿ ಪ್ರಧಾನಿಯಾದ ಮೇಲಂತೂ ಹಿಂದೂತ್ವವಾದಿಗಳ ಬಾಯಿಗೆ ಬ್ರೇಕ್ ಇಲ್ಲದಂತಾಗಿದೆ. ಗಾಂಧಿ ನಮ್ಮ ಜನತಾಪ್ರಜ್ಞೆಯ ಒಂದು ಮಹಾನ್ ಪ್ರತೀಕ ಅಂಥ ಗಾಂಧಿಯ ಬಗ್ಗೆ ಹಗುರವಾಗಿ ಮಾತಾಡುವ ಮೂಲಕ ಅವರನ್ನು ಮಹಾತ್ಮನೆಂದು ಕರೆದ ಜನತಾಪ್ರಜ್ಞೆಗೇ ಅವಮಾನಿಸುತ್ತಿದ್ದಾರೆ ಈ ಜನ.

ಹಿಂದೂ ಸಾಮ್ರಾಜ್ಯ ಇತಿಹಾಸವು ಬ್ರಿಟಿಷರ ಪೂರ್ವದಿಂದಲೂ ಆಳುವವರ ಬೆನ್ನಿಗೇ ಆತುನಿಂತಿದೆ. ಆಳುವ ವರ್ಗದ ಒಡೆದು ಆಳುವ ನೀತಿಯು ಜನತೆಗೆ ಅರ್ಥವಾಗಬೇಕು. ಇಲ್ಲವಾಗಿದ್ದರೆ ರೋಹಿತ್ ವೇಮುಲನಂತಹ ಸೂಕ್ಷ್ಮ ಮನಸ್ಸಿನ ಯುವಕ ಆತ್ಮಹತ್ಯೆ ಮಾಡಿಕೊಳ್ಳುತ್ತಿರಲಿಲ್ಲ. ಆಳುವ ವರ್ಗದ ಉನ್ನತ ಜಾತಿ ವ್ಯಸನವನ್ನು, ದಲಿತ, ಹಿಂದುಳಿದ, ಅಲ್ಪಸಂಖ್ಯಾತ ವರ್ಗದ ಮೇಲಿನ ಅಸಹನೆಯನ್ನೂ ಶೇ. 50 ರಷ್ಟಿರುವ ಇವರು ಅರ್ಥಮಾಡಿಕೊಂಡು ಇನ್ನಾದರೂ ಒಗ್ಗೂಡದಿದ್ದರೆ ಇವರ ಆಹಾರಪದ್ಧತಿಯನ್ನೂ, ಮೀಸಲಾತಿ ಉದ್ಯೋಗವನ್ನು ಕಸಿದುಕೊಳ್ಳದೆ ಬಿಡಲಾರರು.

ಎಸ್.ಎಲ್.ಭೈರಪ್ಪನಂಥ ಪದ್ಮಶ್ರೀಗಳು ... ಪರಿಭಾಷೆಯನ್ನು ತಪ್ಪಿ ಮುಂದಾದರೂ ಸಹಬಾಳ್ವೆಗೆ ಲೇಸ ಬಯಸುವ ಗಾಂಧಿ ಮಾರ್ಗವನ್ನನುಸರಿಸಿ ತಮ್ಮ ಘನತೆಯನ್ನು ಉಳಿಸಿಕೊಳ್ಳಬೇಕು.

● ಪ್ರೊ. ಶಿವರಾಮಯ್ಯ, ಬೆಂಗಳೂರು

ಹೆಂಗಸರಲ್ಲಿಯ ಮೌಢ್ಯ ಹೋಗದೇ ಸಮಾಜ ಬದಲಾಗದು



ಕಳೆದ ಶನಿವಾರ ಮಂಗಳೂರಿನ ಪುರಭವನದಲ್ಲಿ ...ದ ರಾಷ್ಟ್ರಮಟ್ಟದ ಕೋಮು ಸೌಹಾರ್ದ ಸಹಬಾಳ್ವೆ ...ಾವೇಶದಲ್ಲಿ ಮುಖ್ಯಮಂತ್ರಿಗಳ ಮಾಧ್ಯಮ ...ಲಹೆಗಾರ ದಿನೇಶ್ ಅಮೀನ್ ಮಟ್ಟು ಅವರು ...ದ್ದೇನೆಂದರೆ "ಶೂದ್ರರೊಳಗೂ ನವ-ಬ್ರಾಹ್ಮಣರು ...ರ್ತ್ ನವ-ವೈದಿಕರು ಹುಟ್ಟಿಕೊಂಡಿದ್ದಾರೆ ಹಾಗೂ ನವಬ್ರಾಹ್ಮಣ-ನವವೈದಿಕರು ಮೂಲ ...ೀಕರಿಗಿಂತ ಹೆಚ್ಚು ಅಪಾಯಕಾರಿ ಆಗಿದ್ದಾರೆ" ...ರು.

...ಮಟ್ಟು ಹೇಳಿದ್ದು ಸರಿಯಾಗಿದೆ. ಶೂದ್ರರೊಳಗಿನ ...ಬ್ರಾಹ್ಮಣರು ಮೂಲ-ಬ್ರಾಹ್ಮಣರಿಗಿಂತ ಹೆಚ್ಚು ...ಯಕಾರಿಯಾಗಿದ್ದಾರೆ. ಯಾಕೆಂದರೆ ಮೂಲ ...ಣರು ಎಲ್ಲದರ ಅರ್ಥ ಹಿರಿಯರಿಂದ ...ಕೊಂಡೇ ಅದನ್ನು ಅನುಸರಿಸುತ್ತಾರೆ. ಆದರೆ ಈ ...ಜಾತಿಯ ನವಬ್ರಾಹ್ಮಣರು ಯಾವುದರ ...ಂದ ಗೊತ್ತಿಲ್ಲದೇ ಕೇವಲ ಕುರುಡು ಅನುಕರಣೆ ...ತಾವು ಮೂಲ ಬ್ರಾಹ್ಮಣರಿಗೆ ಸರಿಸಮ ...ತೋರಿಸಲು ಹೆಣಗುತ್ತಾರೆ ಹಾಗೂ ...ಜವನ್ನು ಹೊಲಸುಗೆಡಿಸುತ್ತಾರೆ. ...ಜವಾಗಿ ನವ-ಬ್ರಾಹ್ಮಣರಿಗಿಂತ ...ಬ್ರಾಹ್ಮಣೆಯರದೇ ದೊಡ್ಡ ಸಮಸ್ಯೆ. ಈ ...ಬ್ರಾಹ್ಮಣೆಯರು ಯಾರೆಂದರೆ ಮಾಧ್ಯಮ ...ಶೂದ್ರ ಕುಟುಂಬದ ಹೆಂಗಸರು. ವಿದ್ಯಾವಂತ ...ಗಂಡಸರಲ್ಲಿ 50% ಜನರಾದರೂ ...ರಾಗಿದ್ದು, ವೈದಿಕರ ಕುತಂತ್ರ ಅರ್ಥ ಮಾಡಿಕೊಳ್ಳುತ್ತಿದ್ದಾರೆ. ಆದರೆ ಮಧ್ಯಮ ಜಾತಿಯ ಶೂದ್ರ ಹೆಂಗಸರು ಎಷ್ಟೇ ವಿದ್ಯಾವಂತರಾಗಿರಲಿ ಅವರು ದಿನಾ ಬೆಳಗೆದ್ದು ದೇವರಿಗೆ ಗಾಳ ಹಾಕಲು ಶುರು ಮಾಡುತ್ತಾರೆ. ಏನಾದರೊಂದು ನೆಪದಲ್ಲಿ ದೇವರಿಗೆ ಲಂಚದ ಆಸೆ ತೋರಿಸಿ ದಿನಕ್ಕೊಂದು ಹರಕೆ ಹೊರುತ್ತಾರೆ ಹಾಗೂ ಗಂಡ ಆಫೀಸಿಗೆ ಹೋದ ನಂತರ ಮಕ್ಕಳನ್ನು ಶಾಲೆಗೆ ಕಳುಹಿಸಿ ಈ ಹೆಂಗಸರು ತಮ್ಮ ಹರಕೆ ತೀರಿಸಲು ದೂರದೂರದ ದೇವಸ್ಥಾನಕ್ಕೆ ಓಡುತ್ತಾರೆ ಅಥವಾ ಜ್ಯೋತಿಷಿ ವಾಸ್ತು ಪಂಡಿತನ ಹತ್ತಿರ ಕಣಿ ಕೇಳಲು ಹೋಗುತ್ತಾರೆ.

ಮಂಗಳೂರಿನ ಮೊನ್ನೆಯ ಸಹಬಾಳ್ವೆ ಸಾಗರ ಸಮಾವೇಶದಲ್ಲಿ ಪ್ರಗತಿಪರ ಲೇಖಕಿ ಬಿ.ಟಿ.ಲಲಿತಾನಾಯಕ್ ಹಾಗೂ ಗೌರಿ ಲಂಕೇಶ್ ಹೇಳಿದಂತೆ ಶೂದ್ರ ಹೆಂಗಸರ ಮನದಲ್ಲಿ ಆಳವಾಗಿ ಬೇರೂರಿರುವ ಈ ನವ-ವೈದಿಕ ಮನಸ್ಥಿತಿ ಕಡಿಮೆಯಾಗದೇ ಹಿಂದೂ ಸಮಾಜ ಸುಧಾರಿಸಲು ಸಾಧ್ಯವೇ ಇಲ್ಲ. ಗಂಡಸರು ಮಾತ್ರ ಕೂಡಿಕೊಂಡು ಇಂತಹ ಸಾವಿರಾರು ಸಹಬಾಳ್ವೆ ಸಾಗರ ಸಮಾವೇಶ ಮಾಡಲಿ ಅದು ಪರಿಣಾಮಕಾರಿ ಆಗಲಾರದು. ಹೆಂಗಸರಲ್ಲಿಯ ಭಯ ಮತ್ತು ಮೌಢ್ಯ ಹೋಗದೇ ಗಂಡಸರು ಎಷ್ಟೇ ತಿಪ್ಪರಲಾಗ ಹಾಕಿದರೂ ಹಿಂದೂ ಶೂದ್ರ ಸಮಾಜದ ನವ-ಬ್ರಾಹ್ಮಣ ಮನಸ್ಥಿತಿ ಬದಲಾಗದು.

ಆ ದಿನ ಮಂಗಳೂರಿನ ಸಹಬಾಳ್ವೆ ಸಮಾವೇಶದಲ್ಲಿ ಒಬ್ಬ ಸಂಘ ಪರಿವಾರದ ಗುಪ್ತಚರ ಸಮಾವೇಶದ ಮಾಹಿತಿಯನ್ನು ಸಂಗ್ರಹಿಸಲು ಬಂದಿದ್ದು ಅವನು ನಂತರ ಹೊರಗೆ ಟೀ ಸ್ಟಾಲಿನಲ್ಲಿ ಒಬ್ಬ ಪ್ರಗತಿಪರನನ್ನು ಹೀಗೆ ಕೆಣಕಿ ಅವಮಾನಿಸುತ್ತಿದ್ದ: "ನೀವು ಸೋ-ಕಾಲ್ಡ್ ಪ್ರಗತಿಪರರು ನಿಮ್ಮ ನಿಮ್ಮ ಮನೆಯ ಹೆಂಗಸರನ್ನೇ ಬದಲಾಯಿಸಲು ಸಾಧ್ಯವಾಗುತ್ತಿಲ್ಲ. ಹಾಗಿರುವಾಗ ನೀವು ಇಡೀ ಸಮಾಜವನ್ನು ಹೇಗೆ ಬದಲಾಯಿಸಬಲ್ಲಿರಿ? ರೇಖಿ-ಪ್ರಾಣಿಕ್ ಹೀಲಿಂಗ್ ನೆಪದಲ್ಲಿ ನಾನೇ ಹೆಂಗಸರಿಂದ ಭರ್ಜರಿ ಕಮಾಯಿಸುತ್ತಿದ್ದೇನೆ. ಶೂದ್ರರಿಗೆ ರೇಖಿ-ಪ್ರಾಣಿಕ್ ಒಂದು ಢೋಂಗಿ ವಿದ್ಯೆ ಎಂಬುದೂ ಗೊತ್ತೇ ಆಗುತ್ತಿಲ್ಲ. ನಮ್ಮ ವೈದಿಕರು ಚಿತ್ರವಿಚಿತ್ರ ದೇವರನ್ನು ತೋರಿಸಿ ಹೆಂಗಸರಲ್ಲಿ ಭಯ ಹುಟ್ಟಿಸಿ ದುಬಾರಿ ಪೂಜೆ ಪುನಸ್ಕಾರ ಮಾಡಿಸಿ ಕಾಲ್ಪನಿಕ ರಾಕ್ಷಸ-ಋಷಿಗಳ ಅಜ್ಜಿಕಥೆ ಕಟ್ಟಿ ಇನ್ನೂ ನೂರಾರು ವರ್ಷ ನಿಮ್ಮ ಹೆಂಗಸರನ್ನು ಹೀಗೆಯೇ ನಮ್ಮ ವೈದಿಕರು ತಮ್ಮ ಮುಷ್ಟಿಯಲ್ಲಿ ಇಟ್ಟುಕೊಳ್ಳುವುದು ಶತಃಸಿದ್ಧ. ಪ್ರಗತಿಪರ ಗಂಡಸರಿಗೆ ಇದನ್ನು ತಡೆಯುವುದು ಸಾಧ್ಯವೇ ಇಲ್ಲ, ಇದು ನನ್ನ ಚಾಲೆಂಜ್."

ಆ ಚೆಡ್ಡಿ ಚಡಗ ಹೇಳಿದಂತೆ ಈ ಸಹಬಾಳ್ವೆ ಸಮಾವೇಶದಲ್ಲಿ ಒಬ್ಬಳೇ ಒಬ್ಬ ಮಧ್ಯಮ ಜಾತಿಯ ಬಂಟ ಬಿಲ್ಲವ ಅಥವಾ ಮೊಗವೀರ ಮಹಿಳೆ ಭಾಗವಹಿಸಿರಲೇ ಇಲ್ಲ!

ಅಂದು ಮಂಗಳೂರಿನ ಸಹಬಾಳ್ವೆ ಸಾಗರ ಸಮಾವೇಶದಲ್ಲಿ ಭಾಗವಹಿಸಿದ ಯುವಕರಲ್ಲಿ ದಲಿತ ಯುವಕರು ಮಾತ್ರ ಇದ್ದರು. ಆದರೆ ಅಲ್ಲಿದ್ದ ಇತರ ಜಾತಿಯ ಒಂದು ಸಾವಿರದಷ್ಟು ಪ್ರಗತಿಪರರ ವಯಸ್ಸು ನೋಡಿದಾಗ ಒಂದು ವಿಷಯ ಸ್ಪಷ್ಟವಾಗುತ್ತಿದೆ. ಪ್ರಗತಿಪರರೆಲ್ಲಾ ಮುದುಕರಾಗಿ ಮೂಲೆ ಸೇರುತ್ತಿದ್ದಾರೆ ಎಂಬ ಕಟುಸತ್ಯ ಗೋಚರವಾಗುತ್ತಿದೆ. ಸಮಾವೇಶದಲ್ಲಿ ಭಾಗವಹಿಸಿದ ಪ್ರಗತಿಪರರ ಸರಾಸರಿ ವಯಸ್ಸು ಅರವತ್ತು ವರ್ಷ ಆಗಿತ್ತು, ಅಂದರೆ ಹೆಚ್ಚಿನವರು ಹಿರಿಯ ನಾಗರಿಕರಾಗಿದ್ದರು. ಇದರ ಅರ್ಥ ಮಧ್ಯಮ ಜಾತಿಯ ಯುವಕರಲ್ಲಿ ಪ್ರಗತಿಪರರು ಬಹಳ ಕಡಿಮೆಯಾಗಿದ್ದಾರೆ. ಇದಕ್ಕೆ ಮೂಲ ಕಾರಣ ಅವರ ಮನೆಯಲ್ಲಿ ಹೆಂಗಸರು ಹೊಂದಿರುವ ನವ-ಬ್ರಾಹ್ಮಣ ಮನಸ್ಥಿತಿ ಹಾಗೂ ಅದೇ ವಾತಾವರಣದಲ್ಲಿ ಈಗಿನ ಪೀಳಿಗೆಯನ್ನು ತಾಯಂದಿರು ಬೆಳೆಸುತ್ತಿರುವ ರೀತಿ. ಇದಕ್ಕೆ ಪರಿಹಾರ ಕಂಡುಕೊಳ್ಳುವ ಬಗೆ ಹೇಗೆ ಹಾಗೂ ಎಲ್ಲಾ ಜಾತಿಯ ಯುವಕರನ್ನು ತಮ್ಮ ಕಡೆ ಸೆಳೆದುಕೊಳ್ಳುವುದು ಹೇಗೆ ಎಂದು ಮುಂದಿನ ತಮ್ಮ ಸಮಾವೇಶದಲ್ಲಿ ಹಿರಿಯ ವಯಸ್ಸಿನ ಪ್ರಗತಿಪರರು ಚಿಂತಿಸಬೇಕಿದೆ.

● ಜೆ. ರವಿಕಿರಣ್ ರೈ

ಭಗವಾನರ ಮರಣ

ಕತೆ


ಪ್ರೊಫೆಸರನ್ನು ಕೊಲ್ಲಲು ಹೊರಟ ದಿನವೆ ಅಮರ ಮೊಟ್ಟ ಮೊದಲ ಬಾರಿಗೆ ಬಸವಣ್ಣನ ವಚನವನ್ನು ಕೇಳಿದ್ದು.

ಅಂದು ಸೋಮವಾರ. ಆಕಾಶದಲ್ಲಿ ಮೋಡ ಕವಿದಿದ್ದವು. ತಾರಿನಲ್ಲಿ ತೋಯ್ದು ಮುಂಜಾನೆ ರೋದಿಸುತ್ತಾ ನಿಂತಿತ್ತು. "ಎಲ್ಲ ಉಪನಿಷತ್ತುಗಳು ಗೋವುಗಳು; ಕೃಷ್ಣ ಗೌಳಿಗ; ಅರ್ಜುನ ಕರು; ದುಹುತ್ ಗೀತಾಮೃತವೆ ಹಾಲು... ಅಂಥದ್ದನ್ನ ಅವಮಾನ ಮಾಡುವುದೇ? ಗೀತೆಯನ್ನ ಅವಮಾನ ಮಾಡಿದ ಆ ಮುದಿ ಮುಕುಳಿಕೋರನನ್ನ ಮುಗಿಸು, ಭಗವಾನ್ ಹೆಸರಿನಲ್ಲಿ ನಿನಗೆ ಮದುವೆ ಮಾಡಿಸುತ್ತೇನೆ." ಮಲ್ಲಪ್ಪ ಭಗವಾನ್ ಮೇಲೆ - ದೇವರ ಮೇಲೆ - ಆಣೆ ಮಾಡಿದ. ಆ ಪ್ರತಿಜ್ಞೆಯ ಬಲದ ಮೇಲೆಯೇ ಅಮರ ಹೊರಹೊರಟಿದ್ದ. ಬೆಳಗಾಗುವುದರೊಳಗೆ ಅದೆಲ್ಲ ಮುಗಿದುಹೋಗಬೇಕು ಎಂಬ ಯೋಜನೆ ಅವನದು. ಆದರೆ ಮಲೆಬೆನ್ನೂರು ಬಳಿ ಬೈಕು ಕೆಟ್ಟುಹೋಯ್ತು. ಇದನ್ನ ಇನ್ನೊಂದು ದಿವಸ ಮಾಡೋಣ ಎಂದು ಶಿವಪ್ಪ ಬೇಡಿಕೊಂಡನು. ಮಲ್ಲಪ್ಪ ಜಗ್ಗುವವನಲ್ಲ. ಸಾಕಷ್ಟು ಮುಂಚಿತವಾಗಿಯೇ ಪ್ರೊಫೆಸರ್ ಮನೆಯನ್ನು ಆರ್ಯ ಪತ್ತೆ ಮಾಡಿದ್ದನು. ಹಾಗಿದ್ದರೂ ಅವರು ದಾರಿ ತಪ್ಪಿದ್ದರು. ಅರಳಿಕಟ್ಟೆಯ ಬುಡದಿಂದ ಬಲಕ್ಕೆ ತಿರುಗಿ ಪೂರ್ಣ ಹತ್ತು ಕಿಲೋಮೀಟರ್ ಸವಾರಿ ಮಾಡಿದ ಮೇಲೆ ಆ ಪಿರ್ಕಿ ತನ್ನ ತಪ್ಪೊಪ್ಪಿಕೊಂಡ. ಅವರು ಹಿಂದಕ್ಕೆ ಹೋಗಿ ಎಡಕ್ಕೆ ತಿರುಗಿದರು. ಈಗ ಮಳೆ ಗಟ್ಟಿಯಾಗಿ ಹೊಯ್ಯತೊಡಗಿತು. ಅಮರ ಒದ್ದೆ ಆದ. ಇದು ಅವನು ಕಾವೇರಿಯನ್ನ ನೆನಪಿಸಿಕೊಳ್ಳುವಂತೆ ಮಾಡಿತು. ಆರ್ಯ ಮತ್ತೆ ದಾರಿ ತಪ್ಪಿದನು. ತನ್ನ ಏಳು ತಲೆಮಾರುಗಳ ಪೂರ್ವಿಕರ ಮೇಲೆ ಶಿವಪ್ಪ ಅತ್ಯಂತ ಕೆಟ್ಟ ಶಾಪಗಳ ಮಳೆಗರೆದನು. ಅವನ ದನಿ ತಗ್ಗಿದ್ದರೂ ಒರಟಾಗಿ ರೋಷಾವೇಶದಿಂದ ಕೂಡಿತ್ತು. ಕೊನೆಗೆ ಅವರು ಹಿಂದಿರುಗಿ ಬರುವಾಗ ದೊಡ್ಡದಾಗಿದ್ದ ಪ್ರಶಾಂತ ಕೊಳದ ಎದುರುಗಡೆ ಇದ್ದ ಮನೆಯಲ್ಲಿ ಬೆಳಕು ಕಂಡಿತು. ಅದು ಮುಂದಿದ್ದ ಹಾದಿಯ ಮೇಲೆ ಹೂಗಳನ್ನ ಉದುರಿಸುತ್ತಿದ್ದ ಜಾಜಿ ಬಳ್ಳಿಗಳ ದೊಡ್ಡ ಜೊಂಪೆಯ ಹಿಂದೆ ಇತ್ತು. ಗೋಡೆಯ ಪಕ್ಕದಲ್ಲಿದ್ದ ಕಂಬದ ಮೇಲೆ ನಾಮಫಲಕವನ್ನು ನೇತುಹಾಕಲಾಗಿತ್ತು. ವೇಳೆ ಐದೂವರೆ ಗಂಟೆ. ಪ್ರೊಫೆಸರ್ ವರಾಂಡದಲ್ಲಿದ್ದ ಆರಾಮ ಕುರ್ಚಿಯಲ್ಲಿ ಒರಗಿದ್ದರು. ವರಾಂಡದ ಸುತ್ತ ಕಬ್ಬಿಣದ ಕಂಬಿಗಳ ಚೌಕಟ್ಟು ಇತ್ತು. ಪ್ರೊಫೆಸರ್ ಓದುತ್ತಿದ್ದರು. ಅವರು ಎದ್ದು ಬಾಗಿಲು ತೆರೆದು, "ಛೆ, ಸುಂದರಣ್ಣ ನೀನಂತೂ ನಿದ್ದೆ ಮಾಡೋಲ್ಲ, ಆ ಪಾಪದ ಗೋಮಾತೆಗಳನ್ನ ಸುಮ್ಮನೆ ಬಿಡಬಾರದೆ?" ಎಂದರು. ಅಮರ ಆಗಷ್ಟೇ ಅವರನ್ನು ಚೆನ್ನಾಗಿ ದಿಟ್ಟಿಸಿದ. ಅವರು ಕೆಂಪಂಚಿನ ಧೋತಿ, ಕೈಮಗ್ಗದ ಜಂಪರ್ ತೊಟ್ಟಿದ್ದರು. ಅವರ ಕೊರಳಲ್ಲಿ ಲಿಂಗಾಯಿತ ಇಷ್ಟಲಿಂಗ ಇತ್ತು. ಅವರ ಗಡ್ಡ ಮತ್ತು ತಲೆಯ ಮೇಲೆ ಬಿಳಿ ಕೂದಲು ಆವರಿಸಿದ್ದು ಕಂಡುಬಂದು, ಎಂಬತ್ತು ಮೀರಿದ ವಯಸ್ಸಿನ ಜೀವ ಎನ್ನಿಸಿತು. ನೆಟ್ಟ ನಿಲುವು ಮಾತ್ರ ಬರೇ ಮುವತ್ತು ಎಂಬಂತಿತ್ತು. ಬಿಳಿ ಪೊದೆ ಮೀಸೆ ಮತ್ತು ದಪ್ಪ ಕನ್ನಡಕ ಅವರ ಮುಖದ ಮೇಲಿದ್ದವು. ಅಮರನನ್ನು ನೋಡಿ ಪ್ರೊಫೆಸರ್ ಹಣೆ ಸುಕ್ಕುಗಟ್ಟಿತು. ಆದರೂ ಕನ್ನಡಕವನ್ನು ನೇರ್ಪಡಿಸಿಕೊಂಡು ಅವನನ್ನು ಪ್ರೀತಿಯಿಂದ ಸ್ವಾಗತಿಸಿದರು. ಅಮರ ಕೇಳದಿದ್ದರೂ ಪ್ರೊಫೆಸರ್ "ಇನ್ನೇನು ಹಾಲು ಕೊಡುವವನು ಮತ್ತು ಪತ್ರಿಕೆ ಹುಡುಗ ಇಲ್ಲಿಗೆ ಬರುವವರಿದ್ದಾರೆ" ಎಂದು ಅವನಿಗೆ ತಿಳಿಸಿದರು. ಪ್ರಾತಃಕಾಲದ ವಾಯುವಿಹಾರದಲ್ಲಿರುವ ವೈದ್ಯರೂ ರಸ್ತೆಯಲ್ಲಿ ಕಾಣಿಸಿಕೊಳ್ಳುವ ಸಮಯವಾಯಿತು. ಈ ಮುದಿಗೊಡ್ಡು ಬಡಬಡಿಸುತ್ತಿದೆ ಎಂದುಕೊಂಡನು ಅಮರ. ಆದರೆ ತದ್ವಿರುದ್ಧವಾದುದೇ ಆಯಿತು. ಪ್ರೊಫೆಸರ್ ಪುಸ್ತಕಗಳಿದ್ದ ಕೋಣೆಯಲ್ಲಿ ಹೆಜ್ಜೆ ಇಟ್ಟರು. ಅಲ್ಲಿ ಗೋಡೆ ಪಕ್ಕದಲ್ಲಿದ್ದ ಪುಸ್ತಕದ ಕಪಾಟುಗಳು ಮಾಳಿಗೆ ಮುಟ್ಟುತ್ತಿದ್ದವು. ಈಗ ಅವರು ಅಮರನನ್ನು ನೇರವಾಗಿ ಎದುರಿಸಿದರು. ತೆರೆದೆದೆಯಲ್ಲಿದ್ದ ಅವರು ಪುಸ್ತಕ ಕಪಾಟಿನ ಮುಕ್ಕಾಲಿ ಏಣಿಯನ್ನು ಹಿಡಿದುಕೊಂಡು ವಿನೋದದ ನಗುವಿನಲ್ಲಿ ಅವನನ್ನು ನೋಡುತ್ತಾ ಹೇಳಿದರು: *ಆನೆ ಅಂಕುಶಕ್ಕೆ ಅಂಜೂದೆ, ಅಯ್ಯಾ? ಮಾಣದೆ ಸಿಂಹದ ನಖವೆಂದು ಅಂಜೂದಲ್ಲದೆ? ಆನೀ ಬಿಜ್ಜಳಂಗಂಜುವೆನೆ, ಅಯ್ಯಾ? ಕೂಡಲಸಂಗಮದೇವಾ, ನೀನು ಸರ್ವಜೀವ ದಯಾಪಾರಿಯಾದ ಕಾರಣ ನಿನಗಂಜುವೆನಲ್ಲದೆ.*

ಆ ಕ್ಷಣವನ್ನು ನೆನಸಿಕೊಂಡರೆ ಅಮರನ ಮೈ ಈಗಲೂ ಜುಮ್ಮೆನ್ನುತ್ತದೆ. ಆ ಮುದಿಗೂಬೆಯ ಸೊಕ್ಕೇನು! ಅಮರ ಚೇತರಿಸಿಕೊಂಡು ಪ್ರೊಫೆಸರ್ ಹಾಲು ಬಣ್ಣದ ಕಣ್ಣುಬ್ಬುಗಳ ಮಧ್ಯಕ್ಕೆ ಪಿಸ್ತೂಲಿನ ಬಾಯನ್ನು ಒತ್ತಿದನು. ಅವನ ಬೆರಳುಗಳು ತುಪಾಕಿ ಕುದುರೆಯನ್ನು ಬಿಗಿಯಾಗಿ ಹಿಡಿದುಕೊಂಡಿದ್ದವು. ಆದರೆ ತುಪಾಕಿಯನ್ನು ಪ್ರೊಫೆಸರ್ ನೋಡಿರಲೇ ಇಲ್ಲ ಎಂಬಂತೆ ಕಂಡಿತು. ಮಗು, ಎಲ್ಲ ಮತಗಳೂ ಗೋವುಗಳು, ಅವು ರಕ್ತವನ್ನಲ್ಲದೆ ಬೇರೇನನ್ನೂ ಕುಡಿಯುವುದಿಲ್ಲ, ಎಂದರು. ಅವು ಕೆಳಜಾತಿಯವರು, ಬಡವರು, ದುರ್ಬಲರ ರಕ್ತವನ್ನು ಮಾತ್ರ ಕುಡಿಯುತ್ತವೆ. ದಲಿತೆಯನ್ನು ಮದುವೆಯಾಗು, ಅದು ಅವಳ ರಕ್ತ ಕುಡಿಯುತ್ತೆ; ಬ್ರಾಹ್ಮಣೆಯನ್ನು ಮದುವೆಯಾಗು, ನಿನ್ನ ರಕ್ತ ಕುಡಿಯುತ್ತೆ. ನಿನ್ನೆ ಬಸವಣ್ಣ, ಇವತ್ತು ನಾನು. ಇವೊತ್ತು ನಾನು, ನಾಳೆ ನೀನು, ಓ ಕೂಡಲಸಂಗಮದೇವಾ! ಅಮರ ತತ್ತರಿಸಿದ, ಮುಖಕ್ಕೆ ಒದ್ದಂತೆ ಅವನಿಗೆ ಭಾಸವಾಯಿತು. ಅಲ್ಲ, ಈ ಮುದಿಯನಿಗೆ ಗೊತ್ತಾಯಿತಾ? ಎಂದು ಈಗ ಕಳವಳಪಟ್ಟ. ಕಳವಳ ಸಿಟ್ಟಾಗಿ ಉಕ್ಕಿತು. "ನೀನು ಗುರಿ ಇಟ್ಟರೆ ದ್ರೌಪದಿ ಸ್ವಯಂವರದಲ್ಲಿ ಅರ್ಜುನ ಗುರಿ ಇಟ್ಟಾಗ ಇಡಬೇಕು. ತಿರುಗುವ ಚಕ್ರದ ಮಧ್ಯೆ ಕಟ್ಟಿದ್ದ ಪಂಜರದ ಹಕ್ಕಿಯ ಕಣ್ಣಿನ ಗೊಂಬೆ ಅಲ್ಲದೆ ಬೇರೇನೂ ಅವನಿಗೆ ಕಾಣಲಿಲ್ಲ? ಮಲ್ಲಪ್ಪ ಹೇಳಿದ್ದ ಈ ಮಾತು, ಅವನ ಮನಸ್ಸಿನಿಂದ ಜಾರಿತು. ಅಮರ ತುಪಾಕಿಯ ಮೇಲಿನ ಹಿಡಿತವನ್ನು ಬಿಡದೆ ಎಡಗೈಯಿಂದ ಪ್ರೊಫೆಸರ್ ಕುತ್ತಿಗೆಗೆ ಒತ್ತಿದನು. ಅವರ ದುರ್ಬಲ ದೇಹ ಅಲುಗಾಡಿ ಏಣಿಯ ಮೇಲೆ ಬಿತ್ತು, ಏಣಿ ತೂಗಾಡಿ ಹಿಂದಿದ್ದ ಪುಸ್ತಕದ ಕಪಾಟಿನ ಮೇಲೆ ಧಢ್ಣನೆ ಬಿತ್ತು, ಹೊರೆ ಹೊತ್ತಿದ್ದ ಆ ಹಳೆಯ ಕಪಾಟಿನಿಂದ ಪುಸ್ತಕಗಳು ಬಾಣಗಳಂತೆ ಕೆಳಗುರುಳಿದವು. ಅಮರ ಕಣ್ಣು ಬಿಟ್ಟಾಗ ಸರ್ಕಾರಿ ಆಸ್ಪತ್ರೆಯಲ್ಲಿದ್ದ. ಬಲಗಾಲು ಬಲಗೈ ಮುರಿದಿದ್ದವು; ಅವನ ಎಡಗಣ್ಣಿನ ಹುಬ್ಬಿನ ಮೇಲೆ ಊತವಾಗಿತ್ತು. ತನ್ನ ಹಾಸಿಗೆಯ ಪಕ್ಕದಲ್ಲಿ ನಿಲುವಂಗಿ ತೊಟ್ಟಿದ್ದ ಮುದುಕ ಪುಸ್ತಕ ಓದುತ್ತಿದ್ದುದನ್ನು ಕಂಡ. ಅವನಿಗೆ ಭಯ ಆವರಿಸಿತು. ಮೇಲೇಳಲು ಪ್ರಯತ್ನಿಸಿದ. ಜರುಗಬೇಡ - ಪುಸ್ತಕವನ್ನು ಅವನ ಮೇಲೆ ಗುರಿಯಿಟ್ಟು ಪ್ರೊಫೆಸರ್ ಆದೇಶಿಸಿದರು. ಇದರಿಂದಲೇ ನಿನಗೆ ಬಾರಿಸ್ತೀನಿ! ಪುಸ್ತಕದಂಥ ಮಾರಕಾಸ್ತ್ರ ಬೇರೆ ಇಲ್ಲ.

ಆ ಬೆದರಿಕೆಯ ನೆನಪಾಗಿ ಅಮರನಿಗೆ ಈಗ ನಗುಬಂತು. ತನ್ನತ್ತ ತುಪಾಕಿ ಝಳಪಿಸಿದ್ದ ವ್ಯಕ್ತಿಯ ಕಡೆ ಪ್ರೊಫೆಸರ್ ಪುಸ್ತಕವನ್ನು ಗುರಿಮಾಡಿದ್ದರು! ಆದರೆ ಆ ಸಮಯದಲ್ಲಿ ತುಕ್ಕು ಹಿಡಿದ ಮಂಚದ ಮೇಲೆ ಮಲಗಿದ್ದ ಅವನು ಬಾಲ ಕಳೆದುಕೊಂಡ ಗೂಳಿಯಂತೆ ಕೈಕಾಲುಗಳನ್ನು ಬಡಿದಿದ್ದ. ಅಂದೇ ಅವನ ಪ್ರಥಮ ಮತ್ತು ಏಕೈಕ ಪ್ರೇಮ ಪ್ರಕರಣದಲ್ಲಿ ನಿರ್ಣಾಯಕ ದಿನವಾಗಿತ್ತು, ಕರಾರುವಾಕ್ಕಾಗಿ ಮೂರು ಗಂಟೆಗೆ ಅವನು ದಾವಣಗೆರೆ ರೈಲು ನಿಲ್ದಾಣವನ್ನು ತಲುಪಬೇಕಾಗಿತ್ತು, ಅವರಿಗಾಗಿ ಮಧುರೈನಲ್ಲಿ ಒಂದು ಮನೆ ಸಿದ್ಧವಾಗಿದ್ದು ಅಲ್ಲಿ ಅವನ ಮದುವೆ ಆಗಬೇಕಾಗಿತ್ತು, ಮೂರು ತಿಂಗಳ ಶ್ರಮದ ಕೆಲಸ. ಈಗ ಗಾಳಿಯಲ್ಲಿ ತೂರಿಹೋಗಿದೆ. ಪ್ರೊಫೆಸರ್ ಪೊಲೀಸರನ್ನು ಕರೆಸಬಹುದು ಎಂದುಕೊಂಡಿದ್ದ. ಮಲ್ಲಪ್ಪ ಚಿಟಿಕೆ ಹೊಡೆಯುವಷ್ಟರಲ್ಲಿ ಅವನನ್ನು ಬಿಡಿಸಬಹುದಿತ್ತು. ಆದರೂ ಮೂರು ಗಂಟೆಯೊಳಗೆ ನಿಲ್ದಾಣ ತಲುಪುವುದು ಅಸಾಧ್ಯವೇ ಸರಿ! ಈ ಆಲೋಚನೆಯೇ ಅವನನ್ನು ಕ್ಷೋಭೆಗೊಳಿಸಿತು. ಈ ಮಧ್ಯೆ ಕ್ಲಿನಿಕ್ಕಿನ ಹಿಂದಿನ ಕೊಠಡಿಯಲ್ಲಿ ವಾಸವಿದ್ದ ಹಿರಿಯ ವೈದ್ಯ ಆಗಮಿಸಿದ. ಅವನು ಕಣ್ಣುಗಳನ್ನು ಮುಚ್ಚಿಕೊಂಡು ಅಮರನ ಮುರಿದಿದ್ದ ಕಾಲಿನ ಜಾಗವನ್ನು ತನ್ನ ಬೆರಳುಗಳಿಂದ ಸ್ಪರ್ಶಿಸಿದ. ಸ್ವಲ್ಪ ಹೊತ್ತಿನಲ್ಲಿಯೇ ಅಮರನ ಕಾಲು ಪ್ಲಾಸ್ಟರ್ ಪಟ್ಟಿಯೊಳಗೆ ಸೇರಿತು. ಆರು ವಾರಗಳ ವಿಶ್ರಾಂತಿಯ ಸಲಹೆ ಆಯಿತು. "ಓ! ನೀನು ಪ್ರೊಫೆಸರ ಹೊಸ ವಿದ್ಯಾರ್ಥಿಯೇ?" ವೈದ್ಯ ವಿಚಾರಿಸಿದ. ನಾನು ಈತನ ವಿದ್ಯಾರ್ಥಿ ಆಗುತ್ತಿದ್ದೇನೆ, ಎಂದು ಪ್ರೊಫೆಸರ್ ಹೇಳಿದರು. *ಅಯ್ಯಾ ನೀನು ನಿರಾಕಾರವಾಗಿರ್ದಲ್ಲಿ ನಾನು ಜ್ಞಾನವೆಂಬ ವಾಹನವಾಗಿರ್ದೆ ಕಾಣಾ,... ಕೂಡಲ ಸಂಗಮದೇವಾ!*

ಆ ಕ್ಷಣವನ್ನು ನೆನಪಿಸಿಕೊಂಡು ಅಮರ ಮತ್ತೆ ಮುಗುಳ್ನಕ್ಕನು. ಶರೀರ ಚಿಂದಿ ಬಟ್ಟೆಯಂತೆ ಮೆತುವಾಗಿ ದುರ್ಬಲವಾಗಿದ್ದಾಗ ಅಹಂ ಕರಗಿಹೋಗುತ್ತದೆಂದು ಅವನು ಭಾವಿಸಿದ. ಆದರೂ ಆ ಮುದಿಗೊಡ್ಡಿನ ಕತ್ತು ಹಿಸುಕಲು ಅವನ ಕೈ ಕಡಿಯುತ್ತಿತ್ತು, ಅಷ್ಟರಲ್ಲಿ ಕೆಲವು ಹಳ್ಳಿಗರು ಅವನನ್ನು ಹಳೆಯ ವ್ಯಾನಿಗೆ ಸಾಗಿಸಿದರು. ಅವರು ವಾಪಸ್ಸು ಪ್ರೊಫೆಸರ್ ಮನೆಗೆ ಹೋದರು. ಬಾಗಿಲ ಬಳಿ ಇಬ್ಬರು ಪೊಲೀಸರು ಕಾವಲಿದ್ದರು. ಪ್ರೊಫೆಸರ್ ಒಂದು ಹಳೆಯ ಗಾಲಿಕುರ್ಚಿಯನ್ನು ಹೊರಗೆ ತರುತ್ತಾ ಆ ಪೊಲೀಸರ ಜೊತೆ ತಮಾಷೆಯಾಗಿ ಹರಟಿದರು. ಅಂಬಿಕಾಳ ಸಾವಿನ ನಂತರ ಈಗ ಮೊದಲ ಬಾರಿಗೆ ಉಪಯೋಗಕ್ಕೆ ಬಂತು, ಎಂದು ತಮ್ಮಷ್ಟಕ್ಕೆ ಹೇಳಿಕೊಂಡರು. ಅವರು ನೆಲದ ಮೇಲಿದ್ದ ಪುಸ್ತಕಗಳ ದೊಡ್ಡ ರಾಶಿಯನ್ನು ದಾಟಿ ಪ್ರೊಫೆಸರದಂತೆ ಕಂಡುಬಂದ ಕೋಣೆಗೆ ಅಮರನನ್ನು ಸಾಗಿಸಿ ಹೊಂದಾಣಿಕೆಮಂಚದ ಮೇಲೆ ಅವನನ್ನು ಮಲಗಿಸಿದರು. ಮೂಗುದಾರದಿಂದ ಬಿಡಿಸಿಕೊಳ್ಳಲು ಪ್ರಯಾಸಪಡುವ ಕಾಳಗದ ಗೂಳಿಯಂತೆ ಅಮರ ರೇಗಾಡಿ ಒದ್ದಾಡುತ್ತಿದ್ದನು. ಅದು ಸುಣ್ಣ ಹೊಡೆದಿದ್ದ ಸಣ್ಣಕೋಣೆ. ಆ ಮಂಚದ ಮುಂಭಾಗದಲ್ಲಿ ಬಾಗಿಲು, ಅಕ್ಕಪಕ್ಕದಲ್ಲಿ ಕಿಟಕಿಗಳು ಇದ್ದವು. ಬಲಗಡೆ ಕಿಟಕಿಗೆ ಹತ್ತಿರವಾಗಿ ಒಂದು ಚಿಕ್ಕ ಕಿರಿದಾದ ಮರದ ಮಂಚ ಇತ್ತು, ಮಲಗಿದ್ದ ಜಾಗದಿಂದಲೇ ಅವನು ಪುಸ್ತಕ ರಾಶಿಯ ಆಚೆ ಇದ್ದ ಅಡಿಗೆ ಮನೆಯ ಬಾಗಿಲನ್ನು, ಅದರ ಪಕ್ಕದಲ್ಲೇ ಗೋಡೆಯ ಮೇಲೆ ನೇತುಹಾಕಿದ್ದ ಕಪ್ಪುಬಿಳುಪಿನ ಫೋಟೊವನ್ನು ನೋಡಬಹುದಿತ್ತು, ಆಗತಾನೆ ಸ್ನಾನ ಮಾಡಿ, ಬಟ್ಟೆ ಬದಲಾಯಿಸಿ, ಸಮೃದ್ಧ ತಲೆಗೂದಲನ್ನು ಸೊಗಸಾಗಿ ಬಾಚಿಕೊಂಡು ಪ್ರೊಫೆಸರ್ ಆ ಕೋಣೆಗೆ ಬಂದರು. ಬಾಗಿಲು ಮತ್ತು ಅತಿ ಸಣ್ಣ ಪುಸ್ತಕ ಕಪಾಟಿನ ಮಧ್ಯೆ ಬಸವಣ್ಣನ ಪುಟ್ಟ ಪ್ರತಿಮೆಯನ್ನು ಪುಟ್ಟ ಪೀಠದ ಮೇಲೆ ಇಳಿಬಿಟ್ಟಿರುವುದನ್ನು ಅಮರ ಗಮನಿಸಿದ.. ಪ್ರೊಫೆಸರ್ ಸಣ್ಣ ದೀಪವನ್ನು ಹತ್ತಿಸಿ ತುಸು ಹೊತ್ತು ಧ್ಯಾನಿಸಿ, ನಂತರ ಅಮರನತ್ತ ತಿರುಗಿದರು. ಇವರ್‍ಯಾರು ಗೊತ್ತ? ಎಂದು



ಕೇಳಿದರು. ಯಾರಿಗೆ ಗೊತ್ತಿಲ್ಲ? ಅಮರನಿಗೆ ರೇಗಿ
ಶಹಭಾಷ್! ಈಗೊಂದು ವಚನ ಹೇಳು, ಕೇಳಿದ
ಪ್ರೊಫೆಸರ್. ಅಮರನ ನಾಲಗೆ ಹಿಂಜರಿಯಿತು.
ನಿನ್ನ ಸಮಸ್ಯೆ - ಪ್ರೊಫೆಸರ್ ಒಳಗೊಳಗೇ ನಕ್ಕರು.
ಬಸವಣ್ಣ ಗೊತ್ತು, ಆದರೆ ಒಂದು ವಚನವೂ ಬರೋ
ಅಜ್ಞಾನಕ್ಕಾಗಿ ನೀನು ವಿಷಾದಿಸುವುದೂ ಇಲ್ಲ, ಬಟ್ಟ
ಬಗ್ಗೆ ನಿನಗೆ ಗೌರವವೂ ಇಲ್ಲ, ಅಮರನಿಗೆ ಅಗ
ಹುಚ್ಚು ಹಿಡಿಯುತ್ತಿತ್ತು, ಈ ದರಿದ್ರ ಆಟ ನಿಲ್ಲಿಸಿ,
ಹೋಗಬೇಕು - ಎದ್ದು ನಿಲ್ಲಲು ಅವನು ಪ್ರಯತ್ನಿ
ಪ್ರೊಫೆಸರ್ ನಕ್ಕರು. ಹೊರಗೆ ಪೊಲೀಸರು ಇದ
ನೋಡಲಿಲ್ಲವಾ? ರಕ್ಷಣೆ ಕೊಡ್ತೀವಂತ ಮೊದಲೇ ಹೇಳಿದ್ದ
ಅವರನ್ನ ನಾನೆ ಈಗ ಬರಮಾಡಿದೆ ಅಂತ ಯಾಕೆ ನೀ
ಭಾವಿಸ್ತಿ? ನೀನು ಇಲ್ಲಿದ್ದಿ ಅಂತ ಒಂದು ನರಪಿಳ್ಳೆ
ತಿಳಿಯೋದಿಲ್ಲ! ಕಣ್ಣಮ್ಮ - ಪ್ರೊಫೆಸರ್ ಕರೆದರು. ಸುಮಾ
ಮುವತ್ತು ವಯಸ್ಸಿನ ಹೆಂಗಸು ಅಡುಗೆಮನೆಯಿಂ
ಚುರುಕಾಗಿ ಬಂದಳು. ಆಕೆ ಸೀರೆ ಉಟ್ಟು ತಲೆಯ
ಹೂ ಮುಡಿದಿದ್ದಳು. ಅವಳು ಹಿಡಿದಿದ್ದ ತಟ್ಟೆಯಲ್ಲಿ ಬಿಸಿ
ನೀರು ದೋಸೆ, ಬಿಳಿ ಚಟ್ನಿ ಇತ್ತು, ಪ್ರೊಫೆಸರ್ ಅ
ಕೈಯಿಂದ ಅದನ್ನು ತೆಗೆದುಕೊಂಡು, ಅಮರನ
ಕುಳಿತು ಅವನಿಗೆ ತಿನ್ನಿಸಲೆಂದು ಒಂದು ಚೂರನ್ನು ಅವನ
ಚಾಚಿದರು. ಅಮರ ಹಿಮದಂತೆ ಸೆಟೆತುಕೊಂಡ
ಅವನೊಳಗೇನೊ ವಿಲಿವಿಲಿ ಒದ್ದಾಡಿತು, ಉಸಿರು ಕಟ್ಟಿಸಿ
ಕೊನೆಗೆ ಶರಣಾಗತನಾದ ಯೋಧನ ಮಣ್ಣು ಮು
ಪ್ರತಿಷ್ಠೆಯಂತೆ ಅವನು ಬಾಯಿ ತೆರೆದನು. ತಿಂಡಿ ಬ
ರುಚಿಯಾಗಿತ್ತು. ಪ್ರೊಫೆಸರ್ ಸುಕ್ಕು ಹಿಡಿದ
ಬಂದೂಕಿನ ಬಾಯಿಂದ ಒತ್ತಿದ್ದ ಗುಂಡನೆಯ ಗುರುತ
ಅಮರ ಗಮನಿಸಿದ. ತನ್ನ ಬಲಿಪ್ರಾಣಿಯಿಂದ
ಸ್ವೀಕರಿಸುತ್ತಿದ್ದಂತೆ ಅವನ ಅಹಂ ಕರಗಿತು. ಕಣ್ಣುಗ
ಕೆಂಪಾಗಿ ನೀರು ತುಂಬಿಕೊಂಡವು. ಪ್ರೊಫೆಸರ್ ನಸುನಕ್ಕ
ಅವರು ಮಮತೆಯಿಂದ ಉಚ್ಚರಿಸಿದರು: *ಆನೆ ಅಂಕು
ಅಂಜೂದೆ ಅಯ್ಯಾ? ಮಾಣದೆ ಸಿಂಹದ ನಖವೆಂ
ಅಂಜೂದಲ್ಲದೆ. ಆನೀ ಬಿಜ್ಜಳಂಗಂಜುವೆನೆ, ಅಯ್ಯಾ? ನೀ
ಸರ್ವಜೀವ ದಯಾಪಾರಿಯಾದ ಕಾರಣ ನಿನಗಂಜುವೆನ
ಕೂಡಲಸಂಗಮದೇವಾ.* ಬಿಜ್ಜಳ ಯಾರೆಂದು ಗೊ
ಪ್ರೊಫೆಸರ್ ಕೇಳಿದರು. ಅಮರನಿಗೆ ಗೊತ್ತಿರಲಿಲ್ಲ,
ದೊರೆಯಾಗಿದ್ದ ಬಸವಣ್ಣ ಬರಿ ಮಂತ್ರಿಯಾಗಿದ್ದ ಎಂದ
ಪ್ರೊಫೆಸರ್. ಆದರೂ ಬಸವಣ್ಣ ಹೀಗೆ ಹೇಳಿದ್ದ:
ಬಿಜ್ಜಳಂಗಂಜುವೆನೆ? ಅಮರ ಬಾಯಿ ತೊಳೆದುಕೊಳ್ಳ
ಪ್ರೊಫೆಸರ್ ನೆರವಾದರು. ಅವನ ಮುಖ ಒರೆಸಿ, ಹಿಂದ
ಜನ್ಮದ ತಾಯಿಂತೆ ಅವನ ತಲೆಗೂದಲನ್ನು ಹಿಂ
ನೇವರಿಸಿದರು. ಅವನ ಕಳವಳಗೊಂಡ ಕಣ್ಣಲ್ಲಿ ಕಣ್ಣಿ
ನೋಡುತ್ತಾ ಪ್ರೊಫೆಸರ್ ಹೇಳಿದರು - ಮಗು, ಭಯಕ್ಕ
ಕರುಣೆ ಹೆಚ್ಚು ಬಲಶಾಲಿಯಾದುದು. ಎಲ್ಲ ಮತಗಳ
ಮರೆತಿರುವುದು ಇದನ್ನೇ. ನೀನು ವಾಪಸ್ಸು ಹೋ
ಮೇಲೆ ನಿನ್ನನ್ನ ಇಲ್ಲಿಗೆ ಕಳುಹಿಸಿದವರಿಗೆ ಇದ
ಹೇಳಿಕೊಡಬೇಕು.

ಈ ಮಾತುಗಳನ್ನು ಈಗ ಮಾತ್ರ ಸ್ಪಷ್ಟವಾಗಿ ಅರಿತೆನ
ಅಮರ ಭಾವಿಸಿದ. ಆದರೆ ಹಿಂದೆ, ಅನ್ನ ಮತ್ತು ಚ
ವಿನಾಶದ ಅಸ್ತ್ರಗಳೆಂದು ತಿಳಿದಿದ್ದ ಈ ಮುದಿ ಹ
ಬಗ್ಗೆ ಅವನು ತಿರಸ್ಕಾರದಿಂದ ಕುದಿದಿದ್ದನು. ಅವ
ಬಂದೂಕು ಬೇಕಿರಲಿಲ್ಲ, ಒಂದು ಸಣ್ಣ ಚಾಕು ಸಾಕಿ
ಈ ಮುದಿಯನ ಎದೆಯ ಎಡಭಾಗದಲ್ಲಿ ತೂತು ಕೊರೆ
ಏಯ್ ಕೊಳಕು ಮುದಿಗೊಡ್ಡು, ನಾನು ನಿನ್ನ ಯ
ಎಂದು ಗೊಣಗುತ್ತಿದ್ದ. ನನ್ನ ಜೊತೆ ಆಟ ಆಡಬೇಡ.
ಆಲೋಚನೆಯನ್ನು ಅನುಸರಿಸಿ ಏನಾದರ
ಮಾಡಬೇಕೆಂಬಷ್ಟರಲ್ಲಿ ಪ್ರೊಫೆಸರ್ ಮಿತ್ರರು ಬಂದರ
ನಾಲ್ವರು ಹಿಂದೂಗಳು, ಒಬ್ಬ ಕಿಲಿಸ್ತರವ, ಇಬ್ಬ
ಮುಸ್ಲಿಮರು. ಅವರಲ್ಲಿ ಇಬ್ಬರು ಹೆಂಗಸರು. ಆ ಮುದ
ನಿಜವಾಗಿಯೂ ತನ್ನ ವಿದ್ಯಾರ್ಥಿಗಳ ಜೊತೆ ವಾಸಿಸುತ್ತಿ
ಅವರೆಲ್ಲ ಎರಡು ವಾರಗಳಿಗೊಮ್ಮೆ ವಾರದ ಕೊನೆಯ
ಅವರ ಕುಟುಂಬಗಳನ್ನ ಭೇಟಿಯಾಗಿ ಸೋಮವಾ
ಮಧ್ಯಾಹ್ನಕ್ಕೆ ಮುನ್ನ ಹಿಂದಿರುಗುತ್ತಿದ್ದರು. ವಾರದ ಕೊನೆಯ
ಈ ಪ್ರೊಫೆಸರೂ ಪ್ರವಾಸ ಮಾಡುತ್ತಿದ್ದರು. ಹಾಗ
ಸೋಮವಾರ ಮುಂಜಾನೆ ಪ್ರಶಸ್ತ ಸಮಯ ಎಂ
ಆರಿಸಿಕೊಂಡಿದ್ದರು - ಅವನನ್ನು ಮುಗಿಸಲು.
ಎಚ್ಚರಗೊಂಡಿತು. ಯುವಕರು ಏಣಿಯನ್ನು ಎತ್ತಿ ನಿಲ್ಲಿಸಿ
ಪುಸ್ತಕಗಳನ್ನು ಜೋಡಿಸಿಟ್ಟರು, ನಕ್ಕರು, ಮಾತಾಡಿ
ಮಾಡಿದರು. ಆ ಕೋಣೆ ಮತ್ತೆ ಮೂಲಸ್ವರೂಪಕ್ಕೆ ಬಂದಿ
ಈಗ ಪ್ರೊಫೆಸರ್ ಚರ್ಚೆಯ ನೇತೃತ್ವ ವಹಿಸಿದರು.
ವಾಚಿಸಿದರು. ಮಧ್ಯೆ ಮಧ್ಯೆ ಬಂದು ಅಮರನ
ಗಮನಿಸಿದರು. ರಾತ್ರಿ ಕಣ್ಣಮ್ಮನೂ ಸೇರಿದಂತೆ ಅವರೆಲ
ಅವನ ಮಂಚದ ಸುತ್ತ ಚಾಪೆ ಹಾಸಿ ಅಲ್ಲೆ ಊಟಮಾಡಿ
ಇಡೀ ಸಮಯ ಗಂಭೀರ ವಿಷಯಗಳನ್ನು ಮಾತಾಡು
ಪ್ರೊಫೆಸರ್ ಅಮರನಿಗೆ ತಿನ್ನಿಸಿದರು. ಗೋವು ನ
ತಾಯಿ, ಎಂದು ಸದಾ ಹುಸ್ನುಖಿಯಾದ ಶಾಹಿದ್
ನಮ್ಮ ಮಚ್ಚೆ ಹಸು ಲೈಲಳ ಹಾಲು ಕರೆದು
ಬಂದ ಹಣದಿಂದ ನಮ್ಮಮ್ಮ ನನ್ನನ್ನೂ
ಕಳುಹಿಸಿದರು. ನಂಬಿಕೆ ಗೋವಿನಂತೆ ಎಂದರು ಪ್ರೊಫೆ

ಗರಿಷ್ಠ ಪಾರದರ್ಶಕತೆ"ಯ ಭರವಸೆ ಎತ್ತ ಹೋಯಿತು?

ನೋಡಿಎಯ ಚುನಾವಣಾ ಕಾಲದ ಭರವಸೆಗಳೆಲ್ಲ
. ಅವು ನೀರ ಮೇಲಣ ಗುಳ್ಳೆಯಂತೆ ಎಂದು
ಪರರು ಕೊಟ್ಟಿದ್ದ ಎಚ್ಚರಿಕೆಗಳೆಲ್ಲವೂ ಎಷ್ಟೊಂದು
ವಾಗಿದ್ದವೆಂಬುದನ್ನು ಜನ ತಡವಾಗಿಯಾದರೂ
ಯತೊಡಗಿದ್ದಾರೆ. "ಭ್ರಷ್ಟಾಚಾರಮುಕ್ತ ಭಾರತ", "ಕನಿಷ್ಠ
ತ", "ಗರಿಷ್ಠ ಉತ್ತರದಾಯಿತ್ವ", "ಗರಿಷ್ಠ
ರ್ಶಕತೆ", "ಸಬ್ ಕಾ ಸಾಥ್ ಸಬ್ ಕಾ ವಿಕಾಸ್"
ತಾದ ಚಿತ್ತಾಕರ್ಷಕ ಘೋಷಣೆಗಳ ಮೂಲಕ
ರಕ್ಕೆ ಬಂದಿರುವ ಎನ್‌ಡಿಎ ಯಾವ ವಿಷಯದಲ್ಲಿ
ಗೆ ಮಂಚನೆ ಬಗೆದಿಲ್ಲವೆಂದು ಕೇಳಲಾರಂಭಿಸಿದ್ದಾರೆ.

ತ್ತೀಚೆಗಿನ ಉದಾಹರಣೆಯನ್ನು ನೋಡಿ.
ವಣೆಗಳಿಗೆ ಸಜ್ಜಾಗುತ್ತಿರುವ ಅಸ್ಸಾಮಿಗೆ ಹೋದ
ಅಲ್ಲಿ ಮತ್ತದೇ ಹಾವಭಾವಯುತ, ಚರ್ವಿತಚರ್ವಣ
ಷಣೆಗಳನ್ನು ಪುನರಾವರ್ತಿಸಿದ್ದಾನೆ. ಆದರೆ
ಗಳಿಗೆಯಲ್ಲಿ ಆತ "ಸಬ್ ಕಾ ಸಾಥ್ ಸಬ್
ಕಾಸ್" ಎನ್ನುತ್ತಿದ್ದ ವೇಳೆಯಲ್ಲೆ ಅತ್ತ
ಪರಿಸರ ಮತ್ತು ಅರಣ್ಯ ಸಚಿವಾಲಯ
ಮುಂದೆ ನದಿ ಕಣಿವೆ ಯೋಜನೆಗಳಲ್ಲಿ
ನ್ನು ಒಳಗೊಳ್ಳದಿರಲು ನಿರ್ಧರಿಸಿದೆ!!
ರ್ಣ ಪರಿಸರ ಮೇಲಣ ಪರಿಣಾಮದ
ಜು ಮತ್ತು ಧಾರಣ ಸಾಮರ್ಥ್ಯದ
ನದ ವಿವರಗಳನ್ನು ಸಾರ್ವಜನಿಕರಿಗೆ
ಸುವ ಕ್ರಮವನ್ನು ಕೈಬಿಡಲಾಗುತ್ತಿದೆ.
ತಲ್ಲವೆ ಮೋದಿ ಸರ್ಕಾರದ "ಗರಿಷ್ಠ
ರ್ಶಕತೆ" ಎಷ್ಟಿದೆಯೆಂದು. ವಾಸ್ತವದಲ್ಲಿ
ಸರ್ಕಾರದ ಆಡಳಿತದಡಿ ಈಗಾಗಲೆ
ಜನಿಕರ ಭಾಗವಹಿಸುವಿಕೆ ಎನ್ನುವುದು
ಕೆಲವು ನಿರ್ದಿಷ್ಟ ಹಿತಾಸಕ್ತಿಗಳಿಗಷ್ಟೆ
ವಾಗಿದೆ. ಪರಿಣಾಮವಾಗಿ ಎಲ್ಲ ಅಂತಿಮ
ರಗಳನ್ನು ತೆಗೆದುಕೊಂಡ ಬಳಿಕವೆ ಜನರಿಗೆ ಒಂದಿಷ್ಟು
ತಿಗಳನ್ನು ಮಾಧ್ಯಮಗಳ ಮೂಲಕ ನೀಡಲಾಗುತ್ತಿದೆ.
ರದಿಂದ ಯಾವುದೇ ಪೂರ್ವ ಪ್ರಕಟಣೆಗಳು
ನೀಡುತ್ತಿಲ್ಲ, ದಿಟ್ಟ ಸಮರ್ಥನೆಗಳೂ ಇಲ್ಲ ಎಂದಾಗಿದೆ.
ದಲ್ಲಿ ಇಂತಹ ಜನವಿರೋಧಿ ಕ್ರಮಗಳು ಮೋದಿ
ಅಧಿಕಾರಕ್ಕೆ ಬಂದಂದಿನಿಂದಲೆ ಪ್ರಾರಂಭವಾಗಿವೆ.
ಂದು ಯೋಜನೆಗಳು ಹೇಗಿವೆಯೆಂದರೆ
ಂದಾಗುವ ದುಷ್ಪರಿಣಾಮಗಳನ್ನು ಸರಿಪಡಿಸುವುದು
ಮ್ಮ ಅಸಾಧ್ಯವೇ ಸರಿ.

ಸರ್ಕಾರ ಸಾಸಿವೆ ಮೊದಲಾದ ಹಲವು
ಆಹಾರಧಾನ್ಯಗಳ ಕುಲಾಂತರಿ ತಳಿಗಳಿಗೆ ಅನುಮತಿ ನೀಡಲು ಯೋಚಿಸುತ್ತಿದೆ. ಇದಕ್ಕೆ ಸಂಬಂಧಿಸಿದ ಯಾವುದೇ ದಾಖಲೆಗಳೂ ಸಾರ್ವಜನಿಕರಿಗೆ ಲಭ್ಯವಿಲ್ಲ.


- ಸರ್ಕಾರಿ ಅರಣ್ಯಗಳಲ್ಲಿ ವಾಸಿಸುತ್ತಿರುವ ಆದಿವಾಸಿಗಳ ಹಕ್ಕುಗಳ ಬಗ್ಗೆ ಸರ್ಕಾರ ಒಂದು ವರ್ಷ ಕಾಲ 'ಸಮಾಲೋಚನೆ' ನಡೆಸಿತು. ಅಂದಹಾಗೆ ಸಂಘ ಪರಿವಾರ ಆದಿವಾಸಿಗಳನ್ನು ಆದಿವಾಸಿಗಳೆಂದು ಕರೆಯುವುದನ್ನು ವಿರೋಧಿಸುತ್ತದೆ; ಅವರನ್ನು ಅರಣ್ಯವಾಸಿಗಳು ಎನ್ನುತ್ತದೆ ಏಕೆಂದರೆ ಸಂಘ ಪರಿವಾರದ ವಾದದಂತೆ ಈ ದೇಶದ ಮೂಲನಿವಾಸಿಗಳು ಆರ್ಯರು ಅರ್ಥಾತ್ ಬ್ರಾಹ್ಮಣರು. ಈ 'ಸಮಾಲೋಚನೆ'ಯ ಬಳಿಕ ಸರ್ಕಾರ ಮಾಡಿರುವುದೇನು? ಅದೀಗ ಆದಿವಾಸಿಗಳ ಹಕ್ಕುಗಳನ್ನು ಮೊಟಕುಗೊಳಿಸಿ ಸರ್ಕಾರಿ ಕಾಡುಗಳನ್ನು ಕಾರ್ಪೊರೇಟುಗಳಿಗೆ ಗುತ್ತಿಗೆ ನೀಡಲು ತೀರ್ಮಾನಿಸಿದೆ.



- ಮತ್ತೊಂದು ಕಡೆ ವೈಜ್ಞಾನಿಕ ವಿಧಾನಗಳನ್ನು ಮೂಲೆಗೊತ್ತಿ 100 ವರ್ಷಗಳಷ್ಟು ಹಳೆಯ ವಸಾಹತು ಯುಗದ ದಾಖಲೆಗಳ ಆಧಾರದ ಮೇರೆಗೆ ಹಮ್ಮಿಕೊಂಡ ಯೋಜನೆಯೊಂದರ ಮೂಲಕ ಉತ್ತರಾಖಂಡ ಮತ್ತು ಗಂಗಾ ಜಲಾನಯನ ಪ್ರದೇಶದ ಕೆಳಭಾಗದ ಲಕ್ಷಾಂತರ ಜನರ ಬದುಕಿಗೆ ಅಪಾಯ ತಂದೊಡ್ಡಲಾಗುತ್ತಿದೆ.

ಪರಿಸರ ಸಂಬಂಧಿ ವಿಚಾರಗಳ ಬಗ್ಗೆ ನಿರ್ಧಾರ ತೆಗೆದುಕೊಳ್ಳುವುದೆಂದರೆ ಅದು ಚಿಟಿಕೆ ಹಾರಿಸಿದಷ್ಟು ಸುಲಭವಲ್ಲ. ಎಲ್ಲಾ ಸಂದರ್ಭಗಳಲ್ಲೂ ದೊಡ್ಡ ದೊಡ್ಡ ವಾಣಿಜ್ಯ ಹಿತಾಸಕ್ತಿಗಳ ಮೇಲೆ ಪರಿಣಾಮ ಆಗಿಯೆ ಆಗುತ್ತದೆ. ಆದರೆ ಉದ್ದೇಶಗಳು ಎಷ್ಟೆ ಪ್ರಾಮಾಣಿಕವಿದ್ದರೂ ಲಾಭ ಗಳಿಕೆ ಮತ್ತು ಪ್ರಜೆಗಳ ಆರೋಗ್ಯ, ಸುರಕ್ಷತೆಗಳ ನಡುವೆ ಸಮತೋಲನವನ್ನು ಕಾಪಾಡಿಕೊಳ್ಳುವುದು ಬಹಳ ಮುಖ್ಯ. ಅದೇ ರೀತಿ ಲಾಭದಾಯಕ ಸಂಪನ್ಮೂಲಗಳು ಮತ್ತು ಅವುಗಳ ಬಳಕೆಗಾಗಿ ಪೈಪೋಟಿ ನಡೆಸುವ ಹಿತಾಸಕ್ತಿಗಳ ಮಧ್ಯೆ ಕೂಡ ಸಮತೋಲನ ಅವಶ್ಯವಿದೆ.

ನಿಜ ಹೇಳಬೇಕೆಂದರೆ ಮೋದಿ ಸರ್ಕಾರದ ನೀತಿ ನಿರ್ಧಾರಗಳು ದುರ್ನಾತ ಬೀರುತ್ತಿವೆ. ಸರ್ಕಾರದ ಈ ಕೆಟ್ಟ ನಿರ್ಧಾರಗಳಿಂದ ಪರಿಸರ ಮತ್ತು ಅರಣ್ಯಗಳ ಸಂರಕ್ಷಣೆ ಆಗುತ್ತದೆಂದು ನಂಬುವವರು ಯಾರಾದರೂ ಇದ್ದರೆ ಅದು ಸಂಘ ಪರಿವಾರದವರೆ ಹೊರತು ಇನ್ಯಾರೂ ಅಲ್ಲ. ಸಂಘ ಪರಿವಾರದ ಪ್ರಕಾರ ಇದೆಲ್ಲ ಕೆಲವು ದೇಶದ್ರೋಹಿಗಳು ಪರಿಸರವಾದವನ್ನು ಮುಂದಿಟ್ಟುಕೊಂಡು ಭಾರತದ ಅಭಿವೃದ್ಧಿಗೆ ಅಡ್ಡಗಾಲು ಹಾಕಲು ನಡೆಸಿರುವ ಪಿತೂರಿಯಂತೆ! ಇದಕ್ಕಿಂತ ಹಾಸ್ಯಾಸ್ಪದವಾದ ವಿಷಯ ಇನ್ನೊಂದಿರದು. ಒಂದು ವೇಳೆ ಅವರು ಹೇಳುತ್ತಿರುವ ಪಿತೂರಿಯೊಂದು ಇದೆಯೆಂದು ಇಟ್ಟುಕೊಂಡರೂ ಸರ್ಕಾರ ಅದನ್ನು ಅನಾಯಾಸವಾಗಿ ಎದುರಿಸಬಹುದಲ್ಲಾ. ಅದು ಮಾಡಬೇಕಾದುದು ಇಷ್ಟೆ: ತನ್ನೆಲ್ಲ ನಿರ್ಧಾರಗಳ ಬಗ್ಗೆ ಪಾರದರ್ಶಕವಾಗಿದ್ದು ತನ್ನ ಉದ್ದೇಶ ಮತ್ತು ನಿರ್ಧಾರಗಳನ್ನು ಜನರಿಗೆ ಮನವರಿಕೆ ಮಾಡಿಕೊಟ್ಟರೆ ಸಾಕಲ್ಲಾ. ಅದರ ಬದಲು ಕೋಟ್ಯಂತರ ಮೌಲ್ಯದ ವಾಣಿಜ್ಯ ಹಿತಾಸಕ್ತಿಗಳು ಮತ್ತು ಲಕ್ಷಾಂತರ ಜನರ ಬದುಕುಗಳನ್ನು ಒಳಗೊಳ್ಳುವಂತಹ ನಿರ್ಧಾರಗಳನ್ನು ಗುಟ್ಟಿನಲ್ಲಿ ತೆಗೆದುಕೊಂಡಾಗ ಸಹಜವಾಗಿಯೆ ಅನುಮಾನ, ಅವಿಶ್ವಾಸಗಳು ಹುಟ್ಟಿಕೊಳ್ಳುತ್ತವೆ. ಫೇಸ್‌ಬುಕ್, ಟ್ವಿಟರ್ ಮುಂತಾದ ಸಾಮಾಜಿಕ ಜಾಲತಾಣಗಳಲ್ಲಿ ಭಾರಿ ಸಕ್ರಿಯವಾಗಿರುವ ಮೋದಿ ಸರ್ಕಾರ ತನ್ನ ನೀತಿಗಳ ಬಗ್ಗೆ ಹೀಗೆ ಗುಟ್ಟಾಗಿ ವರ್ತಿಸುತ್ತಿರುವುದು ಅದರ ಅಪ್ರಾಮಾಣಿಕತೆ ಮತ್ತು ಕಾಪಟ್ಯಗಳನ್ನು ಎತ್ತಿತೋರಿಸುತ್ತದಲ್ಲದೆ ಇನ್ನೇನೂ ಅಲ್ಲ. ಈ ಯೋಜನೆಗಳಲ್ಲಿ ಅದಕ್ಕೆ ಸಾರ್ವಜನಿಕ ಹಿತಾಸಕ್ತಿಯೆ ಪ್ರಧಾನವಾಗಿರುತ್ತಿದ್ದರೆ ಅದು ತನ್ನ ನಿಲುವುಗಳು, ನಿರ್ಧಾರಗಳು, ಚಿಂತನೆಗಳು ಎಲ್ಲವನ್ನೂ ಪ್ರಜೆಗಳೊಂದಿಗೆ ಹಂಚಿಕೊಳ್ಳಬೇಕಿತ್ತು. ಯಾಕೆಂದರೆ ತಮ್ಮ ಬದುಕಿನ ಮೇಲೆ ಪರಿಣಾಮ ಬೀರಲಿರುವ ವಿಷಯಗಳ ಬಗ್ಗೆ ತಿಳಿಯುವುದು ಪ್ರಜೆಗಳ ಮೂಲಭೂತ ಹಕ್ಕು. ಆದರೆ ಯಾವುದೇ



ನ್ಯಾಯಾಲಯವಾಗಲಿ, ಪ್ರಾಧಿಕಾರವಾಗಲಿ ಯೋಜನೆಗಳ ಕುರಿತ ನಿಜಾಂಶಗಳನ್ನು ಬಯಲುಗೊಳಿಸುವಂತೆ ಆದೇಶಿಸಿಲ್ಲ ಮತ್ತು ಅವನ್ನು ಬಯಲುಗೊಳಿಸಬೇಕಾಗಿಯೂ ಇಲ್ಲ ಎಂದು ಮೋದಿ ಸರ್ಕಾರ ವಾದಿಸುತ್ತಿದೆ. ಹೀಗಾಗಿ ಮಾಹಿತಿಗಳನ್ನು ಜನರೊಂದಿಗೆ ಹಂಚಿಕೊಳ್ಳಬೇಕೆ, ಬೇಡವೆ ಅಥವಾ ಯಾವಾಗ ಹಂಚಿಕೊಳ್ಳಬೇಕು ಎಂಬುದನ್ನೆಲ್ಲ ನಿರ್ಧರಿಸುವವರು ಸರ್ಕಾರದವರೆ ಎಂದಾಗಿದೆ. ನ್ಯಾಯಾಂಗ ಅತಿಯಾಗಿ ಕ್ರಿಯಾಶೀಲವಾಗಿದೆ ಎಂದು ದೂರುವ ಸರ್ಕಾರ ವಾಸ್ತವವಾಗಿ ತನ್ನ ಈ ನಿರ್ಧಾರಗಳಿಂದ ನ್ಯಾಯಾಂಗದ ಕ್ರಿಯಾಶೀಲತೆಯನ್ನು ಇನ್ನಷ್ಟು ಹೆಚ್ಚಿಸಲಿದೆ!

ಯಾವುದೇ ಪ್ರಜಾತಾಂತ್ರಿಕ ಸರ್ಕಾರಕ್ಕೆ ತನ್ನಿಷ್ಟ ಬಂದಹಾಗೆ ವರ್ತಿಸುವ ಅಧಿಕಾರ ಇಲ್ಲ. ಆದರೆ ಪಾರದರ್ಶಕತೆ, "ಸಬ್ ಕಾ ವಿಕಾಸ್" ಮುಂತಾದ ಹತ್ತುಹಲವು ಮನಸೆಳೆಯುವ ಭರವಸೆಗಳನ್ನಿತ್ತ ಮೋದಿ ಸರ್ಕಾರ ಈಗ ಅದಕ್ಕೆಲ್ಲ ಬೆನ್ನುಹಾಕಿ ನಿಂತಿದೆ. ಅದಿಂದು ದೇಶದ ನೈಸರ್ಗಿಕ ಸಂಪನ್ಮೂಲಗಳನ್ನು ತಟ್ಟೆಯ ಮೇಲಿಟ್ಟು ಕಾರ್ಪೊರೇಟುಗಳಿಗೆ ಸಮರ್ಪಿಸಲು ಹೊರಟಿರುವುದು ಸ್ಪಷ್ಟವಿದೆ. ಆದುದರಿಂದ ಭಾರತದಲ್ಲಿ ಇನ್ನು ಮುಂದೆ ಆರ್ಥಿಕ ಮತ್ತು ಸಾಮಾಜಿಕ ನ್ಯಾಯಗಳು ಯಾವ ಸ್ವರೂಪ ಪಡೆದುಕೊಳ್ಳಲಿವೆ ಎಂಬುದನ್ನು ಈಗಿಂದೀಗಲೆ ಊಹಿಸಬಹುದು.

(ಆಧಾರ: Business Standard ನಲ್ಲಿ ನಿತಿನ್ ಸೇಠಿ ಲೇಖನ)

ಹಾಲು ಒಂದಿಡೀ ಕುಟುಂಬವನ್ನೇ ಸಾಕಬಲ್ಲದು.
ಅದು ಪ್ರತಿಯೊಬ್ಬರಿಗೂ ಹಾಲು
ಕೊಡಲಾರದು. ತಾನು ಇಷ್ಟಪಡದ ಜನರನ್ನು
ಒದೆಯುತ್ತದೆ. ಆದರೆ ಗೋಮಾತೆ ಯಾರನ್ನೂ
ಒದೆದಿಲ್ಲ ಎಂದಳು ಕಣ್ಣಮ್ಮ. ತುಂಡುಗೂದಲಿನ
ನಕ್ಕು, "ನಿನಗಾರು ಹೇಳಿದ್ದು?" ಎಂದು ಕೇಳಿ,
ಕದಲ್ಲಿ ಕೂಡ ಪ್ರತಿ ವರ್ಷ ಹಸುವಿನ ತಿವಿತದಿಂದ
ಜನ ಸಾಯ್ತಾರೆ" ಎಂದಳು. ಮನುಷ್ಯರಂತೆಯೇ
ತರಾವರಿ ಇರುತ್ವೆ, ಅಲ್ವ ಎಂದು ಪ್ರೊಫೆಸರ್
. ಅವುಗಳಲ್ಲಿ ನಾನಾರೀತಿ ಇವೆ: ಬುದ್ಧಿ ಇರೋವು,
ಗದವು, ಹಸನಾದವು, ಅಲೆದಾಡೋವು, ಮಚ್ಚರ
ಮೇಲೆ ಉಪಕಾರ ಹಿಂದಿರುಗಿಸೋವು, ತಮ್ಮ
ಗಿಂತಲೂ ತಮ್ಮ ಯಜಮಾನನನ್ನೇ ಹೆಚ್ಚು
ಂಥವೂ ಕೆಲವಿವೆ... ಇವರ ನಗು ಮತ್ತು ತಮಾಷೆ
ರುವವರೆಗೂ ಸಾಗಿತು. ಪ್ರೊಫೆಸರ್ ಮಾತ್ರ
ಅಂಬಿಕಾ ತೀರಿಕೊಂಡ ಹತ್ತು ವರ್ಷಗಳ
ಕೋಣೆಯಲ್ಲಿ ಮೊಟ್ಟ ಮೊದಲಿಗೆ ಜತೆಗಾರರು
ಎಂದುಕೊಂಡರು ಅವರು. ನೀನು ಆಕೆಯ
ಮೇಲೆ ಮಲಗಿದ್ದೀಯೆ – ನೋಡು, ಇದೇ
ಹಿಂದಿದ್ದ ಗೋಡೆಯ ಮೇಲೆ ನೇತುಹಾಕಿದ್ದ
ನ್ನು ತೋರಿಸಿದರು. ನನ್ನ ಪಿಂಚಣಿಗಾಗಿ ತೆಗೆಸಿದ್ದ
ಇದು, ಎಂದು ಗಂಭೀರವಾಗಿ ಕಾಣುತ್ತಿದ್ದ
ಂಡತಿಯನ್ನು ನೋಡುತ್ತಾ, ನಿಟ್ಟುಸಿರುಬಿಟ್ಟರು.
ಗಿ ದಿಂಬಿನಡಿಯಲ್ಲಿ ಏನನ್ನೋ ತಡಕಾಡಿದರು.
ಕೈಯಲ್ಲಿ ತನ್ನ ತುಪಾಕಿ ಇರುವುದನ್ನು ಅಮರ
ಅವನ ಹೃದಯ ಜಿಗಿಯಿತು. ಪ್ರೊಫೆಸರ್
ನಕ್ಕರು – ಆತುರ ಬೇಡ, ಮಗು. ಮುರಿದ
ತ ಹೋಮದಂತೆ. ಅದು ವಾಸಿಯಾಗಲು ಸಮಯ
ಬೇರೆ ಔಷಧಿ ಇಲ್ಲ. ಅದಕ್ಕೆ ಸಮಯ –
ಕೊಡು ಅದಕ್ಕೆ, ಸೋಲೊಪ್ಪಿಕೊ, ಶರಣಾಗು.
ಳ ನಂತರ ನೀನು ಗುಣವಾಗುತ್ತೀಯೆ. ಆಮೇಲೆ
ದು ಕಾಲಲ್ಲೂ ನಡೀಬಹುದು. ಅದನ್ನ ನೀನೇ
ಅಲ್ಲಿವರೆಗೆ ಅದು "ಇಲ್ಲೇ ಇರುತ್ತೆ, ಓ
ದಿವಸ ಎತ್ತಿಕೊಂಡ ದಿನ... ಅಮರನಲ್ಲಿ ಸೇರಿದಸ
. ಪ್ರೊಫೆಸರ್ ಅದನ್ನು ಅಲ್ಲೇ ಇಟ್ಟು ಮಂಚದ
ದೀಪ ಆರಿಸಿದರು. ಒಂದು ಕ್ಷಣದ

ನಂತರ ಕತ್ತಲಲ್ಲಿ ಅವರ ದನಿ ಕೇಳಿಸಿತು. ಇಲ್ಲ, ಮಗು, ಆ ದಿನ ಕಳೆದರೆ ನೀನು ಕೊಲ್ಲೋದಿಲ್ಲ. *ಮನವಿಲ್ಲದೆ ಕ್ರಿಯೆ ಉಂಟೆ? ಅರಿವಿಲ್ಲದೆ ಜೀವನ ಇರುವುದೇ? ವಿವೇಕ ಇಲ್ಲದೆ ನಂಬಿಕೆಯೇ? ಸಹಮಾನವರ ತಿಳಿಯದ ಧ್ಯಾನ ಉಂಟೆ? ಕೂಡಲಸಂಗಮ ದೇವಾ!*

ಕೊನೆಯಿಲ್ಲದಂತೆ ಕಂಡ ರಾತ್ರಿಯಲ್ಲಿ ಅಮರ ಹಲ್ಲು ಕಡಿಯುತ್ತ ಎಡತೊಡೆಯನ್ನ ಪರಚುತ್ತಾ ಮಿಲಿಮಿಲಿಗುಟ್ಟುತ್ತಿದ್ದಾಗ ಹೊರಗಡೆ ಮಳೆ ಸುರಿಯುತ್ತಿತ್ತು. ಸ್ಮರಣೆ ಬಂದು ಈಗ ನಸುನಕ್ಕನು. ಪ್ರಾಧ್ಯಾಪಕರಿಗೆ ಬೇಗನೆ ನಿದ್ರೆ ಬಂತು. ಆದರೆ ಕೆಂಪು ಉರಿ ತಾಕಿದ ಗೂಳಿಗೆ ವಿಶ್ರಾಂತಿ ಎಲ್ಲಿ? ತನ್ನ ಕಾಲ ಮೇಲೆ ನಿಲ್ಲಬೇಕೆಂದುಕೊಂಡ. ಆದರೆ ಕಾಲು ವಾಸಿಯಾಗುವ ತನಕ ಕಾಯುವುದು ವಿವೇಕತರ ಎಂಬುದು ಅವನಿಗೆ ತಿಳಿದಿತ್ತು. ಅವನ ಕೈಕಾಲುಗಳು ನೊಂದವು, ಹೃದಯ ಇನ್ನೂ ಹೆಚ್ಚಾಗಿ ನೋಯಿತು. ಇಲ್ಲಿ ತಾನು ಬಂಧಿಯಾಗಿರುವ ಸುದ್ದಿ ಮಲ್ಲಪ್ಪನಿಗೆ ಗೊತ್ತಾಗಿರಬೇಕಲ್ಲ? ಬೈಕಿನಲ್ಲಿ ಪರಾರಿಯಾದ ಶಿವಪ್ಪ ಮತ್ತು ಆರ್ಯ ಅವನಿಗೆ ಹೇಳಿರಬಹುದೆ? ಕಾವೇರಿ ನಿಲ್ದಾಣದಲ್ಲಿ ಕಾಯುತ್ತಿದ್ದಳೆ? ತಾನು ಮೋಸಗಾರ ಅಂತ ಅಂದುಕೊಂಡಳೆ? ಅವಳ ಮೃದು ಹೃದಯ ಒಡೆಯಿತೆ? ಅವನೊಳಗಿನ ಪೌರುಷ ಕರಗಿತು. ಒಂದು ಹಂತದಲ್ಲಿ ಅವನ ಕಣ್ಣೀರು ಸರಾಗವಾಗಿ ಹರಿಯಿತು. ಎಂಟನೆಯ ವಯಸ್ಸಿನ ನಂತರ ಅವನೆಂದೂ ಅತ್ತಿರಲಿಲ್ಲ. ಅಯೋಧ್ಯೆಗೆ ಯಾತ್ರೆ ಹೋಗಿದ್ದ ತನ್ನ ತಂದೆ ಮತ್ತು ಚಿಕ್ಕಪ್ಪಂದಿರ ಸುಟ್ಟು ಕರಕಲಾದ ಶವಗಳನ್ನು ಮನೆಗೆ ತಂದಾಗ ಅವನು ಅತ್ತಿದ್ದ. ಕೋಣೆಯಲ್ಲಿ ಆಗ ದೀಪ ಬೆಳಗಿತು. ಪ್ರೊಫೆಸರ್ ಎದ್ದು, ಅವನ ಪಕ್ಕದಲ್ಲಿ ಕುಳಿತು, ಅವನ ಕಣ್ಣುಗಳಲ್ಲಿ ಕಣ್ಣಿಟ್ಟು ನೋಡಿದರು. ಅಮರ ಕೆಂಪೇರಿದನು. ಕ್ಷಣಮಾತ್ರದಲ್ಲಿ ಅವನ ಪೇಚಾಟ ಸಿಟ್ಟಾಗಿ ಕೆರಳಿತು. ಆದರೆ ಪ್ರಾಧ್ಯಾಪಕರ ವಯಸ್ಸಾದ ಕಣ್ಣಿನಲ್ಲಿದ್ದ ಗಾಢ ಕಾಳಜಿ ಅವನನ್ನು ಎಲ್ಲೋ ಸ್ಪರ್ಶಿಸಿತು. ಓ, ಕೊಲ್ಲಲು ಬಂದ ಆಸಾಮಿ ಆಟದಲ್ಲಿ ಸೋತ ಮುಂಗೋಪಿ ಮಗುವಿನಂತೆ ಈಗ ಅಳುತ್ತಿದೆ. ಅವರು ಅಮರನ ಕಣ್ಣೀರು ಒರೆಸಿದರು. ನೀನು ಗುಂಡುಗಳ ಬದಲು ಮಾತುಗಳನ್ನ ಬಳಸಬೇಕಿತ್ತು, ಬಸವಣ್ಣ ಹಾಡಿದ್ದು ವ್ಯರ್ಥವೆ? *ಸ್ಥಾವರಕ್ಕಳಿವುಂಟು ಜಂಗಮಕ್ಕಳಿವಿಲ್ಲ, ಕೂಡಲಸಂಗಮದೇವಾ.* ಮಗು, ಮತಗಳು ಗಾಡಿಯನ್ನು ಎಳೆಯುತ್ತ ಮುಂದೆ ಓಡುವ ಎತ್ತುಗಳಲ್ಲ. ಅವು ಸುಮ್ಮನೆ ನಿಂತು ಅದರ ಚಕ್ರಗಳನ್ನು ಮುರಿಯಲು ಪ್ರಯತ್ನಿಸುತ್ತವೆ. ಅಳಬೇಡ, ಅವರ ಮುಪ್ಪಾದ ಬೆರಳುಗಳು ಅಮರನ ಹಣೆಯನ್ನು ನೇವರಿಸಿದವು. ಮಗು, ಬಂದೂಕು ಕೇವಲ ಕೊಲ್ಲುತ್ತದೆ. ಆದರೆ ಮಾತುಗಳು ಜೀವ ಕೊಡುತ್ತವೆ.

ಅವನ ಮನಸ್ಸಿಗೆ ಆ ರಾತ್ರಿ ನುಗ್ಗಿ ಬಂದು ಕಣ್ಣೀರ ನಡುವೆಯೇ ಅಮರ ಮತ್ತೆ ಮುಗುಳ್ನಕ್ಕನು. ಎಂಥ ರಾತ್ರಿ ಅದು! ಮಾತು ಮರುಕಳಿಸುತ್ತಿದೆ, ಜೀವ ಕೊಡುತ್ತಿದೆ. ಆದ್ದರಿಂದಲೇ ಬಸವಣ್ಣ ತನ್ನ ಶೋಧಗಳನ್ನ ವಚನಗಳೆಂದು ಕರೆದನು. ಮೊಟ್ಟ ಮೊದಲ ಬಾರಿಗೆ ಅವನು ಗಾಢವಾಗಿ ನಿದ್ದೆ ಹೋದನು. ನೋವು ಮತ್ತು ಕೋಪ ತುಂಬಿದ ಪ್ರಾಧ್ಯಾಪಕರ ವೇದನೆಯ ದನಿ ಮುಂಜಾವದಲ್ಲಿ ಅವನನ್ನು ಎಚ್ಚರಿಸಿತು. "ಯಾರ ರಕ್ತವಾದರೂ ಕುಡಿ! ಇತರರಿಗಾಗಿ ಸಂಪತ್ತನ್ನ ಕಕ್ಕು! ಈಗ ವಾರ್ತಾ ಪತ್ರಿಕೆಗಳನ್ನ ತೆರೆಯಲಿಕ್ಕೆ ಭಯ, ಮಕ್ಕಳೆ! ಪೊಲೀಸರು ಜನಗಳ ಬಟ್ಟೆ ಬಿಚ್ಚಿ ಚಮ್ಮ ಸುಲಿಯೋ ಚಿತ್ರಗಳು! ಇಲ್ಲಾಂದ್ರೆ ಖೂನಿಯಾದ ಹುಡುಗಿಯರ ಚಿತ್ರಗಳು! ನೋಡಿ, ಹೇಗವಳು ಬಿದ್ದಿದ್ದಾಳೆ, ಯಾರಾಕೆಯನ್ನ ಕೊಂದದ್ದು? ಇದನ್ನ ವಿರೋಧಿಸಿಯೇ ನನ್ನ ಜೀವನವೆಲ್ಲ ನಾನು ಪಾಠ ಮಾಡಿದ್ದು. ತನ್ನ ಸೃಷ್ಟಿಯನ್ನೇ ಶಪಿಸುವ ದೇವರು ಹೇಗೆ ದೇವರಾಗುತ್ತಾನೆ? *ನೆಲವೊಂದೆ ಹೊಲಗೇರಿ ಶಿವಾಲಯಕ್ಕೆ, ಜಲವೊಂದೆ ಶೌಚಾಚಮನಕ್ಕೆ, ಕುಲವೊಂದೆ ತನ್ನ ತಾನರಿದವಂಗೆ, ಫಲವೊಂದೆ ಷಡುದರ್ಶನ ಮುಕ್ತಿಗೆ, ನಿಲವೊಂದೆ ಕೂಡಲ ಸಂಗಮದೇವಾ ನಿಮ್ಮನರಿದವಂಗೆ.*

ಅಮರ ನಿಟ್ಟುಸಿರು ಬಿಟ್ಟು ಆ ಮುಂಜಾನೆಯನ್ನ ನೆನಸಿಕೊಂಡನು. ಎಂದಿನಂತೆ ಅವನ ಮುಂಜಾವದ ಮಾಮೂಲು ನಿಯತ ಕ್ರಮದಲ್ಲಿ ಶಾಹೀದ್ ಮತ್ತು ಕಿರಣ್ ನೆರವಾಗಿದ್ದರು. ದಾವಣಗೆರೆಯಲ್ಲಿ ದಲಿತರ ಮೇಲೆ ನಡೆದ ದೌರ್ಜನ್ಯದ ಬಗ್ಗೆ ಕೇಳಲು ವಾಹಿನಿಯ ವರದಿಗಾರರು ಇಲ್ಲಿಗೆ ಬಂದಿದ್ದಾರೆ, ಎಂದು ಅವನಿಗೆ ಹೇಳಿದರು. ಪ್ರೊಫೆಸರ್ ಆಮೇಲೆ ಬಂದರು. ಅವರು ಮತ್ತು ಮೇಘನಾದ ಅವನ ಮೈ ಒರೆಸಿ, ತಿಂಡಿ ತಿನ್ನಿಸಿದರು. ಅವನಿಗಾಗಿ ಅವರು ಧೋತಿಗಳು, ಅಂಗಿಗಳನ್ನು ತಂದಿದ್ದರು. ಆಮೇಲೆ ಅವನ ಮಂಚವನ್ನು ಅವರು ಪ್ರಾಧ್ಯಾಪಕರ ಉಪನ್ಯಾಸ ಕೊಠಡಿಗೆ ಸಾಗಿಸಿದರು. ಶಾಲೆಯನ್ನು ಬಿಟ್ಟಮೇಲೆ ಮೊದಲ ಬಾರಿಗೆ ತರಗತಿಯಲ್ಲಿ ಅಮರ ಕುಳಿತಿರಲಿಲ್ಲ, ಒರಗಿಕೊಂಡಿದ್ದನು. ಪ್ರೊಫೆಸರ್ ಹೇಳಿದ್ದೆಲ್ಲವನ್ನೂ ಅವನು ಗ್ರಹಿಸಲಾಗಲಿಲ್ಲ, ಆದರೂ ವಿದ್ಯಾರ್ಥಿಗಳ ಕಣ್ಣುಗಳಲ್ಲಿ ಮೆಚ್ಚಿಕೆಯ ಬೆಳಕನ್ನು ಕಂಡನು. ಅವರು ಪ್ರಶ್ನೆಗಳನ್ನ ಹಾಕುತ್ತಿದ್ದುದು ಕೇಳಿಸಿತು. ಪ್ರೊಫೆಸರ್ ಕೊಟ್ಟ ಉತ್ತರಗಳನ್ನು ಆಲಿಸಿದರು. ಇತರರಿಗಿಂತ ಹೆಚ್ಚು ಮೌನಿಯಾಗಿದ್ದ ಸೂರಜ್ ಅವನ ಹೆಸರನ್ನು ಕೇಳಿದ. ಪ್ರೊಫೆಸರ್ ಜವಾಬು ಕೊಟ್ಟರು – ನನ್ನ ಹೆಸರೇ – ಭಗವಾನ್ ಅಂತ. ನಾನು ಬರೆದಿರುವ ನೂರು ಪುಸ್ತಕಗಳೇ ನನ್ನ ಮಕ್ಕಳು. ಇವನು ನನ್ನ ನೂರೊಂದನೆಯ ಮಗ! ಆದ್ದರಿಂದ ನಾನೀಗ ಧೃತರಾಷ್ಟ್ರ ಅಂತ ಘೋಷಿಸುತ್ತೇನೆ! ಅವರೆಲ್ಲ ನಕ್ಕರು. ರಾಮ ಮತ್ತು ಕೃಷ್ಣ ನಿಜವಾಗಿ ಹುಟ್ಟಿದ್ದರೆ? ಅವರು ಭೂಮಿಯ ಮೇಲೆ ನಡೆದಾಡಿದ್ದರೆ? ಅಮರ ಕೇಳಬೇಕೆಂದುಕೊಂಡ. ವಾಲ್ಮೀಕಿ ರಾಮಾಯಣದಿಂದ ನಾವು ರಾಮನ ಬಗ್ಗೆ ತಿಳಿಯುತ್ತೇವೆ. ಅದರಲ್ಲಿ ರಾಮ ಬರಿ ಮನುಷ್ಯ ಅಷ್ಟೆ. ಆ ಮನುಷ್ಯನಿಂದ ಈಗ ನಾವು ದೇವರೆಂದು ತಿಳಿದುಕೊಂಡಿರುವ ರಾಮನನ್ನು ಜನಗಳು ಸೃಷ್ಟಿಮಾಡಿದ್ದಾರೆ. ಕೆಲವು ಅನುಭವಗಳಿವೆ – ಹಸಿವು, ಪ್ರೀತಿ, ಕಾಮ, ಸಾವು – ಇವುಗಳನ್ನು ಅರಿತುಕೊಳ್ಳಬೇಕಾದರೆ ನೀನೆ ಅವುಗಳನ್ನ ಅನುಭವಿಸಬೇಕು. ನಿನ್ನ ಹಸಿವು ನಿನ್ನದು ಮಾತ್ರ. ಹಾಗೆನೆ, ದೇವರು ಸಹ. ದೇವರು ನಿಜವಾಗಿಯೂ ಇದ್ದರೆ ಮನುಷ್ಯ ತಾನೇ ಅವನನ್ನ ಕಾಣಬೇಕು? ತನಗೆ ಅಗತ್ಯವಾದ ದೇವರನ್ನ ಮನುಷ್ಯ ಸೃಷ್ಟಿಸಿಕೊಳ್ಳುತ್ತಾನೆ. ಕಾಲಗತಿಯಲ್ಲಿ ಅಂಥ ಎಷ್ಟೋ ಮಂದಿಯನ್ನು ರೂಪಿಸಿ ಕೈಬಿಡಲಾಗಿದೆ. ಅಧಿಕಾರದ ಹೋರಾಟದಲ್ಲಿ ಗೆದ್ದವು ಮಾತ್ರ ಉಳಿದುಕೊಂಡಿವೆ. ನೋಡಿ, ಈಗಿರುವ ಯಾವ ಒಬ್ಬ ದೇವರೂ ಹೆಂಗಸಿನಿಂದ ಬೆಸಲೆಯಾಗಿಲ್ಲ. ಕಾಲಗತಿಯಲ್ಲಿ ಹೆಂಗಸು ಅಧಿಕಾರ ಕಳೆದುಕೊಂಡಾಗ, ಅವರ ದೇವರುಗಳೂ ಕಮರಿಹೋದರು. ಪ್ರೊಫೆಸರ್ ಹಾಡಿದರು: *ಚಂದ್ರೋದಯಕ್ಕೆ ಅಂಬುಧಿ ಹೆಚ್ಚೂದಯ್ಯ, ಚಂದ್ರ ಕುಂದೆ, ಕುಂದೂದಯ್ಯ, ಚಂದ್ರಂಗೆ ರಾಹು ಅಡ್ಡ ಬಂದಲ್ಲಿ ಅಂಬುಧಿ ಬೊಬ್ಬಿಟ್ಟಿತ್ತೆ ಅಯ್ಯಾ? ಅಂಬುಧಿಯ ಮುನಿ ಆಪೋಶನವ ಕೊಂಬಲ್ಲಿ ಚಂದ್ರಮನಡ್ಡ ಬಂದನೆ ಅಯ್ಯಾ? ಅರಿಗಾರೂ ಇಲ್ಲ ಕಕ್ಕುಲತೆಗೆ ಕೆಳೆಯಿಲ್ಲ ಜಗದ ನಂಟ ನೀನೇ ಅಯ್ಯಾ, ಕೂಡಲಸಂಗಮದೇವಯ್ಯಾ!*

(ಮುಂದುವರೆಯುವುದು)

ಮಲಯಾಳಂ ಮೂಲ: ಕೆ.ಆರ್.ಮೀರಾ
ಇಂಗ್ಲಿಷ್ ಅನು: ಜೆ.ದೇವಿಕಾ
ಕನ್ನಡ ಅನು: ಕೆ.ಎಸ್.ಭಗವಾನ್

ಇದು ಆತ್ಮಹತ್ಯೆಯಲ್ಲ, ಬಲಿದಾನ

ಫೆಬ್ರುವರಿ 7 ನೇ ತಾರೀಖು ಕರ್ನಾಟಕದಿಂದ ಸಮಾನ ಮನಸ್ಕರ ತಂಡವೊಂದು ಹೈದರಾಬಾದ್ ವಿ.ವಿಗೆ ಭೇಟಿ ನೀಡಿತು. ಅದರಲ್ಲಿ ದೊಡ್ಡಿಪಾಳ್ಯ ನರಸಿಂಹಮೂರ್ತಿ, ಬಿ.ಶ್ರೀಪಾದ್, ಡಾ.ಉಮಾಶಂಕರ್, ಕಸ್ತೂರಿ, ಸ್ಮಿತಾ, ಲೇಖ, ಪ್ರತಿಭಾ, ಡಾ. ಶ್ರೀರಾಮ್ ಮತ್ತು ವಿಕಾಸ ಆರ್ ಮೌರ್ಯ ಇದ್ದರು. ಅಲ್ಲಿ ರೋಹಿತ್ ವೇಮುಲ ಸಾವಿಗೆ ಕಾರಣರಾದವರನ್ನು ಶಿಕ್ಷಿಸಬೇಕೆಂದು ಕಳೆದ 15 ದಿನಗಳಿಂದ ನಡೆಯುತ್ತಿರುವ ಉಪವಾಸ ಸತ್ಯಾಗ್ರಹದಲ್ಲಿ ಪಾಲ್ಗೊಳ್ಳಲಾಯಿತು. ಅಂದು ರೋಹಿತ್‌ನೊಂದಿಗೆ ಅಮಾನತುಗೊಂಡಿದ್ದ ಸುಂಕಣ್ಣ ಎಂಬ ಸಂಶೋಧಕ ವಿದ್ಯಾರ್ಥಿಯನ್ನು ಗೌರಿ ಲಂಕೇಶ್ ಪತ್ರಿಕೆಗಾಗಿ ಸಂದರ್ಶಿಸಲಾಯಿತು.

ಸಂದರ್ಶನ ತಂಡ: ರೋಹಿತ್ ವೇಮುಲನ ಸಾವಿಗೆ ಕಾರಣಗಳೇನು?

ಸುಂಕಣ್ಣ: ರೋಹಿತ್ ವೇಮುಲನ ಸಾವಿಗೂ ಮುಂಚೆ ಇದೇ ಕ್ಯಾಂಪಸ್ಸಿನಲ್ಲಿ 9 ದಲಿತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಆ ಸಾವುಗಳಲ್ಲಿ ವಿಶ್ವವಿದ್ಯಾಲಯದ ಆಡಳಿತ ಮಂಡಳಿಯಲ್ಲಿ ಅಡಗಿರುವ ಬ್ರಾಹ್ಮಣ್ಯದ ಮುಖ್ಯ ಪಾತ್ರವಿತ್ತು. ಇಲ್ಲಿ ನಾನು ಬ್ರಾಹ್ಮಣರ ಬಗ್ಗೆ ಹೇಳುತ್ತಿಲ್ಲ, ಬ್ರಾಹ್ಮಣ್ಯದ ಬಗ್ಗೆ ಹೇಳುತ್ತಿದ್ದೇನೆ. ಅದು ಅವರೆಲ್ಲರ ಉಸಿರನ್ನು ನಿಲ್ಲಿಸಿತ್ತು. ಈ ಹಿಂದೆ ಇದ್ದ ಸರ್ಕಾರಗಳು ಯಾವುವೂ ವಿ.ವಿಯ ಆಡಳಿತದಲ್ಲಿ ಮೂಗು ತೂರಿಸುತ್ತಿರಲಿಲ್ಲ. ಸ್ಥಳೀಯ ಶಾಸಕರು, ಸಂಸದರು ವಿ.ವಿಯ ಆಡಳಿತಕ್ಕೆ ವಿದ್ಯಾರ್ಥಿಗಳ ಮೇಲೆ ಕ್ರಮ ಜರುಗಿಸಲು ಆಗ್ರಹಪಡಿಸಿದ್ದಿಲ್ಲ. ಆದರೆ ಈ ಕೇಸಿನಲ್ಲಿ ಸ್ಥಳೀಯ ರಾಜಕೀಯ ವ್ಯಕ್ತಿಗಳು ಸೇರಿದ್ದಾರೆ. ಈ ವಿ.ವಿ ಬಿಜೆಪಿ ಶಾಸಕ ರಂಗಾರೆಡ್ಡಿಯ ಕ್ಷೇತ್ರದಲ್ಲಿದೆ. ನಂದನ ವಿಷ್ಣುವರ್ಧನ ಈ ಜಿಲ್ಲೆಯ ಬಿಜೆಪಿ ಪ್ರಧಾನ ಕಾರ್ಯದರ್ಶಿ. ಇವರು ಅಖಿಲ ಭಾರತ ವಿದ್ಯಾರ್ಥಿ ಪರಿಷತ್ ಪ್ರಧಾನ ಕಾರ್ಯದರ್ಶಿ ನಂದನಂ ಸುಶೀಲ್ ಕುಮಾರ್‌ನ ದೊಡ್ಡಪ್ಪ. ಆ ಕಾರಣಕ್ಕಾಗಿಯೇ ಅವರು ಕೇಂದ್ರ ಮಂತ್ರಿ ಬಂಡಾರು ದತ್ತಾತ್ರೇಯರವರಿಗೆ ಪತ್ರ ಬರೆಯುತ್ತಾರೆ. ಅದರಲ್ಲಿ ಅಂಬೇಡ್ಕರ್ ಸ್ಟುಡೆಂಟ್ ಅಸೋಸಿಯೇಷನ್ನಿನ ವಿದ್ಯಾರ್ಥಿಗಳು ತೀವ್ರಗಾಮಿಗಳಾಗಿದ್ದಾರೆ, ಜಾತಿವಾದಿಗಳಾಗಿದ್ದಾರೆ ಮತ್ತು ದೇಶದ್ರೋಹಿ ಚಟುವಟಿಕೆಗಳನ್ನು ನಡೆಸುತ್ತಿದ್ದಾರೆ ಎಂದಿತ್ತು. ಜೊತೆಗೆ ಎಬಿವಿಪಿ ನಾಯಕ ಸುಶೀಲ್ ಕುಮಾರನ ಮೇಲೆ ಹಲ್ಲೆ ನಡೆಸಿದ್ದಾರೆ ಎನ್ನಲಾಗಿತ್ತು. ಈ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಬೇಕೆಂದಿತ್ತು. ನಂತರ ಮಂತ್ರಿ ಬಂಡಾರು ದತ್ತಾತ್ರೇಯ ಸತ್ಯಾಸತ್ಯತೆಗಳನ್ನು ತಿಳಿದುಕೊಳ್ಳದೆ ತಕ್ಷಣ ಮಾನವ ಸಂಪನ್ಮೂಲ ಇಲಾಖೆ ಮಂತ್ರಿ ಸ್ಮೃತಿ ಇರಾನಿಯವರಿಗೆ ಪತ್ರ ಬರೆಯುತ್ತಾರೆ. ಅವರೂ ಸಹ ಯಾವುದೇ ತನಿಖೆ ನಡೆಸದೇ ಕ್ರಮಕ್ಕೆ ಒತ್ತಾಯಿಸಿ 4 ಪತ್ರವನ್ನು ತಮ್ಮ ಇಲಾಖೆಯಿಂದ ಕಳಿಸುತ್ತಾರೆ. ಹಾಗಂತ ಕುಲಪತಿ ಅಪ್ಪಾರಾವ್ ಅಮಾಯಕನೇನಲ್ಲ. ಅವನೂ ದೋಷಿಯೇ. ಈ ಹಿಂದೆ ಅವರು 2002 ರಲ್ಲಿ ಮುಖ್ಯ ವಾರ್ಡನ್ ಆಗಿದ್ದರು. ಆಗ ಅವರ ಮೇಲಿನ ಕೆಲವು ಆರೋಪಗಳನ್ನು ಪ್ರಶ್ನಿಸಿ ASA ಪ್ರತಿಭಟಿಸಿದ್ದಕ್ಕೆ 10 ದಲಿತರ ಮೇಲೆ ವಿ.ವಿಯ ಆಡಳಿತಕ್ಕೂ ಮತ್ತು ಪೊಲೀಸ್ ಸ್ಟೇಷನ್ನಿಗೂ ದೂರು ನೀಡಿ ಹಲ್ಲೆ ನಡೆಸಿದ್ದಾರೆಂದು ಆರೋಪಿಸಿದ್ದರು. ಆ ಹತ್ತು ದಲಿತ ವಿದ್ಯಾರ್ಥಿಗಳಲ್ಲಿ ಕೆಲವರನ್ನು ಎರಡು ವರ್ಷಕ್ಕೂ ಇನ್ನು ಕೆಲವರನ್ನು 3 ವರ್ಷಕ್ಕೂ ಅಮಾನತುಗೊಳಿಸಲಾಗಿತ್ತು. ಅದರ ವಿರುದ್ಧ ನ್ಯಾಯಾಲಯದಲ್ಲಿ 8 ವರ್ಷಗಳ ಕಾಲ ಹೋರಾಡಲಾಯಿತು. ಹಾಗಾಗಿ ಅಪ್ಪಾ ರಾವ್ ಸಂಪೂರ್ಣವಾಗಿ ಬ್ರಾಹ್ಮಣ್ಯವನ್ನು ತುಂಬಿಕೊಂಡಿದ್ದ ವ್ಯಕ್ತಿಯಾಗಿದ್ದ. ದಲಿತರು ಹೀಗೆ ಮುಂದೆ ಬರುವುದು ಆತನಿಗೆ ಸಹಿಸಲಾಗುತ್ತಿರಲಿಲ್ಲ. ಹೈದರಾಬಾದ್ ವಿ.ವಿ ದಲಿತರಿಗೆ ಸುರಕ್ಷಿತವಾದ ಸ್ಥಳವಲ್ಲ ಎಂಬಂತೆ ಇಲ್ಲಿ ಭಯ ಹುಟ್ಟಿಸಿದ್ದ ರೋಹಿತ್ ಕೇಸಿನಲ್ಲಿ ವಿಶ್ವವಿದ್ಯಾಲಯವೂ ಸೇರಿದಂತೆ ಕೇಂದ್ರ ಸರ್ಕಾರದ ಪಾತ್ರವೂ ಹೆಚ್ಚಿದೆ. ಇವರೇ ಮುಖ್ಯವಾದ ಅಪರಾಧಿಗಳು. ಇವರೇ ರೋಹಿತ್ ಸಾವಿಗೆ ಕಾರಣ.

ಸಂ.ತಂಡ: ರೋಹಿತ್ ದಲಿತ ಅಥವಾ ದಲಿತನಲ್ಲ ಎಂಬ ಚರ್ಚೆ ನಡೆಯುತ್ತಿದೆ. ಅದರ ಬಗ್ಗೆ ನಿಮ್ಮ ಅಭಿಪ್ರಾಯ?

ಸುಂಕಣ್ಣ: ಇದು ಸಹಜವಾಗಿ, ಪರಿಶಿಷ್ಟ ಜಾತಿ ಮೇಲಿನ ದೌರ್ಜನ್ಯ ಕಾಯ್ದೆಯಿಂದ ತಪ್ಪಿಸಿಕೊಳ್ಳಲು ಕೇಂದ್ರ ಸರ್ಕಾರ ರೂಪಿಸುತ್ತಿರುವ ಜಾತಿ ರಾಜಕಾರಣ. ಒಬ್ಬ ವಿದ್ಯಾರ್ಥಿ ಸತ್ತಿದ್ದಾನೆ. ಆದರೆ ಇವರು ಆ ವಿದ್ಯಾರ್ಥಿಯ ಸಾವಿನ ಬಗ್ಗೆ, ತನಿಖೆ ಬಗ್ಗೆ ಮಾತನಾಡದೆ ಅವನ ಜಾತಿ ಬಗ್ಗೆ ಮಾತನಾಡುತ್ತಿದ್ದಾರೆ. ರೋಹಿತ್ ತಂದೆ ವಡೇರಾ ಜಾತಿಗೆ ಸೇರಿದವರು. ತಾಯಿ ಮಾಲ ಜಾತಿಗೆ ಸೇರಿದವರು. ರೋಹಿತ್ ಒಂದೂವರೆ ವರ್ಷ ಮಗುವಾಗಿದ್ದಾಗಲೇ ಅವನ ತಂದೆ ತಾಯಿ ಇಬ್ಬರೂ ಬೇರೆಯಾಗಿದ್ದರು. ಅವರ ತಾಯಿ ದಲಿತ (ಮಾಲ) ಕಾಲೋನಿಗೆ ಮರಳಿದರು. ಅಲ್ಲಿಯೇ



ಅವರು ಮಕ್ಕಳೊಂದಿಗೆ ಜೀವನ ಸಾಗಿಸಿದರು. ಹಾಗಿದ್ದ ಮೇಲೆ ರೋಹಿತ್ ದಲಿತನಲ್ಲದೆ ಬೇರಿನ್ನೇನಾಗುತ್ತಾನೆ.

ಸಂ. ತಂಡ: ರೋಹಿತ್ ಸಾಯುವ ಮುನ್ನ ಯಾರೊಂದಿಗೆ ಮಾತಾಡಿದ್ದ?

ಸುಂಕಣ್ಣ: ಅವನು ಸಾಯುವ ಮುಂಚಿನ ನಾಲ್ಕೈದು ತಿಂಗಳಿಂದಲೂ ಅವನು ಮೊಬೈಲ್ ಬಳಸುತ್ತಿರಲಿಲ್ಲ. ಅವನ ಮೊಬೈಲನ್ನು ಕಳೆದುಕೊಂಡಿದ್ದ. ಸಾಯುವ ಒಂದು ದಿನ ಮುಂಚೆ ಅವನು ತಾಯಿಗೆ ಸ್ನೇಹಿತನ ಮೊಬೈಲಿನಿಂದ ಫೋನ್ ಮಾಡಿರಬಹುದು. ಸಾಯುವ ದಿನ ಸೆಮಿಸ್ಟರ್ ರಿಪೋರ್ಟ್ ಸಿದ್ಧಪಡಿಸಲು ಸ್ನೇಹಿತನ ಕೊಠಡಿಗೆ ಹೋಗುತ್ತೇನೆ ಎಂದು ಹೊರಟಿದ್ದ. ಅಂದು ಸಂಜೆ 4:30 ಗಂಟೆಗೆ ರೋಹಿತ್ ತಾಯಿ ಅವನೊಂದಿಗೆ ಮಾತನಾಡಲು ಸ್ನೇಹಿತ ವಿಜಯ್‌ಗೆ ಕರೆ ಮಾಡಿದ್ದರು. ಆದರೆ ಅವನು ಬೇರೆ ಕೆಲಸದಲ್ಲಿದ್ದ ಕಾರಣ ಆನಂತರ ಮಾತನಾಡಿಸುವುದಾಗಿ ತಿಳಿಸಿದ ವಿಜಯ್ ರೋಹಿತನನ್ನು ಹುಡುಕಿಕೊಂಡು ಸಂಜೆ 5:30 ಆಷ್ಟೊತ್ತಿಗೆ ಹಾಸ್ಟೆಲ್ ಕೊಠಡಿಗೆ ತೆರಳಿದಾಗ ಎಷ್ಟೇ ಬಡಿದರೂ ಬಾಗಿಲು ತೆರೆಯಲಿಲ್ಲ. ಕೊನೆಗೆ ಸ್ನೇಹಿತರೆಲ್ಲರೂ ಸೆಕ್ಯುರಿಟಿ ನೆರವಿನೊಂದಿಗೆ ಬಾಗಿಲ ಮೇಲ್ಭಾಗದಲ್ಲಿರುವ ಗವಾಕ್ಷಿಯ ಮೂಲಕ ನೋಡಿದಾಗ ಅವನು ನೇಣು ಹಾಕಿಕೊಂಡಿದ್ದ.

ಸಂ. ತಂಡ: ರೋಹಿತ್ ಸಾವಿನ ನಂತರ ನಡೆದ ಬೆಳವಣಿಗೆಗಳೇನು?

ಸುಂಕಣ್ಣ: ರೋಹಿತ್ ಮರಣ ಪತ್ರ ನೋಡಿದರೆ ನಮಗೆ ತಿಳಿಯುತ್ತೆ. ಅವನು ತನ್ನ ಬಗ್ಗೆ ಮಾತ್ರವೇ ಮಾತನಾಡಿಲ್ಲ. ಇಡೀ ವ್ಯವಸ್ಥೆಯ ಬಗ್ಗೆ ಮಾತನಾಡಿದ್ದಾನೆ. ಮನುಷ್ಯನ ಗುರುತಿಸುವಿಕೆ ಜಾತಿಗೆ ಸೀಮಿತವಾಗಿರುವುದನ್ನು ಪ್ರಶ್ನಿಸಿದ್ದಾನೆ. ವಿ.ವಿಗಳಲ್ಲಿ ಈ ತರದ ಘಟನೆಗಳು ಪದೇ ಪದೇ ಮರುಕಳಿಸಬಾರದು. ಆದ್ದರಿಂದ ದಲಿತರ, ತಳ ಸಮುದಾಯದವರ ನ್ಯಾಯಬದ್ಧ ಹಕ್ಕುಗಳಿಗಾಗಿ ಈ ಹೋರಾಟವನ್ನು ಹಮ್ಮಿಕೊಂಡಿದ್ದೇವೆ. ನಿನ್ನೆ ತಾನೇ ದುಂಡು ಮೇಜಿನ ಸಭೆ ನಡೆದಿದೆ. ಅದರಲ್ಲಿ ಮುಕ್ಕಾಲು ಭಾಗ ನಮ್ಮ ಬೇಡಿಕೆಗಳನ್ನು ಅಂತಿಮಗೊಳಿಸಿಕೊಂಡಿದ್ದೇವೆ. ಅದನ್ನು ಪ್ರತಿಯೊಂದು ಪಕ್ಷದ ನಾಯಕರುಗಳಿಗೂ ನೀಡಿ ಅಧಿವೇಶನದಲ್ಲಿ ನಿರ್ಭಯಾ ಕಾಯ್ದೆ ರೀತಿಯೆ ರೋಹಿತ್ ಕಾಯ್ದೆ ತರುವಂತೆ ಆಗ್ರಹಿಸಲು ಕೋರಿಕೊಳ್ಳಲಾಗುವುದು. ರೋಹಿತ್ ಸಾವಿಗೆ ಕಾರಣರಾದವರಿಗೆ ಕಠಿಣ ಶಿಕ್ಷೆ ಆಗಬೇಕೆಂದು ಆಗ್ರಹಿಸಲಾಗುವುದು.

ಸಂ: ರೋಹಿತ್ ಕಾಯ್ದೆ ಏನನ್ನು ಒಳಗೊಂಡಿರಬೇಕು?

ಸುಂಕಣ್ಣ: ರೋಹಿತ್‌ಗೆ ಕಳೆದ ಏಳು ತಿಂಗಳಿಂದಲೂ ಫೆಲೋಶಿಪ್ ಹಣ ಪಾವತಿಯಾಗಿಲ್ಲ. ಆದ್ದರಿಂದ ದಲಿತ, ಹಿಂದುಳಿದ ಸಂಶೋಧಕರಿಗೆ ಒಂದು ತಿಂಗಳೂ ತಡ ಮಾಡದಂತೆ ಫೆಲೋಶಿಪ್ ಹಣ ನೀಡಬೇಕು. ಅಕಾಡೆಮಿಕ್ಕಾಗಿ ಒಬ್ಬ ಗೈಡ್ 8 ಜನ ವಿದ್ಯಾರ್ಥಿಗಳನ್ನು ಗೈಡ್ ಮಾಡಲೇಬೇಕು. ಅದರಲ್ಲಿ ಮೀಸಲಾತಿ ಇಲ್ಲ. ಆದ್ದರಿಂದ ಆ ಎಂಟು ಜನರಲ್ಲಿ 4 ಜನರನ್ನು ಎಸ್.ಸಿ, ಎಸ್.ಟಿ, ಒ.ಬಿ.ಸಿಯಿಂದ ಅಂದರೆ ಮೀಸಲು ವಿದ್ಯಾರ್ಥಿಗಳನ್ನು ಕಡ್ಡಾಯವಾಗಿ ತೆಗೆದುಕೊಳ್ಳಬೇಕು. ಏಕೆಂದರೆ ಕೆಲವು ಸಂಕುಚಿತ ಮನೋಭಾವದ ಪ್ರಾಧ್ಯಾಪಕರು ಮೀಸಲು ವಿದ್ಯಾರ್ಥಿಗಳಿಗೆ ಗೈಡ್ ಮಾಡಲು ಹಿಂಜರಿಯುತ್ತಾರೆ ಅಲ್ಲದೆ ಮೀಸಲು ವಿದ್ಯಾರ್ಥಿಗಳಿಗೆ ಗೈಡ್ ಮಾಡುವುದೇ ವ್ಯರ್ಥ ಎಂಬ ಭಾವನೆ ಹೊಂದಿದ್ದಾರೆ. ಅವರು ದಡ್ಡರು ಎಂದು ದೂಷಿಸುತ್ತಾರೆ. ಆದ್ದರಿಂದ ಅಂತಹ ವಿದ್ಯಾರ್ಥಿಗಳನ್ನು ಕಡ್ಡಾಯವಾಗಿ ಆಯ್ಕೆ ಮಾಡಿಕೊಂಡು ಅವರ ಕಠಿಣ ಶ್ರಮವನ್ನು ಗೌರವಿಸಬೇಕು: ಮೂರನೆಯದಾಗಿ ಗೈಡನ್ನು ನಿಗದಿಪಡಿಸುವುದು. ಏಕೆಂದರೆ 2013 ರಲ್ಲಿ ಮಾದಾರಿ ವೆಂಕಟೇಶ್ ಎಂಬ ದಲಿತ ಸಂಶೋಧಕ ಆತ್ಮಹತ್ಯೆ ಮಾಡಿಕೊಂಡಿದ್ದ. ಯಾಕೆಂದರೆ 18 ತಿಂಗಳಾದರೂ ಅವನಿಗೆ ಗೈಡನ್ನು ನಿಗದಿಪಡಿಸಿರಲಿಲ್ಲ. ಪಿಹೆಚ್‌ಡಿಗೆ ಸೇರಿದ ಮೇಲೆ ಸತತವಾಗಿ ಕುಲಪತಿಗಳಿಗೆ ಪತ್ರ ಬರೆದು ಕೇಳಿಕೊಂಡಾಗಲೂ ಮಾದಾರಿ ವೆಂಕಟೇಶ್‌ಗೆ ಗೈಡನ್ನು ನಿಗದಿಪಡಿಸಿರಲಿಲ್ಲ. ಆಗ ಒಬ್ಬ ತಮಿಳು ಬ್ರಾಹ್ಮಣ ರಾಮಕೃಷ್ಣ ರಾಮಸ್ವಾಮಿ ಕುಲಪತಿಯಾಗಿದ್ದರು. ಆದ್ದರಿಂದ ಪ್ರವೇಶ ಪಡೆದ ದಲಿತ, ಆದಿವಾಸಿ ಮತ್ತು ಹಿಂದುಳಿದ ಜಾತಿಯ ವಿದ್ಯಾರ್ಥಿಗಳಿಗೆ ತಿಂಗಳೊಳಗೆ ಗೈಡ್ ನಿಗದಿ ಮಾಡಬೇಕು. ಹೀಗೆ ಹಲವಾರು ಅಂಶಗಳು ರೋಹಿತ್ ಕಾಯ್ದೆಯಲ್ಲಿ ಇರಬೇಕು.

ಸಂ. ತಂಡ: ನಿಮ್ಮ ಇತರೆ ಬೇಡಿಕೆಗಳು ಏನಿವೆ?

ಸುಂಕಣ್ಣ: ವಿ.ವಿ ಕುಲಪತಿ ಅಪ್ಪಾ ರಾವನ್ನು ಬಂಧಿಸಿ ಅಮಾನತುಗೊಳಿಸಬೇಕು. ಜಾತಿರಾಜಕಾರಣದ ವಿಷಯವನ್ನು ಎಳೆದಾಡುತ್ತಾ ಈ ಕೇಸನ್ನು ನಿಧಾನಿಸುತ್ತಿದ್ದಾರೆ. ಆದರೆ ರೋಹಿತ್ ಜೊತೆ ಬಹಿಷ್ಕಾರವಾಗಿದ್ದ ನಾವು ನಾಲ್ವರೂ ಇದ್ದೇವೆ. ನಮಗೆ ಅವರು ಮೋಸ ಮಾಡಲು ಸಾಧ್ಯವಿಲ್ಲ. ಆದರೂ ನನಗೆ ನ್ಯಾಯಾಂಗ ತನಿಖೆಯ ಮೇಲೆ ಭರವಸೆ ಇಲ್ಲ. ಸ್ವಾತಂತ್ರ್ಯ ನಂತರ ಚುಂಡೂರು, ಕಾರಂಚೇಡು ಘಟನೆಗಳಲ್ಲಿ ದಲಿತರಿಗೆ ನ್ಯಾಯ ಸಿಕ್ಕಿಲ್ಲ. ಆದ್ದರಿಂದ ನ್ಯಾಯಾಂಗದ ಮೇಲೆ ನಮಗೆ ನಂಬಿಕೆ ಇಲ್ಲ. ಆದರೆ ಈಗ ಏನು ಹೋರಾಟ ಹಮ್ಮಿಕೊಂಡಿದ್ದೇವೆ ಅದನ್ನು ಮುಂದುವರೆಸುತ್ತೇವೆ. ರೋಹಿತ್ ಕುಟುಂಬಕ್ಕೆ ಪರಿಹಾರ ನೀಡಬೇಕು ಹಾಗೂ ವಿ.ವಿಯಲ್ಲಿ ಕಾರ್ಯನಿರ್ವಾಹಕ ಮಂಡಳಿಯೊಂದಿದೆ. ಅದರಲ್ಲಿ ವಿ.ವಿ ಆರಂಭವಾದಾಗಿನಿಂದಲೂ ಒಬ್ಬ ದಲಿತ, ಆದಿವಾಸಿಯನ್ನೂ ಸದಸ್ಯರನ್ನಾಗಿ ಮಾಡಿಲ್ಲ. ಯಾಕೆ? ಹಾಗೇ ಶಿಸ್ತು ಸಮಿತಿಯೂ ಇದೆ. ಅದರಲ್ಲಿ ನೇಮಕಗೊಳ್ಳುವವರು ಸಜ್ಜನರಾಗಿರಬೇಕು. ಈಗಿರುವ ಅಲೋಕ್ ಪಾಂಡೆ ಎಂಬ ವ್ಯಕ್ತಿ ಒಬ್ಬ ವಿದ್ಯಾರ್ಥಿನಿಗೆ ಲೈಂಗಿಕ ಕಿರುಕುಳ ನೀಡಿದ್ದ ಎಂಬ ಆಪಾದನೆ ಹೊಂದಿದ್ದಾನೆ. ಈ ವ್ಯಕ್ತಿಯೇ ನಮ್ಮ ವಿಷಯದಲ್ಲಿ ಸೂಕ್ತ ತನಿಖೆ ನಡೆಸದೆ ಅಮಾನತು ಕ್ರಮ ಕೈಗೊಂಡಿದ್ದು. ಇಂತಹವರನ್ನು ಉನ್ನತ ಹುದ್ದೆಗಳಿಂದ ತಡೆಯಬೇಕು ಮತ್ತು ತೆಗೆದು ಹಾಕಬೇಕು. ಬಹಳ ಮುಖ್ಯವಾಗಿ ನಮ್ಮ ವಿ.ವಿಯಲ್ಲಿ ರಾಜಕೀಯ ತಂದ ಎಬಿವಿಪಿ ಅಧ್ಯಕ್ಷ ಸುಶೀಲ್ ಕುಮಾರ್, ಕುಲಪತಿ ಅಪ್ಪಾರಾವ್, ಕೇಂದ್ರ ಮಂತ್ರಿಗಳಾದ ಬಂಡಾರು ದತ್ತಾತ್ರೇಯ, ಸ್ಮ?ತಿ ಇರಾನಿಯವರಿಗೆ ಕಠಿಣ ಶಿಕ್ಷೆ ಆಗಬೇಕು.

ಸಂ. ತಂಡ: ನಿಮ್ಮ ಹೋರಾಟಕ್ಕೆ ಯುವಕರ ಮತ್ತು ಹಲವು ಸಂಘಟನೆಗಳ ಬೆಂಬಲ ಸಿಕ್ಕಿದೆ. ಅದು ನಿಮಗೆ ಸಮಾಧಾನ ತಂದಿದೆಯೆ?

ಸುಂಕಣ್ಣ: ಈ ವಿಚಾರದಲ್ಲಿ ನಮಗೆ ಬೆಂಬಲವಾಗಿ ನಿಂತಿರುವ ವಿದ್ಯಾರ್ಥಿಗಳಿಗೂ, ಸಾಮಾಜಿಕ ಸಂಘಟನೆಗಳಿಗೂ, ಮಾಧ್ಯಮಗಳಿಗೂ ಮತ್ತು ಪ್ರಜಾಸತ್ತಾತ್ಮಕ ಹೋರಾಟಗಾರರಿಗೂ ನಾವು ಧನ್ಯವಾದಗಳನ್ನು ಹೇಳುತ್ತೇವೆ. ನಮ್ಮ ಹೋರಾಟ ಇಷ್ಟು ಮಟ್ಟಕ್ಕೆ ಬೆಂಬಲ ಪಡೆಯುತ್ತದೆ ಎಂದು ಊಹಿಸಿರಲಿಲ್ಲ. ಆದರೆ ರೋಹಿತ್ ಸಾಯುವ ಮುಂಚೆಯೂ ನಾವೆಲ್ಲರೂ ಬೇರೆ ಬೇರೆ ಸಂಘಟನೆಗಳನ್ನು, ರಾಜಕೀಯ ಪಕ್ಷಗಳನ್ನು ನಮಗೆ ಸಹಾಯ ಮಾಡುವಂತೆ ಕೋರಿಕೊಂಡಿದ್ದೆವು. ಆದರೆ ಅವರು ಈಗ ಕೊಡುತ್ತಿರುವಷ್ಟು ಬೆಂಬಲ ಕೊಡಲಿಲ್ಲ. ರೋಹಿತ್ ಸತ್ತ ನಂತರವೇ ಈ ರೀತಿಯ ಬೆಂಬಲ ನಮಗೆ ಸಿಕ್ಕಿದ್ದು. ಇರಲಿ. ಈ ಬೃಹತ್ ಹೋರಾಟ ದಲಿತ, ಆದಿವಾಸಿ ಮತ್ತು ಹಿಂದುಳಿದ ವಿದ್ಯಾರ್ಥಿಗಳನ್ನು ಎಚ್ಚೆತ್ತುಕೊಳ್ಳುವಂತೆ ಮಾಡಿದೆ.

ಸಂ. ತಂಡ: ರೋಹಿತ್ ಅಂತ್ಯಕ್ರಿಯೆಯನ್ನು ಬಹಳ ಆತುರವಾಗಿ ನೆರವೇರಿಸಿದ ಕಾರಣಗಳೇನು?

ಸುಂಕಣ್ಣ: ರೋಹಿತ್ ವಿಚಾರದಲ್ಲಿ ಪೊಲೀಸರು ಅತಿಯಾಗಿ ನಡೆದುಕೊಂಡಿದ್ದಾರೆ. ಅವರ ಕೆಲಸವೇನಿದ್ದರೂ ಶವಪರೀಕ್ಷೆ ಮಾಡಿಸುವುದಷ್ಟೆ. ಆದರೆ ಇಲ್ಲಿ ಅವರು ನಮಗೆ ಲಾಠಿ ಚಾರ್ಜ್ ಮಾಡಿ ರೋಹಿತ್ ಶವವನ್ನು ಶವಪರೀಕ್ಷೆಗೆ ತೆಗೆದುಕೊಂಡು ಹೋದರು. ನನ್ನನ್ನೂ ಸೇರಿದಂತೆ 8 ವಿದ್ಯಾರ್ಥಿಗಳನ್ನು ಬಂಧಿಸಲಾಯಿತು. ಶವಪರೀಕ್ಷೆಯ ನಂತ[...] ಶವವನ್ನು ಅವನ ಸ್ವಂತ ಊರು ಗುಂಟೂರಿ[...] ಕಳುಹಿಸಲಾಗುತ್ತದೆ ಎಂದು ತಿಳಿಸಿದ್ದರು. ಅದಕ್ಕಾಗಿ [...] ಎರಡು ಬಸ್ ಮಾಡಿಕೊಂಡು ತಯಾರಿದ್ದೆವು. ನಮ್ಮ[...] ಐವರನ್ನು ಶವಪರೀಕ್ಷೆ ಮಾಡುವ ಸ್ಥಳ ಒಸ್ಮಾನಿಯಾ ಆಸ್ಪತ್ರೆ[...] ಕಳಿಸಿದ್ದೆವು. ಪೊಲೀಸರು ಅವರನ್ನು ಒಳಬಿಟ್ಟಿಲ್ಲ. ಮಂದಕೃ[...] ಮಾದಿಗ ದಲಿತ ಮುಖಂಡರು ಅವರೂ ತೆರಳಿದಾ[...] ಅವರಿಗೂ ಪ್ರವೇಶ ನಿರಾಕರಿಸಿದ್ದಾರೆ. ಗದ್ದರ್ ಅವ[...] ತೆರಳಿದಾಗ ಪೊಲೀಸ್ ಅವರನ್ನು ಬಂಧಿಸಿದ್ದಾರೆ. ಹೀಗೆ[...] ಪೊಲೀಸರು ಇಷ್ಟು ದೌರ್ಜನ್ಯ ಯಾಕೆ ಮಾಡಿದ್ದರು[...] ಶವಪರೀಕ್ಷೆಯ ನಂತರ ಪೊಲೀಸ್ ಬೆಂಗಾವಲಿನ[...] ರೋಹಿತ್ ಶವವನ್ನು ಕೊಂಡೊಯ್ದು ಹೈದರಾಬಾದಿ[...] ಬಿಜೆಪಿ ಅಧ್ಯಕ್ಷ ಕಿಶನ್ ರೆಡ್ಡಿ ಕ್ಷೇತ್ರದ ಶವಾಗಾರದ[...] ಕೇವಲ ಅರ್ಧ ಗಂಟೆಯಲ್ಲಿ ದಹಿಸಲಾಗಿದೆ. ಶವಸಂಸ್ಕಾರದ[...] ನಮ್ಮ ಹಕ್ಕನ್ನೇ ಕಿತ್ತುಕೊಳ್ಳಲಾಗಿದೆ. ಪೊಲೀಸರ ಹಿತಾಸ[...] ಯಾರ ಪರವಾಗಿತ್ತು ಎಂಬುದು ನಮಗೆ ಇದರಿಂದ ಸ್ಪಷ್ಟವಾ[...] ತಿಳಿಯುತ್ತದೆ.

ಇಲ್ಲಿ ಮತ್ತೊಂದು ವಿಷಯವನ್ನು ತಿಳಿಸಬೇಕ[...] ಸುಮಾರು ಮೂರು ವರ್ಷಗಳ ಹಿಂದೆ ಫೇಸ್‌ಬುಕ್‌ನ[...] ಹಿಂದೂತ್ವದ ಪೋಸ್ಟ್ ವಿರುದ್ಧ ರೋಹಿತ್ ಬೇರೆ ಯಾರೊ[...] ಬರೆದಿದ್ದ ಕವಿತೆ ಬಗ್ಗೆ ಕಮೆಂಟ್ ಮಾಡಿದ್ದ. ಆಗ ಸುಶೀಲ್[...] ಕುಮಾರ್ ದೊಡ್ಡಪ್ಪ ಮತ್ತು ಇನ್ನೊಬ್ಬರು ರೋಹಿ[...] ವಿರುದ್ಧ ಪೊಲೀಸ್ ಸ್ಟೇಷನ್ನಿಗೆ ದೂರು ನೀಡಿದ್ದರು. ಆ[...] ಪೊಲೀಸರು ರೋಹಿತನನ್ನು ಅರೆಸ್ಟ್ ಮಾಡ[...] ವಿಚಾರಣೆಗೊಳಪಡಿಸಿ ಒಂದು ದಿನ[...] ಬಂಧನದಲ್ಲಿಟ್ಟುಕೊಂಡಿದ್ದರು. ಇನ್ನೊಮ್ಮೆ ASA ಪೋಸ್ಟರ್[...] ಮೇಲೆ ಎಬಿವಿಪಿ ಬ್ಯಾನರ್ ಹಾಕಿದಾಗ ಅದನ್ನು ರೋಹಿತ್[...] ಹರಿದುಹಾಕಿದ್ದ. ಆಗ ರೋಹಿತ್ ಮೇಲೆ ಎಬಿವಿಪಿಯವರು[...] ಎಷ್ಟೇ ರೊಚ್ಚಿಗೆಬ್ಬಿಸುವ ಮಾತನಾಡಿದ್ದರೂ ಅವನು[...] ಸಂಪೂರ್ಣ ಸ್ಥಿಮಿತದಲ್ಲಿದ್ದ. ಅದನ್ನು ವಿಡಿಯೋ[...] ಮಾಡಿಕೊಂಡಿದ್ದ ಎಬಿವಿಪಿಯವರು ಎಡಿಟ್ ಮಾಡಿ ತಮಗೆ[...] ಬೇಕಾದ ಭಾಗವನ್ನು ಮಾತ್ರ ಪ್ರಚಾರ ಪಡಿಸಿದ್ದರು. ಆಗಲೇ[...] ರೋಹಿತ್ ನಿಮಗೆ ಗಂಡೆದೆ ಇದ್ದರೆ ಸಂಪೂರ್ಣ ವಿಡಿಯೋ[...] ಪಬ್ಲಿಶ್ ಮಾಡಿ ಎಂದು ಸವಾಲು ಹಾಕಿದ್ದ. ಈಗಲೂ[...] ಎಬಿವಿಪಿಯವರು ಅದೇ ವಿಡಿಯೋ ತುಣುಕ[...] ಇಟ್ಟುಕೊಂಡು ರಾಜಕೀಯ ಮಾಡುತ್ತಿದ್ದಾರೆ.

ಸಂ. ತಂಡ: ರೋಹಿತ್ ವೇಮುಲನಿಗೆ ಅವನು[...] ಬದುಕಿದ್ದಾಗ ಇಂತಹ ಬೆಂಬಲ ಸಿಕ್ಕಿದ್ದರೆ ಹೀಗಾಗುತ್ತಿರಲಿ[...] ಎನಿಸುತ್ತದೆಯೆ?

ಸುಂಕಣ್ಣ: ರೊಹಿತ್ ಸಾವಿಗೂ ಮುನ್ನ ನಮಗೆ[...] ಕ್ಯಾಂಪಸ್ಸಿನ ಒಳಗೆ ಬೆಂಬಲವಿತ್ತು. ಎಬಿವಿಪಿ ಸಂಘಟನೆ[...] ಹೊರತುಪಡಿಸಿ ಮಿಕ್ಕೆಲ್ಲಾ ವಿದ್ಯಾರ್ಥಿ ಸಂಘಟನೆಗಳು ನಮಗೆ[...] ಬೆಂಬಲ ನೀಡಿದ್ದರು. ಕೆಲವು ದಲಿತ ಸಂಘಟನೆಗಳೂ[...] ಸಹಕಾರ ನೀಡಿದವು. ಆದರೆ ಅವನ ಮರಣದ ನಂತರವೇ[...] ಈ ಘಟನೆ ಮೀಡಿಯಾಗಳ ಮೂಲಕ ಕ್ಯಾಂಪಸ್ಸಿನ[...] ಹೊರಹೋಗಿದ್ದು.

ಸಂ. ತಂಡ: ಕೊನೆಯದಾಗಿ ಏನು ಹೇಳಲು[...] ಬಯಸುತ್ತೀರಿ?

ಸುಂಕಣ್ಣ: ಈ ಹೋರಾಟ ಗುರಿ ಮುಟ್ಟಬೇಕಿದೆ[...] ಇಂದು ರೋಹಿತನಿಗೆ ಆಗಿರುವುದು ಮುಂದೆ ಯಾರಿಗೆ[...] ಬೇಕಾದರೂ ಆಗಬಹುದು. ಆದ್ದರಿಂದ ದೆಹಲಿ ಚಲೋ[...] ಕಾರ್ಯಕ್ರಮವನ್ನು ಹಮ್ಮಿಕೊಂಡು ನಮ್ಮ ಬೇಡಿಕೆಗಳನ್ನು[...] ಗಟ್ಟಿಯಾಗಿ ಕೇಳಬೇಕಾಗಿದೆ. ದೆಹಲಿ ಚಲೋ ದಿನಾಂಕ[...] ಕೆಲವೇ ದಿನಗಳಲ್ಲಿ ಪ್ರಕಟವಾಗಲಿದ್ದು ಕರ್ನಾಟಕದ ವಿದ್ಯಾರ್ಥಿ[...] ಮಿತ್ರರು ಮತ್ತು ಸಾಮಾಜಿಕ ಸಂಘಟನೆಗಳು ನಮಗೆ[...] ಬೆಂಬಲ ನೀಡಬೇಕೆಂದು ಕೇಳಿಕೊಳ್ಳುತೇವೆ. ನಮ್ಮ[...] ಹೋರಾಟದ ಭಾಗವಾಗಿ ಕರ್ನಾಟಕದಲ್ಲಿ ನಮ್ಮ [...] ಧ್ವನಿ ಎತ್ತಿರುವ ಎಲ್ಲರಿಗೂ ಧನ್ಯವಾದಗಳು. ಫೆಬ್ರವ[...] 16 ರಂದು ರೋಹಿತ್ ವೇಮುಲನಿಗೆ ಆಗಿರುವ ಅನ್ಯಾಯ[...] ವಿರುದ್ಧ ಕರ್ನಾಟಕಾದ್ಯಂತ ವಿಶ್ವವಿದ್ಯಾಲಯ ಬಂದ್[...] ಕೈಗೊಂಡಿರುವವರಿಗೆ ಧನ್ಯವಾದಗಳು.

ಕೆಲವು ಹೇಳಿಕೆಗಳು

"ಇದು ವಿ.ವಿ ಆವರಣದಲ್ಲಿಯೇ ಬಗೆಹರಿಯಬೇಕಿದ್ದ ವಿಷಯ. ಇದನ್ನು ರಾಜಕೀಯವಾಗಿ ಬಳಸಿಕೊಂಡು ದಲಿತನೆಂಬ ಕಾರಣಕ್ಕೋ ಏನೋ ರೋಹಿತ್ ಇಂದು ಬಲಿಯಾಗಿದ್ದಾನೆ."

-ಅರ್ಜುನ್, ಸಂಶೋಧಕ, ಹೈದರಾಬಾದ್ ವಿ.ವಿ ಕನ್ನಡ ಬಳಗ

"ಈಗ ಕೊಡುತ್ತಿರುವ ಪ್ರಚಾರವನ್ನೇ ರೋಹಿತ್‌ಗೆ ಅವನು ಸಾಯುವ ಮುಂಚೆ ಕೊಟ್ಟಿದ್ದರೆ ಅವನು ಸಾಯುತ್ತಿರಲಿಲ್ಲ. ಅವನದ್ದು ಆತ್ಮಹತ್ಯೆಯಲ್ಲ, ಬಲಿದಾನ. ಈ ಹಿಂದೆ ಇಲ್ಲಿನ ಪಟ್ಟಭದ್ರ ಶಕ್ತಿಗಳ ವಿರುದ್ಧ ಗಟ್ಟಿಯಾಗಿ ಹೋರಾಡಿದ್ದ. ಈಗ ನಾವೆಲ್ಲರೂ ಅವನ ಪರವಾಗಿ ನ[...] ಹಿತಾಸಕ್ತಿಗಾಗಿ ಹೋರಾಡಬೇಕಿದೆ."

-ಶ್ರೀಕಾಂತ್, ಸಂಶೋಧಕ, ಹೈದರಾಬಾದ್ ವಿ.ವಿ. ಕನ್ನಡ ಬಳ[...]



ಯೋಗೇಶ್ ಮಾಸ್ಟರ್

ಪುರಾಣದ ಹೂರಣ

ಸತ್ಯಂ ಶಿವಂ ಸುಂದರಂ

ಂದಮಯ ಈ ಜಗ ಹೃದಯ ಏತಕೆ ಭಯ ಮಾಣೊ
ರ್ಯೋದಯ ಚಂದ್ರೋದಯ ದೇವರ ದಯೆ ಕಾಣೊ

ದು ಬರಿ ಬಿಸಿಲಲ್ಲವೋ ಸೂರ್ಯನ ಕೃಪೆ ಕಾಣೊ
ರ್ಯನು ಬರಿ ರವಿಯಲ್ಲವೊ ಆ ಭ್ರಾಂತಿಯ ಮಾಣೊ


ವದನವೆ ಶಿವ ಸದನವು ಬರಿ ಕಣ್ಣದು ಮಣ್ಣೋ
ಲ್ಲದ ಸೌಂದರ್ಯವೇ ಶವಮುಖದ ಕಣ್ಣೋ

ಯದೋಳೀಸ್ ಹೃದಯವ ಕಾಣ್ ಅದೆ ಅಮೃತದ ಹಣ್ಣೋ
ಕಾಣದೆ ಕವಿ ಕುರುಡನೋ ಶಿವ ಕಾವ್ಯದ ಕಣ್ಣೋ

ಕುವೆಂಪುರವರ ಪದ್ಯದ ಸಾಲುಗಳಲ್ಲಿ ಅವರ ರ್ಕತೆ, ಆಧ್ಯಾತ್ಮಿಕತೆ, ರಸಿಕತೆ, ಈ ಮೂರೂ ವ್ಯಕ್ತವಾಗುತ್ತದೆ. ಇಲ್ಲಿ ದೇವರು ಎಂದಾಕ್ಷಣ ಮೋಡಗಳ ಲೆ ಕುಳಿತುಕೊಂಡು, ನೀಟಾದ ನಾಟಕದ ಭೂಷಣಗಳನ್ನು, ಆಭರಣಗಳನ್ನು ತೊಟ್ಟು ನಸುನಗುತ್ತಾ ಯಾದಾಗ ಆಶೀರ್ವಾದ ಮಾಡುತ್ತಾ ಕೋಪ ಬಂದಾಗ ಕೊಡುತ್ತಾ ಇರುವಂತಹ ಒಂದು ವ್ಯಕ್ತಿಯೇನಲ್ಲ. ಅದೇ ವ್ಯಕ್ತಿಯ ಪ್ರತಿಮೆಯನ್ನು ನಿಸರ್ಗದಲ್ಲಿ ಲೇನೂ ಅಡ್ಡಿಯಿಲ್ಲ ಅಥವಾ ಪ್ರಕೃತಿಯನ್ನು ಒಂದು ಯ ಪ್ರತಿಮೆಯಲ್ಲಿ ಕಾಣಲೂ ಏನೂ ಅಡ್ಡಿಯಿಲ್ಲ ನಿಸುತ್ತದೆ. ಆದರೆ ಇದು ಸಾಧ್ಯವಾಗುವುದು ಕವಿ ಯಕ್ಕೆ ಮಾತ್ರವೇ ಎಂದು ಎನಿಸುತ್ತದೆ.

ವೆಂಪು ದೇವರನ್ನು ಪೂಜಿಸುತ್ತಿದ್ದರು

ಸತ್ಯನೆಂದ ಕೂಡಲೇ ಸತ್ಯ ನಾರಾಯಣನನ್ನು ಕಾಣುವ ಅಥವಾ ಶಿವ ಎಂದ ಕೂಡಲೇ ಜಟಾಜೂಟಧಾರಿ



ದ ಪೌರಾಣಿಕ ಶಿವನನ್ನು ಕಲ್ಪಿಸಿಕೊಳ್ಳುವವನಿಗೆ ಪುರವರ ಪದ್ಯವನ್ನು ಅರ್ಥಮಾಡಿಕೊಳ್ಳಲಾಗುವುದಿಲ್ಲ. ಯೇ ದೇವರು ಎಂಬುದು ಸುಳ್ಳು, ರಾಮ, ಕೃಷ್ಣರೆಲ್ಲಾ ಸಗಾರರು, ಶಿವ ವಿಷ್ಣು ದೇವಿ ಎಂಬುವರು ಯಾರೂ ಎಂದು ನೇರಾನೇರ ದೇವರನ್ನು ಯಾವುದೇ ರೂಪದಲ್ಲಿ ಸುವವರಿಗೂ ಈ ಪದ್ಯದ ಹೃದಯ ಅರ್ಥವಾಗು ಕಷ್ಟವೆಂದು ನನಗನ್ನಿಸುತ್ತದೆ.

ವೆಂಪು ನಾಸ್ತಿಕರಲ್ಲ, ಹಾಗೆಯೇ ನಾಟಕ ಮಂಡಳಿಯ ಯುಗಳಿಗೆ ಹೆದರಿ ಡೊಗ್ಗು ಸಲಾಮು ಹೊಡೆಯುತ್ತಾ ಭಕ್ತಿಗಳನ್ನು ಉಳ್ಳಂತಹ ಆಸ್ತಿಕರೂ ಅಲ್ಲ. ಅವರು ರ ವಿಗ್ರಹಗಳನ್ನು ಪೂಜಿಸಿದವರೇ ಆಗಿದ್ದರು. ಅವರ ಶ್ರೀ ರಾಮಕೃಷ್ಣ ಮಠದ ಪ್ರಭಾವ ನೇರವಾಗಿ . ಹಾಗಾಗಿಯೇ ಕವಿಯಾಗಿ ಪ್ರಕೃತಿಯಲ್ಲಿನ ಶೃಂಗಾರ ಸಾಕ್ಷಾತ್ಕರಿಸಿಕೊಂಡಂತೆ, ಆಧ್ಯಾತ್ಮದ ಅನುಭೂತಿಯನ್ನೂ ಜೊತೆಯಲ್ಲಿಯೇ ಕಂಡುಕೊಂಡರು. ಅಷ್ಟೇ ಅಲ್ಲದೇ ದ ಆಧ್ಯಾತ್ಮಿಕ ಜಿಜ್ಞಾಸುವಿಗೆ ಸ್ಥಾಪಿತ ಧಾರ್ಮಿಕ ಗಳು ಉಸಿರುಗಟ್ಟಿಸುವುದೇ ಅಲ್ಲದೇ ಪುರೋಹಿತ ಳು ವ್ಯವಸ್ಥಿತವಾಗಿ ನಡೆಸುವ ಶೋಷಣೆಯನ್ನು ಧಿಸಲೂ ಮತ್ತು ಅವರ ಹೇರಿಕೆಯನ್ನು ನಿರಾಕರಿಸಲೂ ದೇ ಅವಂತಹ ನೈಜವೂ ಮತ್ತು ಪ್ರಾಮಾಣಿಕ ದಿರುತ್ತಿತ್ತು.


ರೋಹಿತಶಾಹಿಯನ್ನು ವಿರೋಧಿಸುವಂತಹ ಕುವೆಂಪು ಪೂಜೆ ಮಾಡುತ್ತಿದ್ದರು, ಗಂಟೆ ಮೊಳಗುತ್ತಿದ್ದರು, ಮಾಡುತ್ತಿದ್ದರು ಎಂದರೆ ಆತ್ಮವಂಚನೆ ಮಾಡಿಕೊಳ್ಳುವು ರದೇ, ಆ ಸಾಂಕೇತಿಕ ಆಚರಣೆಗಳಲ್ಲಿ ಮತ್ತು ವ ಸಂಕೇತಗಳಲ್ಲಿ ಅಂತರ್ಭಾವವನ್ನು ಕಂಡುಕೊಳ್ಳು ಮನಸ್ಥಿತಿಯುಳ್ಳವರೇ ಆಗಿದ್ದರು.

ರ್ವಾಗ್ರಹವಿಲ್ಲದೇ ಜನರನ್ನು ಸ್ವೀಕರಿಸುವ ಮನಸ್ಸು, ಗಳನ್ನು ಆಲಿಸಲು ತಾಳ್ಮೆಯನ್ನು ಹೊಂದಿರುವ ಪಕ್ಷಪಾತವಿಲ್ಲದೇ ಸಮಚಿತ್ತದಿಂದ ವ್ಯವಧಾನವನ್ನು ವ ಮನಸ್ಸು, ದೇವರ ಪರಿಕಲ್ಪನೆಗಳನ್ನು ತಿರಸ್ಕರಿಸು ಅದಕ್ಕಿರುವ ರಂಜಿತ ಅಥವಾ ಭಾವುಕ ಕತೆಗಳನ್ನು ನಿರಾಕರಿಸುವುದೂ ಪೂರ್ವಾಗ್ರಹವೇ ಆಗುತ್ತದೆ. ಆದರೆ, ಅದನ್ನು ತನ್ನ ಜೀವನದಲ್ಲಿ ಅಳವಡಿಸಿಕೊಳ್ಳುವ ರೀತಿ, ತನ್ನ ಮನಸ್ಥಿತಿಗೆ ಒಗ್ಗಿಸಿಕೊಳ್ಳುವ ರೀತಿ ಮತ್ತು ಭಾವುಕವಾಗಿ ಅದನ್ನು ಹಿಂಬಾಲಿಸುವ ರೀತಿ ಯಾವ ಬಗೆಯದಾಗಿರುತ್ತದೆ ಎಂಬುದು ಬಹಳ ಮುಖ್ಯವಾಗುತ್ತದೆ.

ಆನಂದಮಯ ಈ ಜಗಹೃದಯ ಎಂಬ ಕುವೆಂಪುರವರ ಪದ್ಯವು ಪ್ರಕೃತಿಯ ಆಧ್ಯಾತ್ಮಿಕ ಸೂಕ್ಷ್ಮತೆಯನ್ನು ಸತ್ಯಂ, ಶಿವಂ, ಸುಂದರಂ ಎಂಬ ಮೂರು ಮುಖಗಳ ಮೂಲಕ ಪರಿಚಯಿಸುತ್ತದೆ.

ಖಲೀಲ್ ಗಿಬ್ರಾನನ ದೇವರ ಅನುಗ್ರಹ

ತಾತ್ವಿಕ ಜಿಜ್ಞಾಸು ಪ್ರಯಾಣದಲ್ಲಿ ಮುಕ್ತ ಭಾವುಕತೆಯ ಸಿದ್ಧಾಂತವಲ್ಲದ ಸಿದ್ಧಾಂತವೊಂದನ್ನು ಪ್ರತಿಪಾದಿಸಿದ ಖಲೀಲ್



ಗಿಬ್ರಾನ್‌ನ ಕೃತಿಗಳನ್ನು ಆಸ್ತಿಕರೂ, ನಾಸ್ತಿಕರೂ, ಜಿಜ್ಞಾಸುಗಳೂ, ಸಾಹಿತ್ಯಾಸಕ್ತರೂ ತಮ್ಮ ತಮ್ಮ ಓದಿನ ವ್ಯಾಪ್ತಿಗೆ ಅನುಗುಣವಾಗಿ ಆಳ ಮತ್ತು ಎತ್ತರಗಳನ್ನು ಕಂಡುಕೊಳ್ಳಬಹುದಾಗಿರುತ್ತದೆ.

ದೇವರು ಮತ್ತು ದೇವರ ಅನುಗ್ರಹಗಳನ್ನು ಪದೇಪದೇ ಉಲ್ಲೇಖಿಸುವ ಖಲೀಲ್ ಗಿಬ್ರಾನ್ ಕೂಡ ಜನರ ಡಾಂಭಿಕತೆಯನ್ನು, ಆತ್ಮವಂಚನೆಯನ್ನು ನೇರಾನೇರ ಖಂಡಿಸುತ್ತಾನೆ. ಯಾವುದೇ ಸ್ಥಾಪಿತ ಸಿದ್ಧಾಂತದ ಮೌಲ್ಯದ ಹೇರಿಕೆಯನ್ನು ನಿರಾಕರಿಸುತ್ತಾನೆ. ಆದರೆ ದೇವರ ಬಗ್ಗೆ ದೇವರ ಅನುಗ್ರಹದ ಬಗ್ಗೆ ಸೂಕ್ಷ್ಮ ಪರಿಕಲ್ಪನೆಯನ್ನು ಹೊಂದಿರುತ್ತಾನೆ. ಅದು ನವಿರಾಗಿರುತ್ತದೆ. ಆಳವಾಗಿರುತ್ತದೆ. ಉನ್ನತವಾಗಿರುತ್ತದೆ. ಮುದವಾಗಿರುತ್ತದೆ. ಪ್ರಶಾಂತವಾಗಿರುತ್ತದೆ. ಸಾವಿನಷ್ಟು ಮತ್ತು ನೋವಿನಷ್ಟು ಗಂಭೀರವಾಗಿಯೂ ಇರುತ್ತದೆ. ಅವನು ಪ್ರಾರ್ಥಿಸುವುದು ಎಂದಾಗ ಅದು ಚರ್ಚುಗಳಲ್ಲಿ ಪಾದ್ರಿಗಳು ಹೇಳುವ ಪ್ರಾರ್ಥನೆ ಆಗಿರುವುದಿಲ್ಲ, ನಿಜಕ್ಕೂ ಪಾದ್ರಿಗಳು ಪ್ರಾರ್ಥನೆಯನ್ನು ಹೇಳುವುದೇ ಆಗಿರುವುದು. ಅದು ಮಾಡುವುದಲ್ಲ, ಮಸೀದಿಯಲ್ಲಿ ಯಾವುದೋ ಧಾರ್ಮಿಕ ಗಾಂಭೀರ್ಯದಿಂದ ನಮಾಜು ಮಾಡುವುದಲ್ಲ. ದೇವಾಲಯಗಳಲ್ಲಿ ಮಾಡುವಂತಹ ಕ್ರಮಬದ್ಧವಾದ ಆಚರಣೆಗಳಲ್ಲ. ಗಿಬ್ರಾನನ ಪ್ರಾರ್ಥನೆ ಎನ್ನುವ ಪರಿಕಲ್ಪನೆಯ ಮುಂದೆ ಇವುಗಳೆಲ್ಲಾ ಸಿಲ್ಲಿ ಎನಿಸುವಷ್ಟು ಹುಡುಗಾಟದ್ದಾಗಿಬಿಡುತ್ತದೆ. ಅವನು ಹೇಳುವ ಪಾವಿತ್ರ್ಯತೆ ಎಂದರೆ ಅದು ಮಡಿವಂತಿಕೆಯಾಗಿರದೇ ಪ್ರಾಮಾಣಿಕ ಬದ್ಧತೆಯೇ ಆಗಿರುತ್ತದೆ. ಧಾರ್ಮಿಕ ಡಂಭಾಚಾರಿಗಳ ಸುಪರ್ದಿನಲ್ಲಿ ಕಲುಷಿತಗೊಂಡಿರುವ ದೇವರು, ಅನುಗ್ರಹ, ಪ್ರಾರ್ಥನೆ, ಪಾವಿತ್ರ್ಯತೆ; ಇವುಗಳೆಲ್ಲವೂ ತಮ್ಮ ನೈಜಸ್ವರೂಪಕ್ಕೆ ಮರಳತೊಡಗುತ್ತದೆ.

ಧಾರ್ಮಿಕ ಹುಂಬರ ಮತ್ತು ಕುತಂತ್ರಿಗಳು ಅವುಗಳ ಪರಿಕಲ್ಪನೆಗಳನ್ನೇ ಹಿಡಿದುಕೊಂಡು ಸಮಾಜವನ್ನು ಒಡೆಯುತ್ತಾರೆ ಮತ್ತು ಒಡೆದು ಆಳುತ್ತಾರೆ. ಅಂಥಾ ಕುತಂತ್ರಿಗಳು ನೀಡುವ ಕಿರುಕುಳಗಳಿಂದ ಬೇಸತ್ತು ಅವರು ಬಳಸುವ ಪರಿಕಲ್ಪನೆಗಳ ಬಗ್ಗೆಯೇ ತಿರಸ್ಕಾರ ಭಾವ ಉಂಟಾಗುವುದರಿಂದಲೇ ರಾಮನನ್ನೂ, ಕೃಷ್ಣನನ್ನೂ, ಇಲ್ಲದೇ ಇರುವ ದೇವರನ್ನು ಟೀಕಿಸುತ್ತಾ ಅಥವಾ ವಿಡಂಬಿಸುತ್ತಾ ಹೋಗುವುದು. ಆದರೆ ಇನ್ನೂ ಸ್ವಲ್ಪ ವ್ಯವಧಾನದಿಂದ, ಸೂಕ್ಷ್ಮತೆಯಿಂದ ಗಮನಿಸುತ್ತಾ ಆ ನವಿರಾದ ಪರಿಕಲ್ಪನೆಗಳನ್ನು ಪಟ್ಟಭದ್ರಹಿತಾಸಕ್ತಿಯ ಸ್ವಾರ್ಥರಿಂದ ರಕ್ಷಿಸಬೇಕಾದ ಅನಿವಾರ್ಯತೆಯನ್ನು ಮನಗಂಡೇ ದೇವನೂರು ಮಹಾದೇವ ತಮ್ಮ ಜನಶಕ್ತಿಯ ಭಾಷಣದಲ್ಲಿ ಭಗವದ್ಗೀತೆಗೆ ಆಪರೇಷನ್ ಅಗತ್ಯವಿದೆ ಎಂದದ್ದು. ಅವನ್ನು ಉಳಿಸಿಕೊಳ್ಳಬೇಕಿದೆ ಎಂದದ್ದು.

ನಿಜಕ್ಕೂ ವಿರೋಧಿಸುವುದೊಂದೇ ನಮ್ಮ ನಿಲುವಾಗಿಬಿಟ್ಟರೆ ಪರಿಕಲ್ಪನೆಗಳಲ್ಲಿ ಅಡಗಿರುವಂತಹ ಸತ್ಯವನ್ನೂ ಶಿವಮಯತೆಯನ್ನೂ ಮತ್ತು ಸೌಂದರ್ಯವನ್ನೂ ನಾವು ಕಳೆದುಕೊಂಡುಬಿಡುತ್ತೇವೆ. ವಿರೋಧಿಸುವಾಗ ನಾವು ಯಾವುದನ್ನು ವಿರೋಧಿಸುತ್ತೇವೆ ಮತ್ತು ಯಾರನ್ನು ವಿರೋಧಿಸುತ್ತೇವೆ ಎಂಬ ಸ್ಪಷ್ಟತೆ ಖಂಡಿತ ಇರಬೇಕಾಗುತ್ತದೆ.

ಮೌಲ್ಯಗಳು ಮತ್ತು ಮೌಲ್ಯಮಾಪನಗಳು


ಸತ್ಯವೆನ್ನುವುದು, ಶಿವಮಯವೆನ್ನುವುದು, ಸೌಂದರ್ಯವೆನ್ನುವುದು ಕೂಡ ಮೌಲ್ಯಗಳೇ. ಸೂಕ್ಷ್ಮವಾಗಿ ವಿವೇಚಿಸಿದರೆ ಮೌಲ್ಯವೆಂಬುದೂ ಕೂಡ ಒಂದು ಅಸ್ತಿತ್ವದಲ್ಲಿ ಇಲ್ಲದಿರುವಂತಹ ವಸ್ತುವೇ ಆಗಿದ್ದು ಆರೋಪಿಸಲ್ಪಡುವಂತಹ ಮನೋಧೋರಣೆಗಳೇ ಆಗಿರುತ್ತದೆ.

ಪುರಾಣಗಳ ಒಗಟುಗಳನ್ನು ಬಿಡಿಸುವಾಗ ಇಂತಹ ಆರೋಪಿಸುವಂತಹ ಮೌಲ್ಯಗಳ ಬಗ್ಗೆ, ಸಂಗತಿಗಳನ್ನು ವಿವರಿಸುವಂತಹ ಮನೋಧೋರಣೆಗಳ ಬಗ್ಗೆ ಬಹಳ ಎಚ್ಚರಿಕೆಯಿಂದ ಇರಬೇಕಾಗುತ್ತದೆ.

ಸತ್ಯ ಎಂದರೆ ನಿಜವಾದ ಮೌಲ್ಯ. ಶಿವ ಎಂದರೆ ಒಳಿತಾಗಿರುವಂತಹ ಅಂದರೆ, ಮಂಗಳಮಯವಾಗಿರುವಂತಹ ಮೌಲ್ಯ. ಸುಂದರ ಎಂದರೆ ಶೃಂಗಾರಪೂರ್ಣವಾದಂತಹ ಮೌಲ್ಯ. ಈ ಮೌಲ್ಯದ ವ್ಯವಸ್ಥೆಯೇ ಅಥವಾ ಪರಿಗ್ರಹಣವೇ ಹಲವು ಆಧ್ಯಾತ್ಮಿಕ ಸಿದ್ಧಾಂತಗಳ ಕೇಂದ್ರವಾಗಿರುತ್ತದೆ.

ಆಧ್ಯಾತ್ಮದಲ್ಲಿ ಇರುವ ಜಗತ್ತನ್ನು ಇದ್ದಂತೆಯೇ ಒಪ್ಪುವುದು, ಎಲ್ಲವನ್ನೂ ಮಂಗಳಮಯವೆಂದೇ ಭಾವಿಸುವುದು, ಎಲ್ಲದರಲ್ಲೂ ಸೌಂದರ್ಯವನ್ನು ಕಂಡುಕೊಳ್ಳುವುದು; ಇದರ ಪ್ರತಿರೂಪವಾಗಿ ಆನಂದವನ್ನು ಅನುಭವಿಸುವುದು. ಆದರೆ ಇದು ಜಗತ್ತಿನ ಅನುಭಾವದ ವ್ಯಾಪ್ತಿಯಲ್ಲಿ ಸಣ್ಣ ತುಣುಕು ಮಾತ್ರವೇ. ಇದಕ್ಕೆ ಮೀರಿ ಹತ್ಯೆ ಎನ್ನುವುದಿದೆ, ಶೋಷಣೆಗಳಿವೆ, ಅತ್ಯಾಚಾರವೆಂಬುದಿದೆ, ಚಾರಿತ್ರ್ಯವಧೆ ಎಂಬುದಿದೆ, ಭ್ರಷ್ಟಾಚಾರವೆಂಬುದಿದೆ. ಇವುಗಳೂ ಕೂಡ ಜಗತ್ತಿನಲ್ಲಿ ಕಾಣುತ್ತಿರುವಂತಹ ವಿಷಯಗಳೇ ಆಗಿವೆ. ಆದರೆ ಅವುಗಳನ್ನು "ಇವೆ" ಎಂಬ ಕಾರಣಕ್ಕೆ ಒಪ್ಪಿಕೊಳ್ಳಲಾಗುವುದಿಲ್ಲ. ಮಂಗಳಮಯವಾದುದೆಂದು ಭಾವಿಸಲಾಗುವುದಿಲ್ಲ. ಅತ್ಯಾಚಾರವೊಂದರಲ್ಲಿ ಸರಸಮಯ ರಸಿಕತನವನ್ನು ಕಾಣಲಾಗುವುದಿಲ್ಲ. ಹಾಗಾಗಿಯೇ ಸತ್ಯಂ ಶಿವಂ ಸುಂದರಂನಂತಹ ಮೌಲ್ಯಗ್ರಹಣದ ಪರಿಭಾಷೆಗಳು ಮಾಸಲಾಗುತ್ತವೆ. ಅವಾಸ್ತವವಾಗುತ್ತವೆ. ಆದರೂ ನಿಸರ್ಗದಲ್ಲಿ ಅದನ್ನು ಕಂಡುಕೊಳ್ಳಲು ಸಾಧ್ಯವೆಂದು ಕುವೆಂಪುರವರ 'ಆನಂದಮಯ' ಪದ್ಯದಂತೆ ಕಂಡುಕೊಂಡರೆ, ಅದೊಂದು ಆ ಕ್ಷಣದ ಅನುಭೂತಿಯೆಂದೇ ಗ್ರಹಿಸಬೇಕಾಗುತ್ತದೆಯೇ ಹೊರತು, ಅದೇ ಸರ್ವಕಾಲಿಕ ಸತ್ಯವೆಂದು ಒಪ್ಪಲಾಗದು.

ಜಗತ್ತು ಮತ್ತು ಜೀವನವನ್ನು ಯಾವುದೇ ಒಂದು



ನಿರ್ದಿಷ್ಟ ಪರಿಕಲ್ಪನೆಯಲ್ಲಿ ಅಥವಾ ಪರಿಭಾಷೆಯಲ್ಲಿ ಎಂದಿಗೂ ವಿವರಿಸಲು ಮತ್ತು ಸ್ಪಷ್ಟೀಕರಿಸಲು ಇದುವರೆಗೂ ಯಾರಿಗೂ ಸಾಧ್ಯವಾಗಿಲ್ಲ ಹಾಗೂ ಸಾಧ್ಯವಾಗುವುದೂ ಇಲ್ಲ. ಖಲೀಲನ ಅಥವಾ ಕುವೆಂಪುರವರ ದೇವರಾಗಲಿ, ಸಮಾಜ ಸುಧಾರಕ ಸಂತರ ದೇವರುಗಳಾಗಲಿ, ಅರ್ಚಕರು ಮತ್ತು ಪುರೋಹಿತರು ಹೆದರಿಸುವಂತಹ ಅಥವಾ ಆಸೆಗೊಳಿಸುವಂತಹ ದೇವರುಗಳಾಗಲಿ; ಯಾರೂ ಇಲ್ಲ, ಯಾವುದೂ ಇಲ್ಲ. ಆದರೆ ಅದ್ಯಾವುದೋ ಸೂಕ್ಷ್ಮತೆಯನ್ನು, ಉನ್ನತವನ್ನು, ಆಳ ಮತ್ತು ಗುಹ್ಯವನ್ನು, ವಿಸ್ಮಯವನ್ನು ವಿವರಿಸಲು ಅನೇಕ ಪ್ರಾಜ್ಞರು ಇದೇ ದೇವರ ಪರಿಕಲ್ಪನೆಗಳನ್ನು ಬಳಸಿದರು. ಅವರ ಒಟ್ಟು ನಿಲುವು, ಒಲವುಗಳನ್ನು ನೋಡಿದರೆ ಮಾತ್ರ ಅವರು ಹೇಳುವ ದೇವರು ಯಾವುದೆಂದು ಅರಿತುಕೊಳ್ಳಲು ಸಾಧ್ಯವಾಗುತ್ತದೆ.

ಸಚ್ಚಿದಾನಂದ

ಸತ್ಯದ ಸಾಕ್ಷಾತ್ಕಾರವನ್ನು ಆನಂದವೆಂದರೆ ಅದನ್ನು 'ಆನಂದ' ಎಂಬ ಒಂದು ಪದದಲ್ಲಿ ಹೇಳುವಲ್ಲಿ ದೊಡ್ಡ ಪ್ರಮಾದವೇ ಎದುರಾಗುತ್ತದೆ. ಎಲ್ಲಾ ಸತ್ಯದ ಅರಿವೂ ಆನಂದವನ್ನೇನೂ ನೀಡುವುದಿಲ್ಲ. ಆದರೆ ಆನಂದವೆಂದರೆ ಸಂತೋಷಪಡುವ ಅನುಭವವಲ್ಲ, ಅದು ಒಂದು ಅನೂಹ್ಯವಾದಂತಹ ಇರುವಿಕೆಯಲ್ಲಿ ಸಾಧ್ಯ ಯಾವ ಪ್ರತಿರೋಧವೂ ಇಲ್ಲದೇ ಇರುವಿಕೆಯನ್ನೇ ಆನಂದ ಎನ್ನುವುದು ಎಂದು ಧ್ಯಾನಿಗಳು ಹೇಳುತ್ತಾರೆ. ಆದರೆ ಅದೂ ಪೂರ್ಣ ಸತ್ಯವಲ್ಲ.

ಏನೇ ಆಗಲಿ ನಿಸರ್ಗ ಎಂಬ ಸೃಷ್ಟಿಯಲ್ಲಿ ಸತ್ಯಂ ಶಿವಂ ಸುಂದರಂ ಅನ್ನು ಕಾಣಬಹುದು. ಅದನ್ನು ಆನಂದವೆಂದೇನೋ ಅನ್ನಬಹುದು. ಅದು ಬಹಳ ಸೀಮಿತವೆಂಬುದನ್ನು ಮಾತ್ರ ಒಪ್ಪದಿರಲಾಗದು. ಆದರೂ ನಿಸರ್ಗಕ್ಕೆ ಶರಣಾಗುತ್ತಾ ಆನಂದದ ಅನುಗ್ರಹವನ್ನು ಪಡೆವ ಧೋರಣೆಯ ಈ ಪದ್ಯ ಸತ್ಯಂ ಶಿವಂ ಸುಂದರಂನ ಅಭಿವ್ಯಕ್ತಿಯೇ ಆನಂದವೇ.

ಆನಂದ ಆನಂದ ಆನಂದ ಆನಂದ

ಇಳೆಯ ಮಣ್ಣಿನ ಕಣಕಣದಿ ಧೂಳಾಗಿ ಹೊರಳುವುದು ಆನಂದ
ಬಂಡೆಗಲ್ಲಿನ ಗಟ್ಟಿತನದಿ ಧೃಢವಾಗಿ ನಿಲ್ಲುವುದು ಆನಂದ
ನಿಂತ ಮರದಿ ಬೇರಾಗಿ ಊರಿ ಹಸಿರಾಗಿ ಬೆಳೆಯುವುದು ಆನಂದ
ಮೆಚ್ಚುವರಿಗೆಂದು ಕಾಯದ ಹೂವಲಿ ತಾನೇ ಅರಳುವುದು ಆನಂದ


ಬಿಸಿಲಿನಲ್ಲಿ ಬಿಸಿಯಾಗಿ ಹೋಗುವೆ ಸುರಿಮಳೆಯಲಿ ಹನಿಯಾಗಿ ಬೀಳುವೆ
ಚಳಿಯ ಗಾಳಿಯಲಿ ತಂಪಾಗಿರುವೆ, ಹರಿವ ನೀರಿನಲಿ ನಲಿದು ಹರಿಯುವೆ
ತುಂಬು ಸಾಗರದ ತೆರೆಗಳಲ್ಲಿ ಮೇಲೆದ್ದು ಬೀಳುವ ಅಲೆ ನಾನಾಗುವೆ
ತೆರೆದ ಬಾಂದಳದ ಅಂಗಳದಲ್ಲಿ ಏನೂ ಇಲ್ಲದೇ ಬಯಲಾಗಿರುವುದೇ

ಸಿಹಿಕಹಿಯೊಗರಲಿ ಬರಿದೇ ರುಚಿಯಾಗಿ, ನೋವು ನಲಿವಿನಲಿ ಭಾವ ನಾನಾಗಿ
ಜನನ ಮರಣವನು ಬರಿದೇ ನೋಡುತಲಿ, ರಾಗ ದ್ವೇಷಗಳ ನಕ್ಕು ಕ್ಷಮಿಸುತಲಿ
ನನಗೆ ಬೇಕೆಂದು ಏನನೂ ಸೆಳೆಯದೇ, ಬಿಟ್ಟು ಭೋಗಿಸುತ ಬರಿದಾಗಿರುತ
ನನ್ನದಲ್ಲದ ನನ್ನತನದ ತೆರೆ ಕಳಚಿ ನಿನ್ನಡಿಗೆ ಶರಣಾಗಿರುವುದೇ।

ಆನಂದ ಎಂಬ ರಸಾನುಭೂತಿಯನ್ನು ಆಧ್ಯಾತ್ಮದಲ್ಲಿ ಕಂಡುಕೊಳ್ಳುವ ಸಾಧ್ಯತೆಗಳನ್ನು ಹೇಳಿಕೊಡುತ್ತಾ ಅನೇಕಾನೇಕ ಮೌಢ್ಯಗಳನ್ನೂ ಕೂಡ ಸೋಕಾಲ್ಡ್ ಋಷಿಗಳು ಬಿತ್ತುತ್ತಾ ಹೋಗುತ್ತಾರೆ. ಸ್ವಾಮಿ ಶಿವಾನಂದರೆಂಬ ಮಹರ್ಷಿಗಳು "ಬ್ರಹ್ಮಚರ್ಯವೇ ಜೀವನ" ಎಂಬ ಶುದ್ಧ ಕಾಮಿಡಿಯ ಗ್ರಂಥವನ್ನು ಅನೇಕಾನೇಕ ಸಾಧಕರು ಅದೆಷ್ಟು ಗಂಭೀರವಾಗಿ ತೆಗೆದುಕೊಂಡುಬಿಟ್ಟರೆಂದರೆ ಸತ್ಯವೂ, ಶಿವವೂ ಮತ್ತು ಸೌಂದರ್ಯವೂ ಸರ್ವನಾಶವಾಗಿಹೋಯಿತು. ಸತ್ಯ ಸಾಯಿಬಾಬಾ ಎಂಬ ಸ್ವಘೋಷಿತ ದೇವಮಾನವನು ತನ್ನ ಮಂದಿರಕ್ಕೆ ಸತ್ಯಂ ಶಿವಂ ಸುಂದರಂ ಎಂದು ಹೆಸರಿಟ್ಟು, ತನ್ನ ಜೀವನ ಚರಿತ್ರೆಯ ಸಂಪುಟಗಳಿಗೂ ಸತ್ಯಂ ಶಿವಂ ಸುಂದರಂ ಎಂದು ಕರೆಯುತ್ತಾ ಆತ್ಮವಂಚನೆ ಮಾಡಿಕೊಂಡಿರುವ ಉದಾಹರಣೆಗಳಾವುವೂ ನಮಗೆ ಈ ಸತ್ಯ, ಶಿವಮಯ ಮತ್ತು ಸೌಂದರ್ಯವನ್ನು ಅರ್ಥ ಮಾಡಿಕೊಳ್ಳಲು ನೆರವಾಗುವುದಿಲ್ಲ. ಅದಕ್ಕೆ ಬೇರೆಯೇ ಸೂಕ್ಷ್ಮತೆಯ ಅಗತ್ಯವಿದೆ. ಅದು ಪುರಾಣಗಳಲ್ಲೂ ನುಸುಳುತ್ತದೆ. ಹಾಗೆಯೇ ಅಧ್ಯಾತ್ಮದಲ್ಲೂ ನೆಲದ ಮರೆಯ ನಿಧಾನವಾಗಿ ಕಂಗೊಳಿಸುತ್ತದೆ. ■

ವ್ಯಾಲಂಟೈನ್ಸ್ ಡೇ ಬದಲು ರಾಧಾ-ಕೃಷ್ಣ ದಿನ

ಭಾರತೀಯರು ವ್ಯಾಲಂಟೈನ್ಸ್ ದಿನವನ್ನು ಆಚರಿಸುವುದು ಶುದ್ಧ ತಪ್ಪು. ವಿದೇಶಿಯರಿಗಿಂತ ಪುರಾಣಕಾಲದ ಭಾರತೀಯರು ಅನೈತಿಕ ಪ್ರೇಮದಲ್ಲಿ ಹೆಚ್ಚು ಪರಿಣಿತರಾಗಿದ್ದರು. ಹಾಗಾಗಿ ಈ ವೇಲಂಟೈನ್ ಡೇಗೆ ಶುದ್ಧ ಭಾರತೀಯ ಹೆಸರು ಇಡಬೇಕು. ಬಹುಶಃ ರಾಧ-ಕೃಷ್ಣ ದಿನ ಎನ್ನುವುದು ಸರಿಯಾಗಬಹುದು. ಕೃಷ್ಣನಿಗೆ ಎಂಟು ಹೆಂಡತಿಯರಿದ್ದರೂ ಅವನು ತನಗಿಂತ 15 ವರ್ಷ ದೊಡ್ಡವಳಾದ ತನ್ನ ಸೋದರ ಮಾವನ ಪತ್ನಿಯಾದ ರಾಧೆಯನ್ನು ಪ್ರೇಮಿಸಿದ. ಹಾಗಾಗಿ ವ್ಯಾಲಂಟೈನ್ಸ್ ಡೇಗೆ ರಾಧಾ-ಕೃಷ್ಣ ಡೇ ಎಂಬುದು ತುಂಬಾ ಸೂಕ್ತ. ಅಷ್ಟೇ ಅಲ್ಲ, ಅದೇ ವಿಷ್ಣು ಮೋಹಿನಿ ರೂಪ ತಾಳಿ ಭಸ್ಮಾಸುರನನ್ನು ಯುಕ್ತಿಯಿಂದ ಕೊಂದ ಮೇಲೆ ಮೋಹಿನಿ ರೂಪದ ಉದ್ದೇಶ ಈಡೇರಿದ್ದರಿಂದ ತಕ್ಷಣ ಗಂಡಾಗಿ ಬದಲಾಗುವುದು ಬಿಟ್ಟು ಹೆಣ್ಣು ರೂಪದಲ್ಲಿಯೇ ವಿನಾಕಾರಣ ಮುಂದುವರಿದು ಶಿವನನ್ನೇ ತನ್ನ ಮೋಹದ ಬಲೆಯಲ್ಲಿ ಕೆಡವಿದನು. ತುಳಸಿ ಮತ್ತು ವೃಂದಾರನ್ನು ಕೃಷ್ಣ ಮಾರುವೇಷದಲ್ಲಿ ಹೋಗಿ ಪ್ರೇಮಿಸಿದನು. ಎಂಬತ್ತು ವರ್ಷದ ಮುದುಕ ಪರಾಶರಮುನಿ ಹದಿನಾರು ವರ್ಷದ ಮೀನಿನ ವಾಸನೆಯ ಮತ್ಸ್ಯಗಂಧಳ ಮೈಗೆ ಸೆಂಟ್ ಹಚ್ಚಿ ನಂತರ ಅವಳನ್ನು ರೇಪ್ ಮಾಡಿದನು. ಆವರ ಮಗ ವೇದವ್ಯಾಸ ಸಹ ತನ್ನ ಸಹೋದರ ವಿಚಿತ್ರವೀರ್ಯನ ಎರಡೆರಡು ವಿಧವಾ ಹೆಂಡತಿಯರನ್ನೇ ಬಸಿರು ಮಾಡಿ ಕುರುಕ್ಷೇತ್ರ ಯುದ್ಧಕ್ಕೆ ಕಾರಣನಾದನು. ಎಲ್ಲಾ ಹಿಂದೂ ದೇವರುಗಳೂ ಕನಿಷ್ಠ ಎರಡೆರಡು ಹೆಂಡತಿಯರನ್ನು ಹೊಂದಿದ್ದರು. ಸೃಷ್ಟಿಕರ್ತ ಬ್ರಹ್ಮ ಸಹ ತಾನೇ ಹುಟ್ಟಿಸಿದ ತನ್ನ ಹೆಣ್ಣು ಮಕ್ಕಳಾದ ಶತರೂಪಿ ಹಾಗೂ ಸರಸ್ವತಿಯರನ್ನೇ ಪ್ರೇಮಿಸಿದ. ಸರ್ವಸಂಗ ಪರಿತ್ಯಾಗಿ ಋಷಿಮುನಿಗಳು ಕಾಡಿನಲ್ಲಿ ಆಶ್ರಮ ಹೊಂದಿದ್ದರೂ ಹಲವಾರು ಪತ್ನಿ-ಉಪಪತ್ನಿಯರನ್ನು ಹೊಂದಿರುತ್ತಿದ್ದರು. ಕಾಮಸೂತ್ರ ಬರೆದು ಇಡಿ ಜಗತ್ತಿಗೆ ಪ್ರೇಮಿಸುವ ಕಲೆ ಕಲಿಸಿದ ವಾತ್ಸಾಯನ ಸಹಾ ಭಾರತೀಯನೇ ಆಗಿದ್ದ.



ಹೀಗೆ ಪ್ರೇಮಿಸುವ ನಿಪುಣತೆಯಲ್ಲಿ ಭಾರತೀಯರನ್ನು ಯಾರೂ ಸರಿಗಟ್ಟಲಾರರು. ಪ್ರೇಮಿಸುವ ಕಲೆ ಗೊತ್ತಿಲ್ಲದ ದಡ್ಡ ವಿದೇಶಿಗಳು ಆಚರಿಸುವ ವ್ಯಾಲಂಟೈನ್ಸ್-ಡೇಯನ್ನು ಭಾರತೀಯರು ಆಚರಿಸುವುದು ನಮ್ಮ ಪುರಾಣದ ಅಮರ ಪ್ರೇಮಿಗಳಾದ ದೈವೀಪುರುಷರಿಗೆ ಹಾಗೂ ಋಷಿಮುನಿಗಳಿಗೆ ಶುದ್ಧ ಅವಮಾನ. ಹಾಗಾಗಿ ನಾವು ವ್ಯಾಲಂಟೈನ್ಸ್-ಡೇ ಇದರ ಹೆಸರನ್ನು ಬದಲಾಯಿಸಿ ವಾತ್ಸಾಯನ್-ಡೇ ಅಥವಾ ರಾಧಾ-ಕೃಷ್ಣ ದಿನ ಎಂದು ಕರೆಯುವುದು ಸೂಕ್ತ.

-ಜಿ. ರವಿಕಿರಣ, ಮೈಸೂರು

ಪ್ರತಿಕ್ರಿಯೆ-ಪ್ರತಿರೋಧಗಳ ಸಾಂದರ್ಭಿಕ ಅನಿವಾರ್ಯತೆ

ಕಳೆದ ತಿಂಗಳು ಕರಾವಳಿಯಲ್ಲಿ ಕೆಲವರಿಂದ ಐತಿಹಾಸಿಕವೆಂದು ಭರ್ಜರಿಯಾಗಿ ಬಿಂಬಿಸಲ್ಪಟ್ಟ ಪುರೋಹಿತಶಾಹಿಗಳ ಸಮಾರಂಭವಾದ 'ಪರ್ಯಾಯ'ದ ನಿಜ "ಐತಿಹಾಸಿಕತೆ" ಪ್ರಜ್ಞಾವಂತರಿಗೆ ಗೊತ್ತಿರುವಂಥದ್ದೇ. ಆದರೆ ಆನಂತರ ಅದೇ ಕರಾವಳಿಯಲ್ಲಿ ರಾಜ್ಯದ, ಹೊರರಾಜ್ಯದ ಅನೇಕ ಹೆಸರಾಂತ ಚಿಂತಕರುಗಳನ್ನು ಒಂದೆಡೆ ಸೇರಿಸಿ ನಡೆಸಲಾದ, ನಿರೀಕ್ಷೆಗೂ ಮೀರಿ ಯಶಸ್ವಿಯಾದ ನಿಜ ಐತಿಹಾಸಿಕವೆನಿಸಿರುವ 'ಸಹಬಾಳ್ವೆ ಸಾಗರ' ಸಮಾವೇಶದ ವರದಿಗಳು ಹೆಚ್ಚಿನ ಪತ್ರಿಕೆಗಳಲ್ಲಿ ಉದ್ದೇಶಪೂರ್ವಕವಾಗಿ ಮಧ್ಯ ಪುಟದ ಸಣ್ಣ ವರದಿಯಾಗಿ ಪ್ರಕಟಗೊಂಡಿದ್ದವು.

ಸಹಬಾಳ್ವೆಗಾಗಿ ತುಡಿಯುವ ಕರಾವಳಿ ಜಿಲ್ಲೆಯ ಹಿರಿಯರಾದ ಬಾಕ್ರಬೈಲು ಸುರೇಶ್ ಭಟ್ಟರಂತ ಅನೇಕರ ಕನಸಾದ ಈ ಐತಿಹಾಸಿಕ ಸಮಾರಂಭ ಜ. 30 ರ ಶನಿವಾರದ ಟೌನ್‌ಹಾಲ್‌ನಲ್ಲೇ ನಡೆದು ಅಲ್ಲೇ ಮುಕ್ತಾಯಗೊಳ್ಳಬೇಕೇ? ಅಥವ ಈ ಮಹಾನ್ ಸಂಚಲನೆಯ ಹಿನ್ನೆಲೆಯನ್ನಿಟ್ಟುಕೊಂಡು ಮುನ್ನಡೆಯುವಲ್ಲಿ ನಮ್ಮೀ ಜನಪರ ಸಮುದಾಯದ ಮುಂದಿನ ಕಾರ್ಯಸೂಚಿಗಳೇನು? ಅಂದರೆ ಇನ್ನೆಲ್ಲೋ ಇಂಥದ್ದೇ ಮತ್ತೊಂದು ಸಮಾರಂಭ ಎನ್ನುವ ಅರ್ಥದಲ್ಲಿ ಈ ಮಾತನ್ನು ಹೇಳುತ್ತಿಲ್ಲ. ಬದಲಿಗೆ ಈ ಸಾಗರ ಮಥನದ ಸಂದರ್ಭದಲ್ಲಿ ವ್ಯಕ್ತಗೊಂಡಂತಹ ಹಿರಿಯರ, ಅನುಭವಿಗಳ ಅಭಿಪ್ರಾಯಗಳನ್ನಿಟ್ಟುಕೊಂಡು ನಾವೆಲ್ಲ ಉಲ್ಬಣಿಸುತ್ತಿರುವ ಅಸಹನೆಗಳ ಅಥವ ಇನ್ನಾವುದೇ ಸಾಮಾಜಿಕ ವ್ರಣಗಳ ವಿರುದ್ಧ ಏಕರೂಪದ ಸೂತ್ರವೊಂದನ್ನು ಮುಂದಿಟ್ಟುಕೊಂಡು ಸೈದ್ಧಾಂತಿಕವಾಗಿ ಒಂದಾಗಿ ಮುಂದುವರೆಯುವ ಅನಿವಾರ್ಯತೆ ಇದೆಯಲ್ಲವೇ? ಹೀಗಾದಾಗ ಮಾತ್ರವೇ ಮಂಗಳೂರಿನ ಈ ಸಮ್ಮೇಳನದ ನಿಜ ಸಫಲತೆ ಸಾಕಾರಗೊಳ್ಳಲು ಸಾಧ್ಯವೆಂಬುದು ನನ್ನ ಭಾವನೆ.

ಸಮಾರಂಭದಲ್ಲಿ ಹಿರಿಯರಾದ ಚಂಪಾರವರು ಮಾತನ್ನಾಡುತ್ತಾ 'ಅವರುಗಳು ನಂಬುವ ಧರ್ಮ, ಧರ್ಮಗ್ರಂಥ, ಗೀತೆ ಮೊದಲಾದವುಗಳು ನಮಗೆ ಬೇಡ ಅದರ ಉಸಾಬರಿಯೇ ನಮಗೆ ಬೇಡ ಅವರು ಮೋಸಕ್ಕೆ ನಾವ್ಯಾಕೆ ಮರುಳಾಗಬೇಕು? ಆ ಮೋಸಗಾರ ಧರ್ಮದ ಬಗ್ಗೆ ಮಾತನಾಡಿ ನಮ್ಮ ಸಮಯ ವ್ಯರ್ಥ ಮಾಡೋದು ಅನವಶ್ಯಕ. ನಾವು ಅವರ ಬಗ್ಗೆ ಉದಾಸೀನತೆಯಿಂದ ಸುಮ್ಮನಿರೋಣ. ಬೇಕಾದರೆ ಅವರೇ ತೊಡೆ ತಟ್ಟಿಕೊಂಡು ತೊಡೆ ಮುರಿದುಕೊಳ್ಳಲಿ' ಎಂಬಂತಹ ಮಾತನ್ನಾಡಿದ್ದರು. ಇದಕ್ಕೆ ಪ್ರತಿ ಎನ್ನುವಂತೆ ಬಿಟಿ ಲಲಿತಾ ನಾಯಕ್ ಹಾಗು ದಿನೇಶ್ ಅಮೀನ್ ಮಟ್ಟುರವರು ತಣ್ಣಗೆ ಹಬ್ಬಿಸಲಾಗುತ್ತಿರುವ ಫ್ಯಾಸಿಸಮ್‌ನ ವಾಸ್ತವಿಕ ಚಿತ್ರಣವನ್ನು ನಮ್ಮ ಮುಂದಿಟ್ಟರು. ಲಲಿತಾ ನಾಯಕ್ ಅವರು ಮುಂದುವರೆಯುತ್ತಾ ಸಮಾಜದಲ್ಲಿ ಇಂತಹ ಮೌಢ್ಯದ ಸಿಕ್ಕುಗಳು ಬಿಡಿಸಲಾಗದ ಹಂತಕ್ಕೆ ಬೆಳೆಯಲು ಬಿಡಬಾರದೆಂಬ ಸೂಚನೆಯನ್ನೂ ನೀಡಿದರು.

ಕೆಲ ಸಮಯದಿಂದ ಗೌರಿ ಲಂಕೇಶ್ ಪತ್ರಿಕೆ ಮಾತ್ರ ಒಂದು ವಿಚಾರದಲ್ಲಿ ಭಿನ್ನವಾಗಿ ನಿಂತು ಒಂದು ಸಿದ್ಧಾಂತವನ್ನು ತೀವ್ರವಾಗಿ ಎದುರಿಸಿತ್ತು, ಮೇಲ್ನೋಟಕ್ಕಿದು ಕೇವಲ ಒಬ್ಬ ವ್ಯಕ್ತಿಯ ವಿರುದ್ಧದ ಹೋರಾಟವೆಂಬ ಭಾವನೆ ತರುವಂತಿದ್ದರೂ ವಸ್ತು ಸ್ಥಿತಿ ಆದಾಗಿರಲಿಲ್ಲ, ಬಹುತೇಕ ಎಲ್ಲಾ ಮಾಧ್ಯಮಗಳು ಪರ್ಯಾಯ ಸಮಾರಂಭ ಮತ್ತು ಪೀಠ ವಿರುತ್ತಿರುವ ಪೇಜಾವರರನ್ನು ಜಗತ್ತಿನ ವಿಸ್ಮಯ ಎಂಬಂತೆ ಬಿಂಬಿಸುತ್ತಿದ್ದರೆ ಗೌರಿ ಲಂಕೇಶ್ ನಿಲುವು ಬೇರೆಯದೇ ಆಗಿತ್ತು. ಇದು ಪೇಜಾವರರ ಹೆಸರಲ್ಲಿ ಪುರೋಹಿತಶಾಹಿಯ ವೈಭವೀಕರಣದ ವಿರುದ್ಧ ಜನ ಜಾಗೃತಿಯೇ ಹೊರತು ಮೇಲ್ನೋಟಕ್ಕೆ ತೋರುವ ಪೇಜಾವರ ಎನ್ನುವ ವ್ಯಕ್ತಿಯ ಕುರಿತಾದ ವಿರೋಧ ಖಂಡಿತ ಆಗಿರಲಿಲ್ಲ.

ಪತ್ರಿಕೆ ಪೇಜಾವರರನ್ನು ಮತ್ತು ಪರ್ಯಾಯವನ್ನು ವಿರೋಧಿಸದಿದ್ದರೂ ಅಥವ ತಟಸ್ಥವಾಗಿದ್ದರೂ ನಡೆಯುತ್ತಿತ್ತು ಆದರೆ ತಮ್ಮ ಆಟಗಳಿಗೂ ತಡೆಯಿದೆ ಪ್ರಶ್ನಾತೀತ ದೇವತಾಮನುಷ್ಯರಾದ (ಹಾಗೆಂದು ಪೇಜಾವರರನ್ನು ಆರಾಧಿಸುವವರಲ್ಲಿ ಅಬ್ರಾಹ್ಮಣ ಶೂದ್ರರೇ ಅಧಿಕ) ನಮ್ಮನ್ನೂ ಗಮನಿಸುತ್ತಾ ಪ್ರಶ್ನಿಸಿ ತರಾಟೆಗೆ ತೆಗೆದುಕೊಳ್ಳುವ ವರ್ಗ ವೊಂದಿದೆ ಎಂಬುವುದನ್ನು ಪೇಜಾವರರಂತವರಿಗೆ ತೋರಿಸಿ ಕೊಡುವ ಕಾರ್ಯವನ್ನು ಗೌರಿ ಲಂಕೇಶ್ ಪತ್ರಿಕೆ ಮಾಡಿತ್ತು.

ಪುರೋಹಿತಶಾಹಿಗಳು ಏನಾದರೂ ಮಾಡಿಕೊಳ್ಳಲಿ ನಾವದನ್ನು ಇಗ್ನೋರ್ ಮಾಡುತ್ತಾ ಸುಮ್ಮನಿರೋಣ ಎನ್ನುವ ಪರಿಸ್ಥಿತಿಯಲ್ಲಿ ನಾವೀಗ ಖಂಡಿತ ಇಲ್ಲ, ಜೊತೆಗೆ ದೇವರು ಸಂಪ್ರದಾಯಗಳ ಹೆಸರಲ್ಲಿ ಸಮಾಜವೇ ಮಾನ್ಯತೆ ಮಾಡಿದ ಅವರ ಮೋಸಗಳಿಗೆ ಬಲಿ ಬೀಳದೇ ಇರಲೂ ಕೂಡ ಎಲ್ಲರಿಗೂ ಸಾಧ್ಯವಿಲ್ಲ. ಈಗ ಎಂತಹ ದಯನೀಯ ಪರಿಸ್ಥಿತಿ ಎದುರಾಗಿದೆಯೆಂದರೆ ಕರಾವಳಿಯಲ್ಲಿ ವೈದಿಕಶಾಹಿಯ ವಿರುದ್ಧ ಹೋರಾಡಲು ನಾವು ಮೊದಲು ಎದುರಿಸಬೇಕಾಗಿರುವುದು ವೈದಿಕರನ್ನಲ್ಲವೇ ಅಲ್ಲ. ಬದಲಿಗೆ ವೈದಿಕರ ಕಾವಲಿಗೆ ನಿಂತ ವಿಸ್ಮೃತಿಗೊಳಗಾದ ಶೂದ್ರವರ್ಗವನ್ನು.


ಕೋಮು ಸೌಹಾರ್ದದ ಬಗ್ಗೆ ಮಾತಾಡುವ, ಬರೆಯುವ ಸುರೇಶ್ ಭಟ್ಟರ ಮುಖಕ್ಕೆ ಶೆಟ್ಟಿಯೊಬ್ಬ ಸಗಣಿ ಬಳಿಯುತ್ತಾನೆ. ಮತಾಂತರ ಗೋಹತ್ಯೆ ಮೌಢ್ಯಗಳ ಬಗ್ಗೆ ಮಾತನಾಡಿದರೆ ಹಿಂದೂತ್ವದ ಕಾಲಾಳುಗಳಾಗಿರುವ ಪೂಜಾರಿ,ಬಂಟ, ಮೊಗವೀರ ಪಡೆಯ ಕಿಂಗಣ್ಣಿಗೆ ಗುರಿಯಾಗ ಬೇಕಾಗುತ್ತದೆ. ಇವರನ್ನೆಲ್ಲ ಎಚ್ಚರಿಸ ಹೋಗದೇ ಈ ತನಕ ಬೆಳೆಯಲು ಬಿಟ್ಟಿದ್ದು ನಮ್ಮೆಲ್ಲರ ಮೌನವೇ ತಾನೆ?

ಹಿಂದೂತ್ವವಾದಿಗಳು ಪಾಲಿಸುತ್ತಿರುವ ಯಾವ ಸಿದ್ಧಾಂತಕ್ಕೂ ಒಮ್ಮತ ತೋರದಿದ್ದ ವಿವೇಕಾನಂದರನ್ನು ಅಪಹರಿಸಲಾಯಿತು. ಸಂಬಂಧವೇ ಇಲ್ಲದ ಭಗತ್ ಸಿಂಗ್, ಗಾಂಧಿ, ಅಷ್ಟೇ ಯಾಕೆ ದಲಿತರನ್ನು ಸೆಳೆಯಲು ಅಂಬೇಡ್ಕರರನ್ನೂ ಸಹ ಅವರೀಗ ತಮ್ಮರೆಂದು ಬಿಂಬಿಸಿಕೊಳ್ಳುತ್ತಾ ತಕ್ಕ ಮಟ್ಟಿಗೆ ಯಶಸ್ಸನ್ನೂ ಗಳಿಸಿದ್ದಾರೆ. ಇವರೆಲ್ಲರು ಸಾರಿದ ಮೌಲ್ಯಗಳನ್ನು ತಮ್ಮ ಅಪವ್ಯಾಖ್ಯಾನಗಳ ಮೂಲಕ ತಿರುಚುತ್ತಾ ಅವರು ಗೆಲ್ಲಲು ನಮ್ಮ ಮೌನವೇ ಕಾರಣ ತಾನೆ?

ಅನೇಕರಿಗಿದು ಗೊತ್ತಿರಬಹುದು- ನಾವು ಬ್ರಾಹ್ಮಣರನ್ನು ವೈದಿಕರನ್ನು ಎಷ್ಟೇ ಬೈದುಕೊಂಡರೂ ಸಾಮಾನ್ಯ ಮಾತುಕತೆಯ ಸಮಯದಲ್ಲಿ ಮುಸಲ್ಮಾನರ- ಕ್ರಿಶ್ಚಿಯನ್ನರ ವಿರುದ್ಧ ಮಾತನ್ನಾಡುವ ಬ್ರಾಹ್ಮಣರ ಸಂಖ್ಯೆ ಶೂದ್ರರಿಗೆ ಹೋಲಿಸಿದರೆ ತೀರಾ ಕಡಿಮೆ. ಬೈಕ್‌ಗಳಲ್ಲಿ, ಕಾರು ವ್ಯಾನ್‌ಗಳಲ್ಲಿ ಕೇಸರಿ ಬಣ್ಣದ ಶಿವಾಜಿಯ ಚಿತ್ರ ಅಥವ ಓಮ್ ಅಥವ ತ್ರಿಶೂಲದ ಸ್ಟಿಕ್ಕರ್ ಅಂಟಿಸಿ ಮೆರೆಯುವವರಲ್ಲೂ ಶೂದ್ರರ ಪಾಲೇ ಅಧಿಕ. ಆತ ಓದುಬರಹ ತಿಳಿಯದ ಗಮಾರನಾಗಿದ್ದರೂ ಯಾವ ಯಾವ ವಿಚಾರಕ್ಕೋ ಮುಸಲ್ಮಾನರನ್ನು ತಳಕು ಹಾಕಿ ಆತ ಮಾತನಾಡುತ್ತಾನೆ. ಈ ಪ್ರವೃತ್ತಿ ಇದೀಗ ಅತಿಯಾಗಿ ಹೆಚ್ಚುತ್ತಿದೆ.

ಮೊನ್ನೆ ಒಬ್ಬ ಗೌಡ ಹೇಳುತ್ತಿದ್ದ "ವ್ಯಾನ್ ಒಂದು ಆಡಿಗೆ ಡಿಕ್ಕಿ ಹೊಡೆದರೂ ಆತ ಓಡದೇ ನಿಲ್ಲಿಸಿದ. ಆ... ಖಂಡಿತ ಬ್ಯಾರಿ ಆಗಿರಲಿಕ್ಕಿಲ್ಲ." ಎಂದು. ಡಿಕ್ಕಿ ಹೊಡೆದವನ ಬಗ್ಗೆ ಆತನಿಗೆ ಏನು ಗೊತ್ತಿಲ್ಲದಿದ್ದರೂ ಬ್ಯಾರಿಯನ್ನು ಇಲ್ಲಿ ಎಳೆದು ತರುತ್ತಾನೆ. ಇನ್ನೊಬ್ಬ ಹೇಳುತ್ತಾನೆ ಈ ಬ್ಯಾರಿಗಳು ಹುಟ್ಟಾ ಕ್ರೂರಿಗಳು; ಅವರ ಮಕ್ಕಳ ಮುಖದಲ್ಲೂ ಅ... ಕ್ರೂರತನ ತೋರುತ್ತದೆ. ಇಂತಹ ಮಾತು ಬ್ರಾಹ್ಮಣರಿಂದ ಬರುವುದು ಕಡಿಮೆ. ಬರುವುದಿದ್ದರೆ ಬೆರಳೆಣಿಕೆಯ ಕೆಲ ಪ್ರಚೋದಕರು ಭಾಷಣಗಳಲ್ಲಿ ಜನರನ್ನು ಉದ್ರೇಕಿಸಲು ಬರಬಹುದೇ ಹೊರತು ಇದು ಸಾರ್ವತ್ರಿಕವಲ್ಲ, ತಮ್ಮ ಸಮುದಾಯದಲ್ಲಿ ಅವರು ಸ್ವತಃ ಅಸಹನೆಯನ್ನು ಬೆಳೆಯಗೊಡದಿದ್ದರೂ ಒಟ್ಟು ಸಮಾಜದಲ್ಲಿ ಯಶಸ್ವಿಯಾಗಿ ಅದನ್ನು ಹಬ್ಬಿಸಿದ್ದು ಮಾತ್ರ ಸತ್ಯ. ಈ ಬಗ್ಗೆ ಸುಮ್ಮನೆ ಕಣ್ಮುಚ್ಚಿ ಕುಳಿತಿರಲು ಸಾಧ್ಯವೇ?

-ಅವಿನಾಶ್ ಎಮ್.ಎಸ್. ನೆಲ್ಲಿಕಾರ್



ಲಂಕೇಶ್ ಮೇಷ್ಟ್ರು ಅಮರ! ಅನಂತ!

ಕನ್ನಡ ಪತ್ರಿಕೋದ್ಯಮ ಹಾಗೂ ಸಾಹಿತ್ಯ ಕ್ಷೇತ್ರದ ಹೆಮ್ಮರ ಪಿ. ಲಂಕೇಶ್‌ಗೆ ಮಗಳಾಗಿ ನೀವು ಬರೆದ ಪ... ಗಮನ ಸೆಳೆಯಿತು. ಜನವರಿ 26 ಕ್ಕೆ ಮೇಷ್ಟ್ರು ತೀ... ಹೋಗಿ ಹದಿನಾರು ವರ್ಷವಾಯಿತು ಎಂದು ಓ... ಮೇಷ್ಟ್ರನ್ನು ನೆನಪು ಮಾಡಿದಿರಿ!

ಬಿಜೆಪಿಗೆ ದೇಶದ ಸುರಕ್ಷತೆಗಿಂತ ಚೇಲಾ-ಉದ್ಯಮಿಗಳ ಬಂಡವಾಳವೇ ಮುಖ್ಯ

ಕರ್ನಾಟಕದಲ್ಲಿ ಜನಾಂಗ ದ್ವೇಷ ಇದೆ ಎಂದು ಬಿಜೆಪಿ ಪಕ್ಷದವರು ವ್ಯವಸ್ಥಿತ ಪ್ರಚಾರ ಮಾಡಿ ಸಮಸ್ತ ಕನ್ನಡಿಗರನ್ನು ಅಪರಾಧಿ ಸ್ಥಾನದಲ್ಲಿ ನಿಲ್ಲಿಸುತ್ತಿದ್ದಾರೆ. ಹೌದು ಜನಾಂಗ ದ್ವೇಷ ಇಡೀ ಭಾರತದಲ್ಲಿ ಇದೆ. ನಿಜವಾಗಿ ಹಿಂದಿನ ಮೂರು ಸಾವಿರ ವರ್ಷಗಳಿಂದ ಭಾರತದಲ್ಲಿ ಜನಾಂಗ ದ್ವೇಷ ಅರ್ಥಾತ್ ರೇಸಿಸಮ್ ಇದ್ದೇ ಇದೆ. ಅದುವೇ ಆರ್ಯ-ದ್ರಾವಿಡ ಭೇದ, ಬ್ರಾಹ್ಮಣ-ದಲಿತ ಭೇದ, ಈ ರೇಸಿಸಮ್‌ನಿಂದಾಗಿಯೇ ದ್ರಾವಿಡ ಮೂಲದ (ದಲಿತ) ರೋಹಿತ್ ವೇಮುಲ ಆತ್ಮಹತ್ಯೆ ಮಾಡಬೇಕಾಗಿ ಬಂದಿರುವುದು.


ಬೆಂಗಳೂರಿನಲ್ಲಿ ಸ್ಥಳೀಯರಿಂದ ಹೊಡೆತ ತಿಂದ ತಾಂಜಾನಿಯಾ ವಿದ್ಯಾರ್ಥಿಯ ಬಗ್ಗೆ ಭಾರಿ ಅನುಕಂಪ ವ್ಯಕ್ತಪಡಿಸುತ್ತಿರುವ ಕೇಂದ್ರದ ಬಿಜೆಪಿ ಸರಕಾರ ರೋಹಿತನ ಬಗ್ಗೆ ಮಾತ್ರ ಸ್ವಲ್ಪವೂ ಅನುಕಂಪ ತೋರದೇ ಅವನು ದಲಿತ ಅಲ್ಲ ಎಂದು ಅಪಪ್ರಚಾರ ಮಾಡಿ ಎಲ್ಲವನ್ನೂ ತಿರುಚಲು ಪ್ರಯತ್ನಿಸಿರುವುದು ಬಿಜೆಪಿಯವರ ದ್ವಂದ್ವ ಮುಖದ ಸೋಗಲಾಡಿತನ ತೋರಿಸುತ್ತದೆ. ಎರಡು ವರ್ಷದ ಹಿಂದೆ ಗೋವಾದಲ್ಲಿ ಬಿಜೆಪಿ ಸರಕಾರವಿದ್ದಾಗ ನೈಜೀರಿಯನ್ನರ ಮೇಲೆ ಗೋವಾದ ಸ್ಥಳೀಯ ಜನರು ಹಲ್ಲೆ ನಡೆಸಿ ಹೆಚ್ಚಿನ ಎಲ್ಲಾ ಆಫ್ರಿಕನ್ನರನ್ನು ಅವರು ಗೋವಾದಿಂದ ಹೊರಗೆ ಓಡಿಸಿದ್ದರು. ಆಗ ಇಂಗ್ಲಿಷ್ ಮಾಧ್ಯಮಗಳಿಗೆ ಇದು ಗೋವಾದ ಜನರ ವರ್ಣಭೇದ ನೀತಿ ಎಂದು ಯಾಕೆ ಅನಿಸಲಿಲ್ಲ?

ಕೇಂದ್ರದ ಬಿಜೆಪಿ ಸರಕಾರ ಕೇವಲ ಬಾಂಗ್ಲಾದೇಶಿ ವಲಸಿಗರ ಮೇಲಷ್ಟೇ ಕಣ್ಣಿಟ್ಟಿದೆ. ವಿದ್ಯಾರ್ಥಿಗಳ ವೇಷದಲ್ಲಿ ಭಾರತಕ್ಕೆ ಬರುವ ಆಫ್ರಿಕಾ ದೇಶದ ಕೆಲವು ಕ್ರಿಮಿನಲ್‌ಗಳ ಮೇಲೆ ಕೇಂದ್ರ ಸರಕಾರ ಕಣ್ಣಿಟ್ಟಿಲ್ಲ, ಇದು ನಮ್ಮ ಕರ್ನಾಟಕ ಸರಕಾರದ ತಪ್ಪಲ್ಲ, ಆದರೂ ಕರ್ನಾಟಕದ ಕಾಂಗ್ರೆಸ್ ಸರಕಾರವನ್ನು ಹಣಿಯಲು ಈ ಸಂದರ್ಭವನ್ನು ಬಿಜೆಪಿಯವರು ದುರುಪಯೋಗಪಡಿಸುತ್ತಿರುವುದು ನಿಜಕ್ಕೂ ಖೇದಕರ. ದೇಶದಲ್ಲಿ ಎಲ್ಲಿಯೇ ಆಗಲಿ ಹೀಗೆ ಧನಿಕರು ನಿರ್ಲಕ್ಷ್ಯದಿಂದ ಕಾರ್ ಚಲಾಯಿಸಿ ಪಾದಚಾರಿಗಳನ್ನು ಕೊಂದಾಗ ಸ್ಥಳೀಯರು ಕಾರಿನವರ ಮೇಲೆ ಹಲ್ಲೆ ನಡೆಸಿದ ಸಾವಿರಾರು ಪ್ರಕರಣಗಳು ನಡೆದಿವೆ. ಅದರಲ್ಲೂ ಬಿಹಾರ, ಉತ್ತರ ಪ್ರದೇಶದಲ್ಲಿ ಕಾರಿನಲ್ಲಿರುವವರನ್ನು ಹೊಡೆದು ಕೊಂದುಬಿಟ್ಟ ಅನೇಕ ಘಟನೆಗಳು ನಡೆದಿವೆ. ಆದರೆ ಅದರ ಬಗ್ಗೆ ಇಂಗ್ಲಿಷ್ ಮಾಧ್ಯಮಗಳು ಈ ರೀತಿ ಕಾರಿನಲ್ಲಿದ್ದ ಧನಿಕರ ಪರ ಬೊಬ್ಬೆ ಹಾಕಿದ ಉದಾಹರಣೆಗಳಿಲ್ಲ. ಇಂತಹದ್ದೇ ಪ್ರಕರಣದಲ್ಲಿ ಬಾಲಿವುಡ್ಡಿನ ಸಲ್ಮಾನ್ ಖಾನ್ ವಿರುದ್ಧ ಇವೇ ಇಂಗ್ಲಿಷ್ ಪತ್ರಿಕೆಗಳು ಯುದ್ಧ ಸಾರಿದ್ದವು. ಆದರೆ ಈಗ ಮಾತ್ರ ಆಫ್ರಿಕಾದ ಡ್ರಗ್ ಅಮಲಿನಲ್ಲಿ ಕಾರು ಚಲಾಯಿಸಿ ಸ್ಥಳೀಯರನ್ನು ಕೊಂದವರ ಪರ ಇಂಗ್ಲಿಷ್ ಮಾಧ್ಯಮಗಳು ಬೊಬ್ಬೆ ಹಾಕಿ ಕನ್ನಡಿಗರು ಜನಾಂಗ ದ್ವೇಷ, ವರ್ಣಭೇದ ನೀತಿ ಅನುಸರಿಸುತ್ತಿರುವವರು ಎಂದು ಆಪಾದಿಸುತ್ತಿರುವುದು ಕನ್ನಡಿಗರ ವಿರುದ್ಧ ಇಂಗ್ಲಿಷ್ ಮಾಧ್ಯಮಗಳು ಹೊಂದಿರುವ ಪೂರ್ವಾಗ್ರಹ ತೋರಿಸುತ್ತದೆ.

ವೀಸಾ ಮುಗಿದಿದ್ದರೂ ಭಾರತದಲ್ಲಿಯೇ ಉಳಿದಿರುವ ಒಂದು ಸಾವಿರಕ್ಕೂ ಹೆಚ್ಚು ನೈಜೀರಿಯಾ-ತಾಂಜಾನಿಯಾ ನಾಗರಿಕರನ್ನು ಕರ್ನಾಟಕ ಪೊಲೀಸರು ಪತ್ತೆ ಹಚ್ಚಿ ಅವರ ವಿವರ ವಿದೇಶಾಂಗ ಸಚಿವರಿಗೆ ಕಳುಹಿಸಿ ಕೊಟ್ಟು ಒಂದು ವರ್ಷ ಆಗುತ್ತಾ ಬಂದಿದ್ದರೂ ಸುಷ್ಮಾ ಸ್ವರಾಜರ ವಿದೇಶಾಂಗ ಇಲಾಖೆ ಯಾವುದೇ ಕ್ರಮ ಕೈಗೊಂಡಿಲ್ಲ, ಕಾರಣ ಪ್ರಧಾನಿ ಮೋದಿಯವರ ಆಫ್ರಿಕಾ ದೇಶಗಳ ಪ್ರವಾಸ ಇನ್ನೂ ಬಾಕಿ ಇದೆ ತಾನೇ! ಒಂದು ವೇಳೆ ಆಫ್ರಿಕಾದ ಅಕ್ರಮ ವಲಸಿಗರ ವಿರುದ್ಧ ಭಾರತ ಕ್ರಮ ಕೈಗೊಂಡರೆ ಅದರಿಂದಾಗಿ ಮೋದಿಯವರು ಆ ದೇಶಕ್ಕೆ ಹೋದಾಗ ಅಲ್ಲಿಯ ಮೀಡಿಯಾದ ಎದುರು ಮುಜುಗರ ಅನುಭವಿಸಬೇಕಾಗುತ್ತದೆ ಅಲ್ಲವೇ. ಮೇಲಾಗಿ ನೈಜೀರಿಯಾ ಸಹಿತ ಆಫ್ರಿಕಾ ದೇಶಗಳಲ್ಲಿ ಮೋದಿಯವರ ಚೇಲಾ- ಉದ್ಯಮಿಗಳಾದ ಅಂಬಾನಿ ಅದಾಣಿಗಳ ಭಾರಿ ಹೂಡಿಕೆ ಗಳಿವೆ. ತಮ್ಮ ಚೇಲಾಗಳ ಹೂಡಿಕೆಗಳಿಗೆ ಧಕ್ಕೆಯಾಗುವ ಯಾವುದೇ ಕ್ರಮ ಮೋದಿ ಸರಕಾರ ತೆಗೆದುಕೊಳ್ಳುವುದು ಇಲ್ಲ, ಬಿಜೆಪಿಯವರಿಗೆ ದೇಶದ ಸುರಕ್ಷತತೆಗಿಂತ ತಮ್ಮ ಚೇಲಾ-ಉದ್ಯಮಿಗಳ ಬಂಡವಾಳ ಸುರಕ್ಷತವಾಗಿರಬೇಕೆಂಬ ಸ್ವಾರ್ಥವೇ ಮುಖ್ಯ.

ನಾನು ಬೆಂಗಳೂರಿನ ಕಮ್ಮನಹಳ್ಳಿಯ ಹತ್ತಿರದ ಹೆಣ್ಣೂರು-ಕ್ರಾಸ್ ಬ... ಮೂರು ವರ್ಷ ವಾಸವಿದ್ದೆ. ಅಲ್ಲಿಯ ಹಲವು ನೈಜೀರಿಯನ್ನರ ಡ್ರಗ್ ದಾಂಧಲೆ ಹಾಗೂ ದಿನಾಲೂ ರಾತ್ರಿ ನಡೆಯುವ ಮಾಂಸ ಭಕ್ಷಣೆ, ಅಶ್ಲೀಲ ಕುಣಿತ ಇವನ್ನೆಲ್ಲಾ ಕಣ್ಣಾರೆ ಕಂಡಿದ್ದೇನೆ. ವಿದೇಶಿ ನಾಗರಿಕರ ವಿರುದ್ಧ ಕ್ರಮ ಕೈಗೊಳ್ಳಲು ನಮ್ಮ ಕರ್ನಾಟಕ ಪೊಲೀಸರಿಗೆ ಕೆಲವು ಕಾನೂನು ಅಡಚಣೆಗಳಿ... ನಿಜ. ಆದರೆ ಹಫ್ತಾ ವಸೂಲಿಗಷ್ಟೇ ಸೀಮಿತವಾಗಿರುವ ಕನ್ನಡ ಸಂಘಟನೆಗಳು ಮೊದಲು ಡ್ರಗ್ ಮತ್ತು ಸೈಬರ್ ಕ್ರೈಂ ಚಟುವಟಿಕೆ ನಡೆಸುತ್ತಿರುವ ನೈಜೀರಿಯನ್ನರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲು ವಿದೇಶಾಂಗ ಸಚಿವರ ಮೇಲೆ ಒತ್ತಡ ಹೇರಲಿ. ಸಿರಿಯಾದ ಇಸೀಸ್ (ISIS) ನಂತರ ಅತ್ಯಂತ ಹೆಚ್ಚು ಪೈಶಾಚಿಕ ಉಗ್ರ ಸಂಘಟನೆಯಾದ ನೈಜೀರಿಯಾದ "ಬೊಕೊ- ಹರಾಮ್" ಇದರ ಸದಸ್ಯರು ಬೆಂಗಳೂರಿನಲ್ಲಿ ಅಡಗಿರುವ ಸಾಧ್ಯತೆ ಬಗ್ಗೆ ವಿದೇಶಾಂಗ ಸಚಿವ... ಮಾತನಾಡುತ್ತಲೇ ಇಲ್ಲ ಯಾಕೆ? ಒಟ್ಟಾರೆ ಈಗಿನ ನಮ್ಮ ಕೇಂದ್ರ ಸರಕಾರದ ದ್ವಂದ್ವ ವಿದೇಶಾಂಗ ಪಾಲಿಸಿ ಒಂದು ದಿನ ಭಾರತಕ್ಕೆ ತುಂಬಾ ದುಬಾರಿಯಾಗಲಿದೆ. ಹಾಗಾಗಿ ನಮ್ಮ ಪ್ರಧಾನಿಯವರು ಆದಷ್ಟು ಬೇಗ ಆಫ್ರಿಕಾ ದೇಶಗಳಿಗೆ ಹೋಗಿ ಅಲ್ಲಿಯವರು ವಿದ್ಯಾರ್ಥಿ ವೀಸಾದಲ್ಲಿ ನಮ್ಮ ಕರ್ನಾಟಕಕ್ಕೆ ಬಂದು ಅವರು ಕರ್ನಾಟಕದಲ್ಲಿ ನಡೆಸುವ ಡ್ರಗ್ಸ್ ಹಾಗೂ ಸೈಬರ್ ಕ್ರೈಂ ಜಾಲಗಳ ಬಗ್ಗೆ ನೈಜೀರಿಯಾ-ತಾಂಜಾನಿಯಾ-ಉಗಾಂಡ ಸರಕಾರಗಳ ಮತ್ತು ಅಲ್ಲಿಯ ಮೀಡಿಯಾದ ಗಮನ ಸೆಳೆದು ಕಾನೂನು ಕ್ರಮ ಕೈಗೊಳ್ಳಲು ಆ ಆಫ್ರಿಕಾ ದೇಶಗಳನ್ನು ಒತ್ತಾಯಿಸಲಿ.

-ವೀರಪ್ಪ ಡಿ.ಎನ್. ಮಡಿಕೇರಿ



ನಿಮ್ಮ ತಂದೆ ಲಂಕೇಶ್ ಮೇಷ್ಟ್ರ ಸಮಾಧಿಗೆ ಪುಣ್ಯತಿಥಿಯ ದಿನ ಹೂವಿನ ಅಲಂಕಾರ, ನೈವೇದ್ಯಕ್ಕೆ ಹಣ್ಣು ಒಬ್ಬಟ್ಟಿನ ಎಡೆ ಕಳಶಕ್ಕೆ ಪೇಟ ತೊಡಿಸಿ ಭೌತಿಕವಾಗಿ ಅದೇ ಲಂಕೇಶ್ ಮೇಷ್ಟ್ರು ಎಂಬ ಭಾವನೆಯಲ್ಲಿ ನೀವು ಪೂಜಿಸಿಕೊಂಡು ಬಂದಿರುವುದನ್ನು ಓದಿ ನಮಗೂ ನಮ್ಮ ಮನೆಯಲ್ಲಿ ಮಾಡುವ ಹಿರಿಯರ ಪೂಜೆ ನೆನಪಾಯಿತು!

ಲಂಕೇಶ್ ಮೇಷ್ಟ್ರ ಇಂದು ಭೌತಿಕವಾಗಿ ನಮ್ಮೊಂದಿಗೆ ಇಲ್ಲ. ಅವರ ಸಾಹಿತ್ಯ ಪತ್ರಿಕಾ ಬರಹಗಳು ಈಗಲೂ ಅವರನ್ನು ಜೀವಂತವಾಗಿಸಿವೆ. ಮೇಷ್ಟ್ರಿಗೆ ಸಾವಿಲ್ಲ! ಅವರು ಅಮರ! ಅನಂತ!

ಸಮಾಧಿ ಪೂಜೆಗೆ ಇಡುವ ಎಡೆಯನ್ನು ಕಾಗೆಗಳಿಗೆ ಹಾಕದೇ ನಾವೇ ತಿಂದೆವು! ಎಂದು ಹೇಳಿದ್ದೀರಿ. ಅದು ನಮಗೆ ಖುಷಿ, ಹೆಮ್ಮೆ ಮೂಡಿಸಿತು! ಏಕೆಂದರೆ ನಾವೂ ಸಹ ನಮ್ಮ ತಂದೆಯ ಪುಣ್ಯತಿಥಿ, ಯುಗಾದಿ, ದಸರಾ ಹಬ್ಬಗಳಂದು ಹಿರಿಯರ ಸಮಾಧಿಗೆ ಪೂಜೆ ನಿಮಿತ್ತ ಎಡೆಯನ್ನು ಅರ್ಪಿಸುತ್ತೇವೆ. ಆಗ ನಾವೂ ಸಹ ಎಡೆಯಾದ ಹೋಳಿಗೆ, ಹಣ್ಣುಗಳನ್ನು ಮಿಶ್ರಣ ಮಾಡಿ ಪ್ರಸಾದವೆಂಬಂತೆ ಎಲ್ಲರೂ ಹಂಚಿಕೊಂಡು ತಿಂದು ಖುಷಿ ಪಡುತ್ತೇವೆ! ನೀವು ಅದನ್ನು ನಮಗೆ ನೆನಪು ಮಾಡಿದಿರಿ!

ಥ್ಯಾಂಕ್ಸ್ ಮೇಡಂ....!

-ಶ್ರೀಧರ ಡಿ. ರಾಮಚಂದ್ರಪ್ಪ,
ತುರುವನೂರು, ಚಿತ್ರದುರ್ಗ ಜಿಲ್ಲೆ

ಉತ್ತರ ಭಾರತೀಯರ ಬಿಳಿತೊಗಲು ಮೋಹ

-ಬೆಂಗಳೂರಿನಲ್ಲಿ ಕಾರ್ ಅಪಘಾತ ಮಾಡಿ ತಾಂಜಾನಿಯಾದ ವಿದ್ಯಾರ್ಥಿ ದಾರಿಹೋಕ ಕನ್ನಡಿಗರನ್ನು ಕೊಂದ ಮೇಲೆ ದೇಶದಲ್ಲೆಲ್ಲಾ ವಿವಿಧ ಕ್ಷೇತ್ರದಲ್ಲಿ ಭಾರತೀಯರ ಒಳಗೆಯೇ ಇರುವ ವರ್ಣ ತಾರತಮ್ಯ ಮನೋಭಾವದ ಕುರಿತು ಚರ್ಚೆ ಶುರುವಾಗಿದೆ. ಹಿಂದಿ ಸಿನಿಮಾದಲ್ಲಿ ದಿನನಿತ್ಯ ವರ್ಣಭೇದ ನೀತಿ ಕಾಣಿಸುತ್ತದೆ. ಆದರೆ ದಕ್ಷಿಣದ ಸಿನಿಮಾದಲ್ಲಿ ಅದು ಅಷ್ಟಾಗಿ ಇಲ್ಲ. ರಜನಿಕಾಂತ್, ಚಿರಂಜೀವಿ ಸಹಿತ ದಕ್ಷಿಣದ ಹಲವು ಪ್ರಸಿದ್ಧ ನಟರು ತಮ್ಮ ಮೂಲ ಕರಿಯ ಬಣ್ಣದಲ್ಲಿಯೇ ಅನೇಕ ಚಿತ್ರಗಳಲ್ಲಿ ಕಾಣಿಸಿದ್ದಾರೆ. ಅದರಂತೆ ಸರಿತಾ, ಪದ್ಮಾ ವಾಸಂತಿ ಸಹಿತ ಅನೇಕ ನಾಯಕಿಯರೂ 1980 ರ ದಶಕದಲ್ಲಿಯೇ ತಮ್ಮ ಮೂಲ ಕರಿ ಬಣ್ಣದಲ್ಲಿ ಪರದೆಯ ಮೇಲೆ ಕಾಣಿಸಿಕೊಂಡಿದ್ದಾರೆ. ಬಿಳಿ ಬಣ್ಣದ ಹುಚ್ಚು ಕೇವಲ ಪಂಜಾಬಿಗಳ ಕಪಿಮುಷ್ಟಿಯಲ್ಲಿರುವ ಬಾಲಿವುಡ್‌ನಲ್ಲಿ ಮಾತ್ರ 70 ವರ್ಷಗಳಿಂದ ಇದೆ. ಆದರೆ ಇದರ ಬಗ್ಗೆ ಇಂಗ್ಲಿಷ್ ಹಾಗೂ ಹಿಂದಿ ಟಿವಿ ಚಾನೆಲ್ಲುಗಳು ಎಂದೂ ಬೊಬ್ಬೆ ಹಾಕಿಲ್ಲ. ಕೇವಲ ಬೆಂಗಳೂರಿನಲ್ಲಿ ಮಾತ್ರ ಅವರಿಗೆ ವರ್ಣಬೇದ ಕಾಣಿಸುತ್ತಿದೆ.

ಇಂಗ್ಲಿಷ್ ಚಾನೆಲ್ಲಿನ ಬೊಬ್ಬೆ-ಶೂರ ಅರ್ನಬ್ ಗೋಸ್ವಾಮಿ ಒಮ್ಮೆ ಮುಂಬೈಯಿಂದ ಇನ್ನೊಂದೆಡೆ ಹೋಗಲು ಮುಂಬೈ ವಿಮಾನ ನಿಲ್ದಾಣದಲ್ಲಿ ತನ್ನ ಹೆಂಡತಿಯ ಜೊತೆ ಕಾದಿರುವಾಗ ಒಬ್ಬ ವಿದೇಶಿ ಕರಿಯ ಅವಸರದಲ್ಲಿ ಗೋಸ್ವಾಮಿಯ ಹೆಂಡತಿಯ ಕಾಲುಬೂಟಿನಿಂದ ತುಳಿದಾಗ ಅವಳು ನೋವಿನಿಂದ ಚೀರಿದಳಂತೆ. ಆಗ ಪತ್ನಿಯ ನೋವು ನೋಡಲಾಗದೇ ಇದೆ ಬೊಬ್ಬೆರಾಜ ಅರ್ನಾಬ್ ಆ ವಿದೇಶಿ ಕರಿಯನೊಟ್ಟಿಗೆ ಜಗಳಕ್ಕೆ ಇಳಿದಿದ್ದನಂತೆ. ಆದರೆ ಬೆಂಗಳೂರಿನಲ್ಲಿ ಆಫ್ರಿಕಾದ ಒಬ್ಬ ಕುಡುಕನ ನಿರ್ಲಕ್ಷದ ಕಾರು ಚಲಾವಣೆಯಿಂದ ಕನ್ನಡಿಗರ ಕಣ್ಣೆದುರಿನಲ್ಲಿಯೇ ತಮ್ಮ ಒಬ್ಬ ಹೆಂಗಸು ಸ್ಥಳದಲ್ಲಿಯೇ ಸತ್ತು ಅವಳ ಗಂಡ ಮಾರಣಾಂತಿಕ ಗಾಯಗೊಂಡರೂ ಅವರ ಸಂಬಂಧಿಕರು ಆಕ್ರೋಶಗೊಂಡಿದ್ದು ಆ ಇಂಗ್ಲಿಷ್ ಚಾನೆಲ್ಲಿನ ಬೊಬ್ಬೆಶೂರನಿಗೆ ದೊಡ್ಡ ತಪ್ಪಾಗಿ ಕಂಡಿತು. ತನ್ನ ಹೆಂಡತಿಯ ಒಂದು ಸಣ್ಣ ನೋವೂ ಸಹಿಸಲಾಗದ ಈ ಫೈವ್-ಸ್ಟಾರ್ ಪತ್ರಕರ್ತರಿಗೆ ಬೇರೆಯವರ ಹೆಂಡತಿಯ ನಡುಬೀದಿಯ ಘೋರ ಮರಣವೂ ನಗಣ್ಯವಾಗಿ ಕಾಣಿಸುತ್ತದೆ. ಇದಲ್ಲವೇ ಪ್ರಿಯ ಇಂಗ್ಲಿಷ್ ಮತ್ತು ಹಿಂದಿ ಚಾನೆಲ್ಲುಗಳವರ ಜಾಗೆದಾರಿಕೆ.

ದಿಲ್ಲಿಯ ಹತ್ತಿರ ಒಂದು ಮಗು ಕೊಳವೆಬಾವಿಯಲ್ಲಿ ಬಿದ್ದರೆ ಇಡೀ ದೇಶವೇ ಅದಕ್ಕಾಗಿ ಮರುಗುವಂತೆ ರಾಷ್ಟ್ರೀಯ ಚಾನೆಲ್‌ನವರು ನಾಟಕವಾಡುತ್ತಾರೆ. ಆದರೆ ದಕ್ಷಿಣ ಭಾರತದಲ್ಲಿ ಹತ್ತಾರು ಮಕ್ಕಳು ಕೊಳವೆ ಬಾವಿಯಲ್ಲಿ ಬಿದ್ದರೆ ಅದು ರಾಷ್ಟ್ರೀಯ ಚಾನೆಲ್ಲಿನವರಿಗೆ ಗೊತ್ತೇ ಆಗುವುದಿಲ್ಲ. ಅದೇ ಪ್ರಕಾರ ದೆಲ್ಲಿ-ಮುಂಬೈಯಲ್ಲಿ ಹೆಣ್ಣಿನ ಮೇಲೆ ಅತ್ಯಾಚಾರ ಆದರೆ ಇಡೀ ಭಾರತವೇ ಅದಕ್ಕಾಗಿ ಆಕ್ರೋಶಗೊಳ್ಳುವಂತೆ ಪ್ರಚೋದಿಸುವ ಈ ಟಿವಿ ಚಾನೆಲ್ಲುಗಳು ದಕ್ಷಿಣ ಭಾರತದಲ್ಲಿ ಎಷ್ಟೇ ಹೆಣ್ಣುಗಳ ಮೇಲೆ ಅತ್ಯಾಚಾರವಾದರೂ ಅದರ ಬಗ್ಗೆ ಅವರು ಸುದ್ದಿ ಎತ್ತುವುದಿಲ್ಲ. ವಾಸ್ತವವಾಗಿ ದಕ್ಷಿಣ ಭಾರತೀಯರಿಗೆ ಉತ್ತರ ಭಾರತೀಯರಷ್ಟು ವರ್ಣಬೇಧ ಕೊಳಕು ಮನಸ್ಥಿತಿ ಇಲ್ಲ. ಉತ್ತರ ಭಾರತದ ಪತ್ರಿಕೆಗಳಲ್ಲಿ ಪ್ರಕಟವಾಗುವ ಪ್ರತಿಯೊಂದು ಮ್ಯಾಟ್ರಿಮೋನಿಯಲ್ ಜಾಹೀರಾತಿನಲ್ಲಿ ವಧು-ವರ ಬಿಳಿ (ಗೋರಿ) ಬಣ್ಣದವರೇ ಆಗಿರಬೇಕು ಎಂಬ ಕಂಡಿಶನ್ ತಪ್ಪದೇ ಇರುತ್ತದೆ.

ನಮ್ಮ ದೇವಮಾನವರಿಗೆ ಹಾಗೂ ಬಾಬಾ ಅಮ್ಮಾ ಗುರೂಜಿ ಸ್ವಾಮೀಜಿಗಳಿಗೂ ಬಿಳಿ ಚರ್ಮದ ಹುಚ್ಚಿದೆ. ಈ ಎಲ್ಲಾ ಹಿಂದೂ ಧರ್ಮದ ಕಾವಿ ವ್ಯಾಪಾರಿಗಳು ಸ್ವತಃ ಕರಿಯರಾಗಿದ್ದರೂ ಅವರಿಗೆ ಕೇವಲ ಬಿಳಿಯ ಯೂರೋಪಿಯನ್ ಶಿಷ್ಯರೇ ಬೇಕು. ಹರೇಕೃಷ್ಣ ಪಂಥ ಸಹಿತ ಧರ್ಮದ ವ್ಯಾಪಾರಿಗಳು ಕರಿಯ ನೀಗ್ರೊಗಳನ್ನು ಹತ್ತಿರ ಸೇರಿಸುವುದೇ ಇಲ್ಲ! ನಮ್ಮ ಚಿತ್ರಕಾರರೂ ಅಷ್ಟೇ, ಅನೇಕ ಫೋಟೋಗಳಲ್ಲಿ ಕಾಳಿ ದುರ್ಗಾ ಶಿವ ರಾಮ ಮತ್ತು ಕೃಷ್ಣ ಈ ಕರಿಯ ದೇವರುಗಳನ್ನೂ ಬಿಳಿ ವರ್ಣದವರಾಗಿಯೇ ಚಿತ್ರಿಸುತ್ತಾರೆ (ಉತ್ತರ ಕರ್ನಾಟಕದಲ್ಲಿ ಶಿವನಿಗೆ ಕರಿಯಪ್ಪ ಎಂಬ ಹೆಸರೂ ಇದೆ). ಉಳಿದ ದೇವರಂತೂ ಎಲ್ಲೆಡೆಯ ಚಿತ್ರಗಳಲ್ಲಿ ಯಾವಾಗಲೂ ಶ್ವೇತ ವರ್ಣೀಯರೇ ಆಗಿರುತ್ತಾರೆ. ಪುಲಿಕೇಶೀ, ಕೃಷ್ಣದೇವರಾಯ ಸಹಿತ ಹಿಂದಿನ ಕಾಲದ ಎಲ್ಲಾ ರಾಜರನ್ನೂ ಬಿಳಿ ಬಣ್ಣದವರನ್ನಾಗಿಯೇ ಶಾಲಾ ಪುಸ್ತಕದಲ್ಲಿ ಚಿತ್ರಿಸುತ್ತಾರೆ. ನಿಜವಾಗಿ ಆ ಎಲ್ಲಾ ಪುರಾತನ ರಾಜರ ಬಣ್ಣವನ್ನು ನೋಡಿದವರಾರು?

-ಪ್ರವೀಣ್ ಎಸ್ ಶೆಟ್ಟಿ, ಮಂಗಳೂರು

ಚುನಾವಣೆಯಲ್ಲಿ ದುಡ್ಡಿನ ಆಟ

ಚುನಾವಣೆಗಳಲ್ಲಿ ದುಡ್ಡಿನ ಆಟವೇ ನಡೆಯುವದೆಂಬುದು ಎಲ್ಲರ ಅನಿಸಿಕೆಯಾಗಿದೆ. ಆದರೆ ದುಡ್ಡಿನ ಹಾವಳಿ ತಪ್ಪಿಸುವ ಪ್ರಾಮಾಣಿಕ ಪ್ರಯತ್ನಗಳು ಆಗುತ್ತಿಲ್ಲ. ದುರ್ದೈವದಿಂದ ಚುನಾವಣಾ ಪ್ರಾಧಿಕಾರವೂ ಕಟ್ಟುನಿಟ್ಟಿನ ಕ್ರಮಗಳನ್ನು ಜರುಗಿಸುತ್ತಿಲ್ಲ. ಇದರ ಪರಿಣಾಮವಾಗಿ ಯೋಗ್ಯರು ಚುನಾವಣೆಗೆ ನಿಲ್ಲುವುದು ಕಠಿಣವಾಗುತ್ತದೆ. ಹಾಗಾದಾಗ ಪ್ರಜಾಪ್ರಭುತ್ವದ ಅರ್ಥವೇ ಇಲ್ಲದಾಗುತ್ತದೆ.

ಈ ದಿಕ್ಕಿನಲ್ಲಿ ಸಾಮಾಜಿಕ ಕಾರ್ಯಕರ್ತರು, ಸಾಮಾಜಿಕ ಸಂಘಟನೆಗಳು ಮತ್ತು ಪತ್ರಿಕಾರಂಗದವರು ಯೋಗ್ಯ ರೀತಿಯ ಹೋರಾಟ ಮಾಡಬೇಕಾಗುತ್ತದೆ. ಅವರು ರಾಜ್ಯದ ಮತ್ತು ರಾಷ್ಟ್ರದ ಚುನಾವಣಾ ಪ್ರಾಧಿಕಾರದ ಮೇಲೆ ಒತ್ತಡ ಹೇರುವ ಕೆಲಸವನ್ನು ತುರ್ತಾಗಿ ಮಾಡಬೇಕಾಗುತ್ತದೆ. ಹೀಗಾದಾಗ ಮಾತ್ರ ನಮ್ಮ ಪ್ರಜಾಪ್ರಭುತ್ವ ಬೆಳೆಯಬಹುದು.

ನಮ್ಮ ದೇಶದಲ್ಲಿ ಮೇಲಿಂದ ಮೇಲೆ ಒಂದಿಲ್ಲೊಂದು ಚುನಾವಣೆಗಳು ನಡೆಯುತ್ತಿವೆ. ಆದ್ದರಿಂದ ರಾಜ್ಯ ಮಟ್ಟದಲ್ಲಿಯೂ ರಾಷ್ಟ್ರೀಯ ಮಟ್ಟದಂತಹ ಶಾಶ್ವತವಾದ ಮತ್ತು ಸ್ವತಂತ್ರವಾದ ಚುನಾವಣಾ ಆಯೋಗಗಳನ್ನು ಜೊತೆಗೆ ಅದರ ಸ್ವತಂತ್ರ ಸಿಬ್ಬಂದಿಯನ್ನು ನೇಮಿಸಬೇಕು. ಅವರೆಲ್ಲರೂ ನಿಷ್ಪಕ್ಷಪಾತವಾಗಿ, ನಿರ್ಭಯದಿಂದ ಚುನಾವಣೆಗಳನ್ನು ನಡೆಸಬೇಕು, ಎಲ್ಲಿಯೂ ದುಡ್ಡಿನ ಹಾವಳಿಯಿಲ್ಲದಂತೆ ನೋಡಿಕೊಳ್ಳಬೇಕು.

ಈ ದಿಕ್ಕಿನಲ್ಲಿ ಮಾಧ್ಯಮದವರು ಪ್ರಮುಖ ಪಾತ್ರವಹಿಸಲಿ.

-ಡಾ. ಬಸವರಾಜ ಮೋದಿ, ಕಲಬುರ್ಗಿ

ಶ್ರೀಮಂತರ ಬಂಡವಾಳ ಮಾತ್ರ ಹೂಡಿಕೆಗೆ ಯೋಗ್ಯವೇ?


ನಮ್ಮ ಸರ್ಕಾರ ಬಂಡವಾಳಿಗರನ್ನು ಆಕರ್ಷಿಸಲು ಸರ್ವ ಪ್ರಯತ್ನ ಮಾಡುತ್ತಿದೆ. ಆದರೂ ಸಫಲತೆ ತೃಪ್ತಿಕರವಾಗಿಲ್ಲ. ಹಿಂದೆ 'ಸಣ್ಣ ಉಳಿತಾಯ ಯೋಜನೆ' ಅಂತ ಇತ್ತು, ಜನಸಾಮಾನ್ಯರು ಅವರಿಗೆ ಸಾಧ್ಯವಾದಷ್ಟು ಹಣವನ್ನು ಅದರಲ್ಲಿ ತೊಡಗಿಸುತ್ತಿದ್ದರು. ಅದಕ್ಕೆ ಆಕರ್ಷಕ ಬಡ್ಡಿ ಸಿಗುತ್ತಿತ್ತು, ಉದಾಹರಣೆಗೆ 'ಇಂದಿರಾ ವಿಕಾಸ ಪತ್ರ' ಎಂಬ ಯೋಜನೆಯಲ್ಲಿ ತೊಡಗಿಸಿದ ಹಣ ಐದು ವರ್ಷದಲ್ಲಿ ದ್ವಿಗುಣವಾಗುತ್ತಿತ್ತು. ಅದರಿಂದ ಸರ್ಕಾರ ಮತ್ತು ಜನಸಾಮಾನ್ಯರಿಬ್ಬರಿಗೂ ನೆರವಾಗುತ್ತಿತ್ತು. ಈ ರೀತಿಯ ಯೋಜನೆಗಳು ನಮ್ಮ ಸರ್ಕಾರಕ್ಕೆ ಈಗ ಏಕೆ ಬೇಡ? ಹಿಂದೆ ಸಣ್ಣ ಉಳಿತಾಯ ಯೋಜನೆಗೆ ಒಬ್ಬ ಮಂತ್ರಿ ಕೂಡ ಇರುತ್ತಿದ್ದರು. ಈಗ ಆ ಯೋಜನೆ ಹೇಳಹೆಸರಿಲ್ಲದಂತಾಗಿದೆ. ಇದಕ್ಕೆ ಕಾರಣವಾದರೂ ಏನು? ಶ್ರೀಮಂತರ ಬಂಡವಾಳ ಮಾತ್ರ ಹೂಡಿಕೆಗೆ ಯೋಗ್ಯವೇ? ಶ್ರೀಮಂತರನ್ನು ಓಲೈಸುವುದೇ ಪ್ರಿಯವೇ? ರಾಜ್ಯ ಸರ್ಕಾರ ಸಮರ್ಪಕ ಉತ್ತರ ಕೊಡಬೇಕು.

-ವೀರಬ್ಯಾತಯ್ಯ, ಬೆಂಗಳೂರು

ವಿ.ಸೂ. : ನಿಮ್ಮ ಅನಿಸಿಕೆಗಳನ್ನು lankesh70@rediffmail.com ಗೆ ನುಡಿ ಅಥವಾ ಬರಹ ತಂತ್ರಾಂಶದಲ್ಲಿ ಕಳುಹಿಸಬಹುದು. ನಿಮ್ಮ ಪ್ರತಿಕ್ರಿಯೆಗಳನ್ನು 9980331427 ನಂಬರ್‌ಗೂ ಚಿಕ್ಕದಾಗಿ ಮತ್ತು ಚೊಕ್ಕದಾಗಿ SMS ಕಳುಹಿಸಬಹುದು.

ಹೊಸದು ಅನಿಸಿದರೆ ಅದು ಎಲ್ಲರಿಗೂ ತಲುಪಬೇಕು: ಅಶು ಬೆದ್ರ

ಕಿರುತೆರೆಯ ಹೆಸರಾಂತ ನಿರ್ಮಾಪಕ ಕಂ ನಟ ಅಶು ಬೆದ್ರ ಸದ್ದಿಲ್ಲದೇ 'ಸಿಂಪಲ್ಲಾಗ್ ಇನ್ನೊಂದ್ ಲವ್‌ಸ್ಟೋರಿ' ಚಿತ್ರವನ್ನು ನಿರ್ಮಾಣ ಮಾಡಿದ್ದಾರೆ. ಪ್ರೋಮೋದ ಮೂಲಕವೇ ಸಾಕಷ್ಟು ಕುತೂಹಲ ಮೂಡಿಸಿರುವ ತಮ್ಮ ಚಿತ್ರ ಕುರಿತು ಇಲ್ಲಿ ಮಾತಾಡಿದ್ದಾರೆ.



'ರಾಧಾ ಕಲ್ಯಾಣ' ಧಾರಾವಾಹಿಯ ಮೂಲಕ ಕನ್ನಡ ಕಿರುತೆರೆಯ ಜಗತ್ತಿಗೆ ಪರಿಚಯ ಆದವರು ನಿರ್ಮಾಪಕ ಕಂ ನಟ ಅಶು ಬೆದ್ರ. ಅತೀ ಕಿರಿ ವಯಸ್ಸಿನಲ್ಲೇ ಅವರು ಅಗಾಧವಾದ ಸಾಧನೆ ಮಾಡಿದವರು. ಕಿರುತೆರೆಯಿಂದ ಸದ್ಯ ಸಿನಿಮಾ ರಂಗಕ್ಕೂ ಬಂದಿದ್ದಾರೆ. ಸಿಂಪಲ್ ಸುನಿ ನಿರ್ದೇಶನದ 'ಸಿಂಪಲ್ಲಾಗ್ ಇನ್ನೊಂದ್ ಲವ್‌ಸ್ಟೋರಿ' ಸಿನಿಮಾವನ್ನು ನಿರ್ಮಾಣ ಮಾಡಿದ್ದಾರೆ. ಜತೆಗೆ ಮತ್ತೊಂದು ಚಿತ್ರಕ್ಕೆ ತಾವೇ ನಾಯಕರಾಗಲು ಸಿದ್ಧತೆ ನಡೆಸಿದ್ದಾರೆ.

*** 'ಸಿಂಪಲ್ಲಾಗ್ ಇನ್ನೊಂದ್ ಲವ್‌ಸ್ಟೋರಿ' ಕತೆಯನ್ನು ಒಪ್ಪಿಕೊಂಡಿದ್ದು ಯಾಕೆ?**

ನಾನು ಏನೇ ಕೆಲಸ ಮಾಡಿದರೂ ಅಲ್ಲೊಂದು ಹೊಸತನ ಇರಬೇಕು. ಅಲ್ಲದೇ ಆ ಕತೆಯ ಮೂಲಕ ಎಲ್ಲರೂ ಗುರುತಿಸಿಕೊಳ್ಳಬೇಕು. ಇದನ್ನು ಬಿಟ್ಟರೆ ಬೇರೆ ನಾನು ಏನನ್ನೂ ನೋಡುವುದಿಲ್ಲ. ನಿರ್ದೇಶಕ ಸುನಿ ಹೇಳಿದ ಕತೆ ತುಂಬಾನೇ ಚೆನ್ನಾಗಿತ್ತು. ಹೊಸ ರೀತಿಯಲ್ಲಿ ಅವರು ಚಿತ್ರಕತೆ ಬರೆದಿದ್ದರು. ಅಲ್ಲದೇ ಈ ಹೊತ್ತಿಗೆ ಇಂತಹ ಚಿತ್ರಗಳ ಅವಶ್ಯಕತೆ ಇತ್ತು. ಹೀಗಾಗಿ ಸಿನಿಮಾ ಮಾಡಲು ಒಪ್ಪಿಕೊಂಡೆ.

*** 'ಸಿಂಪಲ್ಲಾಗ್ ಒಂದ್ ಲವ್‌ಸ್ಟೋರಿ' ಹಿಟ್ ಸಿನಿಮಾ. ಹೊಸ ಚಿತ್ರದ ಬಗ್ಗೆ ನಿರೀಕ್ಷೆ ಏನು?**

ಈ ಚಿತ್ರವನ್ನು ನಾವು ಹೊಸದು ಅಂದುಕೊಂಡೆ ಮಾಡಿದ್ದೇವೆ. ಎಲ್ಲರಿಗೂ ಗೊತ್ತಿರುವಂತೆ ಸ್ಯಾಂಡಲ್‌ವುಡ್‌ನಲ್ಲಿ 'ಸಿಂಪಲ್ಲಾಗ್ ಒಂದ್ ಲವ್‌ಸ್ಟೋರಿ' ಸಿನಿಮಾ ತನ್ನದೇ ಆದ ರೆಕಾರ್ಡ್ ಕ್ರಿಯೇಟ್ ಮಾಡಿದೆ. ಬಾಕ್ಸ್ ಆಫೀಸ್‌ನಲ್ಲೂ ಅದು ದಾಖಲೆ ಬರೆದಿದೆ. ಹೀಗಾಗಿ ಹೊಸ ಸಿನಿಮಾದ ಬಗ್ಗೆ ಖಂಡಿತಾ ನಿರೀಕ್ಷೆ ಇದ್ದೇ ಇರುತ್ತದೆ. ಆ ನಿರೀಕ್ಷೆಯನ್ನು ಹುಸಿಗೊಳಿಸದಂತೆ ಸಿನಿಮಾ ಮಾಡಿದ್ದೇವೆ.



*** ಇದು 'ಸಿಂಪಲ್...' ಸಿನಿಮಾದ ಮುಂದುವರೆದ ಭಾಗ ಅನ್ನುವ ಮಾತಿದೆ. ಭಾಗ 2 ಬಗ್ಗೆ ಹೇಳಿ.**

ಖಂಡಿತಾ ಇದು ಮುಂದುವರೆದ ಭಾಗವಲ್ಲ. ಮೊದಲ ಸಿನಿಮಾನೇ ಇದಾಗಬೇಕಿತ್ತು. ನಂತರ 'ಸಿಂಪಲ್ಲಾಗೊಂದ್ ಲವ್‌ಸ್ಟೋರಿ' ಬರಬೇಕಿತ್ತು. ಆದರೆ, ಇಲ್ಲಿ ಉಲ್ಟಾ ಆಗಿದೆ. 'ಸಿಂಪಲ್ಲಾಗೊಂದ್ ಲವ್‌ಸ್ಟೋರಿ' ಸಿನಿಮಾದಲ್ಲಿ ಫ್ಲ್ಯಾಶ್ ಬ್ಯಾಕ್ ಕತೆ ಇದೆ. ಇಲ್ಲಿ ಅದಿಲ್ಲ, ನಾಯಕ ಮತ್ತು ನಾಯಕಿಯ ಫ್ಯೂಚರ್ ಬಗ್ಗೆ ಚಿತ್ರದ ಕತೆ ಇದೆ. ಇದೇ ಸಿನಿಮಾದ ವಿಶೇಷ ಕೂಡ.

*** ಸುನಿ ಮತ್ತು ನಿಮ್ಮ ಕಾಂಬಿನೇಷನ್ ಬಗ್ಗೆ ಏನನಿಸುತ್ತದೆ?**

ಅದರ ಬಗ್ಗೆ ಸಿನಿಮಾನೇ ಮಾತಾಡಬೇಕು. ಅವರು ಏನು ಅಂದುಕೊಂಡಿದ್ದರೋ ಅದನ್ನೆಲ್ಲ ನಿರ್ಮಾಪಕನಾಗಿ ನಾನು ಒದಗಿಸಿದ್ದೇನೆ. ನನಗೆ ಎಂಥ ಸಿನಿಮಾ ಬೇಕಿತ್ತೋ ಅದನ್ನು ಸುನಿ ಕೊಟ್ಟಿದ್ದಾರೆ. ಹೀಗಾಗಿ ಕಾಂಬಿನೇಷನ್ ಚೆನ್ನಾಗಿದೆ.

*** ನಾಯಕ ಮತ್ತು ನಾಯಕಿಯನ್ನು ಬದಲಾಯಿಸಿದ್ದು ಯಾಕೆ?**

'ಸಿಂಪಲ್ಲಾಗೊಂದು ಲವ್‌ಸ್ಟೋರಿ' ಸಿನಿಮಾದಲ್ಲಿ ರಕ್ಷಿತ್ ಮತ್ತು ಶ್ವೇತಾ ಶ್ರೀವಾತ್ಸವ್ ಜೋಡಿ ಇತ್ತು. ಹೊಸ ಸಿನಿಮಾದಲ್ಲಿ ಮೇಘನಾ ಮತ್ತು ಪ್ರವೀಣ್ ಎಂಬ ಹೊಸ ಹುಡುಗ ಇದ್ದಾನೆ. ಈ ಜೋಡಿಯೂ ಪಾತ್ರಕ್ಕೆ ಜೀವ ತುಂಬಿದೆ. ತಾರಾಗಣದ ಆಯ್ಕೆಯಲ್ಲಿ ನನ್ನೊಬ್ಬನ ಪಾತ್ರವೇನೂ ಇಲ್ಲ, ಅದು ಟೀಮ್ ವರ್ಕ್.

*** ಕಿರುತೆರೆಯಲ್ಲಿ ನೀವು ಯಶಸ್ವಿ ನಿರ್ಮಾಪಕರು. ಸಿನಿಮಾ ರಂಗದಲ್ಲಿಯ ಅನುಭವ ಹೇಗಿತ್ತು?**

ನಾನು ಮಂಗಳೂರಿನಿಂದ ಬೆಂಗಳೂರಿಗೆ ಬಂದಾಗ ಯಾವ ರಂಗದ ಬಗ್ಗೆಯೂ ನನಗೆ ಗೊತ್ತಿರಲಿಲ್ಲ. ಹತ್ತು ವರ್ಷಗಳ ಹಿಂದೆ ಕಲಾವಿದ ಆಗಬೇಕು ಅಂತ ಬೆಂಗಳೂರಿಗೆ ಬಂದವನು. ಆನಂತರ ಕೇಬಲ್ ಆಪರೇಟರ್ ಆದೆ. ಆಟೋ ಓಡಿಸಿದೆ. ಬೇರೆ ಬೇರೆ ಬಿಜಿನೆಸ್‌ಲ್ಲಿ ತೊಡಗಿಕೊಂಡೆ. ಕಿರುತೆರೆಯ ಹಲವು ಕಂಪೆನಿಗಳ ಜತೆ ಕೆಲಸ ಮಾಡಿದೆ. ಆನಂತರವೇ ನನಗೆ ಕಿರುತೆರೆಯ ಪರಿಚಯ ಆಗಿದ್ದು. 'ರಾಧ ಕಲ್ಯಾಣ' ಧಾರಾವಾಹಿ ನಿರ್ಮಾಣ ಮಾಡುವ ಸಂದರ್ಭ ಬಂತು. ಧೈರ್ಯದಿಂದ ಆ ಕೆಲಸವನ್ನೂ ಮಾಡಿದೆ. ಈಗ ಧಾರಾವಾಹಿಯ ಸಾವಿರ ಕಂತು ಕಂಡಿದೆ. ನನಗೆ ನನ್ನ ಬಗ್ಗೆ ನಂಬಿಕೆ ಇದೆ. ಹೀಗಾಗಿ ಸಿನಿಮಾ ರಂಗಕ್ಕೂ ಬಂದಿದ್ದೇನೆ.

*** ನೀವೂ ಹೀರೋ ಆಗುತ್ತೀರಿ ಎಂಬ ಸುದ್ದಿ ಇದೆ?**

ನಾನು ಬೆಂಗಳೂರಿಗೆ ಬಂದಿದ್ದೆ ಕಲಾವಿದ ಆಗಬೇಕು ಎನ್ನುವ ಉದ್ದೇಶದಿಂದ. ಸಿನಿಮಾ ಮತ್ತು ಧಾರಾವಾಹಿಯಲ್ಲಿ ಪುಟ್ಟ ಪುಟ್ಟ ಪಾತ್ರವನ್ನೂ ಮಾಡಿದ್ದೇನೆ. ಹೀರೋ ಆಗಬೇಕು ಅನ್ನುವ ಕನಸಿದೆ. ಆ ಸಿನಿಮಾವನ್ನು ನಾನು ನಿರ್ಮಾಣ ಮಾಡುವುದಿಲ್ಲ, ಹೆಸರಾಂತ ನಿರ್ದೇಶಕರು ಈ ಚಿತ್ರವನ್ನು ನಿರ್ದೇಶನ ಮಾಡಲಿದ್ದಾರೆ. ■

Registered No.RNP/KA/BGS/2036/2014-16 Posted at :BGPSO, Mysore Road, Bangalore-26 Thursday R B P LANKESH, Kannada Weekly Price Rs. 15/-

ಶಿವಲಿಂಗ ಮರ್ಡರ್ ಮಿಸ್ಟರಿ



ಶಿವರಾಜ್‌ಕುಮಾರ್ ನಟನೆಯ 'ಶಿವಲಿಂಗ' ಸಿನಿಮಾ ಈ ವಾರ ಬಿಡುಗಡೆ ಆಗುತ್ತಿದೆ. ಈ ಬಾರಿ ಅವರು ಸಿಐಡಿ ಅಧಿಕಾರಿಯ ಪಾತ್ರವನ್ನು ನಿರ್ವಹಿಸುತ್ತಿದ್ದಾರೆ. ಇದೇ ಮೊದಲ ಬಾರಿಗೆ ಶಿವಣ್ಣ ಇಂಥದ್ದೊಂದು ಪಾತ್ರ ಮಾಡಿದ್ದರಿಂದ ಸಹಜವಾಗಿಯೇ ಅವರ ಅಭಿಮಾನಿಗಳಲ್ಲಿ ನಿರೀಕ್ಷೆ ಮೂಡಿದೆ. ಚಿತ್ರದ ಕತೆ ಏನಿರಬಹುದು ಅನ್ನುವ ಕುತೂಹಲವೂ ಇದೆ. ಇಂತಹ ಎಲ್ಲ ಕುತೂಹಲಕ್ಕೀಗ ತೆರಬಿದ್ದಿದೆ. ಇದೊಂದು ಮರ್ಡರ್ ಮಿಸ್ಟರಿಯ ಕತೆಯಾಗಿದ್ದು, ಅದಕ್ಕೊಂದು ಫ್ಯಾಮಿಲಿಯ ಟಚ್ ಕೊಟ್ಟಿದ್ದಾರೆ ನಿರ್ದೇಶಕರು.

'ದೃಶ್ಯ' ಸೇರಿದಂತೆ ಹಲವು ಇಂಥದ್ದೇ ಚಿತ್ರಗಳನ್ನು ನೀಡಿರುವ ನಿರ್ದೇಶಕ ಪಿ.ವಾಸು, ಈಗ ಶಿವಣ್ಣನಿಗಾಗಿ ಅದೇ ಮಾದರಿಯ ಚಿತ್ರಕತೆ ಬರೆದಿದ್ದಾರೆ. ಸಸ್ಪೆನ್ಸ್, ಲವ್‌ಸ್ಟೋರಿ ಮತ್ತು ಮರ್ಡರ್ ಮಿಸ್ಟರಿಯನ್ನು ಒಂದಾಗಿಸಿದ್ದಾರೆ. ಹೀಗಾಗಿ 'ಶಿವಲಿಂಗ' ಸಿನಿಮಾ ಈಗಾಗಲೇ ನಿರೀಕ್ಷೆ ಹುಟ್ಟಿಸಿದೆ.

"ಇದೇ ಮೊದಲ ಬಾರಿಗೆ ಇಂತಹ ಪಾತ್ರದಲ್ಲಿ ನಾನು ಕಾಣಿಸಿಕೊಂಡಿದ್ದೇನೆ. ಪಾತ್ರ ಮಾಡುವಾಗ ಅನೇಕ ಆಫೀಸರ್ಸ್‌ನ ಮೀಟ್ ಮಾಡಿದ್ದೆ. ಅವರ ಕಾರ್ಯವೈಖರಿಯನ್ನು ತಿಳಿದುಕೊಂಡಿದ್ದೇನೆ. ಅಪ್ಪಾಜಿ (ಡಾ.ರಾಜ್) ನಂತರ ನಮ್ಮ ಫ್ಯಾಮಿಲಿಯಲ್ಲಿ ನಾನೇ ಈ ರೀತಿಯ ಪಾತ್ರ ಮಾಡಿದ್ದು. ಹೀಗಾಗಿ ನನಗೆ ಹೆಮ್ಮೆ ಇದೆ" ಅಂತಾರೆ ಶಿವರಾಜ್‌ಕುಮಾರ್.

ಸ್ಟಾರ್ ಸಿನಿಮಾ ಬಂದಾಗ ಸಹಜ

ಎರಡ್ಮೂರು ವರ್ಷಗಳ ನಂತರ ನಿರ್ದೇಶಕ ರತ್ನಜ ಸಿನಿಮಾರಂಗಕ್ಕೆ ವಾಪಸ್ಸಾಗಿದ್ದಾರೆ. ವಿಶೇಷ ಕತೆಯನ್ನು ತಂದಿದ್ದರು. ಹೇಗಾದ್ರೂ ಮಾಡಿ, ಈ ಸಿನಿಮಾವನ್ನು ಗೆಲ್ಲಿಸಲೇಬೇಕು ಅನ್ನುವ ಉದ್ದೇಶ ಅವರಲ್ಲಿತ್ತು, ಅದಕ್ಕಾಗಿ ಸಿನಿಮಾ ಶೂಟಿಂಗ್ ಆಗಿ ಆರು ತಿಂಗಳಾದರೂ, ಥಿಯೇಟರ್ ಸಮಸ್ಯೆಯಿಂದಾಗಿ ಸುಮ್ಮನೆ ಕೂರಬೇಕಾಯಿತು. ಈಗ ಒಂದಷ್ಟು ಚಿತ್ರಮಂದಿರ ಸಿಕ್ಕಿವೆ. ಆದರೆ ಇದೇ ಹೊತ್ತಿಗೆ ಸ್ಟಾರ್ ಒಬ್ಬರ ಸಿನಿಮಾ ಕೂಡ ರಿಲೀಸ್ ಆಗುತ್ತಿರುವ ಕಾರಣ, ಅದರಲ್ಲಿ ಇನ್ನಷ್ಟು ಥಿಯೇಟರ್‌ನ್ನು ಕಿತ್ತುಕೊಂಡಿದ್ದಾರೆ ಸ್ಟಾರ್ ನಟರ ಕಡೆಯವರು. ಆದರೂ, ಪ್ರೇಕ್ಷಕರು ಸುಮ್ಮನೆ ನಿಂತಿಲ್ಲ. 'ಪ್ರೀತಿಯಲ್ಲಿ ಸಹಜ' ಸಿನಿಮಾದ ನಿರ್ದೇಶಕ ರತ್ನಜ ಪರ ಬ್ಯಾಟಿಂಗ್ ಮಾಡುತ್ತಿದ್ದಾರೆ ಪ್ರೇಕ್ಷಕರು. ಮೊದಲ ಸಿನಿಮಾದಲ್ಲೇ ಐದು ಫಿಲ್ಮ್‌ಫೇರ್, ರಾಜ್ಯ ಪ್ರಶಸ್ತಿ ಪಡೆದ ನಿರ್ದೇಶಕನ ಸಿನಿಮಾವನ್ನು ಉಳಿಸುವುದಾಗಿ ಕ್ಯಾಂಪೇನ್ ಮಾಡುತ್ತಿದ್ದಾರೆ. ಹೀಗಾಗಿ ಸ್ವತಃ ಶಿವರಾಜ್‌ಕುಮಾರ್ ದಿಗಿಲುಗೊಂಡಿದ್ದಾರೆ. ಸಾಮಾಜಿಕ ಜಾಲತಾಣದಲ್ಲಂತೂ 'ಪ್ರೀತಿಯಲ್ಲಿ ಸಹಜ' ಚಿತ್ರಕ್ಕೆ ಹೆಚ್ಚು ರೆಸ್ಪಾನ್ಸ್ ಸಿಗುತ್ತಿದೆ. ಸಿನಿಮಾ ನೋಡುವಂತೆ ಅವರೇ ಒಬ್ಬರಿಗೊಬ್ಬರು ಹೇಳಿಕೊಳ್ಳುತ್ತಿದ್ದಾರೆ. ಹೀಗಾಗಿ ಸಹಜವಾಗಿಯೇ ರತ್ನಜಗೆ ಖುಷಿ ಆಗಿರಬೇಕು. ಅಂದಹಾಗೆ ಇದೇ ಶುಕ್ರವಾರ 'ಪ್ರೀತಿಯಲ್ಲಿ ಸಹಜ' ಸಿನಿಮಾ ಬಿಡುಗಡೆ ಆಗುತ್ತಿದೆ.





ಹರಿಪ್ರಿಯಾ ಹೊಸಗಾ

ತಾವು ಆಯ್ಕೆಮಾಡಿಕೊಂಡ ಪಾತ್ರಗಳ ಕಾರಣದಿಂದಾಗಿ ಸುಖತ್ ಆಗುತ್ತಿದ್ದಾರೆ ಹರಿಪ್ರಿಯಾ. 'ನೀರ್‌ದೋಸೆ' ಸಿನಿಮಾಗಾಗಿ ಅವರು ಕಾಲ್‌ಗ ವೇಷ ತೊಟ್ಟಿದ್ದರು. ಸದ್ಯ ಹೊಸ ಸಿನಿಮಾದಲ್ಲಿ ಈಜುಡುಗೆಯಲ್ಲಿ ಕಾಣಿಸಿಕೊ ಅಚ್ಚರಿ ಮೂಡಿಸಿದ್ದಾರೆ. ಅದೇ ವೇಷದಲ್ಲೇ ಸತತ ಹನ್ನೆರಡು ಗಂಟೆಗಳ ಶೂಟಿಂಗ್‌ನಲ್ಲಿ ಭಾಗವಹಿಸಿದ್ದಾರೆ.

ವಿಜಯ ರಾಘವೇಂದ್ರ ನಟನೆಯ 'ರಣತಂತ್ರ' ಸಿನಿಮಾ ಕನ್ನಡ ಮೂಡಿ ಬರುತ್ತಿದೆ. ಅದೇ ಸಿನಿಮಾವನ್ನು ತಮಿಳಿಗೆ ರೀಮೆ ಮಾಡುತ್ತಿದ್ದಾರೆ ನಿರ್ದೇಶಕರು. ಈ ಚಿತ್ರದಲ್ಲಿ ಸ್ವಿಮ್ಮಿಂಗ್ ದೃಶ್ಯವೊಂ ಅದನ್ನು ಚಿತ್ರೀಕರಿಸಲು ನಿರ್ದೇಶಕ ಸಂಜೆ 6 ರಿಂದ ಬೆಳಗ್ಗೆ 6ರ ವೇಳೆ ಫಿಕ್ಸ್ ಮಾಡಿದ್ದರು. ಕೊರೆವ ಚಳಿಯಲ್ಲೂ ಹರಿಪ್ರಿಯಾ ಶೂಟ ಕಂಪ್ಲೀಟ್ ಮಾಡಿದ್ದಾರೆ.

"ನಾನು ಒಪ್ಪಿಕೊಂಡ ನಂತರ ಎಂತಹ ಕಷ್ಟವಾದರೂ ಆ ಕೆಲಸ ಮಾಡುತ್ತೇನೆ. ಅವತ್ತು ನನ್ನ ಇಡೀ ಟೆಕ್ನಿಷಿಯನ್ಸ್ ಕೂಡ ಚಳಿಯ ಇದ್ದರು. ನಾನಾದರೂ ಶಾಟ್ ಮುಗಿದನಂತರ ಕಾಯಿಸಿಕೊಳ್ಳುತ್ತಿದ್ದೆ. ಪಾಪ ಅವರು ಹಾಗೆ ಇದ್ದರು. ಶೂಟಿಂಗ್ ಅಂದಾಗ ನಾವೆಲ್ಲ ಅದಕ್ಕಾಗಿ ಕೆಲಸ ಮಾಡಬೇಕು" ಅಂ ಹರಿಪ್ರಿಯಾ.





ರಮೇಶ್ ಮಗಳ ಪಾತ್ರದಲ್ಲಿ ರಚಿತಾ

ಹಲವು ಸ್ಟಾರ್‌ಗಳ ಜತೆ ಈಗಾಗಲೇ ತೆರೆಹಂಚಿಕೊಂಡಿರುವ ರಚಿತಾ ರಾಮ್, ಇದೇ ಮೊದಲ ಬಾರಿಗೆ ರಮೇಶ್ ಜತೆ 'ಪುಷ್ಪಕ ವಿಮಾನ'ದಲ್ಲಿ ನಟಿಸುತ್ತಿದ್ದಾರೆ. ಅದೂ ರಮೇಶ್‌ಗೆ ಮಗಳಾಗಿ. ದರ್ಶನ್, ಸುದೀಪ್, ಪುನೀತ್ ಜತೆ ಡ್ಯುಯೆಟ್ ಹಾಡಿರುವ ರಚಿತಾ, 'ಪುಷ್ಪಕ ವಿಮಾನ'ದಲ್ಲಿ ಮಗಳು ಮತ್ತು ತಂದೆ ನಡುವಿನ ಕತೆಯನ್ನು ಒಪ್ಪಿಕೊಂಡಿದ್ದಾರೆ. ಈ ಕತೆ ಕೇಳಿ ಅವರೇ ಥ್ರಿಲ್ ಆಗಿದ್ದಾರೆ.

ಈ ಸಿನಿಮಾ ಹಲವು ಕಾರಣಗಳಿಂದಾಗಿ ಕುತೂಹಲ ಮೂಡಿಸಿದೆ. ಇದು ಹಳೆಯ 'ಪುಷ್ಪಕ ವಿಮಾನ'ದಂತೆ ಮೂಕಿ ಚಿತ್ರವಲ್ಲ. ಹಳೆಯ ಯಾವ ಛಾಯೆಯೂ ಸಿನಿಮಾದಲ್ಲಿ ಇರುವುದಿಲ್ಲ. ವಿಮಾನದ ಬಗ್ಗೆ ಅಪಾರವಾದ ಕನಸು ಕಂಡ ತಂದೆಯ ಕತೆ ಇಲ್ಲಿದೆ. ಈ ಪಾತ್ರವನ್ನು ರಮೇಶ್ ನಿರ್ವಹಿಸುತ್ತಿದ್ದಾರೆ. ಇವರ ವೃತ್ತಿ ಜೀವನದಲ್ಲೂ ಇದು ಅಪರೂಪದ ಸಿನಿಮಾವಂತೆ. ಈಗಾಗಲೇ ಚಿತ್ರದ ಟ್ರೇಲರ್ ಬಿಡುಗಡೆ ಆಗಿದೆ. ಸಖತ್ ಸುದ್ದಿಯೂ ಆಗಿದೆ. ಪ್ರೋಮೋ ಶೂಟ್ ಮಾಡಲು ಚಿತ್ರತಂಡ ಬರೋಬ್ಬರಿ ಇಪ್ಪತ್ತು ಲಕ್ಷ ಖರ್ಚು ಮಾಡಿದೆ.



ದೀಪಿಕಾ ಪಡುಕೋಣೆ ಬರ್ತ್ತಾಳಾ?

ಸೌಂಡು ಪಾರ್ಟಿ ನಿರ್ದೇಶಕ ಪ್ರೇಮ್ 'ಕಲಿ' ಸಿನಿಮಾದ ಬಗ್ಗೆ ಸಖತ್ ಸುದ್ದಿ ಮಾಡಿಸುತ್ತಿದ್ದಾರೆ. ಅಂದುಕೊಂಡಂತೆ ನಡೆದರೆ ಈ ಸಿನಿಮಾ ಸೆಟ್ಟೇರೋಕೆ ಇನ್ನೂ ಎರಡು ವರ್ಷ ಬೇಕು. ಆದರೂ ಪ್ರೇಮ್ ಈಗಲೇ ಸಿನಿಮಾದ ಬಗ್ಗೆ ಪ್ರಚಾರ ಮಾಡುತ್ತಿದ್ದಾರೆ. ನಾಯಕರಾದ ಸುದೀಪ್ ಮತ್ತು ಶಿವಣ್ಣ ಇನ್ನೂ ತಮ್ಮ ಡೇಟ್ಸ್ ಅನ್ನೇ ಕೊಟ್ಟಿಲ್ಲ, ಆಗಲೇ ಪ್ರೇಮ್ ಮಾತ್ರ ದೀಪಿಕಾ ಪಡುಕೋಣೆ, ಸಮಂತಾ, ಅನುಷ್ಕಾ ಶೆಟ್ಟಿ ಮನೆ ಮುಂದೆ ಓಡಾಡುತ್ತಿದ್ದಾರೆ. ಅದನ್ನ ಕಲರ್‌ಕಲರ್ ಆಗಿ ಕಟ್ಟಿ ಮಾಧ್ಯಮದ ಮುಂದೆ ಬಿಟ್ಟಿದ್ದಾರೆ. ಅಲ್ಲಿಗೆ 'ಕಲಿ' ಸಿನಿಮಾದ ಮೂಲಕ ದೀಪಿಕಾ ಪಡುಕೋಣೆ ಮತ್ತೆ ಕನ್ನಡಕ್ಕೆ ಬರ್ತ್ತಾರೆ ಅಂತಾಯಿತು.

ಆದರೆ ಇಲ್ಲಿ ಇನ್ನೊಂದು ಸಮಸ್ಯೆ ಎದುರಾಗಲಿದೆ. ಶಿವರಾಜ್‌ಕುಮಾರ್ ಮತ್ತು ಸುದೀಪ್‌ಗಿಂತ ಹೆಚ್ಚು ಸಂಭಾವನೆ ದೀಪಿಕಾ ಅವರದ್ದು. ಅನುಷ್ಕ ಶೆಟ್ಟಿ ಮತ್ತು ಸಮಂತಾ ಕೂಡ ಹೆಚ್ಚು ಸಂಭಾವನೆ ಪಡೆಯುವ ನಟಿಯರು. ಹೀಗಾಗಿ ಇಬ್ಬರೂ ನಾಯಕರು ಈ ನಾಯಕಿಯರನ್ನು ಒಪ್ಪಿಕೊಳ್ಳುತ್ತಾರಾ ಅನ್ನುವುದು ಡೌಟು. ಅದಕ್ಕಿಂತ ಮುಂಚೆ, ಇವರೆಲ್ಲ ಕನ್ನಡದ ಸಿನಿಮಾದಲ್ಲಿ ನಟಿಸುತ್ತಾರಾ ಅವರೇ ಹೇಳಬೇಕೆ. ಏನೇ ಆದರೂ ಎಂದಿನಂತೆ ಪ್ರೇಮ್ ಸಖತ್ತಾಗಿ ಪುಕ್ಕಟೆ ಪ್ರಚಾರವನ್ನು ಗಿಟ್ಟಿಸಿಕೊಳ್ಳುತ್ತಿದ್ದಾರೆ.

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com